ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

(ಪರಿಷ್ಕೃತ – 2022)

## ಭಾಗ–1

@KTBS
NOT TO BE REPUBLISHED

# 8

## ಎಂಟನೆಯ ತರಗತಿ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

# ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010 ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ಹನ್ನೊಂದು ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1 ರಿಂದ 4 ನೇ ತರಗತಿಯವರೆಗೆ ಪರಿಸರ ವಿಜ್ಞಾನ ಮತ್ತು 5 ರಿಂದ 10 ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜವಿಜ್ಞಾನಗಳಿರುತ್ತವೆ.

2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳನ್ನು ಕೆಳಗಿನ ಮೂಲಭೂತ ವಿಧಾನಗಳ ಆಧಾರದ ಮೇಲೆ ರಚಿಸಲಾಗಿದೆ.

- ಅಂತರ್ಗತ ವಿಧಾನ (Integrated Approach),
- ರಚನಾತ್ಮಕ ವಿಧಾನ (Constructive Approach)
- ಸುರುಳಿಯಾಕಾರದ ವಿಧಾನ (Spiral Approach) .

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಭಾರತೀಯ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾಪೂರಕ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

5ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಒಂದು ಹೊಸತನವನ್ನು ತರಲಾಗಿದೆ. ಕರ್ನಾಟಕದ ನಾಲ್ಕು ವಿಭಾಗಗಳಿಗೆ ಬೇರೆ ಬೇರೆ ಪುಸ್ತಕಗಳನ್ನು ತಯಾರಿಸಲಾಗಿದೆ. ಅವುಗಳಲ್ಲಿನ ಮೊದಲ ಅಧ್ಯಾಯ ಆಯಾ ವಿಭಾಗದ ಇತಿಹಾಸ, ಭೌಗೋಳಿಕ ಲಕ್ಷಣಗಳು, ಜನಜೀವನ, ಸಂಸ್ಕೃತಿ, ಸಂಪ್ರದಾಯಗಳು ಹಾಗೂ ಆ ವಿಭಾಗದ ಜನಜೀವನವನ್ನು ಶ್ರೀಮಂತಗೊಳಿಸಿದ ವಿವಿಧ ಕ್ಷೇತ್ರಗಳಲ್ಲಿನ ಹಿರಿಯನಾಯಕರ ವಿಚಾರ ಮಾಹಿತಿ ಇತ್ಯಾದಿಗಳನ್ನು ಕೊಡಲಾಗಿದೆ. ಎನ್‌ಸಿಎಫ್ 2005 ರ ಮಾರ್ಗಸೂಚಿಯಂತೆ ಇತಿಹಾಸ, ಭೂಗೋಳ, ಪೌರನೀತಿ, ಅರ್ಥಶಾಸ್ತ್ರ ಹಾಗೂ ವಾಣಿಜ್ಯಶಾಸ್ತ್ರಗಳ ಅಂಶಗಳನ್ನು 8 ನೇ ತರಗತಿಯಲ್ಲಿ ಸೇರಿಸಲಾಗಿದೆ. ಅನೇಕ ಅವಶ್ಯಕ ವಿಚಾರಗಳನ್ನು ಆವರಣಗಳಲ್ಲಿ ಕೊಡಲಾಗಿದೆ. ಮಕ್ಕಳು ಸ್ವಂತವಾಗಿ ಕಲಿಯುವುದಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಅನೇಕ ಪ್ರಾಜೆಕ್ಟ್‌ಗಳನ್ನು ಸೂಚಿಸಲಾಗಿದೆ. ಆದರೆ, ಕಂಠಪಾಠ ಮಾಡುವ ಅಂಶಗಳಾದ ಇಸವಿಗಳು, ಅನಾವಶ್ಯಕ ವಿಷಯಗಳನ್ನು ಕಡಿಮೆ ಮಾಡುವುದರ ಮೂಲಕ ಕಲಿಕಾ ಹೊರೆಯನ್ನು ಕಡಿಮೆ ಮಾಡಲಾಗಿದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷ ರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕ ರಚನಾ ಕಾರ್ಯದಲ್ಲಿ ಸಹಕರಿಸಿದ ಎಲ್ಲರಿಗೂ, ಪುಸ್ತಕವನ್ನು ಸುಂದರವಾಗಿ ಡಿ.ಟಿ.ಪಿ ಮಾಡಿದ ಮತ್ತು ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಕ್ರಮ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು

**ಶ್ರೀ ನಾಗೇಂದ್ರಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.),
ಬೆಂಗಳೂರು.

NOT TO BE REPUBLISHED ©KTBS

## ಅಧ್ಯಕ್ಷರ ನುಡಿ

ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಜಾರಿಗೆ ತರುತ್ತಿರುವ ಪ್ರಸ್ತುತ ಪಠ್ಯಪುಸ್ತಕವು ಅನೇಕ ಕಾರಣಗಳಿಂದ ಭಿನ್ನವಾಗಿ, ವಿಶಿಷ್ಠವಾಗಿ ಹೊರಬರುತ್ತಿದೆ. ಈ ಸಮಾಜವಿಜ್ಞಾನ ಪಠ್ಯವು ಎಂಟನೆಯ ತರಗತಿಗೆ ಸಂಬಂಧಪಟ್ಟಿದ್ದು, ಇದುವರೆಗೂ ತಂದಿರುವ ಪಠ್ಯಪುಸ್ತಕಗಳಿಗಿಂತ ವಿಶೇಷವಾಗಿದೆ. ಪ್ರಥಮಬಾರಿಗೆ ಚರಿತ್ರೆ, ಭೂಗೋಳದಂತಹ ಸಾಂಪ್ರದಾಯಕ ವಿಷಯಗಳೊಂದಿಗೆ ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ವ್ಯವಹಾರ ಅಧ್ಯಯನಗಳನ್ನು ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005 ರ ಹಿನ್ನಲೆಯಲ್ಲಿ ಎಂಟನೆ ತರಗತಿಯ ಸಮಾಜವಿಜ್ಞಾನ ಪಠ್ಯವು ಒಳಗೊಂಡಿರುವುದು ಗಮನಾರ್ಹವಾಗಿದೆ.

ಜನ ಸಾಮಾನ್ಯರ ಏಕೈಕ ಆಶಾಕಿರಣವಾದ ಸರ್ಕಾರಿ ಸ್ವಾಮ್ಯದ ಯೋಜನೆಯ ಭಾಗವಾಗಿರುವ ಈ ಪಠ್ಯಪುಸ್ತಕವು ಸರಳವಾಗಿ ಓದಿಕೊಂಡು ಹೋಗುವಂತೆ ಮಾಡಲು ನಾವು ಯತ್ನಿಸಿದ್ದೇವೆ. ಪ್ರಸ್ತುತ ಪಠ್ಯವು ಕಂಠಪಾಠ ಪದ್ಧತಿಯನ್ನು ಪಕ್ಕಕ್ಕಿಡಲು ಕ್ರಿಯಾಶೀಲವಾಗಿರುವ ಪಠ್ಯಕ್ರಮವನ್ನು ಒಳಗೊಂಡಿದೆ. ಮಕ್ಕಳಿಗೆ ತಮ್ಮ ಅನುಭವಕ್ಕೆ ನಿಲುಕುವಂತೆ ಪಠ್ಯಗಳನ್ನು ನಿರೂಪಿಸಲಾಗಿದೆ. ವಿದ್ಯಾರ್ಥಿಗಳಿಗೆ ತೀರಾ ಹೊರೆ ಎಂದೆನ್ನಿಸಿದ ಇಸವಿಗಳ ಪಟ್ಟಿಗಳನ್ನು ಹಾಗೂ ಅನಗತ್ಯ ವಿವರಗಳನ್ನು ಈ ಪಠ್ಯದಲ್ಲಿ ಕೈಬಿಡಲಾಗಿದೆ. ಬದಲಿಗೆ, ಚರಿತ್ರೆಯ ಪ್ರಕ್ರಿಯೆಗಳನ್ನು, ಒಳನೋಟಗಳನ್ನು ವಿದ್ಯಾರ್ಥಿಗಳು ಗ್ರಹಿಸುವಂತೆ ಪಠ್ಯವನ್ನು ರೂಪಿಸಲಾಗಿದೆ. ಸಮಕಾಲೀನ ಸಂದರ್ಭಗಳನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ ಬಾಕ್ಸ್‌ಗಳಲ್ಲಿ ಹೆಚ್ಚಿನ ಮಾಹಿತಿಗಳನ್ನು ನೀಡಲಾಗಿದೆ. ಅವುಗಳು ಬೋಧಿಸುವವರ ಹಾಗೂ ವಿದ್ಯಾರ್ಥಿಗಳ ಅನುಭವದ ಭಾಗಗಳಾಗುವಂತೆ ಈ ಪಠ್ಯವನ್ನು ರೂಪಿಸಲಾಗಿದೆ. ವಿದ್ಯಾರ್ಥಿಗಳು ಪಠ್ಯಕ್ಕೆ ಮಾತ್ರ ಸೀಮಿತವಾಗದೆ ಹೆಚ್ಚಿನ ವಿಚಾರಗಳನ್ನು ಗ್ರಹಿಸಲು ಪೂರಕವಾಗುವಂತೆ ಚಟುವಟಿಕೆ ಮತ್ತು ಯೋಜನಾ ಕಾರ್ಯಗಳಿಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಪಠ್ಯವು ಜಾಗತಿಕ ಶೈಕ್ಷಣಿಕ ಮಟ್ಟವನ್ನು ಕಾಯ್ದುಕೊಳ್ಳಲು ನಮ್ಮ ಪಠ್ಯ ಪುಸ್ತಕ ರಚನಾ ಸಮಿತಿಯು ಶ್ರಮಿಸಿದೆ.

ಪ್ರಸ್ತುತ ಪಠ್ಯವನ್ನು ಯಶಸ್ವಿಯಾಗಿ ಹೊರತರಲು ಕಾರಣಕರ್ತರಾದ ನಮ್ಮ ಪಠ್ಯಪುಸ್ತಕ ರಚನಾಸಮಿತಿಗೆ ನಾನು ಋಣಿಯಾಗಿದ್ದೇನೆ. ಹಾಗೆಯೇ ಕಾಲಕಾಲಕ್ಕೆ ನಮಗೆ ಸಲಹೆ ಸೂಚನೆಗಳನ್ನು ನೀಡಿದ ಸಂಪಾದಕ ಮಂಡಳಿ, ಅನುವಾದಕರು ಹಾಗು ಮುಖ್ಯ ಸಲಹೆಗಾರರಿಗೆ ನಾನು ಆಭಾರಿಯಾಗಿದ್ದೇನೆ.

ಪಠ್ಯಪುಸ್ತಕ ಯೋಜನೆಯನ್ನು ಸಮರ್ಥವಾಗಿ ಹೊರತರಲು ಅವಿರತವಾಗಿ ಶ್ರಮಿಸಿದ ಈ ಯೋಜನೆಯ ಮುಖ್ಯ ಸಂಯೋಜಕರಾದ ಪ್ರೊ.ಜಿ.ಎಸ್. ಮುಡಂಬಡಿತ್ತಾಯ ಅವರಿಗೆ ಹಾಗೂ ಎಲ್ಲ ರೀತಿಯ ಸಹಕಾರ ನೀಡಿದ ಪಠ್ಯಪುಸ್ತಕ ಸಂಘದ ಅಧಿಕಾರಿಗಳಿಗೆ, ತಾಂತ್ರಿಕ ಸಹಾಯಕರಿಗೆ ನಾನು ಆಭಾರಿಯಾಗಿದ್ದೇನೆ. ಪ್ರಸ್ತುತ ಪಠ್ಯದ ಭಾಷಾ ಪರಿಶೀಲನೆಯನ್ನು ಬಹಳ ಪ್ರೀತಿಯಿಂದ ಮಾಡಿದ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದ ಡಾ.ಎಂ.ಉಷಾ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

**ಡಾ. ವಿಜಯ್ ಪೂಣಚ್ಚ ತಂಬಂಡ**
ಅಧ್ಯಕ್ಷರು
ಪಠ್ಯಪುಸ್ತಕ ರಚನಾಸಮಿತಿ

© KTBS NOT TO BE REPUBLISHED

# ರಚನಾ ಸಮಿತಿ

**ಅಧ್ಯಕ್ಷರು**

**ಡಾ. ವಿಜಯ್ ಪೂಣಚ್ಚ ತಂಬಂಡ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ.

**ಸದಸ್ಯರು**

**ಡಾ. ಎಂ. ಶಶಿಧರ್,** ಸಹಪ್ರಾಧ್ಯಾಪಕರು ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಶ್ರೀ ಎನ್. ಸತ್ಯಪ್ರಕಾಶ್,** ಸಹಶಿಕ್ಷಕರು, ವಿದ್ಯಾವರ್ಧಕ ಸಂಘ ಪ್ರೌಢಶಾಲೆ, ರಾಜಾಜಿನಗರ, ಒಂದನೇ ಬ್ಲಾಕ್, ಬೆಂಗಳೂರು – 10.

**ಶ್ರೀ ಪಿ.ಎ. ಕುಮಾರ್,** ನಿವೃತ್ತ ಮುಖ್ಯಶಿಕ್ಷಕರು, ವಿಜಯ ಪ್ರೌಢಶಾಲೆ, ಜಯನಗರ 3ನೇ ಬ್ಲಾಕ್ ಬೆಂಗಳೂರು – 11.

**ಡಾ. ಲಕ್ಷ್ಮೀಪತಿ ಸಿ.ಜಿ,** ಸಹಪ್ರಾಧ್ಯಾಪಕರು, ಶ್ರೀಮತಿ ವಿ.ಹೆಚ್.ಡಿ. ಕೇಂದ್ರೀಯ ಗೃಹವಿಜ್ಞಾನ ಕಾಲೇಜು, ಶೇಷಾದ್ರಿ ರಸ್ತೆ, ಬೆಂಗಳೂರು

**ಶ್ರೀ ಕೆ.ಆರ್. ಮಂಜುನಾಥ್,** ಪ್ರಾಂಶುಪಾಲರು, ಎಂ.ಇ.ಎಸ್ ಪದವಿ ಪೂರ್ವ ಕಾಲೇಜು, ಬಿ.ಟಿ.ಎಂ ಲೇಔಟ್, ಬೆಂಗಳೂರು–76

**ಶ್ರೀ ಬಿ. ಹನುಮಂತರಾವ್,** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಕ್ಕಬಳ್ಳಾಪುರ.

**ಶ್ರೀ ಜಿ.ಎನ್. ಕೆಂಪಯ್ಯ,** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ದಂಡಿನಶಿವರ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ.

**ಶ್ರೀ ಎ.ಎಸ್ ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಕೇಂದ್ರ, ಬಸವೇಶ್ವರನಗರ, ಬೆಂಗಳೂರು–79

**ಶ್ರೀ ಶೇಖ್ ಇರ್ಫಾನ್,** ಚಿತ್ರಕಲಾ ಶಿಕ್ಷಕರು, ಪೋಲೀಸ್ ಪಬ್ಲಿಕ್ ಶಾಲೆ, ಕೆ.ಎಸ್.ಆರ್‌ಪಿ ಕ್ಯಾಂಪಸ್, ಕೋರಮಂಗಲ, ಬೆಂಗಳೂರು.

**ಪರಿಶೀಲಕರು**

**ಡಾ. ರಾಜಾರಾಮ್ ಹೆಗಡೆ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ.

**ಪ್ರೊ. ಟಿ.ಡಿ. ದೇವೇಗೌಡ,** ಪ್ರಾಧ್ಯಾಪಕರು, ರಾಜಶಾಸ್ತ್ರವಿಭಾಗ, ಡೀನ್, (ಅಧ್ಯಯನ ಕೇಂದ್ರಗಳು) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

**ಡಾ. ರಂಗನಾಥ,** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸ್ನಾತಕೋತ್ತರ ಭೂಗೋಳ ಶಾಸ್ತ್ರ ವಿಭಾಗ, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು.

**ಡಾ. ಜೋಗನ್‌ಶಂಕರ್,** ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

**ಡಾ. ಎಸ್.ಆರ್. ಕೇಶವ,** ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಕೆ.ಆರ್. ಶ್ರೀಲಕ್ಷ್ಮೀ,** ಸಹಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಯನಗರ 6ನೇ ಬ್ಲಾಕ್, ಬೆಂ.–11

**ಸಂಪಾದಕೀಯ ಮಂಡಳಿ**

**ಡಾ. ಆರ್.ಎಲ್.ಎಂ. ಪಾಟೀಲ್,** ನಿವೃತ್ತ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಈಶ್ವರಪ್ಪ,** ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಶ್ರೀ ರಾಮಪ್ರಸಾದ್,** (ಚರಿತ್ರೆ ವಿಭಾಗ) ಪ್ರಾಂಶುಪಾಲರು, ಶ್ರೀ ಎ.ಆರ್.ಎಸ್. ಪದವಿ ಪೂರ್ವ ಕಾಲೇಜು, ಹರಿಹರಪುರ, ಚಿಕ್ಕಮಗಳೂರು ಜಿಲ್ಲೆ.

**ಅನುವಾದಕರು**

**ಪ್ರೊ. ಎಸ್.ಎಸ್ ಆರಾಧ್ಯ,** ಪ್ರಾಧ್ಯಾಪಕರು, ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು.

**ಡಾ. ರಂಗನಾಥ,** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸ್ನಾತಕೋತ್ತರ ಭೂಗೋಳ ಶಾಸ್ತ್ರ ವಿಭಾಗ, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು.

**ಶ್ರೀ ಬಿ. ಹನುಮಂತರಾವ್,** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಕ್ಕಬಳ್ಳಾಪುರ.

**ಶ್ರೀ ಎ.ಎಸ್ ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಕೇಂದ್ರ, ಬಸವೇಶ್ವರನಗರ, ಬೆಂಗಳೂರು–79

**ಮುಖ್ಯ ಸಂಯೋಜಕರು**

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ,** ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ,ಬೆಂಗಳೂರು–85.

**ಮುಖ್ಯ ಸಲಹೆಗಾರರು**

**ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–85.

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–85.

**ಕಾರ್ಯಕ್ರಮ ಸಂಯೋಜಕರು**

**ಶ್ರೀ ಎ.ಟಿ. ರಂಗದಾಸಪ್ಪ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ (ರಿ.), ಬೆಂಗಳೂರು

NOT TO BE REPUBLISHED ©KTBS

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ, ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ 2014–15 ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" – ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ 27 ಸಮಿತಿಗಳನ್ನು ರಚಿಸಿ ದಿನಾಂಕ: 24.11.2014 ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು 24.11.2014ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ 19.09.2015 ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು 2016–17 ರ ಬದಲು 2017–18ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (NCERT) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ

© KTBS NOT TO BE REPUBLISHED

ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ 27 ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಮತ್ತು ಪರಿಷ್ಕೃತ ಪಾಠಗಳ ರಚನೆ ಮಾಡಿದ ತಜ್ಞರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

@KTBS NOT TO BE REPUBLISHED

**ವೀರಣ್ಣ ಎಸ್. ಜತ್ತಿ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–85

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–85

## ಪಠ್ಯಪುಸ್ತಕಗಳ ಪರಿಷ್ಕರಣ ಸಮಿತಿ

**ಸರ್ವಾಧ್ಯಕ್ಷರು**

**ಪ್ರೊ. ಬರಗೂರು ರಾಮಚಂದ್ರಪ್ಪ,** ಅಧ್ಯಕ್ಷರು, ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಅಧ್ಯಕ್ಷರು**

**ಡಾ. ಅಶ್ವತ್ಥ ನಾರಾಯಣ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ ಮೈಸೂರು.

**ಸದಸ್ಯರು**

**ಡಾ. ಅಶ್ವತ್ಥ ನಾರಾಯಣ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಜೆ. ಸೋಮಶೇಖರ್,** ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ.

**ಡಾ. ಎಚ್.ಡಿ. ಪ್ರಶಾಂತ್,** ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**ಪ್ರೊ. ಎಸ್.ಟಿ. ಬಾಗಲಕೋಟಿ,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪ್ರೊ. ಪಿ ಮಲ್ಲಪ್ಪ,** ನಿವೃತ್ತ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಜೆ.ಎಸ್.ಎಸ್. ಮಹಾವಿದ್ಯಾಲಯ, ಮೈಸೂರು.

**ಡಾ. ಬಿ. ಶೇಖರ್,** ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಶ್ರೀ ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು.

**ಶ್ರೀ ಈರಣ್ಣ. ಎಂ. ಅಂಬಿ,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ತಡಕೊಡು, ಧಾರವಾಡ ತಾ. ಮತ್ತು ಜಿಲ್ಲೆ.

**ಶ್ರೀ ಡಿ.ಎನ್. ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರಕಸಲಗೆರೆ, ಮಂಡ್ಯ ತಾ. ಮತ್ತು ಜಿಲ್ಲೆ.

**ಉನ್ನತ ಪರಿಶೀಲನಾ ಸಮಿತಿ**

**ಶ್ರೀ ಅಶೋಕ ಶೆಟ್ಟರ್,** ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಡಾ. ಎಂ.ಎಸ್. ತಳವಾರ್,** ನಿವೃತ್ತ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ದಶರಥ್ ನಾಯಕ್,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರಗಿ.

**ಡಾ. ಹಸೀನ್ ತಾಜ್,** ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಅನುವಾದಕರು**

**ಪ್ರೊ. ಎಸ್.ಟಿ. ಬಾಗಲಕೋಟಿ,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಶ್ರೀ ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು.

**ಸಲಹೆಗಾರರು**

**ಶ್ರೀ ವೀರಣ್ಣ ಎಸ್. ಜತ್ತಿ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.) ಬೆಂಗಳೂರು.

**ಶ್ರೀ ಕೋದಂಡರಾಮಯ್ಯ. ಎನ್,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು**

**ಶ್ರೀಮತಿ ಎನ್. ಎಸ್. ಸೌಮ್ಯ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

©KTBS NOT TO BE REPUBLISHED

# ಪುನರ್ ಪರಿಷ್ಕರಣೆ ಕುರಿತು

2014ರ ಶೈಕ್ಷಣಿಕ ವರ್ಷದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳು ರಾಜಕೀಯ ಕಾರಣಗಳಿಗಾಗಿ ಅದೇ ವರ್ಷ ಪರಿಷ್ಕರಣೆಗೆ ಒಳಗಾದವು. ಪರಿಷ್ಕೃತ ಪಠ್ಯಪುಸ್ತಕಗಳು 2017–18ರ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಕೈ ತಲಪಿದವು. ಪರಿಷ್ಕೃತ ಪಠ್ಯಗಳಲ್ಲಾದ ಬದಲಾವಣೆಗಳ ಬಗ್ಗೆ ವ್ಯಾಪಕ ಟೀಕೆ, ವಿಮರ್ಶೆಗಳು ಬಂದವು. ಶಿಕ್ಷಣದ ಮೂಲ ಆಶಯಗಳನ್ನು ಬದಿಗಿಟ್ಟು ಸ್ವಹಿತಾಸಕ್ತಿಯ ಸಿದ್ಧಾಂತಗಳ ಪ್ರಚಾರಕ್ಕೆ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಯಿತೆಂಬ ಆಕ್ಷೇಪ ಎಲ್ಲೆಡೆಯಿಂದ ಕೇಳಿಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು 2021ರಲ್ಲಿ ಈ ಪಠ್ಯಗಳ ಮರುಪರಿಶೀಲನೆ ನಡೆಸುವಂತೆ ಆದೇಶಿಸಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಆಪಾದನೆ ಕೇಳಿಬಂದ ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಮೂಲಾಗ್ರ ಪರಿಶೀಲಿಸಿ ಬದಲಾವಣೆಗಳನ್ನು ಸೂಚಿಸಿದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಮಾತಿದೆ. ಶಾಲೆಗಳಲ್ಲಿ ಓದುವ ಇಂದಿನ ಮಕ್ಕಳಿಗೆ ನಾವು ಎಂಥ ಪಠ್ಯಗಳನ್ನು ಬೋಧಿಸುತ್ತೇವೆಂಬುದರ ಮೇಲೆ ಸಮಾಜದ ಭವಿಷ್ಯ ನಿಂತಿದೆ. ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ–ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ಪರಿಷ್ಕರಣೆ ಮಾಡಬೇಕಾಯಿತು.

ಪಠ್ಯಪುಸ್ತಕಗಳ ಪರಿಶೀಲನೆ, ಪರಿಷ್ಕರಣೆಗಳಲ್ಲಿ ನಾವು ನಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡೆವು. ಮುಖ್ಯವಾಗಿ ಸಮಾಜ ವಿಜ್ಞಾನದ ಪಠ್ಯಪುಸ್ತಕಗಳಲ್ಲಿ (1) ಯಾವುದೇ ಜಾತಿ, ಧರ್ಮ, ಪಂಥ, ಸಮುದಾಯಗಳಿಗೆ ಅಥವಾ ವ್ಯಕ್ತಿಗಳಿಗೆ ಅಪಮಾನವಾಗುವ ಆಕ್ಷೇಪಾರ್ಹ ಅಂಶಗಳಿರದಂತೆ ಎಚ್ಚರ ವಹಿಸಬೇಕು (2) ವಿಷಯಗಳನ್ನು ಕ್ರಮಬದ್ಧವಾಗಿ, ಕಾಲಪಟ್ಟಿಗನುಗುಣವಾಗಿ ಕೊಡಬೇಕು (3) ಅನಗತ್ಯ ವಿಷಯಗಳು ತುಂಬಿತುಳುಕಾಡುವ ಮಾಹಿತಿಕೋಶವಾಗಿಸದೆ ಜ್ಞಾನಕೋಶಗಳಾಗಿ ಮಾಡಬೇಕು (4) ಸ್ವಹಿತಾಸಕ್ತಿಯ ಯಾವ ಸಿದ್ಧಾಂತಗಳಿಗೂ ಜಾಗ ಕೊಡಕೂಡದು (5) ಅರ್ಧಸತ್ಯ, ಅಸತ್ಯ, ಉತ್ಪ್ರೇಕ್ಷೆ, ನಿರ್ಣಯ ಮುಂತಾದವನ್ನು ಕೈಬಿಟ್ಟು ಅಧಿಕೃತ ಆಧಾರಗಳಿರುವ ಸಂಗತಿಗಳನ್ನಷ್ಟೇ ಮುಂದಿಡಬೇಕು (6) ಎಲ್ಲ ವಿಷಯಗಳಿಗೆ ತಕ್ಕ ಪ್ರಾತಿನಿಧ್ಯ ಕೊಡಬೇಕು (7) ಐತಿಹಾಸಿಕ ಉಪೇಕ್ಷಿತ ಸಂಗತಿಗಳನ್ನು, ಅವುಗಳ ಪ್ರಾಮುಖ್ಯಕ್ಕನುಗುಣವಾಗಿ ಪಠ್ಯಗಳಲ್ಲಿ ತರಬೇಕು (8) ಎಲ್ಲ ಬಗೆಯ ತಪ್ಪುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ತಗ್ಗಿಸಬೇಕು – ಎಂಬುದು ನಮ್ಮ ಆಶಯವಾಗಿತ್ತು. ಸಮಾಜವಿಜ್ಞಾನ ಪಠ್ಯವು ನಮ್ಮ ವಿದ್ಯಾರ್ಥಿಗಳನ್ನು ದೇಶದ ಬಗ್ಗೆ ಪ್ರೀತಿ ಅಭಿಮಾನಗಳುಳ್ಳ ಪ್ರಜ್ಞಾವಂತ ನಾಗರಿಕರನ್ನಾಗಿ ಮಾಡಬೇಕೇ ಹೊರತು ದೇಶದ ಬಗ್ಗೆ, ದೇಶದೊಳಗಿನ ಹಲವು ಜಾತಿ, ಸಮುದಾಯ, ಭಾಷೆ, ಪಂಥಗಳ ಬಗ್ಗೆ ತಾತ್ಸಾರಭಾವವನ್ನು

NOT TO BE REPUBLISHED ©KTBS

ತಾಳುವಂಥ ಜನಾಂಗವನ್ನು ಸೃಷ್ಟಿಸಬಾರದು ಎಂಬುದು ಪರಿಷ್ಕರಣೆಯ ಪ್ರತಿಹಂತದಲ್ಲೂ ನಾವು ವಹಿಸಿದ್ದ ಎಚ್ಚರಿಕೆಯಾಗಿತ್ತು.

ಅತ್ಯುತ್ತಮ ಪಠ್ಯಪುಸ್ತಕ ಎಂಬುದು ಒಂದು ಆದರ್ಶಸ್ಥಿತಿ. ಅದರತ್ತ ನಡೆಯುವುದು ನಮ್ಮ ಆಶಯವೇ ಹೊರತು ನೂರಕ್ಕೆ ನೂರು ಅತ್ಯುತ್ತಮವಾದ ಪಠ್ಯಪುಸ್ತಕವನ್ನು ರಚಿಸುವುದು ಸಾಧ್ಯವಿಲ್ಲ. ಆ ವಿನಯದಿಂದಲೇ ನಾವು ಈ ಪುನರ್ ಪರಿಶೀಲನೆಯ ಕಾರ್ಯವನ್ನು ಮುಗಿಸಿ ಪಠ್ಯಗಳನ್ನು ನಿಮ್ಮ ಕೈಗಿಡುತ್ತಿದ್ದೇವೆ. ಇದು ಕೇವಲ ಮರುಪರಿಷ್ಕರಣೆಯೇ ಹೊರತು ಸಮಗ್ರ ಪುನಾರಚನೆಯಲ್ಲ. ಈಗಾಗಲೇ (2014ರಲ್ಲಿ) ರಚಿತವಾಗಿದ್ದ ಪಠ್ಯಪುಸ್ತಕದ ಆಶಯ ಮತ್ತು ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಅದನ್ನನುಸರಿಸಿ ಬಂದ ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮುಂದಿಟ್ಟುಕೊಂಡೇ ಇಡಿಯ ಮರುಪರಿಷ್ಕರಣೆಯ ಕಾರ್ಯ ನಡೆದಿದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲಾಗಿದೆ. ಪರಿಷ್ಕರಣೆಯ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಪರಿಶೀಲನಾ ಸಮಿತಿಯ ನನ್ನ ಎಲ್ಲ ಸಹೋದ್ಯೋಗಿಗಳಿಗೆ ನಾನು ಕೃತಜ್ಞ. ಅಂತೆಯೇ ಸಮಿತಿಯ ಕೆಲಸ ಸುಗಮವಾಗಿ ನಡೆಯಲು ಸಹಕರಿಸಿದ ಪಠ್ಯಪುಸ್ತಕ ಸಂಘದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಆಭಾರಿ. ಈ ಪರಿಷ್ಕರಣೆಯು ಈಗಷ್ಟೇ ಬಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಹೆಚ್ಚು ಪ್ರತಿಫಲಿಸುತ್ತ, ಮುಂದೆ ಬರಲಿರುವ ಸಮಗ್ರ ಪುನಾರಚಿತ ಪಠ್ಯಗಳಿಗೆ ಪ್ರವೇಶಿಕೆಯಾಗಲಿದೆ ಎಂಬ ಭರವಸೆ ನಮ್ಮದು.

@KTBS
NOT TO BE REPUBLISHED

**ವೀರಣ್ಣ ಎಸ್. ಜತ್ತಿ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–85

**ರೋಹಿತ್ ಚಕ್ರತೀರ್ಥ**
ಅಧ್ಯಕ್ಷರು
ಕರ್ನಾಟಕ ಪಠ್ಯಪುಸ್ತಕಗಳ ಪರಿಶೀಲನಾ ಸಮಿತಿ

# ಪುನರ್ ಪರಿಷ್ಕರಣ ಸಮಿತಿ

## ಅಧ್ಯಕ್ಷರು

ಶ್ರೀ **ರೋಹಿತ್ ಚಕ್ರತೀರ್ಥ,** ಸದಸ್ಯರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.

## ಸದಸ್ಯರು

**ಡಾ. ರಾಜರಾಮ್ ಹೆಗಡೆ,** ನಿವೃತ್ತ ವಿಭಾಗ ಮುಖ್ಯಸ್ಥರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

**ಡಾ. ಎನ್. ಸತ್ಯಪ್ರಕಾಶ್,** ನಿವೃತ್ತ ಮುಖ್ಯೋಪಾಧ್ಯಾಯರು, ವಿ.ವಿ.ಎಸ್. ಪ್ರೌಢಶಾಲೆ, ಬೆಂಗಳೂರು.

**ಶ್ರೀ. ರಂಗನಾಥ,** ಪ್ರಾಂಶುಪಾಲರು, ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ.

**ಶ್ರೀ. ಬಿ.ಕೆ. ವಾಸುಕಿ,** ಶಿಕ್ಷಕರು, ಭಾರತೀಯ ವಿದ್ಯಾಭವನ ಬಿಬಿಎಂಪಿ ಪಬ್ಲಿಕ್ ಶಾಲೆ, ಬೆಂಗಳೂರು.

**ಡಾ. ಅನಂತಕೃಷ್ಣ ಭಟ್,** ಕೊಡಿಯಾಲಗುತ್ತು, ದ್ವಾರಕ, ಕೊಡಿಯಾಲ್ ಬೈಲ್, ಎರಡನೇ ಅಡ್ಡರಸ್ತೆ, ಮಂಗಳೂರು.

**ಡಾ. ವಿಠ್ಠಲ್ ಪೋತದಾರ,** ಹಿರಿಯ ಸಂಶೋಧನಾ ಸಂಯೋಜಕರು, ದಿ ಮಿಥಿಕ್ ಸೊಸೈಟಿ, ಬೆಂಗಳೂರು.

**ಶ್ರೀ ಕೆ.ಆರ್. ಮಂಜುನಾಥ್,** ಸಹ ಶಿಕ್ಷಕರು, ನ್ಯಾಷನಲ್ ಪ್ರೌಢಶಾಲೆ, ಬೆಂಗಳೂರು.

**ಶ್ರೀಮತಿ ಪಿ. ರಾಧಾ,** ಹಿರಿಯ ಸಹಾಯಕ ನಿರ್ದೇಶಕರು, ಡಿಎಸ್ಇಆರ್‌ಟಿ, ಬನಶಂಕರಿ 3ನೇ ಹಂತ, ಬೆಂಗಳೂರು.

**ಶ್ರೀ ಸಂದೀಪ್ ಕುಮಾರ ಪಿ.ಎಲ್.,** ಜಿ.ಪಿ.ಟಿ., ಸ.ಮಾ.ಪ್ರಾ. ಶಾಲೆ, ಸಿದ್ದನಹೊಸಹಳ್ಳಿ, ಬೆಂಗಳೂರು ಉತ್ತರ ವಲಯ-1.

## ಸಲಹೆಗಾರರು

**ಶ್ರೀ ವೀರಣ್ಣ ಎಸ್. ಜತ್ತಿ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

**ಶ್ರೀ ಕೋದಂಡರಾಮಯ್ಯ. ಎನ್,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

## ಕಾರ್ಯಕ್ರಮ ಸಂಯೋಜಕರು

**ಶ್ರೀಮತಿ. ಎನ್. ಎಸ್. ಸೌಮ್ಯ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

©KTBS NOT TO BE REPUBLISHED

# ಪರಿವಿಡಿ

H4U4G7


| ಅಧ್ಯಾಯದ ಸಂಖ್ಯೆ | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 1 | ಆಧಾರಗಳು | 1 |
| 2 | ಭರತವರ್ಷ | 5 |
| 3 | ಸಿಂಧೂ ಸರಸ್ವತಿ ನಾಗರಿಕತೆ | 12 |
| 4 | ಜಗತ್ತಿನ ಕೆಲವು ಪ್ರಮುಖ ನಾಗರಿಕತೆಗಳು | 20 |
| 5 | ಸನಾತನ ಧರ್ಮ | 33 |
| 6 | ಜೈನ ಮತ್ತು ಬೌದ್ಧ ಮತಗಳು | 40 |
| | **ರಾಜ್ಯಶಾಸ್ತ್ರ** | |
| 7 | ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಮುಖ್ಯತೆ | 47 |
| 8 | ಪೌರ ಮತ್ತು ಪೌರತ್ವ | 51 |
| | **ಸಮಾಜಶಾಸ್ತ್ರ** | |
| 9 | ಮಾನವ ಮತ್ತು ಸಮಾಜ | 58 |
| 10 | ಮಾನವ ಮತ್ತು ಸಂಸ್ಕೃತಿ | 63 |
| | **ಭೂಗೋಳ ಶಾಸ್ತ್ರ** | |
| 11 | ಭೂಮಿ–ನಮ್ಮ ಜೀವಂತ ಗ್ರಹ | 66 |
| 12 | ಶಿಲಾಗೋಳ | 74 |
| **13** | ವಾಯುಗೋಳ | 93 |
| | **ಅರ್ಥಶಾಸ್ತ್ರ** | |
| **14** | ಅರ್ಥಶಾಸ್ತ್ರದ ಅರ್ಥ ಮತ್ತು ಮಹತ್ವ | 107 |
| | **ವ್ಯವಹಾರ ಅಧ್ಯಯನ** | |
| **15** | ವ್ಯವಹಾರ – ಅರ್ಥ ಮತ್ತು ಪ್ರಾಮುಖ್ಯತೆ | 112 |


© KTBS NOT TO BE REPUBLISHED

# ಇತಿಹಾಸ

## ಅಧ್ಯಾಯ-1

## ಆಧಾರಗಳು

R1I3U6


**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಇತಿಹಾಸದ ಅಧ್ಯಯನಕ್ಕೆ ಬೇಕಾಗುವ ಆಧಾರಗಳ ಬಗ್ಗೆ.
- ವಿವಿಧ ಆಧಾರಗಳ ಬಗ್ಗೆ.
- ಪ್ರಾಕ್ತನ ಆಧಾರಗಳ ಅರ್ಥ, ಪ್ರಾಮುಖ್ಯತೆ.
- ಹಲ್ಮಿಡಿ ಶಾಸನದ ಬಗ್ಗೆ ಅರಿವು.
- ಮೌಖಿಕ ಆಧಾರಗಳು ಇತಿಹಾಸ ಅಧ್ಯಯನಕ್ಕೆ ಪೂರಕ ಎಂಬುದನ್ನು ಅರ್ಥೈಸಿಕೊಳ್ಳುವುದು.

@KTBS NOT TO BE REPUBLISHED

### ಚರಿತ್ರೆ ರಚನೆಗೆ ಆಧಾರಗಳು ಏಕೆ ಬೇಕು?

ಆಧಾರ ಎಂದರೇನು? ಆಧಾರ ಎಂದರೆ ಚರಿತ್ರೆಯ ರಚನೆಗೆ ಬೇಕಾಗುವ ಮೂಲ ಸಾಮಗ್ರಿಗಳು. ಇವುಗಳು ಆ ಕಾಲಮಾನದ ವಿವರಗಳನ್ನು ನೀಡುತ್ತವೆ. ಗತಿಸಿಹೋದ ಘಟನೆಗಳ ಬಗ್ಗೆ ತಿಳಿದುಕೊಳ್ಳಲು ಆಧಾರಗಳು ಬಹುಮುಖ್ಯ. ಇತಿಹಾಸವನ್ನು ಒಂದು ದೇಹಕ್ಕೆ ಹೋಲಿಸಬಹುದು. ದೇಹಕ್ಕೆ ಅಸ್ಥಿಪಂಜರವಿದ್ದಂತೆ ಇತಿಹಾಸಕ್ಕೆ ಆಧಾರಗಳು. ಅಂದರೆ ಆಧಾರಗಳಿಲ್ಲದೆ ಇತಿಹಾಸ ರಚನೆಯು ಸಾಧ್ಯವಿಲ್ಲ ಎಂದರ್ಥ. ಯಾವ ರೀತಿಯ ಆಧಾರವನ್ನು ಬಳಸುತ್ತೇವೆಯೋ ಆ ರೀತಿಯ ನೋಟವು ಇತಿಹಾಸಕ್ಕೆ ದೊರೆಯುತ್ತದೆ. ಹೀಗಾಗಿಯೆ ಸಾರ್ವತ್ರಿಕ ಇತಿಹಾಸವೆನ್ನುವುದು ಯಾವುದೂ ಇಲ್ಲ. ಇತಿಹಾಸದಲ್ಲಿ ವಿವರಿಸಲ್ಪಡುವ ಎಲ್ಲಾ ಸಂಗತಿ ಹಾಗೂ ಘಟನೆಗಳಿಗೆ ನಿರ್ದಿಷ್ಟವಾದ ಆಧಾರಗಳು ಇರಬೇಕು ಎನ್ನುವುದು ಜನಜನಿತವಾಗಿದೆ. ಆಧಾರಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.



ಹ್ಯೂಯನ್‌ತ್ಸಾಂಗ್

1) ಸಾಹಿತ್ಯ ಆಧಾರಗಳು 2) ಪ್ರಾಕ್ತನ ಆಧಾರಗಳು.

ಸಾಹಿತ್ಯ ಆಧಾರಗಳಲ್ಲಿ ಎರಡು ವಿಧಗಳು.
1) ದೇಶೀಯ ಸಾಹಿತ್ಯ 2) ವಿದೇಶಿ ಸಾಹಿತ್ಯ.

ಪ್ರಾಕ್ತನ ಆಧಾರಗಳಲ್ಲಿ ಮೂರು ವಿಧಗಳು.
1) ಶಾಸನಗಳು 2) ನಾಣ್ಯಗಳು 3) ಸ್ಮಾರಕಗಳು

ಭಾರತೀಯರಿಂದಲೇ ರಚನೆಯಾಗಿರುವ ಸಾಹಿತ್ಯವನ್ನು ದೇಶೀ ಸಾಹಿತ್ಯವೆಂದೂ ಹೀಗೆ ಬಳಕೆಯಾಗುವ ಆಧಾರಗಳನ್ನು ದೇಶೀ ಸಾಹಿತ್ಯ ಆಧಾರಗಳು ಎಂದೂ ಕರೆಯುತ್ತೇವೆ. ವಿಶಾಖದತ್ತನ 'ಮುದ್ರಾರಾಕ್ಷಸ', ಕಲ್ಹಣನ 'ರಾಜತರಂಗಿಣಿ', ಅಶ್ವಘೋಷನ 'ಬುದ್ಧ ಚರಿತ', ಕೌಟಿಲ್ಯನ


‘ಅರ್ಥಶಾಸ್ತ್ರ’, ಬೌದ್ಧ ಸಾಹಿತ್ಯಗಳಾದ ತ್ರಿಪಿಟಕಗಳು, ಅಮೋಘವರ್ಷನ ಆಸ್ಥಾನದಲ್ಲಿದ್ದ ಶ್ರೀವಿಜಯನ ‘ಕವಿರಾಜಮಾರ್ಗ’ ಇತ್ಯಾದಿಗಳನ್ನು ಇಲ್ಲಿ ಹೆಸರಿಸಬಹುದಾಗಿದೆ.

ವಿದೇಶೀ ಬರಹಗಾರರು, ಪ್ರವಾಸಿಗರು, ವಿದ್ವಾಂಸರು ರಚಿಸಿರುವಂತಹ ಗ್ರಂಥಗಳಿಗೆ ವಿದೇಶೀ ಸಾಹಿತ್ಯ ಆಧಾರವೆಂದು ಕರೆಯುತ್ತೇವೆ. ಮೆಗಸ್ತನೀಸನ ‘ಇಂಡಿಕಾ’, ಹ್ಯೂಯನ್‌ತ್ಸಾಂಗ್‌ನ ‘ಸಿ.ಯು.ಕಿ’, ಫಾಹಿಯಾನನ ‘ಫೋ–ಕೋ–ಕಿ’, ಸಿಲೋನಿನ ‘ದೀಪವಂಶ’ ಮತ್ತು ‘ಮಹಾವಂಶ’ ವಿಜಯನಗರ ರಾಜ್ಯಕ್ಕೆ ಬಂದುಹೋದ ಫರ್ನಿಯೋ ನ್ಯೂನಿಜ್, ಬಾರ್ಬೋಸ, ನಿಕೊಲೋ ಕೋಂಟಿ ಮುಂತಾದವರ ಕೃತಿಗಳನ್ನು ಉದಾಹರಿಸಬಹುದು.

**ಪ್ರಾಕ್ತನ ಆಧಾರವೆಂದರೇನು**? ಸಂಶೋಧನೆ ಮತ್ತು ಉತ್ಖನನಗಳಿಂದ ದೊರೆತಿರುವ ಶಾಸನಗಳು, ನಾಣ್ಯಗಳು, ಸ್ಮಾರಕಗಳು, ಮಡಿಕೆ–ಕುಡಿಕೆ ಹಾಗೂ ಇನ್ನಿತರ ಪಳೆಯುಳಿಕೆಗಳನ್ನು ಪ್ರಾಕ್ತನ ಆಧಾರಗಳೆಂದು ಕರೆಯುತ್ತೇವೆ.

## ಶಾಸನಗಳ ಅಧ್ಯಯನ

ಶಾಸನಗಳು ಆಯಾ ಕಾಲಮಾನದ ಜೀವಂತ ಮಾಹಿತಿಗಳು. ಇವು ಅಂದಿನ ಧರ್ಮ, ಸಂಸ್ಕೃತಿ, ಆರ್ಥಿಕತೆ, ಆಡಳಿತ ಇನ್ನಿತರ ಅಂಶಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ನಮ್ಮ ದೇಶದಲ್ಲಿ ನಮಗೆ ದೊರೆತಿರುವ ಅತ್ಯಂತ ಪ್ರಾಚೀನ ಶಾಸನವು ಮೌರ್ಯ ಚಕ್ರವರ್ತಿ ಅಶೋಕನು ಹೊರಡಿಸಿದ ಶಾಸನವಾಗಿದೆ. ಇವನು ಕಲ್ಲುಹಾಸಿನ ಮೇಲೆ ಹಾಗೂ ಕಲ್ಲಿನ ಕಂಬಗಳ ಮೇಲೆ ಶಾಸನವನ್ನು ಕೆತ್ತಿಸಿದನು. ಇವನ ಶಾಸನಗಳು ಭಾರತದ ಹಲವೆಡೆ ದೊರೆತಿದೆ. ಇವು ಬಹುತೇಕವಾಗಿ ಬ್ರಾಹ್ಮಿಲಿಪಿ ಹಾಗೂ ಪ್ರಾಕೃತ ಭಾಷೆಗಳಲ್ಲಿವೆ. ಗ್ರೀಕ್, ಅರಮಿಕ್ ಹಾಗೂ ಖರೋಷ್ಠಿ ಲಿಪಿಯಲ್ಲಿಯೂ ಕೆಲವು ಶಾಸನಗಳು ದೊರೆತಿವೆ. ಅಶೋಕನ ಶಾಸನಗಳು ಕರ್ನಾಟಕದ ಮಸ್ಕಿ ಹಾಗೂ ಬ್ರಹ್ಮಗಿರಿಗಳಲ್ಲಿಯೂ ಲಭ್ಯವಾಗಿವೆ. ಕನ್ನಡ ಭಾಷೆಯಲ್ಲಿ ದೊರೆತಿರುವ ಮೊದಲ ಶಾಸನ ಹಲ್ಮಿಡಿ. ಇದು ಕದಂಬ ಮನೆತನಕ್ಕೆ ಸೇರಿದ ದೊರೆ ಕಾಕುತ್ಸವರ್ಮನ ಆಡಳಿತಾವಧಿಯಲ್ಲಿ ರಚಿತವಾಗಿದೆ.


ಹಲ್ಮಿಡಿ ಶಾಸನ

## ನಾಣ್ಯಗಳ ಅಧ್ಯಯನ

ನಾಣ್ಯಗಳ ಸ್ವರೂಪ, ವಿಕಾಸ ಹಾಗೂ ಬೆಳವಣಿಗೆಯ ಬಗ್ಗೆ ತಿಳಿಸಿಕೊಡುವ ಅಧ್ಯಯನವೇ ನಾಣ್ಯ ಅಧ್ಯಯನ. ಬೇರೆ ಬೇರೆ ಲೋಹಗಳನ್ನು ಬಳಸಿ ನಾಣ್ಯಗಳನ್ನು ಟಂಕಿಸಲಾಗಿದೆ. ಇವು ಚರಿತ್ರೆಯನ್ನು ರಚಿಸುವಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ. ನಾಣ್ಯಗಳ ಅಧ್ಯಯನವು ಅದರ ಕಾಲಮಾನ, ಆಗಿನ ಧರ್ಮ, ಸಂಸ್ಕೃತಿ, ಆಡಳಿತ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯ ಬಗ್ಗೆ ತಿಳಿಸಿಕೊಡುವಲ್ಲಿ ಸಹಾಯಕವಾಗಿವೆ.

© KTBS NOT TO BE REPUBLISHED

## ಸ್ಮಾರಕಗಳು ಮತ್ತು ಅವಶೇಷಗಳ ಅಧ್ಯಯನ

ಕಾಲದಿಂದ ಕಾಲಕ್ಕೆ ಮನುಷ್ಯನ ಸಾಧನೆಯು ಭೌತಿಕ ವಸ್ತುಗಳಲ್ಲಿಯೂ ವ್ಯಕ್ತವಾಗಿವೆ. ಇಂತಹುಗಳಲ್ಲಿ ಸ್ತೂಪಗಳು, ಬಸದಿಗಳು, ದೇವಸ್ಥಾನಗಳು, ಅರಮನೆಗಳು, ಕೋಟೆಗಳು ಮತ್ತು ಅವಶೇಷಗಳು ಇವೆ. ಪ್ರಾಚೀನ ಭಾರತದ ಈ ಸ್ಮಾರಕಗಳು ನಾಗರಿಕತೆ, ತಂತ್ರಜ್ಞಾನ, ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ತಿಳಿಯಲು ಸಹಾಯಕವಾಗಿವೆ. ಇವು ರಾಜರುಗಳ ಸಾಧನೆಯನ್ನು ಪ್ರತಿಬಿಂಬಿಸುತ್ತವೆ. ಅಶೋಕನ ಸ್ತಂಭಗಳು, ಅಜಂತಾ, ಎಲ್ಲೋರ, ಎಲಿಫೆಂಟಾ ಗುಹೆಗಳ ಶಿಲ್ಪಗಳು, ಕರ್ನಾಟಕದ ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳು ಭಾರತದ ಭವ್ಯ ಪರಂಪರೆಯ ಕುರುಹುಗಳಾಗಿವೆ.




ನಾಣ್ಯಗಳು

ಭಾರತೀಯ ವಾಸ್ತುಶಿಲ್ಪವು ಅತ್ಯಂತ ವಿಶಿಷ್ಟವಾದುದು. ಭಾರತದ ಉದ್ದಗಲಕ್ಕೂ ಚಾಚಿಕೊಂಡಿರುವ ಸ್ತೂಪಗಳು, ಬಸದಿಗಳು, ಚೈತ್ಯಗಳು ಮತ್ತು ಸಾವಿರಾರು ದೇವಸ್ಥಾನಗಳು ಕಾಲಾಂತರದಲ್ಲಿ ಮೂಡಿಬಂದಿವೆ. ಇವುಗಳ ಅಧ್ಯಯನದಿಂದ ಆ ಕಾಲದ ಧಾರ್ಮಿಕ, ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಬದುಕನ್ನು ತಿಳಿಯಲು ಪರೋಕ್ಷವಾಗಿ ಸಾಧ್ಯವಾಗಿದೆ.

## ಮೌಖಿಕ ಆಧಾರಗಳು

ಇಂದು ಭಾರತದ ಬಹುಮುಖಿ ಪರಂಪರೆಯನ್ನು ಅರ್ಥಮಾಡಿಕೊಳ್ಳಲು ಮೌಖಿಕ ಆಕರಗಳನ್ನು ಬಳಸಿಕೊಳ್ಳಲಾಗುತ್ತಿದೆ. ಅನಾದಿ ಕಾಲದಿಂದಲೂ ಮಾನವನು ತನ್ನ ಅನುಭವ ಹಾಗೂ ನೆನಪುಗಳನ್ನು ಹಾಡು, ಕಾವ್ಯ, ಲಾವಣಿಗಳ ರೂಪದಲ್ಲಿ ಮೌಖಿಕವಾಗಿ ತಲೆಮಾರಿನಿಂದ ತಲೆಮಾರಿಗೆ ಉಳಿಸಿಕೊಂಡು ಬಂದನು. ಇದು ಲಿಖಿತ ಪರಂಪರೆಯು ಆರಂಭವಾಗುವ ಮೊದಲೇ ಇದ್ದ ಸಂಪ್ರದಾಯ. ನಮ್ಮ ಭಾರತದ ಚರಿತ್ರೆಯು ಪ್ರಾರಂಭಗೊಳ್ಳುವುದೇ ಇಂತಹ ಮೌಖಿಕ ಪರಂಪರೆಯ ಮೂಲಕ. ವೇದಗಳು ಲಿಖಿತ ಸ್ವರೂಪವನ್ನು ಪಡೆದುಕೊಳ್ಳುವ ಮುನ್ನ ಅನೇಕ ತಲೆಮಾರುಗಳವರೆಗೆ ಮೌಖಿಕ ಪರಂಪರೆಯಾಗಿಯೇ ಇತ್ತು.



ಪರೀಕ್ಷಿತ ಮಹಾರಾಜನಿಗೆ ಮಹಾಭಾರತದ ಕಥೆ ಹೇಳುತ್ತಿರುವ ಶುಕಮುನಿಗಳು

## ಐತಿಹ್ಯಗಳು

ಭಾರತದ ಬಹುತೇಕ ಪ್ರದೇಶಗಳು ವ್ಯಕ್ತಿ, ಘಟನೆ, ಪರಂಪರೆಗಳ ಕುರಿತಾದ ಐತಿಹ್ಯಗಳಿವೆ. ಐತಿಹ್ಯಗಳನ್ನು ಸ್ಥಳ ಪುರಾಣಗಳೆಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಚರಿತ್ರೆಯ ಅಧ್ಯಯನಕ್ಕೆ ಇವು ನೇರ ಮಾಹಿತಿಯನ್ನು ನೀಡುವುದಿಲ್ಲ. ಇವು ನೀಡುವ ಪರೋಕ್ಷ ಮಾಹಿತಿಗಳಿಂದ ಇತಿಹಾಸವನ್ನು ರಚಿಸುವ ಯತ್ನವನ್ನು ಇತ್ತೀಚೆಗೆ ಇತಿಹಾಸಕಾರರು ಮಾಡುತ್ತಿದ್ದಾರೆ. ಇವು ಸಮಾಜದ ನಂಬಿಕೆಯನ್ನು

NOT TO BE REPUBLISHED @KTBS

ತಿಳಿಸುತ್ತವೆ. ವ್ಯಕ್ತಿಯ ವೈಭವವನ್ನು ಅಥವಾ ಸ್ಥಳದ ಮಹಿಮೆಯನ್ನು ಈ ಐತಿಹ್ಯಗಳು ಸೂಚಿಸುತ್ತವೆ. ಧಾರ್ಮಿಕ ಸ್ಥಳಗಳ ಕುರಿತಾದ ಸ್ಥಳ ಪುರಾಣಗಳನ್ನು ನಾವು ಸಾಮಾನ್ಯವಾಗಿ ಹೀಗೆ ಕಾಣಬಹುದಾಗಿದೆ.

## ಅಭ್ಯಾಸಗಳು

### I ಕೆಳಕಂಡ ವಾಕ್ಯಗಳನ್ನು ಸೂಕ್ತ ಪದಗಳಿಂದ ಪೂರ್ಣಗೊಳಿಸಿ..

1 ಸಾಹಿತ್ಯ ಆಧಾರಗಳಲ್ಲಿ ____________ ಮತ್ತು ____________ ಎಂಬ ಎರಡು ವಿಧಗಳಿವೆ.

2 ಅಶ್ವಘೋಷನ____________ ವು ಸಾಹಿತ್ಯಕ ಆಧಾರವಾಗಿದೆ.

3 ಕನ್ನಡ ಭಾಷೆಯಲ್ಲಿ ದೊರೆತಿರುವ ಮೊದಲ ಶಾಸನ ____________ .

### II ಸಂಕ್ಷಿಪ್ತವಾಗಿ ಉತ್ತರಿಸಿ.

4 ಆಧಾರ ಎಂದರೇನು ?

5 ಇತಿಹಾಸಕ್ಕೆ ಸಂಬಂಧಿಸಿದ ದೇಶೀ ಮತ್ತು ವಿದೇಶೀ ಸಾಹಿತ್ಯಕ ಆಧಾರಗಳಿಗೆ ಎರಡೆರಡು ಉದಾಹರಣೆಗಳನ್ನು ನೀಡಿ.

6 ಪ್ರಾಕ್ತನ ಆಧಾರ ಎಂದರೇನು ? ಉದಾಹರಣೆ ಸಹಿತ ವಿವರಿಸಿ.

### III ಚಟುವಟಿಕೆಗಳು.

7 ಇತಿಹಾಸದಲ್ಲಿ ಹಿಂದಿನ ಘಟನೆ ಮುಂದಿನ ಘಟನೆಗೆ ಕಾರಣವಾದ ಕಾರ್ಯ–ಕಾರಣ ಸಂಬಂಧದ ಉದಾಹರಣೆಗಳನ್ನು ಶಿಕ್ಷಕರಲ್ಲಿ ಚರ್ಚಿಸಿ.

8 ಯಾವುದಾದರೂ ಒಂದು ಸ್ಮಾರಕಕ್ಕೆ ಭೇಟಿ ನೀಡಿ ವಿವರಗಳನ್ನು ಸಂಗ್ರಹಿಸಿ.

9 ಇತಿಹಾಸ ಕಾಲದ ನಾಣ್ಯಗಳನ್ನು ಸಂಗ್ರಹಿಸಿ.

10 ಪ್ರಾಚೀನ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿ.

### IV ಯೋಜನೆ.

11 ನಾಣ್ಯಗಳ ಬಗ್ಗೆ ವಿಷಯಗಳನ್ನು ಸಂಗ್ರಹಿಸಿ. ಒಂದು ಪುಟ್ಟ ಯೋಜನೆಯನ್ನು ಸಿದ್ಧಪಡಿಸಿ.

***

@KTBS NOT TO BE REPUBLISHED

# ಅಧ್ಯಾಯ–2
# ಭರತವರ್ಷ

J9Z5R4

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**


- ಭಾರತದ ಭೌಗೋಳಿಕ ಲಕ್ಷಣಗಳ ಬಗ್ಗೆ ಅರಿಯುವುದು.
- ಭಾರತವು ಒಂದು ಉಪಖಂಡ ಹಾಗೂ ಪರ್ಯಾಯ ದ್ವೀಪ ಎಂದು ಗುರುತಿಸುವುದು.
- ಭಾರತದ ನೆರೆಯ ರಾಷ್ಟ್ರಗಳನ್ನು ಗುರುತಿಸುವುದು.
- ಚರಿತ್ರೆಯ ಪೂರ್ವಕಾಲ ಘಟ್ಟದಲ್ಲಿನ ಮಾನವನ ಜೀವನಕ್ರಮದ ಬಗ್ಗೆ ತಿಳಿಯುವುದು.
- ಭಾರತದಲ್ಲಿನ ಚರಿತ್ರೆ ಪೂರ್ವಕಾಲ ಘಟ್ಟದಲ್ಲಿನ ಶಿಲಾಯುಗಗಳ ಬಗ್ಗೆ ತಿಳಿಯುವುದು.

ಜಗತ್ತಿನ ಪ್ರತಿಯೊಂದು ರಾಷ್ಟ್ರ ಹಾಗೂ ಜನಸಮುದಾಯಗಳ ಮೇಲೆ ಭೌಗೋಳಿಕ ಪರಿಸರವು ಪ್ರಭಾವ ಬೀರಿವೆ. ಮಾನವನ ಜೀವನಕ್ಕೂ ಅವನ ಪರಿಸರಕ್ಕೂ ನಿಕಟ ಸಂಬಂಧವಿದೆ. ಆದ್ದರಿಂದ ಮನುಷ್ಯನ ಚರಿತ್ರೆ ತಿಳಿಯಲು ಭೌಗೋಳಿಕ ಪರಿಸರದ ಅರಿವು ಅತ್ಯವಶ್ಯಕವಾಗಿದೆ. ಏಷ್ಯಾ ಖಂಡದ ದಕ್ಷಿಣ ಭಾಗದಲ್ಲಿ ವಿಶಾಲ ಪ್ರದೇಶವನ್ನು ಹೊಂದಿರುವ ಭಾರತವು ಒಂದು ಉಪಖಂಡ. ಮೂರುಕಡೆ ನೀರಿನಿಂದಲೂ ಮತ್ತು ಒಂದು ಕಡೆ ಭೂಭಾಗದಿಂದಲೂ ಆವೃತ್ತವಾಗಿರುವುದರಿಂದ ಇದೊಂದು ಪರ್ಯಾಯ ದ್ವೀಪವಾಗಿದೆ. ಭಾರತ ಇಂದು ಪಾಕಿಸ್ತಾನ, ಆಫ್ಘಾನಿಸ್ಥಾನ, ಚೀನಾ, ನೇಪಾಳ, ಭೂತಾನ್, ಬಾಂಗ್ಲಾ ಮತ್ತು ಮಯನ್ಮಾರ್‌ಗಳೊಂದಿಗೆ ತನ್ನ ಭೂಗಡಿಯನ್ನು ಹೊಂದಿದೆ. ಹಿಂದೆ ಈ ಎಲ್ಲಾ ಪ್ರದೇಶಗಳು ಒಟ್ಟಾಗಿ ಭರತವರ್ಷ ಎಂದು ಕರೆಯಲ್ಪಟ್ಟಿತ್ತು. ಇದನ್ನು ಭರತ ಖಂಡ, ಸಿಂಧೂ ದ್ವೀಪ, ಬೃಹತ ಭಾರತ, ಅಖಂಡ ಭಾರತ ಎಂದೂ ಕರೆಯಲಾಗುತ್ತಿತ್ತು. 28 ರಾಜ್ಯಗಳು ಹಾಗೂ 9 ಕೇಂದ್ರಾಡಳಿತ ಪ್ರದೇಶಗಳು ಮತ್ತು ಒಂದು ರಾಷ್ಟ್ರ ರಾಜಧಾನಿ (ದೆಹಲಿ) ಪ್ರದೇಶ ಇದರ ವ್ಯಾಪ್ತಿಯಲ್ಲಿವೆ.

ಭಾರತ ಭೂ ರಚನೆಯು ಉತ್ತರದಲ್ಲಿ ಹಿಮಾಲಯದ ಪರ್ವತಶ್ರೇಣಿಗಳನ್ನು, ಸಮತಟ್ಟಾದ ಸಿಂಧೂ, ಗಂಗಾ ಬಯಲು ಪ್ರದೇಶವನ್ನು, ದಕ್ಷಿಣದ ದಖನ್ ಪ್ರಸ್ಥಭೂಮಿಯನ್ನು ಹಾಗೂ ಕರಾವಳಿ ತೀರ ಪ್ರದೇಶವನ್ನು ಹೊಂದಿದೆ. ಉತ್ತರದ ಹಿಮಾಲಯ ಪರ್ವತ ಶ್ರೇಣಿಯು ಜಗತ್ತಿನಲ್ಲೇ ಅತ್ಯಂತ ಎತ್ತರವಾದ ಶಿಖರಗಳನ್ನು ಒಳಗೊಂಡಿದೆ. ಭಾರತದ ಸುರಕ್ಷತೆಯನ್ನು ಹಾಗೂ ಭದ್ರತೆಯನ್ನು ಇವು ಕಾಯ್ದಿರಿಸಲು ಸಹಾಯಕವಾಗಿವೆ. ಪ್ರಾಚೀನ ಭಾರತದ ಮೇಲೆ ಉತ್ತರದ ಹಿಮಾಲಯದ ಮೂಲಕ ಆದ ಅತಿಕ್ರಮಣಗಳು ವಿರಳ. ವಾಯುವ್ಯ ಭಾರತದಲ್ಲಿನ ಬೊಲಾನ್ ಮತ್ತು ಖೈಬರ್ ಕಣಿವೆಮಾರ್ಗಗಳ ಮೂಲಕವೇ ದಾಳಿಗಳು ಸಂಭವಿಸಿವೆ ಎನ್ನಬಹುದು. ಸಮತಟ್ಟಾದ ಸಿಂಧೂ ಗಂಗಾ ಬಯಲು ಸೀಮೆಗಳು ಅತ್ಯಂತ ಫಲವತ್ತಾದ ಪ್ರದೇಶಗಳು. ಪ್ರಾಚೀನ ನಾಗರಿಕತೆಗಳಾದ ಸಿಂಧೂ ಮತ್ತು ವೇದಕಾಲದ ನಾಗರಿಕತೆಗಳು ಇಲ್ಲಿಯೇ ಮೂಡಿಬಂದಿವೆ. ಕಾಲದಿಂದ ಕಾಲಕ್ಕೆ ಈ ಫಲವತ್ತಾದ ಪ್ರದೇಶದ ಮೇಲೆ ಹಿಡಿತ ಸಾಧಿಸಲು ಅನೇಕ ಕದನಗಳು ನಡೆದಿವೆ. ಸಾಮಾನ್ಯವಾಗಿ ಯಾರು ಗಂಗಾನದಿಯ ಫಲವತ್ತಾದ ಪ್ರದೇಶದ ಮೇಲೆ ನಿಯಂತ್ರಣವನ್ನು ಹೊಂದಿದ್ದರೋ ಆ ರಾಜಮನೆತನದವರೇ ಚಕ್ರಾಧಿಪತಿಗಳೂ ಆಗಿದ್ದರು.

NOT TO BE REPUBLISHED ©KTBS


ನರ್ಮದಾ ನದಿಯು ಭಾರತವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದೆ – ಉತ್ತರದ ಎತ್ತರ ಪ್ರದೇಶ ಅಥವಾ ಮಾಳ್ವ ಪ್ರಸ್ಥಭೂಮಿ ಹಾಗೂ ದಖನ್ ಪ್ರಸ್ಥಭೂಮಿ. ಮೌರ್ಯರು ಹಾಗೂ ಗುಪ್ತರು ಪ್ರಾಚೀನ ಭಾರತದ ಸನ್ನಿವೇಶದಲ್ಲಿ ಭಾರತದ ಈ ಎರಡು ಭಾಗಗಳನ್ನು ಆಳಿದರು. ಉತ್ತರ ಹಾಗೂ ದಕ್ಷಿಣ ಭಾರತವೆಂಬ ವಿಭಜನೆಯು ಸಾಂಸ್ಕೃತಿಕ ಪ್ರಭೇದಗಳಿಗೂ ಕಾರಣವಾಗಿದೆ. ಭಾರತ ಕರಾವಳಿಯು



@KTBS NOT TO BE REPUBLISHED

**ಅಖಂಡ ಭಾರತ ಈ ಎಲ್ಲಾ ಪ್ರದೇಶಗಳನ್ನು ಒಳಗೊಂಡಿತ್ತು**

ಸುದೀರ್ಘವಾಗಿದ್ದು 6100 ಕಿ.ಮೀ. ಗಳವರೆಗೆ ಹಬ್ಬಿಕೊಂಡಿದೆ. ಪೂರ್ವ ಕರಾವಳಿಯು ಕೋರಮಂಡಲದ ತೀರವೆಂದು ಕರೆಸಿಕೊಂಡಿದೆ. ಪಶ್ಚಿಮದ ಕರಾವಳಿಯನ್ನು ಕೊಂಕಣ ಮತ್ತು ಮಲಬಾರ್ ತೀರವೆಂದು ಕರೆದಿದ್ದಾರೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಇಲ್ಲಿರುವ ಹತ್ತಾರು ರೇವುಪಟ್ಟಣಗಳು ರೋಮನ್ನರನ್ನು ಆಕರ್ಷಿಸಿದ್ದವು. ಆ ಕಾಲದ ವಿದೇಶಿ ವ್ಯಾಪಾರವು ಸಾಮಾನ್ಯವಾಗಿ ಸಮುದ್ರದ ಮೂಲಕವೇ ಸಾಗಿತ್ತು. ಈ ಕಾರಣಕ್ಕಾಗಿಯೇ ರೇವುಪಟ್ಟಣಗಳ ಅಭಿವೃದ್ಧಿಯು ಸಾಧ್ಯವಾಗಿ ದಕ್ಷಿಣದಲ್ಲಿ ಪ್ರಬಲ ರಾಜ್ಯಗಳಾದ ಪಾಂಡ್ಯ, ಚೇರ ಹಾಗೂ ಚೋಳರ ರಾಜ್ಯಗಳ ಉದಯಕ್ಕೆ ಕಾರಣವಾಯಿತು.




ವೈವಿಧ್ಯದಿಂದ ಕೂಡಿದ ಭಾರತೀಯ ಭೌಗೋಳಿಕ ಪರಿಸರವು ಇಲ್ಲಿ ಬದುಕಿಬಾಳಿದ ಜನಾಂಗಗಳ ಮೇಲೆಯೂ ಪ್ರಭಾವ ಬೀರಿದೆ. ಜನಾಂಗೀಯ ಅನನ್ಯತೆಗಳ ನಡುವೆ ಇಲ್ಲಿ ಭಾವನಾತ್ಮಕವಾಗಿ ಬೆಸೆದುಹೋದ ಸಂಸ್ಕೃತಿಯು ತನ್ನ ಎಲ್ಲಾ ವೈವಿಧ್ಯಗಳನ್ನು ಮೈಗೂಡಿಸಿಕೊಂಡಿದೆ. ವೈವಿಧ್ಯಗಳಲ್ಲಿನ ಏಕತೆಯೇ ಇದರ ಜೀವಾಳ.

**ಪ್ರಾಗೈತಿಹಾಸಿಕ ಕಾಲ ಅಥವಾ ಚರಿತ್ರೆಯ ಪೂರ್ವಕಾಲ**–ಮಾನವನು ಲೇಖನ ಕಲೆಯನ್ನು ಕಂಡು ಹಿಡಿಯುವುದಕ್ಕೆ ಮೊದಲಿನ ಕಾಲವನ್ನು ಪ್ರಾಗೈತಿಹಾಸಿಕ ಕಾಲವೆನ್ನುತ್ತೇವೆ. ಈ ಕಾಲಘಟ್ಟದಲ್ಲಿ ಭಾಷೆಯ ಬೆಳವಣಿಗೆ ಹಾಗೂ ಲಿಪಿಯ ಬಳಕೆಯ ಬಗ್ಗೆ ನಮಗೆ ಆಧಾರಗಳು ಸಿಗದೆ ಇರುವುದರಿಂದ ಇದನ್ನು ಚರಿತ್ರೆಯ ಪೂರ್ವಕಾಲವೆಂದು ಕರೆಯುತ್ತೇವೆ. ಇಲ್ಲಿ ಮನುಷ್ಯನ ಯಾವುದೇ ಲಿಖಿತ ದಾಖಲೆಗಳು ಚರಿತ್ರೆಯ ಅಧ್ಯಯನಕ್ಕೆ ನಮಗೆ ದೊರಕುವುದಿಲ್ಲ. ಹಾಗಿದ್ದ ಮೇಲೆ ಇವರ ಬದುಕನ್ನು ನಾವು ತಿಳಿದದ್ದಾದರೂ ಹೇಗೆ? ಈ ಕಾಲಘಟ್ಟವನ್ನು ಅಧ್ಯಯನ ಮಾಡುವ ತಜ್ಞರಿಗೆ ನಾವು ಪ್ರಾಕ್ತನ ಅಥವಾ ಪ್ರಾಚ್ಯವಸ್ತು ಅಧ್ಯಯನಕಾರರೆಂದು ಕರೆಯುತ್ತೇವೆ. ಈ ಕಾಲದಲ್ಲಿ ಮನುಷ್ಯನ ಬದುಕು ಅಲೆಮಾರಿಯ ಬದುಕಾಗಿದ್ದು ಬೇಟೆ ಹಾಗೂ ಆಹಾರ ಸಂಗ್ರಹಣೆಯಲ್ಲಿ ತೊಡಗಿದ್ದನು. ಪ್ರಾಚ್ಯವಸ್ತು ಅಧ್ಯಯನಕಾರರಿಗೆ ಈ ಕಾಲದಲ್ಲಿ ಜನರು ಆಹಾರ ಸಂಗ್ರಹಣೆಯಲ್ಲಿ ತೊಡಗಿದ್ದು, ಬೇಟೆಯಾಡಲು ತಯಾರಿಸಿದ್ದ ಹಾಗೂ ಬಳಸುತ್ತಿದ್ದ ಕೆಲವು ಪರಿಕರಗಳು ದೊರೆತಿವೆ. ಪ್ರಾಯಶಃ ಜನರು ಶಿಲೆ, ಕಟ್ಟಿಗೆ ಹಾಗೂ ಎಲುಬುಗಳಿಂದ ತಯಾರಿಸಿದ ಆಯುಧಗಳನ್ನು ಬಳಸುತ್ತಿದ್ದಿರಬಹುದು. ಇವುಗಳಲ್ಲಿ ನಮಗೆ ಶಿಲೆಯಲ್ಲಿ ತಯಾರಿಸಿದ ಪರಿಕರಗಳಷ್ಟೇ ಕಾಲಗಳನ್ನು ಭೇದಿಸಿ ಇವತ್ತಿಗೂ ಅಧ್ಯಯನದ ಆಧಾರಗಳಾಗಿ ಉಳಿದುಕೊಂಡಿವೆ. ಪ್ರಾಣಿಗಳ ಮಾಂಸ ಹಾಗೂ ಮೂಳೆಗಳನ್ನು ಕತ್ತರಿಸಲು, ಮರಗಳ ತೊಗಟೆಯನ್ನು ಮತ್ತು ಪ್ರಾಣಿಗಳ ಚರ್ಮವನ್ನು ಕೀಳಲು, ಹಣ್ಣು ಹಾಗೂ ಬೇರುಗಳನ್ನು ಕತ್ತರಿಸಲು ಶಿಲಾಪರಿಕರಗಳನ್ನು ಬಳಸುತ್ತಿದ್ದರು. ಜನರು ಎಲುಬು ಮತ್ತು ಕಟ್ಟಿಗೆಗಳನ್ನು ಕೈಹಿಡಿಯಾಗಿ ಅಳವಡಿಸಿ ಅವುಗಳನ್ನು ಭರ್ಜಿ ಹಾಗೂ ಬಾಣವನ್ನಾಗಿಸಿಕೊಂಡು ಬೇಟೆಯಾಡುತ್ತಿದ್ದರು. ಮರವನ್ನು ಕಡಿದು ಸೌದೆಯಾಗಿ ಬಳಸಲು ಶಿಲೆಗಳನ್ನು ಕೊಡಲಿಯನ್ನಾಗಿ ಮಾಡಿಕೊಂಡರು. ಗುಡಿಸಲನ್ನು ಕಟ್ಟಲು ಮರವನ್ನು ಬಳಸಿರಬಹುದು. ಮರವನ್ನು ಕೆಲವೊಂದು ಆಯುಧಗಳ ಕೈಹಿಡಿಗಳಾಗಿ ರೂಪಿಸಿಕೊಂಡಿರಬಹುದು.

## ಇವರು ಬದುಕಿಗಾಗಿ ಬಳಸಿಕೊಂಡ ತಾಣಗಳು

ಬೇಟೆ ಮತ್ತು ಆಹಾರ ಸಂಗ್ರಹಣೆ ಮಾಡಿ ಬದುಕನ್ನು ಸಾಗಿಸುತ್ತಿದ್ದ ಮನುಷ್ಯನ ಕುರುಹುಗಳು ಭಾರತದಲ್ಲಿ ಬಿಂಬೇಟ್ಕ, ಹುಣಸಗಿ ಮತ್ತು ಕರ್ನೂಲ್‌ನ ಪ್ರದೇಶಗಳ ನೆಲೆಗಳಲ್ಲಿ ಲಭ್ಯವಾಗಿವೆ. ಬೇಟೆ ಮತ್ತು ಆಹಾರ ಸಂಗ್ರಹಣೆಯಲ್ಲಿ ತೊಡಗಿದ್ದ ಇನ್ನೂ ಬೇರೆ ಬೇರೆ ನೆಲೆಗಳೂ ಕೂಡ ಭಾರತದಲ್ಲಿ ಲಭ್ಯವಿವೆ. ಇಂತಹ ಬಹುತೇಕ ನೆಲೆಗಳು ನದಿಗಳು ಹಾಗೂ ಕೆರೆದಂಡೆಗಳಲ್ಲಿ ಕಂಡುಬಂದಿವೆ.ಇಷ್ಟೇ ಅಲ್ಲದೆ, ಈ ಕಾಲಘಟ್ಟದ ಮನುಷ್ಯನ ಅಳಿವು–ಉಳಿವಿಗೆ ಶಿಲೆಗಳ ಪರಿಕರಗಳು ಅನಿವಾರ್ಯವಾದ್ದರಿಂದ ತಮ್ಮ ಅಗತ್ಯಕ್ಕೆ ಸೂಕ್ತವಾದ ಕಲ್ಲುಗಳು ದೊರೆಯುವ ಸ್ಥಳಗಳನ್ನೇ ಅವರು ವಾಸಕ್ಕೆ ಆಯ್ಕೆ ಮಾಡಿಕೊಂಡರು. ಮನುಷ್ಯನು ಕಲ್ಲುಗಳನ್ನು ಬಳಸಿ ಪರಿಕರಗಳನ್ನು ತಯಾರಿಸಿದ ಇಂತಹ ಪ್ರದೇಶಗಳನ್ನು ಕೈಗಾರಿಕೆಯ ನೆಲೆಗಳೆಂದು ಭಾವಿಸಲಾಗಿದೆ.

ಇಂತಹ ಕೈಗಾರಿಕೆಗಳ ನೆಲೆ ಎಲ್ಲಿವೆ ಎನ್ನುವುದನ್ನು ತಿಳಿಯುವುದಾದರು ಹೇಗೆ? ಸಾಮಾನ್ಯವಾಗಿ, ಕೆಲವೆಡೆ ಬಂಡೆಗಳು ಕಂಡುಬರುವ ಪ್ರದೇಶಗಳಲ್ಲಿ ಕೆಲವು ಕಲ್ಲಿನ ಪರಿಕರಗಳನ್ನು ನಾವು ಕಾಣಲು ಸಾಧ್ಯ. ಬಹುಶಃ ಪರಿಕರಗಳನ್ನು ರೂಪಿಸುವ ಸಂದರ್ಭಗಳಲ್ಲಿ ಕೆಲವೊಂದು ಕಲ್ಲಿನ ಪರಿಕರಗಳನ್ನು ಮನುಷ್ಯನು ತ್ಯಜಿಸಿರಬಹುದು. ಇಷ್ಟೇ ಅಲ್ಲದೆ ಹಾಗೆ ನಿರ್ಮಿಸುವ ಸಂದರ್ಭದಲ್ಲಿ ಮೂಡಿಬರುವ ಕಲ್ಲಿನ ಚಕ್ಕೆಗಳ

© KTBS NOT TO BE REPUBLISHED

ರಾಶಿಗಳು ನೆಲೆಗಳ ಸುತ್ತಲಿನ ಪ್ರದೇಶಗಳಲ್ಲಿ ಲಭ್ಯವಾಗುತ್ತವೆ. ಮಾನವನು ಇಂತಹ ಪ್ರದೇಶಗಳಲ್ಲಿ ಅನೇಕ ವರ್ಷಗಳು ನೆಲಸಿರಲೂ ಸಾಧ್ಯವಿದೆ. ಇಂತಹ ನೆಲೆಗಳಿಗೆ ವಾಸ ಹಾಗೂ ಕೈಗಾರಿಕೆಯ ನೆಲೆಗಳೆಂದು ಕರೆಯಲಾಗಿದೆ.

## ಬೆಂಕಿಯ ಬಗೆಗಿನ ತಿಳಿವು

ಕರ್ನೂಲಿನ ಗವಿಗಳಲ್ಲಿ ಬೂದಿಯ ಕುರುಹುಗಳು ದೊರೆತಿವೆ. ಇದು ಬೆಂಕಿಯ ಬಗೆಗಿನ ಇವರ ತಿಳಿವನ್ನು ಹಾಗೂ ಅದರ ಬಳಕೆಯನ್ನು ಸೂಚಿಸುತ್ತದೆ. ಬಹುಶಃ ಬೆಂಕಿಯನ್ನು ಆಹಾರ ಬೇಯಿಸಲು, ಬೆಳಕನ್ನು ಪಡೆಯಲು ಹಾಗೂ ಪ್ರಾಣಿಗಳನ್ನು ಬೆದರಿಸಲು ಇತ್ಯಾದಿ ಬೇರೆ ಬೇರೆ ಕಾರಣಗಳಿಗಾಗಿ ಬಳಸುತ್ತಿದ್ದಿರಬಹುದು.

## ಗುಹೆಗಳಲ್ಲಿ ಕಂಡು ಬರುವ ರೇಖಾಚಿತ್ರಗಳು

ಶಿಲಾಯುಗದ ಮಾನವರು ವಾಸವಾಗಿದ್ದ ಹಲವು ಗುಹೆಗಳಲ್ಲಿ ನಾವು ಕೆಲವು ರೇಖಾ ಚಿತ್ರಗಳನ್ನೂ ಸಹ ಕಾಣಲು ಸಾಧ್ಯ. ಇವುಗಳನ್ನು ಅವರು ಗವಿಯ ಗೋಡೆ ಹಾಗೂ ಬಂಡೆಗಳ ಮೇಲೆ ಚಿತ್ರಿಸಿರುವುದನ್ನು ಇಂದಿಗೂ ನಾವು ಕಾಣಬಹುದು. ಇಂತಹ ಕೆಲವು ಚಿತ್ರಗಳನ್ನು ಮಧ್ಯಪ್ರದೇಶ, ಉತ್ತರಪ್ರದೇಶ ಹಾಗೂ ಕರ್ನಾಟಕದ ಕೆಲವು ಗವಿಗಳಲ್ಲಿ ಕಾಣುತ್ತೇವೆ. ಇವುಗಳಲ್ಲಿ ಕಾಡು ಮೃಗಗಳ ಹಾಗೂ ಬೇಟೆಯ ಚಿತ್ರಗಳಿದ್ದು ಅವು ಅತ್ಯಂತ ಸುಂದರವಾಗಿ ಮೂಡಿ ಬಂದಿವೆ.


@KTBS NOT TO BE REPUBLISHED

## ಬದಲಾಗುತ್ತಿರುವ ಪರಿಸರ

ಸುಮಾರು 12,000 ವರ್ಷಗಳ ಹಿಂದೆ ಜಗತ್ತಿನ ಪರಿಸರದಲ್ಲಿ ಬದಲಾವಣೆಯು ಉಂಟಾಯಿತೆಂದು ಭಾವಿಸಲಾಗಿದೆ. ಈ ಸಂದರ್ಭದಲ್ಲಿ ಭೂ ಮಂಡಲದ ತಾಪಮಾನವು ಮತ್ತಷ್ಟು ಹೆಚ್ಚಿತು. ಹಲವೆಡೆ ಇದು ಹುಲ್ಲುಗಾವಲಿನ ಬೆಳವಣಿಗೆಗೆ ಕಾರಣವಾಯಿತು. ಪ್ರಾಣಿ ಪಕ್ಷಿಗಳು ಹಿಂದೆಂದೂ ಇಲ್ಲದ ಪ್ರಮಾಣದಲ್ಲಿ ಸಂತಾನಾಭಿವೃದ್ಧಿಯಲ್ಲಿ ತೊಡಗಿ ಅವುಗಳ ಸಂತತಿಯು ಹೆಚ್ಚಾಗತೊಡಗಿದವು. ಈ ಸಂಕುಲಗಳ ಜೊತೆಯಲ್ಲಿಯೇ ಜಿಂಕೆ, ಕಡವೆ, ಮೇಕೆ, ಕುರಿ ಹಾಗೂ ಇನ್ನಿತರ ಪ್ರಾಣಿಗಳು ಹುಲ್ಲುಗಾವಲು ಪ್ರದೇಶದಲ್ಲಿ ಸಮೃದ್ಧಿಯಿಂದ ಬೆಳೆಯಲು ಕಾರಣವಾಯಿತು. ಇವನ್ನೇ ಬೇಟೆಯಾಡುತ್ತಿದ್ದ ಮಾನವನು ಈಗ ಅವುಗಳ ಸ್ವಭಾವ, ಆಹಾರ ರೀತಿ ಹಾಗೂ ಸಂತತಿ ವೃದ್ಧಿಯ ಬಗ್ಗೆ ತಿಳಿದುಕೊಂಡನು. ಕ್ರಮೇಣವಾಗಿ ಈ ಕೆಲಪ್ರಾಣಿಗಳನ್ನು ಹಿಡಿದು ತಂದು ಪೋಷಿಸತೊಡಗಿದನು. ಹೀಗೆ ಪಶು ಸಂಗೋಪನೆ ಮತ್ತು ಹೈನುಗಾರಿಕೆಯು ಪ್ರಾರಂಭವಾಯಿತು. ಹೊಳೆ, ಕೆರೆಗಳಲ್ಲಿ ಮೀನು ಹಿಡಿಯುವುದನ್ನು ಈತ ಕಲಿತಿದ್ದನು. ಇದೇ ಸಂದರ್ಭದಲ್ಲಿ ಹಲವು ದವಸಧಾನ್ಯಗಳನ್ನು ಬಿಡುವ ಗರಿಕೆಗಳೂ ಸ್ವಾಭಾವಿಕವಾಗಿಯೇ ಹುಟ್ಟಿಕೊಂಡಿದ್ದವು. ಇವುಗಳಿಂದ ದೊರೆತ ಅಕ್ಕಿ, ಗೋಧಿ ಹಾಗೂ ಬಾರ್ಲಿಯಂತಹ ದವಸ–ಧಾನ್ಯಗಳನ್ನು ಇವನು ಆಹಾರಕ್ಕಾಗಿ ಬಳಸುವುದನ್ನು ತಿಳಿದುಕೊಂಡನು. ಕ್ರಮೇಣವಾಗಿ ಅವುಗಳನ್ನು ಬೆಳೆಯುವ ವಿಧಾನವನ್ನು ಕೂಡ ಕಂಡುಕೊಂಡನು.


ನಾವು ಈಗ ತಿಳಿದುಕೊಂಡ ಕಾಲಘಟ್ಟವನ್ನು ಪ್ರಾಕ್ತನಶಾಸ್ತ್ರಜ್ಞರು ವಿವಿಧ ಹೆಸರುಗಳಿಂದ

ಕರೆಯುತ್ತಾರೆ. ಇದರ ಅತ್ಯಂತ ಪೂರ್ವದ ಕಾಲಘಟ್ಟವನ್ನು ಹಳೆಯ ಶಿಲಾಯುಗವೆಂದು ಕರೆಯುವರು. ಹಳೆಯ ಶಿಲಾಯುಗದ ಕಾಲವು 2 ಮಿಲಿಯನ್ ವರ್ಷದಷ್ಟು ಹಳೆಯದು ಹಾಗೂ ಅದು ಸುಮಾರು 12,000 ವರ್ಷದವರೆಗೂ ವಿಸ್ತರಿಸಲ್ಪಟ್ಟಿದೆ. ಈ ಸುದೀರ್ಘ ಕಾಲಾವಧಿಯನ್ನು ಮೂರು ಭಾಗವಾಗಿ ವಿಂಗಡಿಸಲಾಗಿದೆ. ಅವೆಂದರೆ ಆದಿ, ಮಧ್ಯ ಮತ್ತು ಅಂತ್ಯ ಹಳೆ ಶಿಲಾಯುಗಗಳು.



**ಆಯುಧಗಳು**

**ಚರಿತ್ರೆ ಪೂರ್ವ ಘಟ್ಟಗಳ ರೇಖಾಚಿತ್ರ**




ಸುಮಾರು 12,000 ವರ್ಷಗಳಿಂದ ಹಿಡಿದು ಸುಮಾರು 10,000 ವರ್ಷದವರೆಗಿನ ಕಾಲವನ್ನು ಮಧ್ಯಶಿಲಾಯುಗವೆಂದು ಕರೆಯಲಾಗಿದೆ. ಈ ಕಾಲದ ಪರಿಕರಗಳು ಸಾಮಾನ್ಯವಾಗಿ ಅತಿ ಚಿಕ್ಕದಿದ್ದು ಈ ಕಾರಣಕ್ಕಾಗಿ ಅವುಗಳನ್ನು ಸೂಕ್ಷ್ಮ ಶಿಲಾಪರಿಕರಗಳು ಎಂದು ಕರೆಯಲಾಗಿದೆ. ಈ ಕಾಲದಲ್ಲಿ ಮಾನವನು

ಸೂಕ್ಷ್ಮ ಶಿಲೆಗಳಿಂದ ಮಾಡಿದ ಆಯುಧಗಳಿಗೆ ಎಲುಬು ಹಾಗೂ ಕಟ್ಟಿಗೆಯ ಅಲಂಕಾರಿಕ ಕೈಹಿಡಿಗಳನ್ನು ಅಳವಡಿಸುತ್ತಿದ್ದನು. ಅವುಗಳನ್ನು ಕೈಗೊಡಲಿ ಹಾಗೂ ಗರಗಸಗಳಾಗಿ ಬಳಸುತ್ತಿದ್ದನು. ಇದರ ಜೊತೆ ಜೊತೆಯಲ್ಲಿಯೆ ಹಳೆ ಮಾದರಿಯ ಆಯುಧಗಳು ಮುಂದುವರಿದವು.

ನವ ಶಿಲಾಯುಗದ ಕಾಲಘಟ್ಟವು ಸುಮಾರು 10,000 ವರ್ಷಗಳ ನಂತರದ್ದು. ಈ ಕಾಲಘಟ್ಟದ ಕಲ್ಲಿನ ಆಯುಧವು ಮೊದಲಿನವುಗಳಿಗಿಂತ ಭಿನ್ನವಾದವು. ಈ ಆಯುಧಗಳು ಹೊಳಪಿನಿಂದ ಕೂಡಿದ್ದು ಹರಿತವಾದ ಅಲಗನ್ನು ಹೊಂದಿದ್ದವು. ಗಿಡ–ಮೂಲಿಕೆಯನ್ನು ಅರೆಯಲು, ದವಸ–ಧಾನ್ಯಗಳನ್ನು ಪುಡಿಮಾಡಲು ಬೀಸುಕಲ್ಲನ್ನು ಬಳಸುತ್ತಿದ್ದರು. ಈ ಕಾಲಮಾನದ ಕೆಲವು ಮಡಿಕೆ–ಕುಡಿಕೆಗಳು ದೊರೆತಿವೆ. ಇವುಗಳಲ್ಲಿ ಕೆಲವು ಅಲಂಕರಿಸಲ್ಪಟ್ಟಿವೆ. ಮಡಿಕೆಗಳನ್ನು ಧಾನ್ಯಗಳ ಶೇಖರಣೆಗಾಗಿ ಬಳಸಲಾಗುತ್ತಿತ್ತು. ಇವುಗಳಲ್ಲಿ ಅಕ್ಕಿ, ಗೋಧಿ ಹಾಗೂ ಇನ್ನಿತರ ದವಸ–ಧಾನ್ಯಗಳನ್ನು ಬೇಯಿಸಲಾಗುತ್ತಿತ್ತು. ಈ ಕಾಲದ ಮನುಷ್ಯನು ಬಟ್ಟೆಯನ್ನು  ನೇಯುವುದನ್ನು ಕಲಿತಿದ್ದನು.

## ಅಭ್ಯಾಸಗಳು

### I ಕೆಳಕಂಡ ವಾಕ್ಯಗಳನ್ನು ಸೂಕ್ತ ಪದಗಳಿಂದ ಪೂರ್ಣಗೊಳಿಸಿ.

1 ಭಾರತವು ಒಂದು __________ ದ್ವೀಪವಾಗಿದೆ.

2 ಬೂದಿಯ ಕುರುಹುಗಳು _________ ಗವಿಗಳಲ್ಲಿ ದೊರೆತಿವೆ.

3 ಮಧ್ಯಶಿಲಾಯುಗದ ಪರಿಕರಗಳನ್ನು ________ ಎಂದು ಕರೆಯುತ್ತಾರೆ.

### II ಸಂಕ್ಷಿಪ್ತವಾಗಿ ಉತ್ತರಿಸಿ.

4 ಭಾರತದ ಭೂ ಮೇಲ್ಮೈ ರಚನೆಯನ್ನು ಸ್ಥೂಲವಾಗಿ ತಿಳಿಸಿ ?

5 ಭಾರತದ ಮೇಲೆ ದಾಳಿಗಳು ಯಾವ ಕಣಿವೆಗಳ ಮೂಲಕ ಸಂಭವಿಸಿವೆ ?

6 ಪ್ರಾಗೈತಿಹಾಸಿಕ ಕಾಲ ಎಂದರೇನು ?

7 ಪಶು ಸಂಗೋಪನೆ ಮತ್ತು ಹೈನುಗಾರಿಕೆಯು ಹೇಗೆ ಪ್ರಾರಂಭವಾಯಿತು ?

8 ಪ್ರಾಗೈತಿಹಾಸಿಕ ಕಾಲಘಟ್ಟವನ್ನು ವಿದ್ವಾಂಸರು ವಿವಿಧ ಹೆಸರುಗಳಿಂದ ಕರೆದಿದ್ದಾರೆ. ಅವು ಯಾವುವು ?

### III ಚಟುವಟಿಕೆ.

9 ಪಾಲಕರೊಂದಿಗೆ ಯಾವುದಾದರೂ ಒಂದು ಗವಿ (ಗುಹೆ)ಗೆ ಭೇಟಿ ನೀಡಿ, ಅದರ ಬಗ್ಗೆ ಶಿಕ್ಷಕರಿಂದ ಹೆಚ್ಚು ವಿಷಯ ತಿಳಿದುಕೊಳ್ಳಿ.

✲✲✲

@KTBS NOT TO BE REPUBLISHED

## ಅಧ್ಯಾಯ–3

# ಸಿಂಧೂ–ಸರಸ್ವತಿ ನಾಗರಿಕತೆ

N3X6Y3

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಭಾರತದಲ್ಲಿನ ಪ್ರಾಚೀನ ನಾಗರಿಕತೆಗಳ ಬಗ್ಗೆ ತಿಳಿಯುವುದು.
- ನಾಗರಿಕತೆಯಲ್ಲಿ ಮೊದಲ ನಗರೀಕರಣ, ನಗರಗಳ ವಿಶೇಷತೆ ನಗರಯೋಜನೆ, ನಗರ ಜೀವನ, ನಗರಗಳ ಅವನತಿ, ಹೇಗಿತ್ತು ಎಂಬುದನ್ನು ವಿಶ್ಲೇಷಣೆ ಮಾಡುವುದು.
- ವೇದಗಳ ಬೆಳವಣಿಗೆ, ವಿಧಗಳು ಮತ್ತು ವೇದಗಳ ಕಾಲ ಹಾಗೂ ನಂತರದ ಕಾಲದಲ್ಲಿನ ಜನಜೀವನ ಬಗ್ಗೆ ತಿಳಿಯುವುದು.

**ಸಿಂಧೂ–ಸರಸ್ವತಿ**

ವೇದಗಳ ಬಗ್ಗೆ ಯಾರಿಗೆ ತಾನೇ ತಿಳಿದಿಲ್ಲ? ಋಗ್ವೇದವೇ ಪ್ರಪಂಚದ ಅತ್ಯಂತ ಪ್ರಾಚೀನ ವಾಙ್ಮಯ ಎಂಬುದು ಭಾರತೀಯರಾದ ನಮಗೆ ಹೆಮ್ಮೆಯ ವಿಷಯ. ವೇದಗಳಲ್ಲಿ ಭಕ್ತಿ, ಅಧ್ಯಾತ್ಮ ಮುಂತಾದ ವಿಚಾರಗಳಲ್ಲದೆ ನಮ್ಮ ರಾಷ್ಟ್ರದ ಇತಿಹಾಸವನ್ನು ತಿಳಿಯಲು ಉಪಯುಕ್ತವಾದ ಅನೇಕ ಸಂಗತಿಗಳಿವೆ. ಅಲ್ಲಿ ಕಂಡುಬರುವ ನದಿ, ಸಮುದ್ರ, ಬೆಟ್ಟ, ಭೂಮಿ, ಸಸ್ಯ, ಪ್ರಾಣಿ, ಜನಜೀವನವೇ ಮೊದಲಾದ ವಿವರಗಳ ಅಧ್ಯಯನದಿಂದ ಪ್ರಾಚೀನ ಭಾರತದ ಇತಿಹಾಸವನ್ನು ವಿದ್ವಾಂಸರು ರಚಿಸಿದ್ದಾರೆ.

ಈ ವಿವರಗಳ ಪೈಕಿ ಮುಖ್ಯವಾದದ್ದು ಸರಸ್ವತೀ ನದಿ. ಋಗ್ವೇದದ ಕಾಲದಲ್ಲಿ ಸರಸ್ವತಿ ತುಂಬಿಹರಿಯುವ ಬಲು ದೊಡ್ಡ ನದಿಯಾಗಿತ್ತೆಂದು ತಿಳಿದುಬರುತ್ತದೆ. ಕಾಲ ಕಳೆದಂತೆ ಪ್ರಾಕೃತಿಕ ಕಾರಣಗಳಿಂದ ಇಂಗುತ್ತ ಬಂದ ಅದು ಸಾ.ಶ.ಪೂ. 2000ರ ಹೊತ್ತಿಗೆ ಬತ್ತಿಹೋಯಿತು. ಇದರ ಆಧಾರದ ಮೇಲೆ ಋಗ್ವೇದದ ಕಾಲ ಕಡಮೆಯೆಂದರೆ ಸಾ.ಶ.ಪೂ. 3000ಕ್ಕೂ ಹಿಂದಿನದು ಎಂದು ಇತಿಹಾಸಜ್ಞರು ಸಿದ್ಧಪಡಿಸಿದ್ದಾರೆ. ಅಂದರೆ ಇಂದಿಗೆ ಐದು ಸಾವಿರ ವರ್ಷಗಳಿಗೂ ಮುನ್ನ!

ಸರಸ್ವತಿಯ ಹರಿವು ವ್ಯಾಪಿಸಿಕೊಂಡ ಪ್ರದೇಶಗಳಲ್ಲೆಲ್ಲ ಇಂದು ನಮಗೆ ನೂರಾರು ಪ್ರಾಚೀನ ತಾಣಗಳು, ನಗರಗಳು ಉತ್ಖನನದ ಮೂಲಕ ದೊರೆತಿವೆ. ಹಾಗೆ ದೊರೆತ ಮೊದಮೊದಲ ನಗರಗಳಲ್ಲಿ 'ಹರಪ್ಪ', 'ಮೊಹೆಂಜೋದಾರೋ' ಪ್ರಮುಖವಾದವು. ಇಲ್ಲಿಯೇ ನಾಗರಿಕತೆಯ ಕುರುಹುಗಳನ್ನು ತಜ್ಞರು ಮೊದಲ ಬಾರಿಗೆ ಗಮನಿಸಿದ್ದು. ಹೀಗಾಗಿಯೇ ಪ್ರಾಚೀನ ಭಾರತದ ನಾಗರಿಕತೆಯನ್ನು ಬಳಕೆಯಲ್ಲಿ ಹೆಚ್ಚಾಗಿ 'ಹರಪ್ಪ ನಾಗರಿಕತೆ' ಎಂದು ಗುರುತಿಸಲಾಗುತ್ತದೆ. ಆದರೆ ಅದನ್ನು 'ಸಿಂಧೂ–ಸರಸ್ವತೀ ನಾಗರಿಕತೆ' ಎಂದು ಕರೆಯುವುದು ಸೂಕ್ತ. ಸಿಂಧೂ, ವಿತಸ್ತಾ (ಝೀಲಂ), ಅಸಿಕ್ನೀ (ಚೇನಾಬ್), ಪರುಷ್ಣೀ (ರಾವಿ), ವಿಪಾಶಾ (ಬಿಯಾಸ್), ಶುತುದ್ರಿ (ಸಟ್ಲೆಜ್) ಮತ್ತು ಸರಸ್ವತೀ ನದಿಗಳಿಂದ ಕೂಡಿದ 'ಸಪ್ತಸಿಂಧೂ ಪ್ರದೇಶ'ವೇ ಈ ನಾಗರಿಕತೆಯ ತಾಯ್ನೆಲ. ಇವುಗಳಲ್ಲದೆ ಗಂಗಾ ಮತ್ತು ಯಮುನಾ ನದಿಗಳ ಬಯಲು (ಅಂದಿನ ಆರ್ಯಾವರ್ತ), ಗುಜರಾತ್, ಬಲೂಚಿಸ್ತಾನ ಮೊದಲಾದ ಪ್ರಾಂತಗಳು ಪ್ರಾಚೀನ ಭಾರತದ ಅಧ್ಯಯನಕ್ಕೆ ಮುಖ್ಯವಾದವು.

ಸಿಂಧೂ–ಸರಸ್ವತಿ ನಾಗರಿಕತೆಯ ಕಾಲವನ್ನು 'ಉತ್ತರ ವೇದಯುಗ' ಎಂದು ವಿದ್ವಾಂಸರು ಹೆಸರಿಸಿದ್ದಾರೆ. ಆ ಸಮಯದ ಹೊತ್ತಿಗೆ ನಾಲ್ಕೂ ವೇದಗಳು ರೂಪ ತಾಳಿದ್ದವು. ಅಥರ್ವವೇದದಲ್ಲಿ ಕಂಡುಬರುವ ಸಾಂಸ್ಕೃತಿಕ ಅಂಶಗಳಿಗೂ ಹರಪ್ಪ ಮೊದಲಾದ ನಗರಗಳಲ್ಲಿ ಲಭ್ಯವಿರುವ ವಸ್ತುಗಳಿಗೂ ಬಹುಮಟ್ಟಿಗೆ ಹೊಂದಿಕೆಯಾಗುತ್ತದೆ.

© KTBS Not to be republished

## ಪ್ರಾಚೀನ ನಗರಗಳು ಪತ್ತೆಯಾದ ಪರಿ

ಸಿಂಧೂ–ಸರಸ್ವತೀ ನಾಗರಿಕತೆಯ ಹಳೆಯ ನೆಲೆಗಳು ಪತ್ತೆಯಾದ ಕಥೆ ರೋಚಕವಾಗಿದೆ.

1921ರ ಸುಮಾರಿಗೆ ಪಂಜಾಬಿನ ಸಿಂಧೂಕಣಿವೆ ಪ್ರದೇಶದಲ್ಲಿ ರೈಲಿನ ಹಳಿಗಳನ್ನು ಜೋಡಿಸುವಾಗ ಅಲ್ಲಿಯ ತಂತ್ರಜ್ಞರು ಹರಪ್ಪದ ಪ್ರಾಚೀನ ನೆಲೆಗಳನ್ನು ಕಂಡರು. ಅವರಿಗೆ ಅದು ಅತ್ಯುತ್ತಮ ಇಟ್ಟಿಗೆಗಳಿಂದ ಕೂಡಿದ ದಿಣ್ಣೆಯಂತೆ ಕಂಡಿತು. ಅಲ್ಲಿ ಸಿಕ್ಕ ಇಟ್ಟಿಗೆಗಳನ್ನು ಅವರು ರೈಲುಹಳಿಯ ನಿರ್ಮಾಣದಲ್ಲಿ ಬಳಸಿಕೊಂಡರು. ಇದೇ ರೀತಿಯಲ್ಲಿ ಅಲ್ಲಿ ಹುದುಗಿಹೋಗಿದ್ದ ಅನೇಕ ಕಟ್ಟಡಗಳು ಪತ್ತೆಯಾದವು. ಅನಂತರ ಪ್ರಾಕ್ತನಶಾಸ್ತ್ರಜ್ಞರು ಈ ಪ್ರದೇಶದ ಬಗ್ಗೆ ಸಂಶೋಧನೆಯನ್ನು ಕೈಗೊಂಡರು. ಅದೊಂದು ಪ್ರಾಚೀನ ನಗರವೆಂದು ಅವರಿಗೆ ಮನವರಿಕೆಯಾಯಿತು. ಅಲ್ಲಿ ಕಂಡುಬಂದ ಮತ್ತಿತರ ನೆಲೆಗಳಿಗೂ ಈ ಮೊದಲು ಸಿಕ್ಕ ನೆಲೆಗಳಿಗೂ ಸಾಮ್ಯವಿದ್ದ ಕಾರಣ ಅವುಗಳನ್ನು ಒಟ್ಟಾಗಿ ಹರಪ್ಪದ ನಾಗರಿಕತೆಯೆಂದು ಕರೆಯಲಾಯಿತು. ಅದಕ್ಕೂ ಮುನ್ನ 1917ರಲ್ಲಿಯೇ ಕಾಲಿಬಂಗನ್ ಎಂಬ ಪ್ರಾಚೀನ ನಗರ ಪತ್ತೆಯಾಗಿತ್ತು.

## ನಗರ ನಿರ್ಮಾಣ

ಹರಪ್ಪದ ನಗರಗಳಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಭಾಗಗಳನ್ನು ಕಾಣಬಹುದು. ಪಶ್ಚಿಮದ ಭಾಗವು ಕಿರಿದಾಗಿದ್ದು ಎತ್ತರದಲ್ಲಿದೆ. ಇದನ್ನು ಪ್ರಾಕ್ತನಶಾಸ್ತ್ರಜ್ಞರು ಕೋಟೆ ಎಂದಿದ್ದಾರೆ. ಸಾಮಾನ್ಯವಾಗಿ ಪೂರ್ವದ ಭಾಗವು ವಿಶಾಲವಾಗಿದ್ದು ತಗ್ಗಿನ ಪ್ರದೇಶದಲ್ಲಿರುತ್ತದೆ. ಇದನ್ನು ಕೆಳಗಿನ ಗ್ರಾಮವೆಂದಿದ್ದಾರೆ. ಪ್ರತಿಯೊಂದು ಭಾಗದ ಸುತ್ತಲು ಸುಟ್ಟ ಇಟ್ಟಿಗೆಗಳ ಗೋಡೆಯೊಂದನ್ನು ಕಟ್ಟಿರುವುದು ಕಂಡುಬರುತ್ತದೆ. ಇಟ್ಟಿಗೆಗಳನ್ನು ಪರಸ್ಪರ ಬೆಸೆದುಕೊಳ್ಳುವಂತೆ ಅಳವಡಿಸಿದ್ದರಿಂದ ಗೋಡೆಯು ಹೆಚ್ಚು ಭದ್ರವಾಗಿತ್ತು. ಸುಟ್ಟ ಇಟ್ಟಿಗೆಗಳ ಬಳಕೆ ಆ ಸಂಸ್ಕೃತಿಯ ಉನ್ನತಿಯನ್ನು ಸೂಚಿಸುತ್ತದೆ.

ಇನ್ನೊಂದು ಪಟ್ಟಣವಾದ ಮೊಹೆಂಜೋದಾರೊವಿನಲ್ಲಿ ಒಂದು ಕೊಳವನ್ನು ಕಟ್ಟಲಾಗಿತ್ತು. ಇದನ್ನು ವಿದ್ವಾಂಸರು ಸ್ನಾನದ ಕೊಳವೆಂದಿದ್ದಾರೆ. ಇದನ್ನು ಇಟ್ಟಿಗೆಗಳಿಂದ ಕಟ್ಟಲಾಗಿದೆ. ಕೊಳದಿಂದ ನೀರಿನ ಸೋರಿಕೆ ಆಗದಂತೆ ಎಚ್ಚರ ವಹಿಸಿದ್ದಾರೆ. ಇದರ ಎರಡು ಕಡೆಗಳಲ್ಲಿ ಇಳಿಯುವ ಮೆಟ್ಟಿಲುಗಳಿದ್ದು ಸುತ್ತಲೂ ಕೊಠಡಿಗಳಿವೆ. ಬಹುಶಃ ಇದರ ನೀರಿನ ಪೂರೈಕೆಯು ಬಾವಿಯಿಂದ ಆಗುತ್ತಿತ್ತು ಹಾಗೂ ಬಳಕೆಯ ಬಳಿಕ ನೀರನ್ನು ಹೊರಗೆ ಬಿಡಲಾಗುತ್ತಿತ್ತು. ಈ ಕೊಳದಲ್ಲಿ ಮುಖ್ಯ ವ್ಯಕ್ತಿಗಳು ವಿಶೇಷವಾದ ಸಂದರ್ಭಗಳಲ್ಲಿ ಸ್ನಾನ ಮಾಡುತ್ತಿದ್ದಿರಬಹುದು.




ಸಾರ್ವಜನಿಕ ಸ್ನಾನಗೃಹ, ಮೊಹೆಂಜೊದಾರೊ


NOT TO BE REPUBLISHED © KTBS



ನರ್ತಕಿಯ ಲೋಹದ ಮೂರ್ತಿ



ಪುರುಷಮುಂಡದ ಶಿಲಾ ಮೂರ್ತಿ



ಸ್ವಸ್ತಿಕ್ (ಸೂರ್ಯ) ಮುದ್ರೆ



ಸಿಂಧೂ ಲಿಪಿ

ಇತರ ನಗರಗಳಾದ ಕಾಲಿಬಂಗನ್ ಮತ್ತು ಲೋಥಾಲ್‌ಗಳಲ್ಲಿ ಬೆಂಕಿಯ ಒಲೆಗಳು ಕಂಡುಬಂದಿವೆ. ಮೊಹೆಂಜೋದಾರೊ, ಹರಪ್ಪ ಹಾಗೂ ಲೋಥಾಲ್‌ಗಳಲ್ಲಿ ಸುವ್ಯವಸ್ಥಿತವಾದ ಸಂಗ್ರಹಣೆಯ ಕೊಠಡಿಗಳನ್ನು ಗಮನಿಸಬಹುದು.

ನಗರದ ತಗ್ಗಿನ ಪ್ರದೇಶದಲ್ಲಿರುವ ಗ್ರಾಮವು ಜನವಸತಿಯ ಜಾಗವಾಗಿತ್ತು. ಅದನ್ನು ಅತ್ಯಂತ ವ್ಯವಸ್ಥಿತವಾದ ರೀತಿಯಲ್ಲಿ ರಚಿಸಲಾಗಿದೆ. ಕ್ರಮಬದ್ಧವಾಗಿ ನಿರ್ಮಿಸಿದ ಮನೆಗಳನ್ನು, ರಸ್ತೆಗಳನ್ನು ಹಾಗೂ ಚರಂಡಿಗಳನ್ನು ನಾವಿಲ್ಲಿ ಕಾಣಬಹುದು. ಸಾಮಾನ್ಯವಾಗಿ ಜನರು ಒಂದು ಅಥವಾ ಎರಡು ಅಂತಸ್ತಿನ ಮನೆಯನ್ನು ಹೊಂದಿದ್ದರು. ಮನೆಗಳು ಇಟ್ಟಿಗೆಗಳಿಂದ ಕಟ್ಟಲ್ಪಟಿದ್ದು, ಅವುಗಳ ಗೋಡೆಗಳು ಭದ್ರವಾಗಿದ್ದವು. ಒಳಾಂಗಣದ ಸುತ್ತ ಕೊಠಡಿಗಳಿದ್ದವು. ಮನೆಯ ಬಾಗಿಲುಗಳು ರಸ್ತೆಯ ಮಗ್ಗುಲಿನಲ್ಲಿದ್ದವು. ಯಾವ ಕಿಟಕಿಯೂ ರಸ್ತೆಗೆ ಮುಖ ಮಾಡಿರಲಿಲ್ಲ. ಮನೆಗಳು ಸ್ನಾನದ ಕೊಠಡಿಗಳನ್ನು ಹೊಂದಿದ್ದವು. ಕೆಲವೊಂದರಲ್ಲಿ ಬಾವಿಗಳಿದ್ದು ಅವುಗಳಿಂದ ನೀರಿನ ಪೂರೈಕೆಯಾಗುತ್ತಿತ್ತು. ನೀರು ಸಮೃದ್ಧವಾಗಿ ಲಭ್ಯವಿತ್ತು. ಪ್ರತಿಯೊಂದು ಮನೆಯಲ್ಲೂ ಸ್ನಾನದ ಕೊಠಡಿಗಳಿರುವುದು ಆಗಿನ ಕಾಲಕ್ಕೆ ಬಹಳ ದೊಡ್ಡ ವಿಷಯವಾಗಿತ್ತು. ಇದೇ ಮೊದಲಾದ ವಿವರಗಳಿಂದ ಸಿಂಧೂ-ಸರಸ್ವತೀ ನಾಗರಿಕತೆಯ ಜನರು ಎಷ್ಟು ಸುಭಿಕ್ಷ ಜೀವನವನ್ನು ನಡೆಸುತ್ತಿದ್ದರೆಂದು ಊಹಿಸಬಹುದು.

ನಗರಗಳು ಒಳಚರಂಡಿ ವ್ಯವಸ್ಥೆಯನ್ನು ಹೊಂದಿದ್ದವು. ಇಟ್ಟಿಗೆಯಿಂದ ನಿರ್ಮಿಸಲಾಗಿದ್ದ ಚರಂಡಿಯನ್ನು ಚಪ್ಪಡಿಗಳಿಂದ ಮುಚ್ಚಲಾಗಿತ್ತು. ಮನೆಯ ಮೋರಿಗಳನ್ನು ಹೊರಗಿನ ಚರಂಡಿಗೆ ಹೊಂದಿಸಲಾಗಿತ್ತು. ಮನೆಬಳಕೆಯ ಹಾಗೂ ಸ್ನಾನದಲ್ಲಿ ಬಳಸಿದ ಕಲುಷಿತ ನೀರು ಮೋರಿಯ ಮೂಲಕ ಚರಂಡಿಗೆ ಬಂದು ಸೇರುತ್ತಿತ್ತು. ಚರಂಡಿಗಳನ್ನು ಕಾಲದಿಂದ ಕಾಲಕ್ಕೆ ಶುಚಿಯಾಗಿಡಲು ಅಲ್ಲಲ್ಲಿ ರಂಧ್ರಗಳನ್ನು ನಿರ್ಮಿಸಿದ್ದರು. ಇವನ್ನು ಗಮನಿಸುವುದಕ್ಕೆ ಪ್ರತ್ಯೇಕ ಅಧಿಕಾರಿಗಳು ನೇಮಕವಾಗಿದ್ದರೆಂದು ತಿಳಿಯುತ್ತದೆ. ಒಳಚರಂಡಿಯ ವ್ಯವಸ್ಥೆ ಒಂದರಿಂದಲೇ ಆಗಿನ ಕಾಲದ ನಗರನಿರ್ಮಾಪಕರ ವ್ಯವಸ್ಥಿತ ಆಲೋಚನೆ, ಕುಂದು-ಕೊರತೆಗಳಿಲ್ಲದ ಕ್ರಿಯಾನ್ವಯ ಮತ್ತು ಸಾರ್ವಜನಿಕ ಬಾಧ್ಯತೆಗಳು ಎಷ್ಟು ಉನ್ನತವಾಗಿದ್ದವು ಎಂದು ತಿಳಿಯಬಹುದು.

ಇಷ್ಟು ಸುಸಜ್ಜಿತವಾದ ನಗರನಿರ್ಮಾಣ ವ್ಯವಸ್ಥೆ ಆ ಕಾಲದ ಈಜಿಪ್ಟ್, ಮೆಸಪೊಟೇಮಿಯಾ ಮೊದಲಾದ ನಾಗರಿಕತೆಗಳಲ್ಲೂ ಕಂಡುಬರುವುದಿಲ್ಲ. ವಿಸ್ತೀರ್ಣದ ದೃಷ್ಟಿಯಿಂದ ಕೂಡ ಸಿಂಧೂ-ಸರಸ್ವತೀ ನಾಗರಿಕತೆಯು ಅದರ ಕಾಲದ ಇತರ ನಾಗರಿಕತೆಗಳಿಗಿಂತ ಮುಂದುವರಿದಿದ್ದು ಬಹಳ ವಿಶಾಲವಾಗಿದ್ದಿತು.

© KTBS NOT TO BE REPUBLISHED

## ಸಾಂಸ್ಕೃತಿಕ ವಿವರಗಳು



ಮಾತೃದೇವತೆಯ ಮಣ್ಣಿನ ಮೂರ್ತಿ

ಕಟ್ಟಡಗಳನ್ನು ಹೊರತು ಪಡಿಸಿ ದೊರೆತಿರುವ ವಸ್ತುಗಳಲ್ಲಿ ನಾವು ಲೋಹ ಹಾಗೂ ಬೆಲೆಬಾಳುವ ಹರಳುಗಳನ್ನು ಕಾಣುತ್ತೇವೆ. ಅತಿ ಹೆಚ್ಚಾಗಿ ದೊರೆತಿರುವ ವಸ್ತುಗಳಲ್ಲಿ ಮಣಿಗಳನ್ನು ಹಾಗೂ ಮುದ್ರೆಗಳನ್ನು ಕಾಣಲು ಸಾಧ್ಯ. ಹರಪ್ಪದ ಮಣಿಗಳಿಗೆ ದೂರದ ಮೆಸೊಪೊಟೇಮಿಯಾದಲ್ಲಿ ಕೂಡ ಬೇಡಿಕೆ ಇತ್ತು. ಮಣಿಗಳಲ್ಲಿ ಉದ್ದವಾಗಿ ರಂಧ್ರವನ್ನು ಕೊರೆಯುವ ವಿಧಾನವನ್ನು ಹರಪ್ಪದ ಜನರು ಕರಗತ ಮಾಡಿಕೊಂಡಿದ್ದುದು ಒಂದು ವಿಶೇಷ. ಇವಲ್ಲದೆ ಬಗೆಬಗೆಯ ಚಿತ್ತಾರಗಳುಳ್ಳ ಮಡಕೆಗಳು ದೊರೆತಿವೆ. ಲೋಹಗಳಿಂದ, ಶಂಖ ಮತ್ತಿತರ ಪದಾರ್ಥಗಳಿಂದ ನಿರ್ಮಿಸಿದ ಬಳೆಗಳು ಅನೇಕ ಸಂಖ್ಯೆಯಲ್ಲಿ ಸಿಕ್ಕಿವೆ. ಅವುಗಳನ್ನು ವಿವಿಧ ರೀತಿಗಳಲ್ಲಿ ತೊಟ್ಟಿರುವ ಸ್ತ್ರೀಯರ ಮೂರ್ತಿಗಳೂ ದೊರೆತಿವೆ. ಶಂಖ-ದ ಬಳೆಗಳನ್ನು ಪವಿತ್ರವೆಂದು ಭಾವಿಸಿ ತೊಡುವುದು ಎಲ್ಲ ವರ್ಗದ ಮಹಿಳೆಯರಲ್ಲಿ ಇಂದಿಗೂ ಕಂಡುಬರುತ್ತದೆ. ಬಳೆಗಳ ನಿರ್ಮಾಣಕ್ಕೆಂದೇ ಸಣ್ಣ ಸಣ್ಣ ನಗರಗಳು ಮೀಸಲಾಗಿದ್ದಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ. ನಗರವ್ಯವಸ್ಥೆಯು ಸ್ಪಷ್ಟವಾಗಿ ಆಡಳಿತವರ್ಗವೊಂದನ್ನು ಸೂಚಿಸುತ್ತದೆ. ಬೆಲೆಬಾಳುವ ಲೋಹಗಳನ್ನು, ಹರಳುಗಳನ್ನು ಮತ್ತು ಆಭರಣಗಳನ್ನು ಅವರು ಬಳಸಿರಬೇಕು. ಮಣಿಗಳನ್ನು ಜನಸಾಮಾನ್ಯರು ಬಳಸಿರಬೇಕು. ಹೆಣ್ಣುಮಕ್ಕಳು ಸಿಂದೂರವನ್ನು ಹಚ್ಚಿಕೊಳ್ಳುತ್ತಿದ್ದ ಆ ಪದ್ಧತಿ ಇಂದಿಗೂ ಮುಂದುವರಿದಿದೆ.



ಕಾಲಿಬಂಗದಲ್ಲಿ ಸಿಕ್ಕಿರುವ ಶಿವಲಿಂಗ



**ಪಶುಪತಿ, ಹಿಣಿಲುಬಸವ, ಒಂದೇ ಕೊಂಬಿರುವ ಕಾಲ್ಪನಿಕ ಪ್ರಾಣಿಯ (ಏಕಶೃಂಗಿ) ಮುದ್ರೆಗಳು**

ಮುದ್ರೆಗಳ ಮೇಲೆ ಇನ್ನೂ ಅಜ್ಞಾತವಾಗಿ ಉಳಿದಿರುವ ಲಿಪಿಯ ಬರೆಹ ಕಂಡುಬರುತ್ತದೆ. ಅಂದಿಗಾಗಲೇ ಸಾವಿರಾರು ಮುದ್ರೆಗಳ ಮೇಲೆ ಲಿಪಿಗಳನ್ನು ಮೂಡಿಸಲು ಸಾಧ್ಯವಾಗಿತ್ತು. ಮುದ್ರೆಗಳ ಮೇಲೆ ಮೂಡಿಸಿರುವ ಚಿತ್ರಗಳ ಪೈಕಿ ವೃಷಭ ಪ್ರಮುಖವಾದದ್ದು. ಮತ್ತೊಂದು ಮುಖ್ಯ ಚಿತ್ರ ಅಶ್ವತ್ಥದ ಎಲೆಯದ್ದು. ಯೋಗದ ವಿವಿಧ ಆಸನಗಳನ್ನು, ನಮಸ್ಕಾರ ಮುದ್ರೆಯನ್ನು ತಳೆದಿರುವ ಅನೇಕ ಮೂರ್ತಿಗಳು ದೊರೆತಿವೆ. ಶಿವನ ವಾಹನವಾಗಿ, ಧರ್ಮದ ಪ್ರತೀಕವಾಗಿ ನಿಲ್ಲುವ ವೃಷಭ; ಯಜ್ಞವೃಕ್ಷ ಎಂದು, ಜಗತ್‌ವೃಕ್ಷ ಎಂದು ಪ್ರಸಿದ್ಧವಾದ ಅಶ್ವತ್ಥದ ಎಲೆ; ವೈದಿಕ ದರ್ಶನಗಳಲ್ಲಿ ಒಂದಾದ ಯೋಗವೇ ಮೊದಲಾದ ಸಂಗತಿಗಳು ಸಿಂಧೂ-ಸರಸ್ವತೀ ನಾಗರಿಕತೆಯಲ್ಲಿ ಕಂಡುಬರುವುದು ವೈದಿಕ ಪರಂಪರೆಯ ಅವಿಚ್ಛಿನ್ನತೆಯನ್ನು ತೋರಿಸುತ್ತದೆ.

ನೇಯ್ಗೆಯವರು ಹತ್ತಿ ಹಾಗೂ ಕೆಲವೊಮ್ಮೆ ರೇಷ್ಮೆಯನ್ನು ಬಳಸಿ ನೇಯುತ್ತಿದ್ದರು. ಕಲ್ಲು, ದಂತ, ಮೊದಲಾದ ಪದಾರ್ಥಗಳ ಮೇಲೆ ಕೆತ್ತನೆ ಮಾಡುವ ಕಲಾವಿದರಿದ್ದರು. ಕಂಬಳಿಗಳು, ಮರದಿಂದ ಮಾಡಿದ ಪೀಠೋಪಕರಣಗಳು, ಕಟ್ಟಡಗಳ ಅಂದ ಹೆಚ್ಚಿಸುವ ವಸ್ತುಗಳೇ ಮೊದಲಾದವು ಬಳಕೆಯಲ್ಲಿದ್ದವು. ಪ್ರಾಚೀನ ನಾಗರಿಕತೆಯ ಮುಖ್ಯ ಲೋಹಗಳಲ್ಲೊಂದು ಕಂಚು. ಅದಕ್ಕೆ ಬೇಕಾದ ತಾಮ್ರವು ಬಲೂಚಿಸ್ತಾನ, ರಾಜಸ್ಥಾನ ಮೊದಲಾದ ಕಡೆಗಳಲ್ಲಿ ದೊರೆಯುತ್ತಿತ್ತು. ಅಂದಿನ ಜನರು ಕಂಚಿನ ತಯಾರಿಕೆಯನ್ನು ಹಲವಾರು ಶತಮಾನಗಳ ಪ್ರಯತ್ನದ ಮೂಲಕ ಸಿದ್ಧಿಸಿಕೊಂಡಿದ್ದರು. ಇದರಿಂದ ಗಟ್ಟಿಯಾದ ಉಳಿ, ಕೊಡಲಿಗಳಿಂದ ಮೊದಲ್ಗೊಂಡು ಕನ್ನಡಿಗಳ ತನಕ ಅನೇಕ ಪದಾರ್ಥಗಳನ್ನು ನಿರ್ಮಿಸಲು ಅವರಿಗೆ ಸಾಧ್ಯವಾಗಿತ್ತು. ಆಗಿನ ಕಾಲದ ತೂಕ ಮತ್ತು ಅಳತೆಗಳು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕಾಣಸಿಗುವ ವಿವರಗಳಿಗೆ ಹೊಂದಿಕೊಳ್ಳುತ್ತವೆ; ಮತ್ತವು ತೀರ ಈಚಿನ ಶತಮಾನಗಳ ತನಕ ನಮ್ಮ ದೇಶದಲ್ಲಿ ಹಲವೆಡೆ ಬಳಕೆಯಲ್ಲಿದ್ದವು.

ಹರಿಯಾಣದ ಬನವಾಲಿಯಲ್ಲಿ ಅಗ್ನಿಪೂಜೆಗೆ ಮೀಸಲಾದ ಒಂದು ದೇವಾಲಯ ಕಂಡುಬಂದಿದೆ. ಲೋಥಾಲ್, ಕಾಲಿಬಂಗನ್ ಮುಂತಾದ ತಾಣಗಳಲ್ಲಿ ಪೂಜಾವೇದಿಕೆಗಳು ಕಾಣಸಿಗುತ್ತವೆ. ಧೋಲಾವೀರಾ ನಗರವ್ಯವಸ್ಥೆಯ ಉದ್ದಳತೆಗಳು ವೈದಿಕ ಯಾಗಗಳಿಗೆ ಬೇಕಾದ 'ಮಹಾವೇದಿ'ಗಳ ಅನುಪಾತಕ್ಕೆ ಅನುಗುಣವಾಗಿವೆ. ಈ ಅನುಪಾತವು ಶತಪಥಬ್ರಾಹ್ಮಣ, ಶುಲ್ಬಸೂತ್ರಗಳೇ ಮೊದಲಾದ ವೈದಿಕ ಗ್ರಂಥಗಳಿಂದ ಮೊದಲ್ಗೊಂಡು ಅನಂತರದ ಕಾಲದ ಬೃಹತ್ಸಂಹಿತೆಯಂಥ ವಿಶ್ವಕೋಶದಲ್ಲಿಯೂ ಕಂಡುಬರುವುದು ನಮ್ಮ ಪರಂಪರೆಯ ಅನುಸ್ಯೂತತೆಯನ್ನು ತೋರಿಸುತ್ತದೆ.


ಬನವಾಲಿಯಲ್ಲಿನ ಅಗ್ನಿಕುಂಡ

ಸಾಹಿತ್ಯ, ಸಂಗೀತ, ನೃತ್ಯ, ಚಿತ್ರ, ಶಿಲ್ಪವೇ ಮೊದಲಾದ ಕಲೆಗಳು ಚೆನ್ನಾಗಿ ನೆಲೆ ಕಂಡಿದ್ದವು. ಉತ್ಖನನದ ಮೂಲಕ ದೊರೆತಿರುವ ನೃತ್ಯಭಂಗಿಯ ಸ್ತ್ರೀವಿಗ್ರಹಗಳು, ಡೋಲು ಮತ್ತು ತಂತಿಯ ವಾದ್ಯಗಳು, ಹಲವು ಬಗೆಯ ಮುಖವಾಡಗಳು ಇದನ್ನು ಖಚಿತಪಡಿಸುತ್ತವೆ. ಮೊಹೆಂಜೋದಾರೋವಿನಲ್ಲಿ ದೊರೆತಿರುವ ನೃತ್ಯಭಂಗಿಯಲ್ಲಿರುವ ಸ್ತ್ರೀವಿಗ್ರಹವು ತನ್ನ ಭಂಗಿಯಿಂದ, ತೊಟ್ಟಿರುವ ಬಳೆಗಳಿಂದ ಭಾರತೀಯ ಮಹಿಳೆಯ ಮಾತೃಕೆಯೇ ಆಗಿದೆಯೆಂದು ವಿದ್ವಾಂಸರ ಅಭಿಮತ. ಮಕ್ಕಳ ಆಟಿಕೆಗಳ ಪೈಕಿ ಬಂಡಿಗಳು, ಬುಗುರಿಗಳು, ಶಿಳ್ಳೆಗಳು ಬಳಕೆಯಲ್ಲಿದ್ದವು.

**ಕೃಷಿ ಮತ್ತು ವ್ಯಾಪಾರ**

ಸಿಂಧೂ-ಸರಸ್ವತೀ ಸಂಸ್ಕೃತಿಯ ಜನ ಕೃಷಿ ಮತ್ತು ವ್ಯಾಪಾರವನ್ನು ಅವಲಂಬಿಸಿದ್ದರು. ಗೋಧಿ, ಬಾರ್ಲಿ ಹಾಗೂ ಕಾಳು ಇವರ ಮುಖ್ಯ ಬೆಳೆಯಾಗಿತ್ತು. ಅಂದಿನ ಎತ್ತಿನ ಬಂಡಿ ಇಂದೂ ನಮ್ಮಲ್ಲಿ ಬಳಕೆಯಲ್ಲಿದೆ. ಆಗ ಬೇಟೆ ಮತ್ತು ಮೀನುಗಾರಿಕೆಗಳೂ ವ್ಯಾಪಕವಾಗಿದ್ದವು. ಹತ್ತಿಯನ್ನು ಬೆಳೆದು ಬಗೆಬಗೆಯ ಉಡುಪುಗಳನ್ನು ತಯಾರಿಸಲಾಗುತ್ತಿತ್ತು. ಹಲವು ನಗರಗಳು ನದಿಯ ದಂಡೆಯ ಮೇಲೆ ಇದ್ದ ಕಾರಣ ಅಲ್ಲಿಯ ಜನರು ನೀರಾವರಿ ಬಲ್ಲವರಾಗಿದ್ದರು ಎನ್ನಬಹುದು. ಇವರು ಡುಬ್ಬದ ಗೂಳಿ, ದನ, ಎಮ್ಮೆ, ಕುರಿ, ಮೇಕೆ ಹಾಗೂ ಕೋಳಿಗಳ ಸಂಗೋಪನೆಯಲ್ಲಿ ತೊಡಗಿದ್ದರು. ಎತ್ತುಗಳನ್ನು ಹೊರೆ ಒಯ್ಯಲು ಬಳಸಲಾಗುತ್ತಿತ್ತು. ಕೃಷಿಯ ಜೊತೆಯಲ್ಲಿ ವ್ಯಾಪಾರ-ವಾಣಿಜ್ಯಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದವು. ನಗರಗಳು ಗ್ರಾಮೀಣ ಪ್ರದೇಶಗಳ ಹಾಗೂ ಹೊರ ದೇಶಗಳ ಜೊತೆಯಲ್ಲಿ ವ್ಯಾಪಾರ ಮಾಡುತ್ತಿದ್ದವು. ಬಲೂಚಿಸ್ತಾನ, ಸೌರಾಷ್ಟ್ರ ಹಾಗೂ ದಖನ್ ಪ್ರದೇಶಗಳು ಇವುಗಳಲ್ಲಿ ಕೆಲವು. ಮೆಸಪೊಟೇಮಿಯಾದಲ್ಲಿ ಸಿಕ್ಕಿರುವ ಹಲವು ಮುದ್ರೆಗಳು ಆ ಪ್ರದೇಶದೊಂದಿಗೆ ಸಿಂಧೂ-ಸರಸ್ವತೀ ನಾಗರಿಕತೆಯು ಹೊಂದಿದ್ದ ಆರ್ಥಿಕ ಹೊಕ್ಕುಬಳಕೆಯನ್ನು ಸೂಚಿಸುತ್ತವೆ.

© KTBS NOT TO BE REPUBLISHED

ಗುಜರಾತಿನ ಲೋಥಾಲ್‌ನಲ್ಲಿ ಬೃಹದಾಕಾರದ ಕಟ್ಟಡವೊಂದು ಪತ್ತೆಯಾಗಿದ್ದು ಅದು ಹಡಗುಕಟ್ಟೆ (ಡಾಕ್‌ಯಾರ್ಡ್) ಆಗಿದ್ದಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಲೋಥಾಲ್ ಸಮುದ್ರವಾಣಿಜ್ಯದ ಒಂದು ಪ್ರಮುಖ ಕೇಂದ್ರವಾಗಿತ್ತು. ಧೋಲಾವೀರಾ ಎಂಬ ತಾಣದಲ್ಲಿ ಮಳೆನೀರನ್ನು ಅತ್ಯಂತ ಯುಕ್ತವಾಗಿ ಸಂಗ್ರಹಿಸಲು ವ್ಯವಸ್ಥೆಯಿದ್ದಿತು. ಆ ನಗರದ ಮೂರನೆಯ ಒಂದು ಭಾಗ ಇದಕ್ಕಾಗಿಯೇ ಮೀಸಲಾಗಿತ್ತೆಂದು ತಜ್ಞರ ಅಭಿಪ್ರಾಯ.

ಇದನ್ನೆಲ್ಲ ಗಮನಿಸಿದಾಗ ಸಿಂಧೂ–ಸರಸ್ವತೀ ನಾಗರಿಕತೆ ಎಷ್ಟು ಮುಂದುವರಿದಿತ್ತೆಂದು ತಿಳಿಯುತ್ತದೆ.

**ಅವನತಿ**

ನಗರಗಳ ಅವನತಿಗೆ ಇತಿಹಾಸಜ್ಞರು ಅನೇಕ ವಿವರಣೆಗಳನ್ನು ನೀಡಿದ್ದಾರೆ. ಕೆಲವರು ಬತ್ತಿಹೋದ ನದಿಗಳು, ದಿಕ್ಕುಬದಲಾದ ನದಿಗಳು ಇದಕ್ಕೆ ಕಾರಣವೆಂದಿದ್ದಾರೆ. ಇನ್ನೂ ಕೆಲವರು ಕಾಡಿನ ನಾಶ ಇದಕ್ಕೆ ಕಾರಣವೆಂದಿದ್ದಾರೆ. ಪ್ರವಾಹಗಳಿಂದ ನಾಡೆಲ್ಲ ಜಲಾವೃತಗೊಂಡದ್ದು ಇವುಗಳ ನಾಶಕ್ಕೆ ಕಾರಣವಿರಬಹುದು. ಹೀಗಾಗಿ ಸಿಂಧೂ ಮತ್ತು ಪಶ್ಚಿಮ ಪಂಜಾಬಿನ ಕೆಲವು ನಿವೇಶನಗಳಲ್ಲಿಯ ಜನರು ಆ ಪ್ರದೇಶಗಳನ್ನು ಬಿಟ್ಟು ಪೂರ್ವ ಮತ್ತು ದಕ್ಷಿಣದ ಹೊಸ ತಾಣಗಳಿಗೆ ವಲಸೆ ಹೋದರೆಂದು ಕೆಲವರು ಹೇಳುತ್ತಾರೆ. ಗುಜರಾತಿನ ಲೋಥಾಲ್ ನಗರದಲ್ಲಿ ಸಿಂಧೂ–ಸರಸ್ವತೀ ನಾಗರಿಕತೆಯ ಪ್ರಕ್ರಿಯೆ ಇನ್ನೂ ಅನೇಕ ವರ್ಷಗಳು ಮುಂದುವರಿಯಿತು. ಈ ಪ್ರಕ್ರಿಯೆ ಕಾಲಾಂತರದಲ್ಲಿ ನಮ್ಮ ಸಂಸ್ಕೃತಿಯೊಡನೆ ಬೆಸೆದುಕೊಂಡು ಲೀನವಾಯಿತು.

ಒಟ್ಟಿನಲ್ಲಿ ಸಿಂಧೂ–ಸರಸ್ವತೀ ನಾಗರಿಕತೆಯು ಭಾರತೀಯರ ಹೆಮ್ಮೆಯ ಸಂಕೇತವಾಗಿದೆ.

©KTBS NOT TO BE REPUBLISHED

**ವಲಸೆಯ ಬದುಕಿನಿಂದ ಹಳ್ಳಿಯ ಬದುಕಿನತ್ತ**

ವಲಸೆಯ ಬದುಕು ಸ್ಥಿರಗೊಂಡಾಗ ಕೆಲವು ಸ್ಥಳಗಳಲ್ಲಿ ಗುಡಿಸಲು ಹಾಗೂ ಮನೆಯ ಕುರುಹುಗಳು ಕಂಡುಬರುವುದನ್ನು ಪ್ರಾಕ್ತನಶಾಸ್ತ್ರಜ್ಞರು ಪತ್ತೆಹಚ್ಚಿದ್ದಾರೆ. ಇವತ್ತಿನ ಕಾಶ್ಮೀರದಲ್ಲಿಯ ಬರ್ಜುಹೊಂನಲ್ಲಿ ನೆಲಮನೆಯನ್ನು ಗುರುತಿಸಿದ್ದಾರೆ. ಅಂದಿನ ಜನ ಭೂಮಿಯೊಳಗೆ ರಂಧ್ರದಂತೆ ಗುಂಡಿಯನ್ನು ತೋಡಿಕೊಂಡು ಅದರೊಳಗೆ ಬದುಕುತ್ತಿದ್ದರು. ಗುಂಡಿಯೊಳಗೆ ಹೋಗಲು ಮೆಟ್ಟಿಲುಗಳಿದ್ದವು. ಚಳಿ ಹಾಗೂ ಕ್ರೂರಮೃಗಗಳಿಂದ ರಕ್ಷಿಸಿಕೊಳ್ಳಲು ಅವರು ಹೀಗೆ ಮಾಡಿಕೊಂಡಿದ್ದರು. ಇಂತಹ ಗೂಡುಗಳ ಹೊರಗೂ ಒಳಗೂ ಮಣ್ಣಿನ ಕುಡಿಕೆಗಳು ದೊರೆತಿವೆ. ಇವುಗಳನ್ನು ವಾತಾವರಣಕ್ಕೆ ಅನುಗುಣವಾಗಿ ಗೂಡುಗಳ ಹೊರಗೆ ಅಥವಾ ಒಳಗೆ ಅಡುಗೆ ಮಾಡಿಕೊಳ್ಳಲು ಉಪಯೋಗಿಸುತ್ತಿದ್ದರು. ಇರಾನ್‌ಗೆ ಸಾಗುವ ಮಾರ್ಗವಾದ ಬೋಲನ್‌ಪಾಸಿನ ಫಲವತ್ತಾದ ಮೈದಾನದ ಸಮೀಪದಲ್ಲಿ ಮೆಹರ್‌ಗರ್ ಎಂಬ ನೆಲೆಯಿದೆ. ಮೆಹರ್‌ಗರ್‌ನ ಜನ ಬಾರ್ಲಿ ಮತ್ತು ಗೋಧಿಗಳನ್ನು ಬೆಳೆಯುವುದನ್ನೂ ಕುರಿ ಮತ್ತು ಮೇಕೆಗಳನ್ನು ಸಾಕುವುದನ್ನೂ ಕಲಿತಿದ್ದರು. ಇದು ನಮಗಿಂದು ದೊರೆತಿರುವ ಮೊತ್ತಮೊದಲ ಹಳ್ಳಿ. ಮೆಹರ್‌ಗರ್‌ನ ಜನ ಮನೆಗಳಲ್ಲಿ ವಾಸಿಸುತ್ತಿದ್ದರು. ಕೆಲವು ಮನೆಗಳು ನಾಲ್ಕು ಹಾಗೂ ಹೆಚ್ಚಿನ ಕೊಠಡಿಗಳನ್ನು ಹೊಂದಿದ್ದವು. ಪ್ರಾಣಿಗಳ ಪಳೆಯುಳಿಕೆಗಳಲ್ಲದೆ ಹಲವು ಸಮಾಧಿಗಳ ನೆಲೆಗಳೂ ಇಲ್ಲಿ ದೊರೆತಿವೆ. ಮನುಷ್ಯರ ಜೊತೆಯಲ್ಲಿಯೇ ಪ್ರಾಣಿಗಳನ್ನೂ ಇಲ್ಲಿ ಹೂಳುತ್ತಿದ್ದರು.

## ವೇದಕಾಲದ ಸಮಾಜ

ವೇದಕಾಲದಲ್ಲಿ ಹಲವು ರೀತಿಯ ಮನೋಭಾವಗಳಿಗೆ, ಜೀವಿಕೆಯ ವಿಧಾನಗಳಿಗೆ ಅನುಸಾರವಾಗಿ ಬ್ರಾಹ್ಮಣ ಮತ್ತು ಕ್ಷತ್ರಿಯ ಎಂಬ ವರ್ಣಗಳಿದ್ದವು. ವಿದ್ಯೆಯ ಕಲಿಕೆ ಮತ್ತು ಕಲಿಸುವಿಕೆಗಳಲ್ಲಿ ಪ್ರಧಾನವಾಗಿ ತೊಡಗಿದ್ದವರು ಬ್ರಾಹ್ಮಣರಾದರೆ ಪಾಲನೆ ಮತ್ತು ರಕ್ಷಣೆಗಳ ಬಾಧ್ಯತೆ ಹೊತ್ತವರು ಕ್ಷತ್ರಿಯರು. ಮಿಕ್ಕಂತೆ ಸಾಮಾನ್ಯ ಜನರನ್ನು 'ವಿಶಃ' ಎಂದು ಕರೆಯಲಾಗುತ್ತಿತ್ತು. ವ್ಯಾಪಾರ-ವಾಣಿಜ್ಯಗಳಲ್ಲಿ ತೊಡಗಿದ ವೈಶ್ಯರು ಹಾಗೂ ಎಲ್ಲ ಹಂತಗಳಲ್ಲಿಯೂ ದುಡಿಯುವ ಶೂದ್ರರು ಮಿಕ್ಕೆರಡು ವರ್ಣಗಳು. ಆಳ್ವಿಕೆಯಲ್ಲಿ ಸೂಕ್ತ ಸಲಹೆ ನೀಡಲು ಸಭಾ ಮತ್ತು ಸಮಿತಿ ಎಂಬ ವ್ಯವಸ್ಥೆಗಳಿದ್ದವು. ಸಭೆಯು ಅನೇಕ ಜನಪ್ರತಿಧಿಗಳನ್ನು ಹೊಂದಿದ್ದರೆ ಸಮಿತಿಯು ನಿರ್ದಿಷ್ಟರಾದ ಕೆಲವೇ ತಜ್ಞರನ್ನು ಹೊಂದಿರುತ್ತಿತ್ತು. ಪುರೋಹಿತ, ಸೇನಾನಿ, ಗ್ರಾಮಣಿ ಮೊದಲಾದವರು ರಾಜ್ಯಭಾರದಲ್ಲಿ ನೆರವಾಗುತ್ತಿದ್ದರು. ಪುರೋಹಿತರು ರಾಜನ ಗುರು ಮತ್ತು ಮಾರ್ಗದರ್ಶಿಗಳಾಗಿರುತ್ತಿದ್ದರು. ಸೇನಾನಿಗಳು ಹೆಚ್ಚಾಗಿ ಆಡಳಿತದಲ್ಲಿ, ಸಂಗ್ರಾಮದ ವ್ಯವಸ್ಥೆಯಲ್ಲಿ ತೊಡಗಿರುತ್ತಿದ್ದರು. ಗ್ರಾಮಣಿಗಳು ಆಡಳಿತದ ಮೂಲ ಘಟಕವಾದ ಹಳ್ಳಿಗಳಲ್ಲಿಯ ಜನಸಾಮಾನ್ಯರ ಹಿತವನ್ನು ನೋಡಿಕೊಳ್ಳುತ್ತಿದ್ದರು.

ಆಗ ಭರತ, ಪುರು, ಆನು, ದ್ರುಹ್ಯು, ತುರ್ವಷ ಮತ್ತು ಯದು ಎಂಬ ಬುಡಕಟ್ಟುಗಳಿದ್ದವು. ಆ ಕಾಲದ ಸಂಪತ್ತಿಯಾದ ಗೋವುಗಳ ಸಂರಕ್ಷಣೆಗಾಗಿ ಅವರು ಸೆಣಸುತ್ತಿದ್ದರು. ಅಂಥ ಸೆಣಸಾಟಗಳಲ್ಲಿ ಮಿಗಿಲಾಗಿ ಒದಗಿಬರುತ್ತಿದ್ದ ಪ್ರಾಣಿ ಎಂದರೆ ಕುದುರೆ. ಆಗ ಸುಸಂಸ್ಕೃತರಾದ, ಸಂಭಾವಿತರಾದ ಜನರನ್ನು 'ಆರ್ಯ' ಎಂದು ಕರೆಯುತ್ತಿದ್ದರು. ಆರ್ಯ ಎಂಬುದು ಯಾವ ಜನಾಂಗವನ್ನೂ ಸೂಚಿಸುವುದಿಲ್ಲ. ಆರ್ಯರೆಲ್ಲ ಭಾರತೀಯರೇ. ಅಂದಿನ ಕಾಲದಲ್ಲಿ ಅನೈತಿಕವಾಗಿ ಸಂಪತ್ತನ್ನು ಗಳಿಸಿ ಅದನ್ನು ಜೋಪಾನ ಮಾಡಿಕೊಳ್ಳಲು ಸೆಣಸುತ್ತಿದ್ದವರು ಪಣಿಗಳೆಂಬ ಸ್ವಾರ್ಥಿ ವರ್ತಕರು.

NOT TO BE REPUBLISHED © KTBS

## ಆರ್ಯ ದ್ರಾವಿಡ ವಿಭಾಗೀಕರಣ

ಹತ್ತೊಂಬತ್ತನೆ ಶತಮಾನದ ಉತ್ತರಾರ್ಧದಲ್ಲಿ ಭಾರತೀಯರನ್ನು ಜಾತಿ-ಧರ್ಮಗಳ ಆಧಾರದಲ್ಲಿ ಒಡೆದು ಆಳುವ ಅನಿವಾರ್ಯತೆ ಬ್ರಿಟಿಷರಿಗೆ ಬಂತು. ಅದಕ್ಕಾಗಿ ಆರ್ಯ-ದ್ರಾವಿಡ ಎಂಬ ವಿಭಾಗವನ್ನು ಸೃಷ್ಟಿಸಲಾಯಿತು. ಕ್ರೈಸ್ತ ಮಿಷನರಿಗಳು ದ್ರಾವಿಡ ಎಂಬುದು ಜನಾಂಗಸೂಚಕ ಎಂದು ಮೊದಲು ಪ್ರತಿಪಾದಿಸಿದರು. ನಂತರ ಬಂದ ಕೆಲವು ಇತಿಹಾಸಕಾರರು ಇದನ್ನು ಪ್ರಚಾರಮಾಡುತ್ತ ಹೋದರು. ಆದರೆ ಆರ್ಯ ಮತ್ತು ದ್ರಾವಿಡ ಎಂಬುದು ಜನಾಂಗಸೂಚಕಗಳು ಎನ್ನಲು ಯಾವ ಆಧಾರವೂ ಇಲ್ಲ. ಆರ್ಯರು ಭಾರತಕ್ಕೆ ಹೊರಗಿನಿಂದ ಬಂದವರು ಎಂಬ ವಾದದಲ್ಲಿ ಸತ್ಯಾಂಶವಿಲ್ಲ ಎಂಬುದು ಸಾಬೀತಾಗಿದೆ. ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರರು ಕೂಡ "ಆರ್ಯರ ಆಗಮನ ಸಿದ್ಧಾಂತ"ವನ್ನು ತೀವ್ರವಾಗಿ ಖಂಡಿಸಿದ್ದಾರೆ.

## ಅಭ್ಯಾಸಗಳು

**I ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಋಗ್ವೇದವು ಇಂದಿಗೆ ಎಷ್ಟು ವರ್ಷ ಹಿಂದಿನದು?
2 ಸಪ್ತಸಿಂಧೂಗಳು ಯಾವುವು?
3. ಕಾಲಿಬಂಗನ್ ಪ್ರದೇಶದಲ್ಲಿ ಸಿಂಧೂ ನಾಗರಿಕತೆ ಯಾವ ವರ್ಷದಲ್ಲಿ ಪತ್ತೆಯಾಯಿತು?
4. ಹರಪ್ಪದಲ್ಲಿ ಪ್ರಾಚೀನ ನಾಗರಿಕತೆಯ ಕುರುಹುಗಳು ಯಾವ ವರ್ಷ ಪತ್ತೆಯಾದವು?
5. ಸಿಂಧೂ ನಾಗರಿಕತೆಯ ಮುದ್ರೆಗಳ ಮೇಲೆ ಕಂಡುಬಂದಿರುವ ಚಿಹ್ನೆಗಳು ಯಾವುವು?
6. ಸಮುದ್ರವಾಣಿಜ್ಯದ ಪ್ರಮುಖ ಕೇಂದ್ರ ಯಾವುದಾಗಿತ್ತು?
7. ಆಗ ಇದ್ದ ಬುಡಕಟ್ಟುಗಳನ್ನು ಪಟ್ಟಿಮಾಡಿ.
8. ಯಾವ ತಾಣದಲ್ಲಿ ಮಳೆನೀರನ್ನು ಸಂಗ್ರಹಿಸುವ ವ್ಯವಸ್ಥೆ ಇತ್ತು?
9. ಆರ್ಯರ ಆಗಮನದ ಸಿದ್ಧಾಂತವನ್ನು ತಪ್ಪೆಂದು ಹೇಳಿದವರು ಯಾರು?
10. ಸಿಂಧೂ–ಸರಸ್ವತಿ ನಾಗರಿಕತೆಯ ನಗರಗಳ ಉದ್ದಳತೆಗಳು ಯಾವ ಗ್ರಂಥಗಳ ಉಲ್ಲೇಖಗಳಿಗೆ ಹೊಂದಿಕೊಳ್ಳುತ್ತವೆ?

**II ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

11. ಸಿಂಧೂ–ಸರಸ್ವತಿ ನಾಗರಿಕತೆಯ ಕುರುಹುಗಳು ಹೇಗೆ ಪತ್ತೆಯಾದವು?
12. ಸಿಂಧೂ–ಸರಸ್ವತಿ ನಾಗರಿಕತೆಯ ಉತ್ಖನನದಲ್ಲಿ ಯಾವ್ಯಾವ ವಸ್ತುಗಳು ಸಿಕ್ಕಿವೆ?
13. ಈ ನಾಗರಿಕತೆಯ ಸ್ನಾನದ ಕೊಳಗಳು ಹೇಗೆ ರಚನೆಯಾಗಿದ್ದವು?
14. ಅವರು ಯಾವ್ಯಾವ ಲೋಹಗಳನ್ನು ಬಳಸುತ್ತಿದ್ದರು? ಅವುಗಳ ಕುರುಹುಗಳೇನು?
15. ಆರ್ಯ–ದ್ರಾವಿಡ ಮಿಥ್ಯೆಯನ್ನು ಯಾರು ಸೃಷ್ಟಿಸಿದರು?

**III ಕೆಳಗಿನ ಪ್ರಶ್ನೆಗಳಿಗೆ ಏಳೆಂಟು ವಾಕ್ಯಗಳಲ್ಲಿ ಉತ್ತರಿಸಿ.**

16. ಸಿಂಧೂ–ಸರಸ್ವತಿ ನಾಗರಿಕತೆಯ ನಗರನಿರ್ಮಾಣ ಹೇಗಿತ್ತು ಎಂಬುದನ್ನು ವಿವರಿಸಿ.
17. ಸಿಂಧೂ–ಸರಸ್ವತಿ ನಾಗರಿಕತೆಯ ಕುರುಹುಗಳು ವೈದಿಕ ಪರಂಪರೆಯ ಅವಿಚ್ಛಿನ್ನತೆಯನ್ನು ತೋರಿಸುತ್ತವೆ. ಹೇಗೆ ಎಂಬುದನ್ನು ವಿವರಿಸಿ.
18. ವೇದಕಾಲದ ಸಮಾಜವ್ಯವಸ್ಥೆ ಹೇಗಿತ್ತು?
19. ವೇದಕಾಲದ ಕೃಷಿ ಮತ್ತು ವ್ಯಾಪಾರಗಳ ಬದುಕು ಹೇಗಿತ್ತು?

✲✲✲

©KTBS NOT TO BE REPUBLISHED

## ಅಧ್ಯಾಯ–4

# ಜಗತ್ತಿನ ಕೆಲವು ಪ್ರಮುಖ ನಾಗರಿಕತೆಗಳು

Y9E3B3

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಜಗತ್ತಿನ ಶ್ರೇಷ್ಠ ನಾಗರಿಕತೆಗಳಾದ, ಈಜಿಪ್ಟ್, ಮೆಸಪಟೋಮಿಯಾ ಮತ್ತು ಚೀನಾದ ನಾಗರಿಕತೆಗಳ ಬಗ್ಗೆ ತಿಳಿಯುವುದು.
- ಆಯಾ ಕಾಲದ ನಾಗರಿಕತೆಗಳ ಕಾಲದಲ್ಲಿನ ಜನಜೀವನ ಕಲೆ, ವಾಸ್ತುಶಿಲ್ಪ, ಜೀವನಶೈಲಿಗಳ ಬಗ್ಗೆ ತಿಳಿಯುವುದು.
- ಗ್ರೀಕರ ನಾಗರಿಕತೆಯ ಬೆಳವಣಿಗೆ, ಕೊಡುಗೆಗಳ ಬಗ್ಗೆ ತಿಳಿಯುವುದು.
- ರೋಮನ್ನರ ನಾಗರಿಕತೆಯ ಬೆಳವಣಿಗೆ ಮತ್ತು ಕೊಡುಗೆಗಳನ್ನು ತಿಳಿಯುವುದು.
- ಅಮೆರಿಕಾದಲ್ಲಿನ ಪ್ರಾಚೀನ ಕೊಲಂಬಿಯಾ ನಾಗರಿಕತೆಗಳಾದ ಮಾಯ, ಆಸ್ಟೆಕ್ ಮತ್ತು ಇಂಕಾ ನಾಗರಿಕತೆಗಳನ್ನು ತಿಳಿಯುವುದು.

©KTBS NOT TO BE REPUBLISHED

ಸಿಂಧೂ ಕಣಿವೆಯ ನಾಗರಿಕತೆಯಂತೆಯೆ ಜಗತ್ತಿನ ವಿವಿಧೆಡೆಯಲ್ಲಿಯೂ ಪ್ರಾಚೀನ ನಾಗರಿಕತೆಗಳನ್ನು ಅದರ ಸಮಕಾಲೀನ ಸಂದರ್ಭಗಳಲ್ಲಿ ನಾವು ಕಾಣುತ್ತೇವೆ. ಈಜಿಪ್ಟ್‌ನ ನಾಗರಿಕತೆ, ಮೆಸಪಟೋಮಿಯಾದ ನಾಗರಿಕತೆ, ಚೀನಾದ ನಾಗರಿಕತೆಗಳನ್ನು ನಾವು ಏಷ್ಯ ಮತ್ತು ಆಫ್ರಿಕಾ ಖಂಡಗಳಲ್ಲಿ ಕಾಣುತ್ತೇವೆ.

### ಈಜಿಪ್ಟಿನ ನಾಗರಿಕತೆ

ಸಾಮಾನ್ಯವಾಗಿ ಎಲ್ಲ ನಾಗರಿಕತೆಗಳು ನದಿಯ ಬಯಲುಸೀಮೆ ಪ್ರದೇಶಗಳಲ್ಲಿಯೇ ಹುಟ್ಟಿಕೊಂಡಿವೆ. ಈಜಿಪ್ಟಿನ ನಾಗರಿಕತೆಯು ಚಿಗುರೊಡೆದದ್ದು ಇಲ್ಲಿ ಹರಿಯುವ ನೈಲ್ ನದಿಯಿಂದಾಗಿ. ಇಲ್ಲಿ ದೊರೆತಿರುವ ಅವಶೇಷಗಳು ಈಜಿಪ್ಟಿನ ವೈಭವವನ್ನು ಸಾರುವಂತಹವು. ಅಗಾಧವಾದ ಪಿರಮಿಡ್ಡುಗಳು, ಮೂರ್ತಿಶಿಲ್ಪಗಳು, ದೇವಾಲಯಗಳು ಹಾಗೂ ಅದರೊಳಗೆ ದೊರೆತಿರುವ ಬರಹಗಳು ಇಲ್ಲಿನ ಸಂಸ್ಕೃತಿ ಹಾಗೂ ಚರಿತ್ರೆಯನ್ನು ಸಾರುತ್ತವೆ.

### ಈಜಿಪ್ಟಿಯನ್ನರ ಕೊಡುಗೆ

ಈಜಿಪ್ಟಿಯನ್ನರು ಅತ್ಯುತ್ತಮ ಕೃಷಿಕರಾಗಿದ್ದರು. ನೀರಾವರಿಯ ಬಗ್ಗೆ ಅವರಿಗೆ ಅಪಾರವಾದ ತಿಳುವಳಿಕೆಯಿತ್ತು. ಅವರು ದೇವಾಲಯಗಳನ್ನು ಕಟ್ಟಿದ್ದರು. ಅವರು ಹುಟ್ಟುಹಾಕಿದ ಕ್ಯಾಲೆಂಡರ್ ಸಮಯ ಮಾಪನ ಮಾಡಲು ಅತ್ಯಂತ ಉಪಯುಕ್ತವಾಗಿತ್ತು. ಇದಕ್ಕೆಲ್ಲದಕ್ಕೂ ಮಿಗಿಲಾಗಿ ಅವರು ಬರವಣಿಗೆಯ ಕಲೆಯನ್ನು ರೂಪಿಸಿಕೊಂಡಿದ್ದರು. ಇದು ಸಂಕೇತಗಳ ಭಾಷೆಯಾಗಿತ್ತು. ಸಣ್ಣ ಚಿತ್ರಣಗಳನ್ನು ಒಳಗೊಂಡ ಇದನ್ನು ಹಿರೋಗ್ಲೈಫಿಕ್ಸ್ (ಪವಿತ್ರ ಬರವಣಿಗೆ) ಎಂದು ಕರೆಯುತ್ತಾರೆ.


### ನೈಲ್ ಕಣಿವೆ

ಪ್ರತಿವರ್ಷವು ಮಳೆಗಾಲದಲ್ಲಿ ನೈಲ್‌ನದಿಯು ಕಣಿವೆಯನ್ನು ಕೆರೆಯನ್ನಾಗಿಸುತ್ತಿತ್ತು. ನೀರು ಬತ್ತಿದ ಮೇಲೆ ಹೊಲಗದ್ದೆ ಹಾಗೂ ಹುಲ್ಲುಗಾವಲುಗಳೆಲ್ಲ ಉತ್ಕೃಷ್ಟವಾದ ಜೇಡಿ ಮಣ್ಣಿನಿಂದ ಆವೃತವಾಗುತ್ತಿತ್ತು.

ನೂರಾರು ಜನರಿಂದ ಆಗುವ ಈ ಕೆಲಸವನ್ನು ಸಹೃದಯಿಯಾದ ಈಜಿಪ್ಟಿನ ನದಿಯೊಂದು ಮಾಡುತ್ತಿತ್ತು. ಹೀಗೆ ಮೊಟ್ಟಮೊದಲ ನಗರದ ಜನರಿಗೆ ಅದು ಆಹಾರವನ್ನು ಒದಗಿಸುತ್ತಿತ್ತು. ಬೇಸಾಯಕ್ಕೆ ಒಳಗಾದ ಎಲ್ಲ ಪ್ರದೇಶಗಳು ಕಣಿವೆಯಲ್ಲಿರಲಿಲ್ಲ. ಆದ್ದರಿಂದ ಇವರು ಸಣ್ಣಕಾಲುವೆಗಳು, ಬಾವಿಗಳ ಮೂಲಕ ಸಂಕೀರ್ಣವಾದ ನೀರಾವರಿ ವ್ಯವಸ್ಥೆಯನ್ನು ನಾಡಿನ ತುಂಬ ರೂಪಿಸಲು ಕಾರಣರಾದರು.

ಸಮೃದ್ಧ ಮತ್ತು ಸುಭಿಕ್ಷವಾಗಿದ್ದ ಈಜಿಪ್ಟಿನ ಕೃಷಿಕರು ಹಾಗೂ ಅಲ್ಲಿನ ನಗರವಾಸಿಗಳು ಬಿಡುವಿನ ವೇಳೆಯಲ್ಲಿ ಅನೇಕ ಕಲಾತ್ಮಕ ವಸ್ತುಗಳ ರಚನೆಯಲ್ಲಿಯೂ ತೊಡಗಿದ್ದರು. ಪ್ರಕೃತಿಯ ವಿಷಯವನ್ನು ವಿವರಿಸಲು ವ್ಯವಸ್ಥೆಯು ಪುರೋಹಿತನ ಸ್ಥಾನವನ್ನು ರೂಪಿಸಿತು. ಇವರು ವಿದ್ವಾಂಸರಾಗಿದ್ದು ಬರವಣಿಗೆಯ ದಾಖಲೆಗಳ ಸಂರಕ್ಷಣೆಯ ಗುರುತರ ಜವಾಬ್ದಾರಿಯನ್ನು ಹೊತ್ತಿದ್ದರು. ಮರಣದ ನಂತರದ ಮನುಷ್ಯನ ಬದುಕಿನ ಬಗ್ಗೆ ಅವರಿಗೆ ನಂಬಿಕೆಯಿತ್ತು. ಮನುಷ್ಯನು ಪರಲೋಕದಲ್ಲಿ ಇಹಲೋಕದ ತನ್ನ ಕೃತ್ಯಗಳ ವರದಿಯನ್ನು ಸಾವಿನ ನಂತರದ ಬದುಕಿನ ಅಧಿಪತಿಯಾದ ಪ್ರಬಲ ದೈವ ಒಸಿರಿಸ್ಸನಿಗೆ ನೀಡಬೇಕು ಎಂಬ ನಂಬಿಕೆಯಿತ್ತು. ಇವರು ಇಲ್ಲಿನ ಬದುಕನ್ನು ಕೇವಲ ಕ್ಷಣಿಕ ಎಂದು ಪರಿಗಣಿಸಿ ನಂತರದ ಬದುಕಿಗಾಗಿ ಸುದೀರ್ಘ ತಯಾರಿ ನಡೆಸಿದ ಪರಿಣಾಮವಾಗಿ ನೈಲ್ ಪ್ರದೇಶವನ್ನೆಲ್ಲ ಸತ್ತವರಿಗಾಗಿ ಮೀಸಲಿಟ್ಟರು. ಈ ನಿಟ್ಟಿನ ತಯಾರಿಯಲ್ಲಿ, ಸತ್ತವರ ದೇಹವನ್ನು ವಿವಿಧ ರಾಸಾಯನಿಕಗಳಿಂದ ಲೇಪಿಸಿ ತೆಳುವಾದ ಬಟ್ಟೆಯಿಂದ ಸುತ್ತಿಡುತ್ತಿದ್ದರು. ಇಡೀ ದೇಹವನ್ನೆಲ್ಲ ಆವರಿಸುವಂತೆ ಅವುಗಳನ್ನು ಸಂರಕ್ಷಿಸಲಾಯಿತು. ಹೀಗೆ ಸಂರಕ್ಷಿಸಲ್ಪಟ್ಟ ದೇಹವನ್ನು 'ಮಮ್ಮಿ' ಎಂದು ಕರೆಯಲಾಗಿದೆ. ಈ ದೇಹವನ್ನು ವಿಶೇಷವಾಗಿ ತಯಾರಿಸಿದ ಶವಪೆಟ್ಟಿಗೆಯಲ್ಲಿ ಇಡಲಾಗುತ್ತಿತ್ತು. ಈಜಿಪ್ಷಿಯನ್ನರ ಸಮಾಧಿಯೇ ಅವರ ವಾಸ್ತವಿಕ ನೆಲೆ. ಆದ್ದರಿಂದ ದೇಹದ ಸುತ್ತ ದಿನ ನಿತ್ಯದ ಬಳಕೆಯ ವಸ್ತುಗಳು, ಅಡುಗೆಯವನ ಮತ್ತು ಕ್ಷೌರಿಕನ ಸಣ್ಣ ಗೊಂಬೆಗಳನ್ನು ಮಾಡಿ ಮುಂದಿನ ಅಗತ್ಯಕ್ಕಾಗಿ ಸಕಲ ಸಿದ್ಧತೆಗಳನ್ನು ಮಾಡಲಾಗಿತ್ತು.

© KTBS NOT TO BE REPUBLISHED



ಪಿರಮಿಡ್

ಪ್ರಾರಂಭದಲ್ಲಿ ಸಮಾಧಿಗಳನ್ನು ಬೆಟ್ಟಗಳ ಬಂಡೆಯನ್ನು ಕೊರೆದು ರಚಿಸಲಾಗುತ್ತಿತ್ತು. ಕ್ರಮೇಣವಾಗಿ ಈಜಿಪ್ಷಿಯನ್ನರು ಉತ್ತರಕ್ಕೆ ಸಾಗಿದಂತೆಲ್ಲ ಮರುಭೂಮಿಯಲ್ಲಿಯೇ ಸಮಾಧಿಯನ್ನು ಕಟ್ಟಬೇಕಿತ್ತು. ಚಿರ ನಿದ್ರೆಯಲ್ಲಿರುವವರನ್ನು ಯಾರು ಬಾಧಿಸದಂತೆ ಬೃಹತ್ ಶಿಲೆಗಳನ್ನು ಬಳಸಿ ಗೋಪುರದಂತೆ ಸಮಾಧಿಯ ಮೇಲೆ ಕಟ್ಟಡವನ್ನು ಕಟ್ಟಲಾಯಿತು. ಸ್ಪರ್ಧೆಯಂತೆ ಶ್ರೀಮಂತರು ಹಾಗೂ ದೊರೆಗಳು ಅತ್ಯಂತ ಎತ್ತರದ ಗೋಪುರದ ಶಿಖರವನ್ನು ಕಟ್ಟಿದರು. ಗ್ರೀಕರು ಇದನ್ನು 'ಪಿರಮಿಡ್' ಎಂದು ಕರೆದರು. ಈಜಿಪ್ಟನ್ನು ಆಳುತ್ತಿದ್ದ ರಾಜರುಗಳನ್ನು 'ಫ್ಯಾರೊ'ಗಳೆಂದು ಕರೆಯುತ್ತಾರೆ. ಫ್ಯಾರೋ ಎಂದರೆ 'ದೊಡ್ಡ ಮನೆಯಲ್ಲಿ ವಾಸಿಸುವ ಮನುಷ್ಯ' ಎಂದರ್ಥ. ಕೃಷಿಕರು ಪ್ರಬಲನಾದ ಒಸ್ಸಿರಿಸ್ಸನ ಆಳ್ವಿಕೆಯನ್ನು ಸಮ್ಮತಿಸಿದ್ದಂತೆ ಫ್ಯಾರೋಗಳ ಆಳ್ವಿಕೆಯನ್ನು ಒಪ್ಪಿಕೊಂಡಿದ್ದರು.

ಇಪ್ಪತ್ತು ಶತಮಾನಗಳ ಸ್ವತಂತ್ರ ಬದುಕಿನ ನಂತರ ಹೈಕ್‌ಸೋಸ್ ಎಂದು ಕರೆಸಿಕೊಂಡ ಅರೇಬಿಯಾದ ಕುರಿಕಾಯುವ ಬುಡಕಟ್ಟು ಸಮುದಾಯವೊಂದು ಈಜಿಪ್ಟಿನ ಮೇಲೆ ದಾಳಿ ನಡೆಸಿ

ಐನೂರು ವರ್ಷಗಳವರೆಗೆ ಆಳ್ವಿಕೆ ನಡೆಸಿದರು. ಅವರು ಅಲ್ಲಿನ ಜನರ ಸಂಪತ್ತನ್ನೆಲ್ಲ ದೋಚಿದರು. ಈ ಕಾರಣದಿಂದಾಗಿ ಅವರು ಜನಪ್ರಿಯರಾಗಿರಲಿಲ್ಲ. ಆಶ್ರಯವನ್ನು ಹುಡುಕುತ್ತ ಮರಳುಗಾಡಿನಲ್ಲಿ ಅಲೆಯುತ್ತ ಬಂದ ಯಹೂದಿಗಳನ್ನೂ ಕೂಡ ಜನ ದ್ವೇಷಿಸತೊಡಗಿದರು. ವಿದೇಶಿ ಆಳ್ವಿಕೆಗೆ ಸಹಕರಿಸಿದ ಇವರು ತೆರಿಗೆ ವಸೂಲಿ ಹಾಗೂ ಅವರ ಆಡಳಿತ ಸೇವೆಯಲ್ಲಿ ನೆರವಾದರು.

ಸಾ.ಶ.ಪೂ.1700ರಲ್ಲಿ ತೇಬಿಸ್ಸಿನ ಜನ ವಿದೇಶಿಯರ ವಿರುದ್ಧ ದಂಗೆ ಎದ್ದರು. ಅವರು ಒಂದು ಸುದೀರ್ಘ ಸಂಘರ್ಷದ ನಂತರ ಹೈಕ್‌ಸೋಸರನ್ನು ಅವರ ದೇಶದಿಂದ ಹೊರಕ್ಕೆ ಓಡಿಸಿದರು. ಈಜಿಪ್ಟ್ ಮತ್ತೊಮ್ಮೆ ಸ್ವತಂತ್ರವಾಯಿತು. ಸಾವಿರ ವರ್ಷಗಳ ತರುವಾಯ ಅಸಿರಿಯದ ಸಾರ್ಡಾನಫಲಸ್ಸನ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿತು.

ಸಾ.ಶ.ಪೂ.6ನೆಯ ಶತಮಾನದಲ್ಲಿ ಪರ್ಷಿಯನ್ನರ ದೊರೆ ಕ್ಯಾಂಬೆಸಿಸ್ಸನು ಈಜಿಪ್ಟನ್ನು ವಶಪಡಿಸಿಕೊಂಡನು. ಸಾ.ಶ.ಪೂ.4ನೇ ಶತಮಾನದಲ್ಲಿ ಅಲೆಗ್ಸಾಂಡರನು ಪರ್ಷಿಯಾವನ್ನು ವಶಪಡಿಸಿಕೊಂಡನು. ಈಜಿಪ್ಟ್, ಮೆಸಡೋನಿಯಾದ ಪ್ರಾಂತ್ಯವಾಯಿತು. ಅಲೆಗ್ಸಾಂಡರನ ಸೇನಾಪತಿಯೊಬ್ಬ ಈಜಿಪ್ಟಿನ ರಾಜ್ಯದ ದೊರೆಯೆಂದು ಘೋಷಿಸಿಕೊಂಡು ಟೋಲೆಮಿ ರಾಜ ಮನೆತನವನ್ನು ಸ್ಥಾಪಿಸಿದನು. ಅಲೆಗ್ಸಾಂಡ್ರಿಯ ನಗರವನ್ನು ನಿರ್ಮಿಸಿದ್ದು ಈತನೇ. ಕಟ್ಟಕಡೆಯದಾಗಿ ಸಾ.ಶ.ಪೂ. 39ರಲ್ಲಿ ರೋಮನ್ನರು ಬಂದರು. ಈಜಿಪ್ಟಿನ ಕಡೆಯ ರಾಣಿ ಕ್ಲಿಯೋಪಾತ್ರ ದೇಶವನ್ನು ರಕ್ಷಿಸಲು ಸಾಧ್ಯವಾದಷ್ಟು ಪ್ರಯತ್ನಿಸಿದಳು. ಅವರ ತುಕಡಿ ಸೈನ್ಯಕ್ಕಿಂತ ಅವಳ ಸೌಂದರ್ಯಕ್ಕೆ ರೋಮನ್ನರು ಹೆಚ್ಚು ಹೆದರುತ್ತಿದ್ದರು ಎನ್ನುವ ಮಾತಿದೆ. ಸಾ.ಶ.ಪೂ.30ರಲ್ಲಿ ಸೀಜರ್ ಉತ್ತರಾಧಿಕಾರಿ ಸಂಬಂಧಿ ಅಗಸ್ಟಸ್ಸನು ತನ್ನ ಮಾವನಂತೆ ಸೌಂದರ್ಯ-ಕ್ಕೆ ಮೋಹಿತನಾಗದೆ ಆಕೆಯ ಸೈನ್ಯವನ್ನು ಪರಾಭವಗೊಳಿಸಿದ. ಆದರೆ ಆಕೆಯನ್ನು ಕೊಲ್ಲದೆ ಜೀವ ಉಳಿಸಿದನು. ಆದರೆ ತನ್ನನ್ನು ಯುದ್ಧ ಸಂಪತ್ತಾಗಿ ಕೊಂಡ್ಯೊಯುವ ಉದ್ದೇಶವನ್ನು ತಿಳಿದು ಕ್ಲಿಯೊಪಾತ್ರ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಳು. ಈಜಿಪ್ಟ್ ಅಂದಿನಿಂದ ರೋಮನ್ನರ ಪ್ರಾಂತ್ಯವಾಯಿತು.

## ಮೆಸಪಟೊಮಿಯಾದ ನಾಗರಿಕತೆ

ಮೆಸಪಟೋಮಿಯವು ಎರಡು ನದಿಗಳ ನಡುವಿನ ಕಣಿವೆ ಪ್ರದೇಶ. ಬೈಬಲಿನ ಹಳೆಯ ಒಡಂಬಡಿಕೆಯು ವಿವರಿಸುವ ಪ್ರದೇಶಗಳು ಇಲ್ಲಿವೆ. ವಿಸ್ಮಯ ಮತ್ತು ಅಚ್ಚರಿಗಳ ನಾಡಾದ ಇದನ್ನು ಗ್ರೀಕರು ಮೆಸಪಟೊಮಿಯಾ ಅಥವಾ 'ನದಿಗಳ ನಡುವಿನ ನಾಡು' ಎಂದು ಕರೆದರು. ಇಲ್ಲಿ ಹರಿಯುವ ಎರಡು ನದಿಗಳಾದ ಯುಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳು ಪಶ್ಚಿಮ ಏಷ್ಯಾದ ಬರಡು ಭೂಮಿಯನ್ನು ಫಲವತ್ತಾಗಿಸಿವೆ. ಈ ಎರಡು ನದಿಗಳ ನಡುವಿನ ಪ್ರದೇಶದ ಜನರನ್ನು ಆಕರ್ಷಿಸಿದ್ದು ಈ ಪ್ರದೇಶದ ಫಲವತ್ತತೆ. ಅಲ್ಪ ಶ್ರಮದಿಂದ ಅವು ಒದಗಿಸುತ್ತಿದ್ದ ಆಹಾರದಿಂದಾಗಿ ಉತ್ತರದ ಗುಡ್ಡವಾಸಿಗಳು ಹಾಗೂ ದಕ್ಷಿಣದ ಮರುಭೂಮಿಯಲ್ಲಿ ಅಲೆದಾಡುತ್ತಿರುವ ಬುಡಕಟ್ಟುಗಳು ಈ ಪ್ರದೇಶವನ್ನು ತಮ್ಮದಾಗಿಸಿಕೊಳ್ಳುವ ನಿರಂತರ ಪ್ರಯತ್ನದಲ್ಲಿದ್ದವು. ಬೆಟ್ಟಗುಡ್ಡಗಳ ಜನ ಹಾಗೂ ಮರುಭೂಮಿಯ ಅಲೆಮಾರಿ ಜನರ ನಡುವಿನ ನಿರಂತರ ವೈಷಮ್ಯ ಇವರ ನಡುವೆ ಕೊನೆಯಿಲ್ಲದ ಸಂಘರ್ಷಕ್ಕೆ ಎಡೆಮಾಡಿತ್ತು. ಈ ಸಂಘರ್ಷಗಳ ನಡುವೆ ಚಿಗುರೊಡೆದದ್ದು ಪ್ರಬಲ ಜನಾಂಗವೊಂದರ ನಾಗರಿಕತೆ. ಮೆಸಪಟೊಮಿಯದ ಮೊಟ್ಟ ಮೊದಲ ಬರವಣಿಗೆಯನ್ನು ಅಭಿವೃದ್ಧಿಪಡಿಸಿದವರು ಸುಮೇರಿಯನ್ನರು. ಸುಮಾರು 30 ಶತಮಾನಗಳವರೆಗೆ ಫಲವತ್ತಾದ ಕಣಿವೆಗೆ ಧಾವಿಸಿಬಂದ ಸುಮೇರಿಯನ್ನರು, ಬ್ಯಾಬಿಲೋನಿಯರು, ಅಸಿರಿಯನರು ಹಾಗೂ ಚಾಲ್ಡಿಯನ್ನರು ಇದೇ ಬರವಣಿಗೆಯನ್ನು ಬಳಸಿದರು. ಈ ಲಿಪಿಯನ್ನು ಕ್ಯೂನಿಫಾರ್ಮ ಎಂದು ಕರೆಯುತ್ತಾರೆ.


© KTBS NOT TO BE REPUBLISHED

ಈ ನಾಗರಿಕತೆಯ ಕೇಂದ್ರ ಸ್ಥಳ ಯುಪ್ರೆಟಿಸ್ ಹಾಗೂ ಟೈಗ್ರಿಸ್ ನದಿಗಳ ನಡುವಿನ ಕಣಿವೆ ಪ್ರದೇಶದ ದಕ್ಷಿಣ ಭಾಗ. ಪ್ರಾಚೀನ ಕಾಲದಿಂದಲೂ ಇದನ್ನು ಬ್ಯಾಬಿಲೋನಿಯ ಎಂದು ಕರೆಯುತ್ತಿದ್ದರು. ಬ್ಯಾಬಿಲೋನಿಯದ ಉತ್ತರ ಭಾಗವನ್ನು ಅಖಡ್ ಎಂದು ಹಾಗೂ ದಕ್ಷಿಣ ಭಾಗವನ್ನು ಸುಮೇರ್ ಎಂದು ಗುರುತಿಸಲಾಗುತಿತ್ತು. ಮೆಸಪಟೊಮಿಯಾದ ಉತ್ತರ ಭಾಗವನ್ನು ಅಸಾರಿಯ ಎಂದು ಕರೆಯುತ್ತಿದ್ದರು.

**ಬ್ಯಾಬಿಲೋನಿಯಾದ ತೂಗುವ ಉದ್ಯಾನ**

ದಂತ ಕಥೆಯಾದ ಈ ಉದ್ಯಾನವನವನ್ನು ಯುಪ್ರಟಿಸ್ ಮತ್ತು ಟೈಗ್ರಿಸ್ ನದಿಯ ದಂಡೆಯ ಮೇಲೆ ಸುಮಾರು ಸಾ.ಶ.ಪೂ. 7ನೆಯ ಶತಮಾನದಲ್ಲಿ ನಿರ್ಮಿಸಲಾಯಿತು. ಇದು ಪ್ರಾಚೀನ ಜಗತ್ತಿನ ಏಳು ವಿಸ್ಮಯಗಳಲ್ಲಿ ಒಂದು. ಸೋಜಿಗವೆಂದರೆ, ಬ್ಯಾಬಿಲೋನಿನ ಕ್ಯೂನಿಫಾರ್ಮ್ ದಾಖಲೆಗಳು ಅಲ್ಲಿನ ಅರಮನೆ, ಬ್ಯಾಬಿಲೋನ್‌ನ ನಗರ ಮತ್ತು ಅದರ ಗೋಡೆಗಳನ್ನು ಉಲ್ಲೇಖಿಸುವಂತೆ ತೂಗುವ ಉದ್ಯಾನವನದ ಬಗ್ಗೆ ಎಳ್ಳಷ್ಟು ಉಲ್ಲೇಖಿಸದಿರುವುದು ಅಚ್ಚರಿಯನ್ನು ಮೂಡಿಸಿದೆ. ಬಹುತೇಕ ವಿದ್ವಾಂಸರು ತೂಗುವ ಉದ್ಯಾನವನ್ನು ಕಟ್ಟಿದವನು ದೊರೆ ಎರಡನೆ ನೆಬುಕಡ್ನಿಜರ್ ಎಂದು ಅಭಿಪ್ರಾಯಪಡುತ್ತಾರೆ. ನೆಬುಕಡ್ನಿಜರ್‌ನ ಪತ್ನಿಯಾದ ಅಮೈಟಿಸ್, ಮೀಡ್ ಪ್ರದೇಶದವಳು. ಅವಳ ತಾಯ್ನಾಡಿನ ಬೆಟ್ಟ, ಮರ–ಗಿಡಗಳ ಹಸಿರಿನ ಸುಂದರ ಪರಿಸರದ ಬೇಸರದಲ್ಲಿದ್ದ ಈಕೆಯನ್ನು ಸಂತೈಸಲು ನೆಬುಕಡ್ನಿಜರ್ ಇದನ್ನು ಕಟ್ಟಿದನು ಎನ್ನಲಾಗಿದೆ. ಮತ್ತೆ ಕೆಲವರು ಇದು ಅಸ್ಸಾರಿಯದ ರಾಣಿಯಾಗಿದ್ದ ಸಮ್ಮು–ರಾಮತ್‌ಳಿಂದ ರಚಿಸಲಾಯಿತು ಎಂದು ಅಭಿಪ್ರಾಯಪಡುತ್ತಾರೆ. ಉದ್ಯಾನವನವು ವಾಸ್ತವದಲ್ಲಿ ಗಾಳಿಯಲ್ಲೇನು ತೂಗಿದ್ದಿಲ್ಲ. ಮರ–ಗಿಡಗಳನ್ನು ಜಿಗುರಾಟ್ಟಿನ ವಿವಿಧ ಹಂತಗಳಲ್ಲಿ ಕೃಷಿಮಾಡಲಾಗಿತ್ತು. ಅವು ಹಂತಗಳಲ್ಲಿ ಜೋತು ಬಿದ್ದು ತೂಗುತ್ತಿದ್ದ ಕಾರಣ ನೋಡುಗರಿಗೆ ತೂಗುವ ಉದ್ಯಾನದಂತೆ ಕಾಣುತ್ತಿತ್ತು. ಯುಪ್ರಟಿಸ್ ನದಿಯಿಂದ ಇವುಗಳಿಗೆ ನೀರನ್ನು ಹಾಯಿಸಲಾಗುತ್ತಿತ್ತು.

©KTBS NOT TO BE REPUBLISHED



ಜಿಗ್ಗುರಟ್

ಮೆಸಪಟೊಮಿಯಾದ ಚರಿತ್ರೆಯು ಒಂದು ಕೊನೆಯಿಲ್ಲದ ಹಗೆತನ ಹಾಗೂ ಸಂಘರ್ಷಗಳ ಕಥೆ. ಉತ್ತರದ ಗುಡ್ಡವಾಸಿಗಳಾದ ಸುಮೇರಿಯನ್ನರು ಇಲ್ಲಿಗೆ ಬಂದ ಮೊದಲಿಗರು. ತಮ್ಮ ದೇವರುಗಳನ್ನು ಬೆಟ್ಟದ ತಪ್ಪಲಿನ ಮೇಲೆ ಆರಾಧಿಸುತ್ತಿದ್ದ ಇವರು, ಸಮತಟ್ಟಾದ ಪ್ರದೇಶಕ್ಕೆ ಬಂದು ನೆಲಸಿದ ಮೇಲೆ ಕೃತಕವಾದ ಬೆಟ್ಟಗಳನ್ನು ಕಟ್ಟಿ ಅದರ ಮೇಲೆ ಆರಾಧನಾ ಸ್ಥಳಗಳನ್ನು ಕಟ್ಟಿಕೊಂಡರು. ಅವುಗಳನ್ನು 'ಜಿಗ್ಗುರಟ್' ಎಂದು ಕರೆಯುತ್ತಾರೆ. ಯಹೂದಿಗಳು ಈ ಗೋಪುರಗಳನ್ನು ಬೆಬೆಲ್‌ನ ಗೋಪುರಗಳೆಂದು ಕರೆದರು.

**ಹಮ್ಮುರಬಿಯ ಕಾನೂನು**

ಹಮ್ಮುರಬಿ ಸಂಹಿತೆಯ ನಿಯಮಗಳಿಗೆ ಮುಖ್ಯ ಆಧಾರವೆಂದರೆ 1901ರಲ್ಲಿ ಪತ್ತೆಮಾಡಲಾದ ಶಿಲಾಶಾಸನ. ಇದನ್ನು ಇಂದು ಪ್ಯಾರಿಸ್ಸಿನ 'ಲೋರ್' ವಸ್ತುಸಂಗ್ರಾಲಯದಲ್ಲಿ ಇಡಲಾಗಿದೆ. ಹಮ್ಮುರಬಿಯ ಸಂಹಿತೆ 'ಕಣ್ಣಿನ ಬದಲು ಕಣ್ಣು ಮತ್ತು ಹಲ್ಲಿನ ಬದಲು ಹಲ್ಲು' ಎನ್ನುವ ತರ್ಕವನ್ನು ಪ್ರತಿಪಾದಿಸುತ್ತಿತ್ತು. ಹಮ್ಮುರಬಿಯ ಸಂಹಿತೆಯು ನಮಗೆ ಲಭ್ಯವಿರುವ ಅತ್ಯಂತ ಪುರಾತನ ನಿಯಮಗಳಲ್ಲಿ ಒಂದೆನಿಸಿದೆ. ಮಹಿಳೆ ಹಾಗೂ ಗುಲಾಮರುಗಳನ್ನು ಒಳಗೊಂಡಂತೆ ಬ್ಯಾಬಿಲೋನಿನ ಸಮಾಜದ ಎಲ್ಲ ವರ್ಗಗಳ ರಕ್ಷಣೆಗಾಗಿಯೆ ಈ ನಿಯಮಗಳನ್ನು ರಚಿಸಿರಬೇಕು.

ಕ್ರಿ.ಪೂ 4000 ವರ್ಷದಲ್ಲಿ ಸುಮೇರಿಯನ್ನರು ಮೆಸಪಟೊಮಿಯಾವನ್ನು ಪ್ರವೇಶಿಸಿದ್ದರು. ತದನಂತರದಲ್ಲಿ ಇವರನ್ನು ಅರೆಬಿಯಾ ಮರುಭೂಮಿಯ ಬುಡಕಟ್ಟಿನಲ್ಲೊಂದಾದ ಅಕಾಡಿಯನ್ನರು ಪರಾಭವಗೊಳಿಸಿದರು. ಇವರು ಸಿಮ್ಮೈಟ್ಸ್ ಎಂದೇ ಪ್ರಚಲಿತರು. ಸಾವಿರ ವರ್ಷಗಳ ನಂತರ ಮತ್ತೊಂದು ಸೆಮಿಟಿಕ್ ಬುಡಕಟ್ಟಾದ ಅಮೊರೈಟರ ಆಳ್ವಿಕೆಗೆ ಅಕಾಡಿಯನರು ಗುರಿಯಾಗಬೇಕಾಯಿತು. ಅಮೊರೈಟರ ಸುಪ್ರಸಿದ್ಧದೊರೆ ಹಮ್ಮುರಬಿ. ಪವಿತ್ರ ನಗರವಾದ ಬ್ಯಾಬಿಲೋನ್‌ನಲ್ಲಿ ಅದ್ವಿತೀಯವಾದ ಅರಮನೆಯೊಂದನ್ನು ತನಗಾಗಿ ಕಟ್ಟಿಸಿಕೊಂಡನು. ತನ್ನ ಜನತೆಗೆ ಕೆಲವು ನಿಯಮಗಳನ್ನು ರೂಡಿಸಿ ಪ್ರಾಚೀನ ವಿಶ್ವದಲ್ಲೇ ಬ್ಯಾಬಿಲೋನಿಯಾದ ರಾಜ್ಯವು ಅತ್ಯುತ್ತಮ ಆಡಳಿತಕ್ಕೆ ಒಳಗಾದ ಸಾಮ್ರಾಜ್ಯ ಎಂಬ ಖ್ಯಾತಿಗೆ ಗುರಿಯಾಗಲು ಕಾರಣವಾಯಿತು. ನಂತರದಲ್ಲಿ ಬಂದ ಹಿಟ್ಟೈಟರು ಫಲವತ್ತಾದ ಕಣಿವೆಯನ್ನು ವಶಪಡಿಸಿಕೊಂಡು ಕೊಂಡೊಯ್ಯಲಾಗದನ್ನೆಲ್ಲ ನಾಶಪಡಿಸಿದರು. ಅಶುರ ಎಂಬ ಮರುಭೂಮಿಯ ದೇವರ ಅನುಯಾಯಿಗಳಾದ ಅಸ್ಸಿರಿಯನ್ನರು ಹಿಟ್ಟೈಟರನ್ನು ಪರಾಭವಗೊಳಿಸಿದರು. ಇವರು ಇಡೀ ಪಶ್ಚಿಮ ಏಷಿಯ ಮತ್ತು ಈಜಿಪ್ಟಿನ ಪ್ರದೇಶವನ್ನು ಆಕ್ರಮಿಸಿಕೊಂಡು ಸಾ.ಶ.ಪೂ.7ನೇ ಶತಮಾನದವರೆವಿಗೆ ಅಲ್ಲಿನ ಸಮಸ್ತ ಜನಾಂಗಗಳಿಂದ ತೆರಿಗೆಯನ್ನು ಸಂಗ್ರಹಿಸಿದರು. ಸಾ.ಶ.ಪೂ.7ನೇ ಶತಮಾನದಲ್ಲಿ ಮತ್ತೊಂದು ಸಿಮೆಟಿಕ್ ಬುಡಕಟ್ಟಾದ ಚಾಲ್ಡಿಯನರು ಬ್ಯಾಬಿಲೋನನ್ನು ಮರು ಸ್ಥಾಪಿಸಿ ಅದನ್ನು ಆ ಕಾಲದ ಅತ್ಯಂತ ಪ್ರಮುಖ ರಾಜಧಾನಿಯನ್ನಾಗಿಸಿದರು. ಅವರುಗಳಲ್ಲಿನ ಸರ್ವಶ್ರೇಷ್ಠ ದೊರೆ ನೆಬುಕಡ್ನಿಜರ್ ವೈಜ್ಞಾನಿಕ ಅಧ್ಯಯನಕ್ಕೆ ಸಾಕಷ್ಟು ಉತ್ತೇಜನವನ್ನು ನೀಡಿದನು. ಸಾ.ಶ.ಪೂ.6ನೇ ಶತಮಾನದಲ್ಲಿ ಪರ್ಶಿಯನ್ನರ ಆಕ್ರಮಣಕ್ಕೆ ಒಳಗಾದರು. 200 ವರ್ಷಗಳ ನಂತರ ಅಲೆಗ್ಸಾಂಡರನು ಸಿಮೆಟಿಕ್ ಜನಾಂಗಗಳಿಂದ ಆವೃತವಾದ ಈ ಪ್ರದೇಶವನ್ನು ಗ್ರೀಕರ ಒಂದು ಪ್ರಾಂತ್ಯವನ್ನಾಗಿಸಿದ. ಇವರ ತರುವಾಯ ಬಂದ ರೋಮನ್ನರು ಹಾಗೂ ಟರ್ಕರ ನಂತರ ಈ ನಾಗರಿಕತೆಯು ಬೋರೆಗಳನ್ನು ತುಂಬಿಕೊಂಡ ಬೆಂಗಾಡಾಯಿತು.

## ಚೀನಾ ದೇಶದ ನಾಗರಿಕತೆ


ಎಲ್ಲಾ ಪ್ರಾಚೀನ ನಾಗರಿಕತೆಗಳು ನದಿಯ ಬಯಲುಗಳಲ್ಲೆ ಕಂಡುಬಂದಿರುವುದು ವಿಶೇಷವಾಗಿದೆ. ಚೀನಾ ನಾಗರಿಕತೆಯ ಬೆಳವಣಿಗೆ ಕೂಡ ಇದರಿಂದ ಹೊರತೇನಿಲ್ಲ. ಆದರೆ ಚೀನಾದ ನಾಗರಿಕತೆಗೆ ಕಾರಣವಾದ ನದಿಯೊಂದು ಮಾತ್ರ 'ಚೀನಾದ ದುಗುಡ'ವೆಂದು ಕರೆಯಲ್ಪಟ್ಟಿದೆ. ಇದು ಇಲ್ಲಿನ ಹವಾಂಗೊ ನದಿಯನ್ನು ಕುರಿತದ್ದು. ಪ್ರವಾಹದ ನಂತರ ಈ ನದಿಯು ಆಗಿಂದಾಗ್ಗೆ ತನ್ನ ಹಾದಿಯನ್ನು ಬದಲಿಸುವುದರಿಂದ ಮನೆಗಳು ಹಾಗೂ ಕೃಷಿಭೂಮಿ ಈ ನೆರೆಗೆ ಆಹುತಿಯಾಗುತ್ತಿದ್ದವು. ಇದು ಅಲ್ಲಿನ ಕಾಲುವೆಗಳನ್ನೆಲ್ಲ ನಿಷ್ಕ್ರಿಯಗೊಳಿಸುತಿತ್ತು. ಈ ಕಾರಣಕ್ಕಾಗಿಯೆ ಅಲ್ಲಿನ ಜನ ಇದನ್ನು ದುಃಖದ ಪ್ರತೀಕವೆಂದು ಕರೆಯುತ್ತಾರೆ.

ಪ್ರಾಕ್ತನಶಾಸ್ತ್ರದ ಆಧಾರದ ಮೇಲೆ ಚೀನಾದಲ್ಲಿ ಕಂಡು ಬಂದಿರುವ ನಾಗರಿಕತೆಯ ಪ್ರಥಮ ರಾಜ ಮನೆತನ ಶಾಂಗ್ ಎಂಬ ಹೆಸರಿನದು. ಇವರು ಸಾ.ಶ.ಪೂ.18ನೆಯ ಶತಮಾನ ಮತ್ತು 12ನೆಯ ಶತಮಾನಗಳ ನಡುವೆ ಆಳ್ವಿಕೆಯನ್ನು ನಡೆಸಿದವರು. ಸಾ.ಶ.ಪೂ.14ನೆಯ ಶತಮಾನದ ಹೊತ್ತಿಗೆ ಶಾಂಗ್‌ನ ಜನತೆಯು ಅತ್ಯುತ್ತಮ ಸಂಸ್ಕೃತಿಯೊಂದನ್ನು ಕಟ್ಟಿಕೊಂಡಿದ್ದರು. ಶಾಂಗ್ ರಾಜಮನೆತನವನ್ನು ಅವರ ನೆರೆಯ ಚೌ ಮನೆತನವು ಪರಾಭವಗೊಳಿಸಿ ಅಧಿಕಾರವನ್ನು ಪಡೆದುಕೊಂಡಿತು. ಚೌ ರಾಜಮನೆತನವು ಶಾಂಗ್ ಸಂಸ್ಕೃತಿಯ ಅತ್ಯುತ್ತಮ ಅಂಶಗಳನ್ನು ಮುಂದುವರಿಸಿ ಸಾ.ಶ.ಪೂ.250ರವರೆಗೆ ಆಳ್ವಿಕೆ ನಡೆಸಿದರು.

ಇವರ ಆಡಳಿತದಲ್ಲಿ ರಾಜರುಗಳ ಕೆಳಗೆ ಅಧಿಕಾರ ವರ್ಗವಿತ್ತು. ಅಧಿಕಾರಿಗಳಿಗೆ ರಾಜನು ಭೂಮಿಯ ಹಂಚಿಕೆ ಮಾಡುತ್ತಿದ್ದನು. ಅದಕ್ಕೆ ಪ್ರತಿಯಾಗಿ ಇವರುಗಳು ರಾಜನಿಗೆ ಯುದ್ಧಗಳಲ್ಲಿ ಸಹಕರಿಸುತ್ತಿದ್ದರು. ಸಾಮಾಜಿಕ ವರ್ಗೀಕರಣದಲ್ಲಿ ಮುಂದಿನ ಹಂತದಲ್ಲಿದ್ದವರು ವ್ಯಾಪಾರಿಗಳು ಹಾಗೂ ಕುಶಲಕರ್ಮಿಗಳು. ಇವರಲ್ಲದೆ ಇಲ್ಲಿ ಬಹುತೇಕ ಮಂದಿ ಕೃಷಿಕರನ್ನು ಕಾಣಬಹುದಿತ್ತು. ಸಾಮಾಜಿಕ ಶ್ರೇಣೀಕರಣದ ಕಟ್ಟಕಡೆಯ ವರ್ಗವಾಗಿ ಗುಲಾಮರಿದ್ದರು. ರಾಜರು ಯುದ್ಧ ಕೈದಿಗಳನ್ನು ಗುಲಾಮರನ್ನಾಗಿ ಮಾಡಿಕೊಳ್ಳುತ್ತಿದ್ದರು.

NOT TO BE REPUBLISHED

### ಚೀನಾದ ಮಹಾಗೋಡೆ



ಚೀನಾದ ಮಹಾಗೋಡೆ

ಚೀನಾದ ಸಾಮ್ರಾಜ್ಯವು ಹಲವು ಸಣ್ಣ ಸಂಸ್ಥಾನಗಳನ್ನು ಒಳಗೊಂಡಿತ್ತು. ಸಣ್ಣ ಸಂಸ್ಥಾನಗಳನ್ನು ಒಗ್ಗೂಡಿಸಿ ಏಳು ದೊಡ್ಡ ರಾಜ್ಯಗಳನ್ನು ನಿರ್ಮಿಸಲಾಯಿತು. ಹೀಗೆ ಸೃಷ್ಟಿಯಾದ ಪ್ರತಿಯೊಂದು ರಾಜ್ಯವು ತನ್ನ ರಕ್ಷಣೆಗಾಗಿ ಗಡಿಯುದ್ದಕ್ಕೂ ಸ್ವತಂತ್ರವಾದ ಗೋಡೆಗಳನ್ನು ಕಟ್ಟಿಕೊಂಡಿತ್ತು. ಉತ್ತರ ಚೀನಾದ ರಾಜ್ಯಗಳು ತಮ್ಮ ಗಡಿಗೋಡೆಗಳನ್ನು ಒಂದುಗೂಡಿಸುವಂತೆ ಕ್ವಿನ್ ಷಿಹುಯಾಂಗ್‌ಟಿ ಎನ್ನುವ ಚಕ್ರವರ್ತಿಯು ಆದೇಶವಿತ್ತನು. ಉತ್ತರದ ಭಾಗದಿಂದ ಆಕ್ರಮಣ ಮಾಡುತ್ತಿದ್ದ ದಾಳಿಕೋರರ ದೌರ್ಜನ್ಯವನ್ನು ಹತ್ತಿಕ್ಕಲು ಉತ್ತರದ ಗೋಡೆಗಳನ್ನು ಒಂದುಗೂಡಿಸಲಾಯಿತು. ಮಹಾಗೋಡೆಯನ್ನು ಸಾ.ಶ.ಪೂ.7ನೆಯ ಶತಮಾನದಲ್ಲಿ ಕಟ್ಟಲು ಪ್ರಾರಂಭಿಸಲಾಯಿತು. ಈ ಗೋಡೆಯನ್ನು ಸಾ.ಶ.16ನೆಯ ಶತಮಾನದವರೆಗೂ ಕಟ್ಟಲಾಯಿತು. ಮಹಾಗೋಡೆಯ ಶಿಥಿಲಗೊಂಡ ಭಾಗಗಳನ್ನು ಮತ್ತಷ್ಟು ದುರಸ್ಥಿಮಾಡಲಾಗುತಿತ್ತು. ಗೋಡೆಯು ಪೂರ್ಣಗೊಂಡಾಗ 5000 ಕಿ.ಮೀ ಗಿಂತ ಉದ್ದವಾಗಿತ್ತು. ಜಗತ್ತಿನ ವಿಸ್ಮಯಗಳಲ್ಲಿ ಒಂದೆನಿಸಿದೆ.

ಶಾಂಗ್ ದೊರೆಗಳು ಸಾಕಷ್ಟು ಸಮಯವನ್ನು ಯುದ್ಧಗಳಲ್ಲಿ ಹಾಗೂ ಆಕ್ರಮಣಗಳಲ್ಲಿ ಕಳೆದಿದ್ದರು. ಹೀಗಾಗಿ ಸೇನೆಯು ಪ್ರಾಮುಖ್ಯತೆಯನ್ನು ಹೊಂದಿತ್ತು. ಸಮಾಜದಲ್ಲಿ ಸೈನಿಕನಿಗೆ ಉತ್ತಮ ಸ್ಥಾನಮಾನವಿತ್ತು.

ಸೈನಿಕರು ಕಂಚಿನ ತಲೆರಕ್ಷಾ ಕವಚ ಹಾಗೂ ಲೋಹದ ದೇಹಕವಚವನ್ನು ಧರಿಸುತ್ತಿದ್ದರು. ಇವರು ಬಳಸುತ್ತಿದ್ದ ಕಂಚಿನ ಚೂರಿಗಳು, ಕೊಡಲಿಗಳು, ಬಿಲ್ಲು ಹಾಗೂ ಲೋಹ ತುದಿಯನ್ನು ಹೊಂದಿದ ಬಾಣಗಳು ದೊರೆತಿವೆ. ಶಾಂಗ್‌ನ ಜನತೆ ಕೃಷಿಯನ್ನು ಅವಲಂಬಿಸಿದ್ದರು. ಚೀನಿಯರು ಸುವ್ಯವಸ್ಥಿತವಾದ ನೀರಾವರಿ ವ್ಯವಸ್ಥೆಯನ್ನು ನಿರ್ಮಿಸಿಕೊಂಡಿದ್ದರು. ಇವರು ಯಥೇಚ್ಛವಾಗಿ ಭತ್ತವನ್ನು ಬೆಳೆಯುತ್ತಿದ್ದರು.

**ಪಿಂಗಾಣಿ**

ಪಿಂಗಾಣಿಯು ಚೀನಾದಲ್ಲಿ ಉಗಮವಾಯಿತು ಎಂಬ ಸಾಮಾನ್ಯ ನಂಬಿಕೆಯಿದೆ. ಅರೆ–ಪಿಂಗಾಣಿಯ ಸಲಕರಣೆ ವಸ್ತುಗಳನ್ನು ಸುಮಾರು ಕ್ರಿ.ಪೂ. 1600 ವರ್ಷಗಳಿಂದಲೂ ಬಳಸಲಾಗುತ್ತಿದೆ. ಪೂರ್ವಚೀನಾದ ಹ್ಯಾನ್ ಮನೆತನದ ಆಳ್ವಿಕೆಯ ಹೊತ್ತಿಗೆ (ಕ್ರಿ.ಪೂ 2ನೆಯ ಶತಮಾನ) ಹೊಳಪಿನ ಪಿಂಗಾಣಿಯ ಅಭಿವೃದ್ಧಿಯಾಗಿತ್ತು. ಈ ಸಮಯದಲ್ಲಿ ಅದೊಂದು ಉತ್ಕೃಷ್ಟವಾದ ಕಲೆಯಾಗಿ ಅಭಿವೃದ್ಧಿ ಹೊಂದಿತ್ತು. ಪ್ರಾಚೀನ ಚೀನಿಯರು ಸತ್ತವರ ಜೊತೆಯಲ್ಲಿ ಪಿಂಗಾಣಿಯ ಮಡಿಕೆಗಳು, ಪ್ರಾಣಿಗಳು ಹಾಗೂ ಅವರು ಬದುಕಿದ್ದ ವೇಳೆಯಲ್ಲಿ ಅವರಿಗೆ ಪ್ರಿಯವಾಗಿದ್ದ ವಸ್ತುಗಳನ್ನು ಹೂಳುತ್ತಿದ್ದರು.

© KTBS NOT TO BE REPUBLISHED

ಚೀನಿಯರು ತೆಳುವಾದ ನೂಲಿನ ಉಡುಪನ್ನು ಧರಿಸುತ್ತಿದ್ದರು. ಶಾಂಗ್‌ನ ಜನತೆ ರೇಷ್ಮೆಯನ್ನು ಸಹ ಬಳಸುತ್ತಿದ್ದರು. ರೇಷ್ಮೆ ಹುಳುಗಳ ಬೇಸಾಯದಲ್ಲೂ ತೊಡಗಿದ್ದರು. ರೇಷ್ಮೆ ಉತ್ಪಾದನೆಯು ಪ್ರಮುಖ ಉದ್ಯಮವಾಗತೊಡಗಿತ್ತು. ಚೀನಾದವರು ಅತ್ಯುತ್ತಮವಾದ ಮಡಿಕೆಗಳನ್ನು ತಯಾರಿಮಾಡಿದ್ದರು. ಪಿಂಗಾಣಿಯ ವಿವಿಧ ವಸ್ತುಗಳನ್ನು ತಯಾರಿಸುವುದನ್ನು ಕಲಿತಿದ್ದರು. ಪೂರ್ವಿಕರನ್ನು ಪೂಜಿಸುವ ಅಭ್ಯಾಸವು ಇವರಲ್ಲಿ ಜನಪ್ರಿಯವಾಗಿತ್ತು. ಸತ್ತ ಮನುಷ್ಯನು ಆತ್ಮವಾಗಿ ಪರಿವರ್ತನೆಯಾಗುವ ಹಾಗೂ ಆ ಆತ್ಮಕ್ಕೆ ವಿಶೇಷ ಶಕ್ತಿಗಳಿದ್ದವು ಎಂಬ ನಂಬಿಕೆ ಅವರದು. ಸತ್ತ ಮನುಷ್ಯನ ದೇಹವನ್ನು ಶವಸಂಸ್ಕಾರ ಮಾಡಿ ಅದರೊಂದಿಗೆ ಮರದ ವಸ್ತುಗಳು, ಮಡಿಕೆ, ಕಂಚಿನ ಪಾತ್ರೆಗಳು ಇತ್ಯಾದಿಗಳನ್ನು ಸಹ ಸಮಾಧಿಯಲ್ಲಿ ಇಡುತ್ತಿದ್ದರು. ರಾಜರುಗಳ ಶವಾಗಾರ ಸಾಕಷ್ಟು ವಿಶಾಲವಾಗಿತ್ತು. ಚೀನಿಯರ ಲಿಖಿತ ಪರಂಪರೆಯು ಚಿತ್ರಲಿಪಿಯಿಂದ ಪ್ರಾರಂಭವಾಗಿ ವೈಚಾರಿಕ ಸಂದೇಶವನ್ನು ನೀಡುವ ಲಿಪಿಯಾಗಿ ಪರಿವರ್ತಿತವಾಯಿತು. ಬರಹಗಾರರು ರೇಷ್ಮೆ ಹಾಗೂ ಬಿದಿರಿನ ಚಕ್ಕೆಗಳ ಮೇಲೆ ಲಿಪಿಯನ್ನು ಮೂಡಿಸುತ್ತಿದ್ದರು. ಪಿಂಗಾಣಿ ಹಾಗೂ ಚೀನಾದ ಮಹಾಗೋಡೆಯು ಈ ಸಂಸ್ಕೃತಿಯ ವಿಶಿಷ್ಟ ಕೊಡುಗೆ.

## ಗ್ರೀಕರ ನಾಗರಿಕತೆ

ಗ್ರೀಕರು ಉತ್ತರದಿಂದ ಏಜಿಯನ್ ಸಮುದ್ರ ಪ್ರದೇಶಕ್ಕೆ ಬಂದವರು. ಈ ಕುರಿಕಾಯುವ ಬುಡಕಟ್ಟಿನ ಜನ ತಮ್ಮ ಮೂಲ ಪ್ರದೇಶವನ್ನು ಬಿಟ್ಟು ಹುಲ್ಲುಗಾವಲು ಪ್ರದೇಶಗಳನ್ನು ಹುಡುಕುತ್ತಾ ಬಂದರು. ಹೀಗೆ ಬಂದ ಪ್ರತಿಯೊಂದು ಸಮೂಹಕ್ಕೂ ತಮ್ಮದೇ ಆದ ಹೆಸರಿದ್ದವು. ಅವರುಗಳೆಂದರೆ ಅಕಿಯನರು, ಐಯೋನಿಯನರು ಹಾಗೂ ಡೋರಿಯನರು. ತಮ್ಮನ್ನು ಅವರು ಹೆಲೆನೀಸ್ ಅಥವಾ ಗ್ರೀಕರೆಂದು ಕರೆದುಕೊಂಡರು. ಗ್ರೀಕರು ಮೂಲತಃ ಬುಡಕಟ್ಟು ಸಮುದಾಯಗಳಿಗೆ ಸೇರಿದವರು. ಹಲವು ಬುಡಕಟ್ಟುಗಳ ಒಡೆಯನಾಗಿ ರಾಜನಿದ್ದನು. ಇವರು ವೃತ್ತಿಯಲ್ಲಿ ಕೃಷಿಕರು ಹಾಗೂ ಪಶುಸಂಗೋಪನೆಯಲ್ಲಿ ತೊಡಗಿದವರು. ಇದಲ್ಲದೆ ಮಡಿಕೆ, ಖಡ್ಗ ಹಾಗೂ ಆಭರಣಗಳನ್ನು ಮಾಡುವ ಕಸುಬುಗಳಲ್ಲಿಯು ಸಹ ತೊಡಗಿದ್ದರು. ವ್ಯಾಪಾರವು ವಸ್ತುವಿನಿಮಯದ ಮೂಲಕ ನಡೆಯುತ್ತಿತ್ತು. ಯುದ್ಧ, ಸಾಹಸ ಹಾಗೂ ಆಕ್ರಮಣಗಳೇ ಇವರ ಬದುಕಿನ ಸಂಭ್ರಮ. ಗ್ರೀಕರು ತಮ್ಮ ದೇವರುಗಳು ಒಲಂಪಸ್‌ನ ಬೆಟ್ಟದ ಮೇಲೆ ವಾಸವಾಗಿದ್ದಾರೆ ಎಂದು ನಂಬಿದ್ದರು. ಒಳ್ಳೆಯ ಫಸಲು ಹಾಗೂ ಇನ್ನಿತರ ಕಾರ್ಯಗಳ ಯಶಸ್ಸಿಗಾಗಿ

ಅವರು ಪ್ರಾರ್ಥಿಸುತ್ತಿದ್ದರು. ಗ್ರೀಕರಲ್ಲಿ ಪುರೋಹಿತರ್ಯಾರು ಇರಲಿಲ್ಲ. ರಾಜನೇ ತನ್ನ ಸಮಸ್ತ ಜನರ ಪರವಾಗಿ ಪ್ರಾರ್ಥಿಸುತ್ತಿದ್ದನು.

**ಅಲೆಗ್ಸಾಂಡರ್**

ಈತ ಗ್ರೀಸ್ ದೇಶದ ಮೆಸಿಡೋನಿಯಾದ ರಾಜ. ತನ್ನ ಅತ್ಯಲ್ಪ ಜೀವಾವಧಿಯಲ್ಲಿ ಜಗತ್ತನ್ನು ಗೆಲ್ಲಲು ಹೊರಟನು. ಈತನು ಬೃಹತ್ ಸಾಮ್ರಾಜ್ಯವೊಂದನ್ನು ರೂಪಿಸುವಲ್ಲಿ ಸಫಲನಾದನು. ಇವನು ಪರ್ಶಿಯನ್ ಸಾಮ್ರಾಜ್ಯವನ್ನು ಪರಾಭವಗೊಳಿಸಿ ಭಾರತದ ಮೇಲೆ ದಾಳಿಯನ್ನು ಮುಂದುವರಿಸಲು ಬಂದನು. ಗ್ರೀಕರಲ್ಲಿನ ಸರ್ವಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬನಾಗಿದ್ದ ಅರಿಸ್ಟಾಟಲ್ ಇವನ ಗುರುವಾಗಿದ್ದನು. ಭಾರತದ ಗಡಿಯಲ್ಲಿ ಹೋರಾಡಿ ಹಿಂದಿರುಗುವಾಗ ಬ್ಯಾಬಿಲೋನಿಯದಲ್ಲಿ ಸಾ.ಶ.ಪೂ.323ರಲ್ಲಿ ಅಲೆಗ್ಸಾಂಡರನು ಮೃತನಾದನು.

ಗ್ರೀಸಿನಲ್ಲಿ ಗುಲಾಮಗಿರಿ ಸರ್ವವ್ಯಾಪಿಯಾಗಿತ್ತು. ಇದು ಗ್ರೀಕರಿಗೆ ಸಾಕಷ್ಟು ಪುರುಸೊತ್ತಿನ ಸಮಯವನ್ನು ಕಲ್ಪಿಸಿ ವಿವಿಧ ಕಲೆಗಳಲ್ಲಿ ಹಾಗೂ ವೈಭೋಗದಲ್ಲಿ ನಿರತರಾಗಲು ಕಾರಣವಾಯಿತು. ಇವರ ಒಲಿಂಪಿಕ್ ಆಟವು ನಾಲ್ಕು ವರ್ಷಕ್ಕೊಮ್ಮೆ ನಡೆಯುತ್ತಿದ್ದ ಪ್ರಸಿದ್ಧ ಆಟ. ಇಲ್ಲಿ ವಿವಿಧ ಕಲೆಗಳಿಗೆ ಪ್ರಾಶಸ್ತ್ಯ ನೀಡಲಾಗಿತ್ತು.

NOT TO BE REPUBLISHED ©KTBS

## ರೋಮನ್ನರ ನಾಗರಿಕತೆ


ಪ್ರಸ್ತುತ ಇಟಲಿ ದೇಶದಲ್ಲಿ ನಾವು ಪ್ರಾಚೀನ ರೋಮನ್ನರ ನಾಗರಿಕತೆಯ ಕುರುಹುಗಳನ್ನು ಕಾಣುತ್ತೇವೆ. ಉತ್ತರ ಆಫ್ರಿಕ, ಸ್ಪೇಯಿನ್ ಹಾಗೂ ಫ್ರಾನ್ಸಿನವರು ಇಟಲಿಯ ಮೂಲ ನಿವಾಸಿಗಳು. ಸುಮಾರು 4000 ವರ್ಷಗಳ ಹಿಂದೆ ಜನ ಇಲ್ಲಿಗೆ ವಲಸೆ ಬಂದರು. ಕೆಲಕಾಲದ ನಂತರ ಗ್ರೀಕರು ಹಾಗೂ ಯಿತ್ರುಸ್ಕಾನರು ಬಂದು ಇಲ್ಲಿ ನೆಲಸಿದ್ದರು. ಇಟಲಿಯ ಜನ ಇವರುಗಳ ವಂಶಜರು. ಇಟಲಿಯನ್ನರು ಗ್ರೀಕರಿಂದ ಅಕ್ಷರ, ಧಾರ್ಮಿಕ ನಂಬಿಕೆ ಹಾಗೂ ಕಲೆಯನ್ನು ಕಲಿತರು.

ರೋಮ್ ದೇಶವು ರಾಜಾಡಳಿತಕ್ಕೆ ಒಳಗಾಗಿತ್ತು. ರೋಮನ್ನರಿಗೆ 'ಅಸೆಂಬ್ಲಿ' ಹಾಗೂ 'ಸೆನೆಟ್' ಎಂಬ ಎರಡು ರಾಜಕೀಯ ಸಲಹಾ ಸಂಸ್ಥೆಗಳಿದ್ದವು. ಅಸೆಂಬ್ಲಿಯು ಎಲ್ಲ ಮಧ್ಯವಯಸ್ಸಿನ ಪುರುಷರನ್ನು ಹೊಂದಿತ್ತು. ಸೆನೆಟ್ ಪ್ರತಿಷ್ಠಿತರ ಸಭೆಯಾಗಿತ್ತು. ಇದು ಅತ್ಯಂತ ಪ್ರಭಾವಿ ಸಂಸ್ಥೆಯಾಗಿತ್ತು. ಅಸೆಂಬ್ಲಿ ಹಾಗೂ ರಾಜನ ಪ್ರಸ್ತಾಪಗಳನ್ನು ತಿರಸ್ಕರಿಸುವ ಹಕ್ಕು ಕೂಡ ಸೆನೆಟಿಗಿತ್ತು. ಸಾ.ಶ.ಪೂ.6ನೆಯ ಶತಮಾನದಲ್ಲಿ ರಾಜತ್ವವನ್ನು ಅಳಿಸಿ ಗಣರಾಜ್ಯವನ್ನು ಸ್ಥಾಪಿಸಲಾಯಿತು. ಕ್ರಿ.ಪೂ 3ನೆಯ ಶತಮಾನದ ಅವಧಿಗೆ ಸಮಗ್ರ ಇಟಲಿಯ ಆಡಳಿತವು ಗಣರಾಜ್ಯಗಳ ಕೈಗೆ ಬಂದಿತು. ರೋಮನ್ ಗಣರಾಜ್ಯದಡಿಯಲ್ಲಿಯು ಸೆನೆಟ್ ಹಾಗೂ ಅಸೆಂಬ್ಲಿ ಸಲಹಾ ಸಂಸ್ಥೆಗಳಾಗಿ ಮುಂದುವರಿದವು. ಈ ಸಂಸ್ಥೆಗಳ ಸದಸ್ಯರುಗಳೇ ಯುದ್ಧಗಳಲ್ಲಿ ಸೇನೆಯನ್ನು ನಡೆಸಿದರು. ಇವರು ಕಾನೂನನ್ನು ನಿಭಾಯಿಸಿದರು ಹಾಗೂ ನ್ಯಾಯವನ್ನು ಪ್ರತಿಪಾದಿಸಿದರು.

ರೋಮನ್ ಸಮಾಜದಲ್ಲಿ ಪೆಟ್ರಿಷಿಯನರು ಹಾಗೂ ಪ್ಲೇಬಿಯನರೆಂಬ ಎರಡು ವರ್ಗಗಳಿದ್ದವು. ಪೆಟ್ರಿಷಿಯನರು ಸಮಾಜದ ಪ್ರತಿಷ್ಠಿತರು. ಇವರು ಮೇಲು ವರ್ಗದವರು ಹಾಗೂ ಭೂ ಮಾಲೀಕರು. ಇವರು ಸೆನೆಟನ್ನು ನಿಯಂತ್ರಿಸುತ್ತಿದ್ದವರು. ಪ್ಲೇಬಿಯನರು ಜನಸಾಮಾನ್ಯರು. ಇವರು ಸಾಮಾನ್ಯ ಕೆಲಸಗಾರರು, ಸಣ್ಣ ಭೂ ಹಿಡುವಳಿದಾರರು, ಕುಶಲಕರ್ಮಿಗಳು, ಸಣ್ಣವ್ಯಾಪಾರಿಗಳು ಹಾಗೂ ಸೈನಿಕರು. ಇವರ ಹಕ್ಕುಗಳು ಸೀಮಿತವಾಗಿದ್ದವು. ತೆರಿಗೆಗಳನ್ನು ಪಾವತಿಸುವುದಕ್ಕೆ ಹಾಗೂ ಶಿಕ್ಷೆಗಳಿಗೆ

ಒಳಗಾಗುವುದಕ್ಕೆ ಇವರು ಮೀಸಲಾಗಿದ್ದರು. ಕೌನ್ಸಿಲ್ ಹಾಗೂ ಸೆನೆಟ್‌ಗಳು ಪ್ಲೇಬಿಯನರ ವಿಚಾರವಾಗಿ ತೆಗೆದುಕೊಂಡ ನಿರ್ಧಾರಗಳನ್ನು ಟ್ರಿಬ್ಯೂನ್‌ಗಳು ತಿರಸ್ಕರಿಸಬಹುದಿತ್ತು. ಸಾ.ಶ.ಪೂ. 5ನೆಯ ಶತಮಾನದಲ್ಲಿ ಇವರು ವ್ಯವಸ್ಥೆಯ ವಿರುದ್ಧ ದಂಗೆಯೆದ್ದರು. ಇದರಿಂದಾಗಿ ಪೆಟ್ರಿಷಿಯನರು ಇವರುಗಳಿಗೆ ಕೆಲವು ರಿಯಾಯತಿಗಳನ್ನು ನೀಡಿದರು. ಹೀಗಾಗಿ ಟ್ರಿಬ್ಯೂನ್‌ಗಳ ಸದಸ್ಯರನ್ನು ಆರಿಸುವ ಹಕ್ಕನ್ನು ಪಡೆದು-ಕೊಂಡರು. ಇದೇ ಸಂದರ್ಭದಲ್ಲಿ 'ರೋಮನ್ ಲಾ' ಎಂಬ ಕಾನೂನುಗಳಿಂದ ಶಾಸನಬದ್ಧ ಆಳ್ವಿಕೆಯನ್ನು ತಂದರು. ಇದರಿಂದ ಪ್ರಜೆಗಳ ಹಕ್ಕುಗಳನ್ನು ಪರಿಚಯಿಸಿದಲ್ಲದೆ ಅದರ ಉಲ್ಲಂಘನೆಯನ್ನು ವಿರೋಧಿಸುವುದನ್ನು ಕಲಿತರು.

ಹೊಸ ಪ್ರದೇಶಗಳ ವಿಸ್ತರಣೆಯ ಅಭಿಲಾಷೆಯು ರೋಮನ್ನರನ್ನು ಹೊಸ ಸಂಘರ್ಷಕ್ಕೆ ಎಡೆಮಾಡಿತು. ಹೀಗಾಗಿ ಇವರು ಉತ್ತರ ಆಫ್ರಿಕಾದ ಕರಾವಳಿಯಲ್ಲಿರುವ ಕಾರ್ಥೇಜ್ ಎಂಬ ನಗರದ ಜೊತೆ ಕಾದಾಡಿದರು. ಸಿಸಿಲಿ ಎಂಬುದೊಂದು ಫಲವತ್ತಾದ ಪ್ರದೇಶ. ಇದರ ಹಿಡಿತಕ್ಕಾಗಿಯೇ ಇವರು 118 ವರ್ಷಗಳ ಕಾಲ ಕಾದಾಡಿದರು. ಇದನ್ನೇ 'ಪ್ಯೂನಿಕ್ ಯುದ್ಧ'ಗಳೆಂದು ಕರೆಯಲಾಗಿದೆ. ಈ ಯುದ್ಧದಲ್ಲಿ ಅಂತಿಮವಾಗಿ ಕಾರ್ಥೇಜಿಯನ್ನರು ಪರಾಭವಗೊಂಡರು. ಸಾ.ಶ.ಪೂ. 1ನೆಯ ಶತಮಾನದ ಪ್ರಾರಂಭದ ಹೊತ್ತಿಗೆ ರೋಮನ್ನರು ಗ್ರೀಸ್, ಏಷ್ಯ ಹಾಗೂ ಈಜಿಪ್ಟಿನ ಭೂ ಭಾಗಗಳನ್ನು ಹೊಂದಿದ್ದರು. ಆಕ್ರಮಣ ಹಾಗೂ ವಿಜಯಗಳ ಕಾರಣವಾಗಿ ರೋಮ್ ವ್ಯಾಪಕ ಸಂಪತ್ತು, ಸಿರಿವಂತಿಕೆಯನ್ನು ಪಡೆದುಕೊಂಡಿತ್ತು. ಹಾಗೆಯೇ ರೋಮ್ ಬಂಗಾರ ಮತ್ತು ಗುಲಾಮರುಗಳನ್ನು ಗಳಿಸಿಕೊಂಡಿತು. ರೋಮ್ ಪೆಟ್ರೇಷಿಯನರು ಹಾಗೂ ಪ್ಲೇಬಿಯನರಲ್ಲದೆ ಬಹುತೇಕ ಗುಲಾಮರನ್ನು ಒಳಗೊಂಡಿತ್ತು. ಗುಲಾಮರಿಗೆ ನಾಗರಿಕ ಹಕ್ಕಿರಲಿಲ್ಲ. ಇವರು ತಮ್ಮ ತಮ್ಮ ಯಜಮಾನರುಗಳ ಖಾಸಗಿ ಆಸ್ತಿಯಾಗಿದ್ದರು. ಗುಲಾಮರನ್ನು ಮಾರಾಟಕ್ಕೂ ಇಡುತ್ತಿದ್ದರು. ಕೆಲವು ನಿರ್ಬಂಧಗಳಿಗೆ ಒಳಪಟ್ಟು ಕೆಲವೊಮ್ಮೆ ಅವರು ಸ್ವಾತಂತ್ರ್ಯವನ್ನು ಪಡೆದದ್ದೂ ಇದೆ. ಅಂತಸ್ತುಗಳ ದರ್ಪದಲ್ಲಿ ಮುಳುಗಿದ್ದ ರೋಮನ್ನರು ಗುಲಾಮರನ್ನು ಗ್ಲ್ಯಾಡಿಯೇಟರ್‌ಗಳಾಗಿ ಬಳಸುತ್ತಿದ್ದರು. ಗ್ಲ್ಯಾಡಿಯೇಟರ್‌ಗಳ ಸೆಣಸಾಟದ ಪೈಪೋಟಿಯನ್ನು ಎಂಪಿಥಿಯೇಟರ್ ನಿಂದ ವೀಕ್ಷಿಸಿ ರಂಜನೆಪಡೆಯುತ್ತಿದ್ದರು. ಬಹುತೇಕ ಗುಲಾಮರು ಹಾಗೂ ಸೆರೆಯಾಳುಗಳು ಇಂತಹ ಆಟಗಳಲ್ಲಿ ತಮ್ಮ ಪ್ರಾಣಗಳನ್ನು ಕಳೆದುಕೊಂಡರು.



**ವೃತ್ತಾಕಾರದ ಬೃಹತ್ ರಂಗ ಮಂದಿರ**

NOT TO BE REPUBLISHED

**ಗ್ಲ್ಯಾಡಿಯೇಟರ್**

ಪ್ರಾಚೀನ ರೋಮಿನ ಕುಸ್ತಿಪಟುಗಳನ್ನು 'ಗ್ಲ್ಯಾಡಿಯೇಟರ್' ಎಂದು ಕರೆಯುತ್ತಿದ್ದರು. ಇವರುಗಳಲ್ಲಿ ನುರಿತ ಹಾಗು ಪೂರ್ವಭಾವಿ ಸಿದ್ಧತೆ ಇಲ್ಲದವರೂ ಇದ್ದರು. ಪ್ರೇಕ್ಷಕರ ಮನೋರಂಜನೆಗಾಗಿ ಕುಸ್ತಿಗಳನ್ನು ಏರ್ಪಡಿಸಲಾಗುತ್ತಿತ್ತು. ಮನುಷ್ಯ–ಮನುಷ್ಯರ ಹಾಗೂ ಮನುಷ್ಯ–ಮೃಗಗಳ ನಡುವೆ ನಡೆಯುತ್ತಿದ್ದ ಈ ಸಮರಗಳು ಕೆಲವೊಮ್ಮೆ ಆಟಗಾರರ ದಾರುಣ ಮರಣದಲ್ಲಿ ಅಂತ್ಯವಾಗುತಿತ್ತು. ಗ್ಲ್ಯಾಡಿಯೇಟರ್‌ಗಳ ಸಮರಗಳು ನಡೆಯುತ್ತಿದ್ದ ಸ್ಥಳಗಳನ್ನು 'ಎಂಪಿಥಿಯೇಟರ್' ಹಾಗೂ 'ಕಲೋಸ್ಸಿಯಂ'ಗಳೆಂದು ಕರೆ–ಯುತ್ತಿದ್ದರು. ನಾಗರಿಕ ಹಕ್ಕನ್ನು ಕಳೆದುಕೊಂಡ ಅಪರಾಧಿಗಳು, ಗುಲಾಮರು ಮತ್ತು ಯುದ್ಧಕೈದಿಗಳನ್ನು ಗ್ಲ್ಯಾಡಿಯೇಟರ್‌ಗಳಾಗಿ ಭರ್ತಿ ಮಾಡಿಕೊಳ್ಳಲಾಗುತ್ತಿತ್ತು. ಗ್ಲ್ಯಾಡಿಯೇಟರ್‌ಗಳು ಕೆಲವೊಮ್ಮೆ ಪ್ರಸಿದ್ಧಿ ಹಾಗೂ ಐಶ್ವರ್ಯಗಳನ್ನು ಗಳಿಸಿ ತಮ್ಮ ಸ್ವಾತಂತ್ರ್ಯವನ್ನು ಪಡೆದುಕೊಳ್ಳುತ್ತಿದ್ದರು. ಇತ್ತೀಚೆಗೆ 'ಗ್ಲ್ಯಾಡಿಯೇಟರ್' ಎಂಬ ಹೆಸರಿನ ಇಂಗ್ಲಿಷ್ ಭಾಷೆಯ ಸಿನಿಮಾ ಜಗದ್ವಿಖ್ಯಾತವಾಗಿದೆ.

ಕಾಲಾಂತರದಲ್ಲಿ ರೋಮನ್ ರಾಜ್ಯವು ಅವ್ಯವಸ್ಥೆಗಳ ಆಗರವಾಯಿತು. ದಂಗೆಗಳು, ಕಗ್ಗೊಲೆಗಳು ಈ ಸಂದರ್ಭದಲ್ಲಿ ನಡೆದವು. ಲಂಚ, ಭ್ರಷ್ಟಾಚಾರವು ಚುನಾವಣೆಗಳಲ್ಲಿ ಸಹಜವಾಯಿತು. ಇಂತಹ ಸಂದರ್ಭದಲ್ಲಿ ಸ್ಪಾರ್ಟಕಸ್ಸನ ನೇತೃತ್ವದಲ್ಲಿ ಸುಮಾರು 60,000 ದಷ್ಟು ಬಡಜನ ಹಾಗೂ ಶೋಷಿತ ಗುಲಾಮರು ಬಂಡೆದ್ದರು. ಒಂದು ವರ್ಷದ ಕಾಲ ಹೋರಾಡಿದ ಇವರನ್ನು ಅಮಾನುಷವಾಗಿ ಹತ್ತಿಕ್ಕಲಾಯಿತು. ಸುಮಾರು 60,000 ಜನರನ್ನು ಈ ಸಂದರ್ಭದಲ್ಲಿ ಶಿಲುಬೆಗೇರಿಸಿದರು.

ನಿರಂತರ ಯುದ್ಧಗಳಿಂದಾಗಿ ಸೇನಾಧಿಕಾರಿಗಳು ಸೆನೆಟ್ಟಿನ ಅಧಿಕಾರವನ್ನೇ ಗೌಣವಾಗಿಸಿದರು. ಸಹಸ್ರಾರು ಸೇನಾಧಿಕಾರಿಗಳಲ್ಲಿ ಪಾಂಪೆ ಮತ್ತು ಜೂಲಿಯಸ್ ಸೀಸರ್ ಪ್ರಮುಖರು. ಇವರಿಬ್ಬರು ಪರಸ್ಪರ ಪೈಪೋಟಿಯಲ್ಲಿ ಕಾದಾಡಿದರು. ಕಡೆಗೆ ಸೀಸರ್ ಪಾಂಪೆಯ ವಿರುದ್ಧ ಜಯಶಾಲಿಯಾಗಿ ಸರ್ವಾಧಿಕಾರಿಯಾಗಲು ಯತ್ನಿಸಿದನು. ಪರಿಣಾಮವಾಗಿ, ನಿರಂಕುಶತೆಯ ವಿರೋಧಿಯಾದ ಮತ್ತು ಸೀಸರನ ಸ್ನೇಹಿತನಾದ ಬ್ರೂಟಸ್ ಹಾಗೂ ಅವನ ಸಹವರ್ತಿಗಳು ಸೆನೆಟ್ಟಿನ ಆವರಣದಲ್ಲಿ ಸೀಸರ್‌ನನ್ನು ಕೊಂದುಹಾಕಿದರು. ನಂತರ ರಾಜ್ಯದ ಅಧಿಕಾರವು ಸೀಸರ್‌ನ ಅಳಿಯನಾದ ಆಕ್ಟೇವಿಯಸ್ಸನ ಕೈಗೆ ಹಸ್ತಾಂತರವಾಯಿತು. ಸೀಸರ್‌ನ ಮರಣದ ನಂತರ ಇವನು ಕೊಲೆಯ ಸಂಚನ್ನು ರೂಪಿಸಿದವರನ್ನು ಕೊಂದು ಸೇಡು ತೀರಿಸಿಕೊಂಡನು. ಆಕ್ಟೇವಿಯಸ್ಸನ ಮೂಲಕ ಗಣರಾಜ್ಯವು ಕೊನೆಗೊಂಡಿತು. ಇವನು 'ಆಗಸ್ಟಸ್' ಎಂಬ ನಾಮಾಂಕಿತದೊಂದಿಗೆ ಆಳಿದನು. ತನ್ನನ್ನು 'ಪ್ರಿನ್ಸೆಪ್' ಎಂದು ಸಹ ಕರೆದುಕೊಂಡನು. 'ಪ್ರಿನ್ಸೆಪ್' ಎಂದರೆ 'ರಾಜ್ಯದ ಮೊದಲ ನಾಗರಿಕ'ನೆಂದು. ಇವನು ಅನೇಕ ಸುಧಾರಣೆಗಳನ್ನು ತಂದು 44 ವರ್ಷಗಳ ಕಾಲ ಆಳ್ವಿಕೆಯನ್ನು ನಡೆಸಿದನು. ಇವನ ನಂತರದಲ್ಲಿ ಬಂದ ಬಹುತೇಕರು ನಿರಂಕುಶ ರಾಜರಾಗಿದ್ದರು. ಸೆನೆಟ್ ತನ್ನ ಎಲ್ಲ ಅಧಿಕಾರವನ್ನು ಕಳೆದುಕೊಂಡಿತು. ರಾಜನೇ ಪರಮಾಧಿಕಾರವನ್ನು ಪಡೆದು ಸರ್ವಾಧಿಕಾರಿಯಾದನು. ಅಲ್ಲಿಂದ ರೋಮ್‌ನ ಅವನತಿಯನ್ನು ಕಾಣುತ್ತೇವೆ.

ಪ್ರತಿಯೊಂದು ಸಂಸ್ಕೃತಿಯು ತನ್ನ ಭಾಷೆಯ ಬೆಳವಣಿಗೆಗೆ ಕಾರಣವಾಗಿರುತ್ತದೆ. ರೋಮನ್ನರ ಆಳ್ವಿಕೆಯು ಲ್ಯಾಟಿನ್ ಭಾಷೆ ಹಾಗೂ ಸಾಹಿತ್ಯದ ಅಭಿವೃದ್ಧಿಗೆ ಕಾರಣವಾಯಿತು. ರೋಮ್ ವಿಶಿಷ್ಟ ಕಟ್ಟಡಗಳಿಗೂ ಕಾರಣವಾಗಿದೆ. ಪ್ಯಾಂಥಿಯೋನ್ ಒಂದು ದೇವಾಲಯವಾದರೆ, ಅಲ್ಲಿ ಕಾಣುವ ಕಲೋಸಿಯಮ್ ಒಂದು ರಂಗಮಂದಿರ. ರೋಮ್‌ನಲ್ಲಿ ಕಂಡುಬರುವ ಮೂರ್ತಿ ಶಿಲ್ಪಗಳು ಗ್ರೀಕರಿಂದ ಪ್ರೇರಿತವಾಗಿದ್ದು ಜೀವಂತಿಕೆಯಿಂದ ಕೂಡಿವೆ. ಯೇಸುಕ್ರಿಸ್ತನು ಬೋಧಿಸಿದ ಕ್ರೈಸ್ತ ರಿಲಿಜನ್‌ನಿಂದಾಗಿ ರೋಮ್ ಜನಪ್ರಿಯತೆಯನ್ನು ಪಡೆದಿದೆ.

©KTBS NOT TO BE REPUBLISHED

## ಅಮೆರಿಕದ ನಾಗರಿಕತೆಗಳು

ಮಾಯ, ಆಸ್ಟೆಕ್ ಮತ್ತು ಇಂಕಾ ಇವು ಅಮೆರಿಕದಲ್ಲಿನ ಪ್ರಾಚೀನ ಕೊಲಂಬಿಯಾದ ನಾಗರಿಕತೆಗಳು. ಇವು ಅಮೆರಿಕಾದಲ್ಲಿನ ಇಂಡಿಯನ್ ಮೂಲನಿವಾಸಿಗಳ ಸಂಸ್ಕೃತಿಯನ್ನು ಸೂಚಿಸುತ್ತವೆ. ಮಧ್ಯಕಾಲೀನ ಯುರೋಪಿನ ದೇಶಗಳು ಭಾರತಕ್ಕೆ ಹೊಸ ಜಲಮಾರ್ಗಗಳನ್ನು ಅನ್ವೇಷಿಸುವ ಪ್ರಯತ್ನದಲ್ಲಿ ಹೊಸ ಭೂಖಂಡಗಳನ್ನು ಪತ್ತೆ ಮಾಡಿದರು. ಹೀಗೆ ಪತ್ತೆಯಾದ ಅಮೆರಿಕ ಹಾಗೂ ಆಸ್ಟ್ರೇಲಿಯವನ್ನು ಭಾರತವೆಂದು ಪರಿಭಾವಿಸಿ ಅಲ್ಲಿನ ಜನರನ್ನು ಇಂಡಿಯನ್ನರೆಂದು ಕರೆದರು. ಹೀಗಾಗಿಯೆ ಅಮೆರಿಕದ ಮೂಲ ನಿವಾಸಿಗಳು ಹಾಗೂ ಆಸ್ಟ್ರೇಲಿಯಾದ ಮೂಲ ನಿವಾಸಿಗಳು ಇಂಡಿಯನರೆಂದೇ ಕರೆಸಿಕೊಂಡರು. ನಂತರದ ಚರಿತ್ರೆಯಲ್ಲಿ, ಪರಿಚಿತವಾದ ದೇಶಗಳಿಗೆ ಹಳೆಯ ಜಗತ್ತು ಹಾಗೂ ಹೊಸದಾಗಿ ಪತ್ತೆಯಾದ ಭೂಖಂಡಗಳಿಗೆ ಹೊಸ ಜಗತ್ತು ಎಂದು ಕರೆದರು. ಅಮೆರಿಕಾದಲ್ಲಿ ಕಾಣುವ ಪ್ರಾಚೀನ ಕೊಲಂಬಿಯಾದ ನಾಗರಿಕತೆಗಳು ಹಳೆಯ ಜಗತ್ತಿನ ನಾಗರಿಕತೆಗಳಾದ ಈಜಿಪ್ಟ್, ಮೆಸಪಟೋಮಿಯ ಹಾಗೂ ಚೀನಾದ ನಾಗರಿಕತೆಯಂತೆಯೇ ವಿಶಿಷ್ಟವಾದವು. ಈ ಹೊಸ ಜಗತ್ತಿನ ನಾಗರಿಕತೆಗಳಲ್ಲಿಯೂ ಸಂಸ್ಥಾನಗಳು, ಸಾಮ್ರಾಜ್ಯಗಳು, ಅದ್ಭುತವಾದ ಸ್ಮಾರಕಗಳು, ನಗರಗಳು ಹಾಗೂ ಕಲೆ, ಲೋಹ ತಂತ್ರಜ್ಞಾನ ಮತ್ತು ಬರವಣಿಗೆಯನ್ನು ಕಾಣುತ್ತೇವೆ.

## ಮಾಯ ನಾಗರಿಕತೆ

ಮೆಕ್ಸಿಕೊದ ಯುಕಟೆನ್ ಪ್ರದೇಶದಲ್ಲಿನ ಅಮೆರಿಕದ ಇಂಡಿಯನ್ ಮೂಲನಿವಾಸಿಗಳಿಗೆ ಮಾಯ ಎನ್ನುವರು. ಸಾಮಾನ್ಯವಾಗಿ ಅವರ ಭಾಷೆಯನ್ನು ಈಗ ಯುಕಟೆಕ್ ಎಂದು ಕರೆಯಲಾಗಿದೆ. ದೈಹಿಕವಾಗಿ ಮಾಯದ ಜನ ಗಿಡ್ಡವಾಗಿದ್ದು, ಕಂದುಬಣ್ಣ, ನೇರಕೂದಲನ್ನು ಹಾಗೂ ಬಹುತೇಕ ಗುಂಡನೆಯ ತಲೆಯನ್ನು ಹೊಂದಿದವರಾಗಿದ್ದಾರೆ. ಪ್ರಾಚೀನ ಅಮೆರಿಕದ ಇಂಡಿಯನರುಗಳಲ್ಲೆ ಅತ್ಯಂತ ಅಭಿವೃದ್ಧಿ ಹೊಂದಿದವರೆಂದರೆ ಮಾಯಗಳು. ಕಲ್ಲಿನಿಂದ ಕಟ್ಟಿದ ನಗರಗಳ ಅವಶೇಷಗಳು ಮೆಕ್ಸಿಕೊದ ಯುಕಟೆನ್, ಗ್ವಾಟೆಮಾಲ ಹಾಗೂ ಹೊಂಡುರಸ್‌ಗಳಲ್ಲಿ ದೊರೆತಿವೆ. ಇಲ್ಲಿನ ನಾಗರಿಕತೆಯು ಸುಮಾರು 1700 ವರ್ಷಗಳ ಹಿಂದೆ ಪ್ರವರ್ಧಮಾನಕ್ಕೆ ಬಂದಿತು. ಇವರ ಮೊಟ್ಟಮೊದಲ ನಗರಗಳು ಸಾ.ಶ. 320ರ ಹೊತ್ತಿಗೆ ನಿರ್ಮಾಣಗೊಂಡಿದ್ದವು. ಸಾ.ಶ. 1527 ರಿಂದ ಸಾ.ಶ. 1546 ರವರೆಗಿನ ಕೊರ್ಟೆಜ್ ನೇತೃತ್ವದಲ್ಲಿ ನಡೆದ ಸ್ಪೇನಿನವರ ಆಕ್ರಮಣದೊಂದಿಗೆ ಮಾಯ ಸಂಸ್ಕೃತಿಯ ಅಧಃಪತನವನ್ನು ಕಾಣುತ್ತೇವೆ. ಈ ದಮನಗಳ ನಡುವೆಯೂ ಬದುಕಿ ಉಳಿದ ಮಾಯ ಇಂಡಿಯನ್ನರು ಯುಕಟನಿನ ಉತ್ತರದ ವಲಯ ಹಾಗೂ ಗ್ವಾಟೆಮಾಲದಲ್ಲಿ ಇವತ್ತಿಗೂ ಇದ್ದಾರೆ.

### ಆಸ್ಟೆಕ್

ಮೆಕ್ಸಿಕೊದಲ್ಲಿನ ಟೆಕ್ಸ್‌ಕೊಕೊ (Texcoco) ಎಂಬುದು ಒಂದು ಸರೋವರ. ಆ ಸರೋವರದ ದ್ವೀಪವೊಂದರ ಮೇಲೆ ಆಸ್ಟೆಕರು ತಮ್ಮ ನಗರವನ್ನು ಕಟ್ಟಿಕೊಂಡರು. ಇವರ ಕುಲದ ಹಿರಿಯರಲ್ಲಿ ಒಬ್ಬನಾದ ಟೆನೋಚ್‌ನ ಹೆಸರಿನ ಹಿನ್ನೆಲೆಯಲ್ಲಿ ಆಸ್ಟೆಕರನ್ನು ಟೆನೋಚರೆಂದು ಕರೆಯಲಾಯಿತು. ಇವರು ನಿರ್ಮಿಸಿಕೊಂಡ ನಗರವನ್ನು ಟೆನೊಟಿಟ್‌ಲಾನ್ (ನೀರಿನಿಂದ ಉದಯಿಸುವ ಕಲ್ಲು) ಎಂದು ಕರೆಯುತ್ತಾರೆ. ಇವರ ನಗರವನ್ನು ಮೆಕ್ಸಿಕ (Mexica) ಎಂದು ಸಹ ಕರೆಯಲಾಗಿದೆ. ಅಲ್ಲಿನ ಜನರನ್ನು ಅದೇ ಹೆಸರಿನಿಂದ ಗುರುತಿಸುತ್ತಾರೆ. ಇವರ ಭಾಷೆ ನಹೂವಾ. ಇಂದಿಗೂ ಮೆಕ್ಸಿಕೊದಲ್ಲಿ ನಹೂವಾ ಭಾಷೆಯನ್ನಾಡುವವರಿದ್ದಾರೆ.

© KTBS NOT TO BE REPUBLISHED

ಪೆರುವಿನ ಇಂಕಾಗಳನ್ನು ಬಿಟ್ಟರೆ ಹೊಸಜಗತ್ತಿನಲ್ಲಿ ಆಸ್ಟೆಕರಷ್ಟು ವ್ಯಾಪಕ ಸಾಮ್ರಾಜ್ಯವನ್ನು ಮತ್ತಿನ್ಯಾರು ಹೊಂದಿರಲಿಲ್ಲ. ಒಂದೇ ಶತಮಾನದಲ್ಲಿ ಸಾಮ್ರಾಜ್ಯವೊಂದನ್ನು ಕಟ್ಟಿ ಆಳಿದ ಸಣ್ಣ ಅಲೆಮಾರಿ ಜನಾಂಗವೊಂದರ ಅದ್ಭುತ ಚರಿತ್ರೆ ಇದು. ಅಷ್ಟೇ ಶೀಘ್ರದಲ್ಲಿ ಅದು ಅವನತಿಯಾಯಿತು. ಅವರ ಈ ಕ್ಷಿಪ್ರ ಏಳಿಗೆ ಮತ್ತು ಅವನತಿಯ ಕಥೆಯು ಅವರ ಮೌಖಿಕ ಪರಂಪರೆಯಲ್ಲಿ ಹಾಗೂ ಉತ್ಖನನಗಳಲ್ಲಿ ವ್ಯಕ್ತವಾಗಿವೆ. ಮೌಖಿಕ ಪರಂಪರೆಯನ್ನು ಸ್ಪೆನಿಷ್ ಚರಿತ್ರೆಕಾರರು ಹಾಗೂ ಸಮಾಜ ವಿಜ್ಞಾನಿಗಳು ಭಾಷಾಂತರ ಮಾಡಿದ್ದಾರೆ. ಇವುಗಳನ್ನು ಇಂಡಿಯನ್ ಕೊಡೈಸಸ್ ಎಂದು ಕರೆಯಲಾಗಿದೆ.

ಸ್ಪೆನಿಷ್ ಸೈನ್ಯವು ಮೆಕ್ಸಿಕೊದ ಕಣಿವೆಗಳಿಗೆ 1519ರಲ್ಲಿ ಪ್ರವೇಶಿಸಿದಾಗ ಸರೋವರವೊಂದರ ದ್ವೀಪದಲ್ಲಿನ ಸುಂದರ ನಗರವೊಂದು ಅವರ ಕಣ್ಣಿಗೆ ಬಿದ್ದಿತು. ಆ ನಗರವೇ ಆಸ್ಟೆಕರ ರಾಜಧಾನಿಯಾಗಿದ್ದ ಟೆನೊಟಿಟ್‌ಲಾನ್. ಅಧಿಕಾರ ಹಾಗೂ ಸಂಪತ್ತಿನ ದ್ಯೋತಕವಾಗಿ ಈ ಸುಂದರ ನಗರ ಬೆಳೆದಿತ್ತು. ಸ್ಪೇನಿನವರು ಈ ನಗರಕ್ಕೆ ಕಾಲಿಟ್ಟಾಗ ಅವರಿಗೆ ಮೂರು ವಿಶಾಲವಾದ ದಾರಿಗಳು ಕಂಡವು. ಒಂದನೇ ದಾರಿಯು ಅರಮನೆಗೆ ಹೋಗುವ ಮಾರ್ಗವಾಗಿತ್ತು. ಎರಡನೆಯದು ಅಲಂಕೃತ ದೇವಾಲಯಕ್ಕೆ ಹೋಗುವ ದಾರಿಯಾಗಿತ್ತು. ಮೂರನೆಯದು ಪಿರಮಿಡ್‌ಗಳಿಗೆ ಹೋಗುವ ಮಾರ್ಗವಾಗಿತ್ತು. ಇವೆಲ್ಲವೂ ಸ್ಪೇನಿನವರ ಆಕ್ರಮಣಕ್ಕೆ ಗುರಿಯಾದವು.

**ಇಂಕಾ**

15 ಮತ್ತು 16ನೆಯ ಶತಮಾನಗಳಲ್ಲಿ ಏಳಿಗೆಯನ್ನು ಕಂಡ ಇಂಕಾ ಸಾಮ್ರಾಜ್ಯದ ವ್ಯಾಪ್ತಿ ಪೆರು, ಈಕ್ವೆಡೋರ್, ಚಿಲಿ ಹಾಗೂ ಅರ್ಜೆಂಟೈನಾ ಭಾಗಗಳವರೆಗೆ ಆವರಿಸಿತ್ತು.

ಇಂಕಾಗಳ ಪ್ರತಿಭೆಯನ್ನು ಅವರ ಕಲಾಸಕ್ತಿಗಿಂತಲೂ ಅವರ ಸಂಘಟನಾ ಸಾಮರ್ಥ್ಯದಲ್ಲಿ ಕಾಣಲು ಸಾಧ್ಯ. ಟಿಟಿಕಾಕ ಸರೋವರದ ದ್ವೀಪವೊಂದರಲ್ಲಿರುವ ಮೇಲಿನ ಅರಮನೆ ಹಾಗೂ ಚಂದ್ರನ ದೇವಾಲಯ ಇಂಕಾಜನರು ನಿರ್ಮಿಸಿದ ಎರಡು ಪ್ರಸಿದ್ಧ ಕಟ್ಟಡಗಳು.

ಮಡಿಕೆ, ಬಟ್ಟೆ ಹಾಗೂ ಲೋಹದ ಕೆಲಸದಲ್ಲಿ ಇವರು ಹೊಸ ವಿಧಾನಗಳನ್ನು ಅನುಸರಿಸಿದ್ದರು. ಚಿನ್ನದ ಆಭರಣದ ಕೆಲಸವು ಉತ್ತರ ಪೆರುವಿನ ಭಾಗಗಳಲ್ಲಿ ಹೆಚ್ಚು ಅಭಿವೃದ್ಧಿಯನ್ನು ಹೊಂದಿತ್ತು. ಎದೆಯ ಕವಚಗಳು, ದೇವಾಲಯದಲ್ಲಿನ ಸೂರ್ಯನ ಚಿತ್ರ ಹಾಗೂ ಅರಮನೆಯ ವಿವಿಧ ಬಂಗಾರದ ಆಭರಣಗಳು ಇವರ ಚಿನ್ನದ ಕೆಲಸದಲ್ಲಿನ ನೈಪುಣ್ಯಕ್ಕೆ ಸಾಕ್ಷಿಯಾಗಿವೆ.

ಸೂರ್ಯದೇವನು ಇಂಕಾಗಳ ಬಹುಮುಖ್ಯ ಆರಾಧ್ಯದೈವ. ವೀರಕೊಚನೆಂಬ ದೇವರು ಸೃಷ್ಟಿಗೆ ಕಾರಣವಾದವನೆಂದು ನಂಬಿದ್ದರು. ಸೂರ್ಯದೇವನು ವೀರಕೊಚ ಮತ್ತು ಜನಗಳ ನಡುವಿನ ಸಂಪರ್ಕವಾಗಿದ್ದನು ಎಂಬುದು ಇವರ ನಂಬಿಕೆ. ಈ ಕಾರಣಕ್ಕಾಗಿಯೆ ಎಲ್ಲ ಇಂಕಾ ಕೇಂದ್ರಗಳಲ್ಲೂ ಒಂದು ಸೂರ್ಯ ದೇವಾಲಯವಿತ್ತು. ಪ್ರಕೃತಿಯ ವಿಸ್ಮಯಗಳಾದ ಚಂದ್ರ, ತಾರೆ, ಮಿಂಚು ಹಾಗೂ ಮತ್ತಿತರ ಪ್ರಾಕೃತಿಕ ಅಂಶಗಳನ್ನು ಇವರು ಆರಾಧಿಸುತ್ತಿದ್ದರು.

NOT TO BE REPUBLISHED ©KTBS

## ಅಭ್ಯಾಸಗಳು

**I ಕೆಳಕಂಡ ವಾಕ್ಯಗಳನ್ನು ಸೂಕ್ತ ಪದಗಳಿಂದ ಪೂರ್ಣಗೊಳಿಸಿ.**

1 ಹಿರೋಗ್ಲೈಫಿಕ್ಸ್‌ನ್ನು ____________ ಎಂದು ಕರೆಯುತ್ತಾರೆ.

2 ಈಜಿಪ್ಟನ್ನು ಆಳಿದ ರಾಜರುಗಳನ್ನು ___________ ಎಂದು ಕರೆಯುತ್ತಿದ್ದರು.

3 ಗ್ರೀಕರು ಮೆಸಪಟೋಮಿಯವನ್ನು __________ ಎಂದು ಕರೆದರು.

4 ಅಮೊರೈಟರ ಸುಪ್ರಸಿದ್ಧ ದೊರೆ ___________ .

5 'ಪ್ರಿನ್ಸೆಪ್' ಎಂದರೆ _____________ .

6 ರೋಮನ್ನರ ಭಾಷೆ _____________ .

7 ಟೆಕ್ಸ್‌ಕೊಕೊ ಎಂಬುದು ಮೆಕ್ಸಿಕೋದಲ್ಲಿನ ಒಂದು ________________ .

8 ಇಂಕಾಗಳ ಆರಾಧ್ಯ ದೈವ ____________ .

**II ಹೊಂದಿಸಿ ಬರೆಯಿರಿ.**

| ಎ ಪಟ್ಟಿ | ಬಿ ಪಟ್ಟಿ |
|---|---|
| 9 ಹವಾಂಗೋ ನದಿ | ಎ ಮೆಸಪಟೋಮಿಯ |
| 10 ಕ್ಯೂನಿಫಾರ್ಮ್ | ಬಿ ಅಮೊರೈಟರ ದೊರೆ |
| 11 ಕ್ಲಿಯೋಪಾತ್ರ | ಸಿ ಶಾಂಗ್ |
| 12 ಹಮ್ಮುರಬಿ | ಡಿ ಚೀನಾ |
| 13 ಚೀನಾದ ಮನೆತನ | ಇ ಈಜಿಪ್ಟಿನ ಕಡೆಯ ರಾಣಿ |

**III ಸಂಕ್ಷಿಪ್ತವಾಗಿ ಉತ್ತರಿಸಿ.**

14 ಪ್ರಾಚೀನ ಕೊಲಂಬಿಯಾದ ನಾಗರಿಕತೆಗಳಾವುವು ?

15 'ಮಾಯ' ನ್ನರು ಯಾರು ?

16 'ಮಮ್ಮಿ'ಗಳನ್ನು ಹೇಗೆ ಸಂರಕ್ಷಿಸುತ್ತಿದ್ದರು ?

17 ಪಿರಮಿಡ್‌ಗಳ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

18 ಹವಾಂಗೋ ನದಿಯು 'ಚೀನಾದ ದುಗುಡ' ಹೇಗೆ?

**IV ಚಟುವಟಿಕೆಗಳು.**

19 ಉಪಾಧ್ಯಾಯರ ಸಹಾಯದಿಂದ ಗ್ರೀಕ್ ತತ್ವಜ್ಞಾನಿಗಳ ಚರಿತ್ರೆಯನ್ನು ತಿಳಿಯಿರಿ.

20 ಷೇಕ್ಸ್‌ಪಿಯರ್ ಬರೆದಿರುವ ಜೂಲಿಯಸ್ ಸೀಸರ್ ನಾಟಕವನ್ನು ನೋಡಿ ಮತ್ತು ಓದಿರಿ.

21 ನೈಲ್ ನದಿಯ ಬಗ್ಗೆ ವಿಷಯ ಸಂಗ್ರಹಿಸಿ.

✲✲✲

@KTBS NOT TO BE REPUBLISHED

# ಅಧ್ಯಾಯ–5

# ಸನಾತನ ಧರ್ಮ

T4B6P9

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಸನಾತನ ಧರ್ಮದ ಅರ್ಥ ಮತ್ತು ವ್ಯಾಪ್ತಿಯನ್ನು ತಿಳಿಯುವುದು.
- ಭಾರತೀಯ ಸಾಂಸ್ಕೃತಿಕ ಹಿರಿಮೆಯನ್ನು ತಿಳಿಯುವುದು.
- ಭಾರತೀಯ ಸಂಸ್ಕೃತಿಯಲ್ಲಿನ ವೈವಿಧ್ಯತೆಗೆ ಕಾರಣಗಳು.
- ವೈವಿಧ್ಯತೆಯಲ್ಲಿ ಏಕತೆಯನ್ನು ಬೆಳೆಸುವುದು.

ಸರ್ವೇ ಭವನ್ತು ಸುಖಿನಃ
ಸರ್ವೇ ಸನ್ತು ನಿರಾಮಯಾಃ
ಸರ್ವೇ ಭದ್ರಾಣಿ ಪಶ್ಯನ್ತು
ಮಾ ಕಶ್ಚಿತ್ ದುಃಖಭಾಗ್ ಭವೇತ್
ಓಂ ಶಾಂತಿಃ ಶಾಂತಿಃ ಶಾಂತಿಃ ॥

ಈ ಶ್ಲೋಕವನ್ನು ಕೇಳಿಯೇ ಇರುತ್ತೀರಿ. ಇದರ ಅರ್ಥವೇನು? "ಎಲ್ಲರೂ ಸುಖಿಗಳಾಗಿರಲಿ. ಎಲ್ಲರೂ ರೋಗಾದಿ ಚಿಂತೆಗಳಿಂದ ಮುಕ್ತರಾಗಿರಲಿ. ಎಲ್ಲರೂ ಶುಭವನ್ನೇ ಕಾಣುವಂತಾಗಲಿ. ಯಾರೂ ದುಃಖಿತರಾಗದೆ ಇರಲಿ. ಜಗತ್ತಿನ ಸರ್ವ ಜೀವರಾಶಿಗಳಿಗೂ ಎಂದೆಂದೂ ಸದಾ ಸುಖ, ಶಾಂತಿ, ನೆಮ್ಮದಿಗಳೇ ಇರಲಿ" ಎಂಬುದೇ ಈ ಶ್ಲೋಕದ ಅರ್ಥ. ಇಂಥ ಲೋಕೋತ್ತರವಾದ ಅದ್ಭುತ ಚಿಂತನೆಯೇ ಸನಾತನ ಧರ್ಮದ ಜೀವಾಳ. ಸನಾತನ ಎಂದರೆ ಅತಿ ಪ್ರಾಚೀನ, ಹಾಗೆಯೇ ನಿತ್ಯನೂತನ ಎಂಬ ಅರ್ಥವಿದೆ. ಅಂದರೆ ಚಿರಂತನ, ಶಾಶ್ವತ ಎಂದು ಅರ್ಥ. ಸನಾತನ ಧರ್ಮವು ಭಾರತದಲ್ಲಿ ಹುಟ್ಟಿಬೆಳೆಯಿತು. ಇಂದು ಅದನ್ನೇ ಹಿಂದೂ ಧರ್ಮ ಎಂದು ಕರೆಯುತ್ತೇವೆ.

## ವೇದದ ಅರ್ಥ

"ಭದ್ರಂ ಪಶ್ಯೇಮ" (ಮಂಗಳವಾದುದನ್ನೇ ಕಾಣೋಣ), "ಮಾ ವಿದ್ವಿಷಾವಹೈ" (ಯಾರನ್ನೂ ದ್ವೇಷ ಮಾಡದೆ ಇರುವಂತಾಗಲಿ) – ಇವೇ ಮೊದಲಾದವನ್ನು ಶಾಂತಿಮಂತ್ರ ಎನ್ನುತ್ತೇವೆ. ಇವು ಉಪನಿಷತ್ತುಗಳಲ್ಲಿ ಕಾಣಿಸಿಕೊಂಡಿವೆ. ಉಪನಿಷತ್ತು ಎಂಬುದು ವೇದಸಾಹಿತ್ಯದ ಒಂದು ಭಾಗ. ವೇದ ಎಂದರೇನು ಎಂಬುದನ್ನು ಈಗ ತಿಳಿಯೋಣ. ವೇದ ಎಂಬ ಶಬ್ದವು "ವಿದ್" ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ವಿದ್ ಎಂದರೆ ಜ್ಞಾನ ಎಂದರ್ಥ. ವಿದ್ಯೆ, ವಿದ್ವಾಂಸ, ವಿದ್ಯಾರ್ಥಿ ಮೊದಲಾದ ಶಬ್ದಗಳು "ವಿದ್" ಧಾತುವಿನಿಂದಲೇ ಹುಟ್ಟಿವೆ.

ವೇದಗಳನ್ನು "ಅಪೌರುಷೇಯ" ಎಂದು ವರ್ಣಿಸುತ್ತಾರೆ. ಅಂದರೆ ವೇದಸಾಹಿತ್ಯವನ್ನು ಯಾರೂ ಬರೆದಿಡಲಿಲ್ಲ ಅಥವಾ ರಚಿಸಲಿಲ್ಲ. ಬದಲಿಗೆ ಅದು ಋಷಿಮುನಿಗಳಿಗೆ ತಪಸ್ಸಿನ ಫಲವಾಗಿ ಸಿದ್ಧಿಸಿದ ಮಂತ್ರಗಳು. ಅವರ ಅಪಾರವಾದ ಜ್ಞಾನಾನುಭವಗಳ ಅಪೂರ್ವ ಫಲಗಳು. ಹಾಗಾಗಿಯೇ ಅವು ಒಂದಿಡೀ ಸಮುದಾಯದ ಸಮಗ್ರ ಜ್ಞಾನ–ಅನುಭವಗಳ ಸಂಗ್ರಹರೂಪ. ಹೇಗೆ ಮಾನವಕುಲವು

© KTBS NOT TO BE REPUBLISHED

ಕಳೆದ ಹಲವು ಸಹಸ್ರ ವರ್ಷಗಳಲ್ಲಿ ಗಳಿಸಿಕೊಂಡ ಜ್ಞಾನವನ್ನು ಒಬ್ಬ ವ್ಯಕ್ತಿಗೆ ಸೀಮಿತಗೊಳಿಸಿ ಹೇಳಲು ಸಾಧ್ಯವಿಲ್ಲವೋ ಹಾಗೆಯೇ ವೇದಜ್ಞಾನವೂ ಕೂಡ ಒಬ್ಬಿಬ್ಬರು ವ್ಯಕ್ತಿಗಳ ಪ್ರಯತ್ನದ ಫಲವಲ್ಲ; ಇಡೀ ಒಂದು ಸಮುದಾಯವು ಪಡೆದ ಜ್ಞಾನದ ಸಂಚಿತರೂಪವಾಗಿದೆ.

## ವೇದಸಾಹಿತ್ಯದ ವಿಂಗಡಣೆ

ವೇದಗಳು ಸನಾತನ ಧರ್ಮಕ್ಕೆ ಬೇಕಾದ ಮೂಲಭೂತ ತಳಪಾಯವನ್ನು ಹಾಕಿಕೊಟ್ಟವು. ಶ್ರುತಿ ಎಂದೂ ಕರೆಯಲ್ಪಡುವ ಇದು ಜಗತ್ತಿನ ಅತಿ ಪ್ರಾಚೀನ ಲಭ್ಯ ಸಾಹಿತ್ಯವಾಗಿದೆ. ಭಾರತದ ಧಾರ್ಮಿಕ ಸಾಹಿತ್ಯದ ಪ್ರಾರಂಭವನ್ನು ಸೂಚಿಸುವ ವೇದಸಾಹಿತ್ಯವು ಸುಮಾರು 5000 ವರ್ಷಗಳಷ್ಟು ಹಿಂದೆ ರಚನೆಯಾಯಿತು. ವೇದಗಳು ಸಾವಿರಾರು ಋಷಿಗಳ ದರ್ಶನದ ಫಲವಾಗಿ ಹೊಮ್ಮಿವೆ. ಋಷಿಗಳು ತಮ್ಮ ಆರಾಧ್ಯ ದೇವತೆಗಳನ್ನು ಸ್ತುತಿಸಿ ತಮ್ಮ ಅಪೇಕ್ಷೆಗಳನ್ನು ನಿವೇದಿಸಿಕೊಳ್ಳಲು ಕಂಡರಿಸಿದ ಮಂತ್ರಗಳು ಋಕ್ಕುಗಳು. ಋಕ್ಕುಗಳ ಸಮೂಹವೇ ಸೂಕ್ತಗಳು. ಋಷಿಯ ಸಂತತಿಯವರು, ಶಿಷ್ಯವರ್ಗದವರು ದೇವತೆಗಳ ಬಗ್ಗೆ ರಚಿಸಿದ ಸೂಕ್ತಗಳ ಸಮೂಹವೇ ಮಂಡಲ. ಹಲವು ಋಷಿಗಳ ಗುಂಪಿನವರಿಂದ ರಚಿತವಾದ ಒಟ್ಟುಗೂಡಿದ ಮಂಡಲಗಳು "ಸಂಹಿತೆ".

ಆ ಕಾಲದಲ್ಲಿ ಲಭ್ಯವಿದ್ದ ಅಪಾರವಾದ ವೇದರಾಶಿಯನ್ನು ಮಾನವನ ಆಯಸ್ಸಿನ ಮಿತಿಯಲ್ಲಿ ಪೂರ್ಣವಾಗಿ ಅಧ್ಯಯನ ಮಾಡಲು ಮತ್ತು ಶಿಷ್ಯರಿಗೆ ಕಲಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ಕೃಷ್ಣದ್ವೈಪಾಯನರೆಂಬ ಋಷಿಗಳು ಅಗಾಧ ವೇದಮಂತ್ರ ಸಮೂಹವನ್ನು ವಿಭಜನೆ (ಅಂದರೆ ವ್ಯಾಸ) ಮಾಡಿ ವೇದವ್ಯಾಸರೆನಿಸಿಕೊಂಡರು. ಈ ವಿಭಜನೆಯಿಂದಾಗಿ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದವೆಂದು ನಾಲ್ಕು ವೇದಗಳು ರೂಪುಗೊಂಡವು. ಇವನ್ನು ಕ್ರಮವಾಗಿ ವೇದವ್ಯಾಸರು ತಮ್ಮ ಶಿಷ್ಯರಾದ ಪೈಲ, ವೈಶಂಪಾಯನ, ಜೈಮಿನಿ ಹಾಗೂ ಸುಮಂತ ಎಂಬ ಋಷಿಗಳಿಗೆ ಉಪದೇಶಿಸಿದರು. ಕಾಲಾಂತರದಲ್ಲಿ ಇವು ಸ್ವತಂತ್ರ ವೇದಶಾಖೆಗಳೇ ಆಗಿ ಬೆಳೆದವು. ಹಾಗಿದ್ದರೂ ಎಲ್ಲ ವೇದಗಳ ನಡುವೆ ಅಂತಃಸಂಬಂಧವಿದೆಯೇ ಹೊರತು ಪರಸ್ಪರ ವಿರೋಧಾಭಾಸಗಳಿಲ್ಲ. ದೇವತೆಗಳನ್ನು ಸ್ತುತಿಸುತ್ತ ನಡೆಸುವ ಯಜ್ಞಕಾರ್ಯದಲ್ಲಿ ನಾಲ್ಕೂ ವೇದಗಳ ಪಾರಂಗತರು ಭಾಗಿಯಾಗುತ್ತಾರೆ.

NOT TO BE REPUBLISHED ©KTBS

## ವೇದಗಳ ಸ್ವರೂಪ

ವೇದಗಳನ್ನು ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕಗಳು ಹಾಗೂ ಉಪನಿಷತ್ತುಗಳೆಂದು ನಾಲ್ಕು ಸ್ಕಂಧಗಳಾಗಿ ವಿಭಾಗಿಸಿದ್ದಾರೆ. ಒಂದೊಂದು ವೇದಕ್ಕೂ ತನ್ನದೇ ಆದ ಸಂಹಿತೆ, ಬ್ರಾಹ್ಮಣ, ಆರಣ್ಯಕ ಹಾಗೂ ಉಪನಿಷತ್ತುಗಳಿವೆ.

**ಸಂಹಿತೆ:** ವಿವಿಧ ದೇವತೆಗಳ ಸ್ತೋತ್ರಗಳನ್ನು ಒಳಗೊಂಡಿದೆ. ಇವು ದೇವತೆಗಳನ್ನು ಪ್ರಾರ್ಥಿಸುವ ಹಾಗೂ ಯಜ್ಞಕರ್ಮದ ಮೂಲಕ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುವ ಸ್ತೋತ್ರಗಳು.

**ಬ್ರಾಹ್ಮಣ:** ಯಜ್ಞ ಆಚರಣೆಯ ಕ್ರಮಗಳನ್ನು ತಿಳಿಸುವ ವೇದಭಾಗ.

**ಆರಣ್ಯಕ:** ಸ್ತೋತ್ರಗಳ ಮತ್ತು ಯಜ್ಞಗಳ ಅಂತರರ್ಥಗಳನ್ನು ವಿಶದಪಡಿಸುವ ಭಾಗ.

**ಉಪನಿಷತ್ತು:** ತತ್ತ್ವಜ್ಞಾನದ ಮೂಲಕ ಪರಮಾತ್ಮನ ಸಾಕ್ಷಾತ್ಕಾರದ ವಿಧಾನಗಳನ್ನು ಚಿಂತನೆ ನಡೆಸುವ ಭಾಗ.

ಋಗ್ವೇದ ಸಂಹಿತೆಯಲ್ಲಿ 1028 ಸೂಕ್ತಗಳಿವೆ. 10,552 ಮಂತ್ರಗಳಿವೆ. ಈ ಮಂತ್ರಗಳೆಲ್ಲ ಛಂದೋಬದ್ಧವಾಗಿ ಗಾಯತ್ರೀ, ಉಷ್ಣಿಕ್, ಪುರ ಉಷ್ಣಿಕ್, ಕಕುಪ್, ಅನುಷ್ಟುಪ್, ಬೃಹತೀ ಮುಂತಾದ ಹಲವು ಛಂದಸ್ಸುಗಳಲ್ಲಿವೆ. ಸೂಕ್ತಗಳನ್ನು 85 ಅನುವಾಕಗಳು ಹಾಗೂ 10 ಮಂಡಲಗಳು ಎಂದು ವಿಭಾಗಿಸಲಾಗಿದೆ. ವೇದಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವವರು ಋಗ್ವೇದ ಸಾಹಿತ್ಯವನ್ನು 8 ಅಷ್ಟಕಗಳು, 64 ಪ್ರಪಾಠಕಗಳು, 2024 ವರ್ಗಗಳು ಹಾಗೂ 10,552 ಮಂತ್ರಗಳು ಎಂದೂ ವಿಭಾಗ ಮಾಡಿಕೊಳ್ಳುತ್ತಾರೆ.

## ಆಸ್ತಿಕ ಮತ್ತು ನಾಸ್ತಿಕ ಪಂಥಗಳು

ಸನಾತನ ಧರ್ಮದ ಒಟ್ಟು ಸಾಹಿತ್ಯವನ್ನು ವೈದಿಕ, ಅವೈದಿಕ ಎಂದು ಎರಡು ಭಾಗ ಮಾಡಬಹುದು. ವೇದಮೂಲದ ಸಾಹಿತ್ಯ ಮಾತ್ರವೇ ವೈದಿಕ. ಉಳಿದೆಲ್ಲವೂ ಅವೈದಿಕ. ನಂತರದ ವಿಂಗಡಣೆ: ಆಸ್ತಿಕ ಮತ್ತು ನಾಸ್ತಿಕ ಪಂಥಗಳು. ವೈದಿಕ ಶಾಖೆ ಹಾಗೂ ಉಪಶಾಖೆಗಳಲ್ಲಿರುವ ಎಲ್ಲ ಸಾಹಿತ್ಯವೂ ಆಸ್ತಿಕ. ಅವೈದಿಕ ಶಾಖೆಯಲ್ಲಿ ಆಸ್ತಿಕ ಮತ್ತು ನಾಸ್ತಿಕ ಎರಡೂ ಬಗೆಗಳಿವೆ. ಬಹಳಷ್ಟು ಜನ ತಿಳಿದಿರುವಂತೆ ಆಸ್ತಿಕ ಮತ್ತು ನಾಸ್ತಿಕ ಪಂಥಗಳ ವಿಭಾಗಕ್ಕೆ, ದೇವರ ಇರುವಿಕೆಯನ್ನು ಒಪ್ಪುವುದು ಅಥವಾ ಒಪ್ಪದಿರುವುದು ಕಾರಣವಲ್ಲ. ಅರ್ಥಾತ್ – ದೇವರನ್ನು ಒಪ್ಪುವವರು ಆಸ್ತಿಕರು, ಒಪ್ಪದವರು ನಾಸ್ತಿಕರು ಎಂಬುದು ತಪ್ಪು ಪರಿಕಲ್ಪನೆಯಾಗಿದೆ.

## ಸ್ಮೃತಿಸಾಹಿತ್ಯದ ಮೂರು ವಿಭಾಗಗಳು

© KTBS
NOT TO BE REPUBLISHED

ವೈದಿಕ ಆಸ್ತಿಕ ಶಾಖೆಯ ಮೊದಲ ಕವಲು ಶ್ರುತಿ. ಋಗ್ವೇದದಿಂದ ಅಥರ್ವವೇದದವರೆಗಿನ ಸಾಹಿತ್ಯವನ್ನು ಒಟ್ಟಾಗಿ ಶ್ರುತಿ ಎನ್ನುವುದು ವಾಡಿಕೆ. ವೈದಿಕ ಆಸ್ತಿಕ ಶಾಖೆಯ ಎರಡನೆಯ ಕವಲು ಸ್ಮೃತಿ ಸಾಹಿತ್ಯ. ಶ್ರುತಿಗೆ ಪೂರಕವಾಗಿ ಬರುವ ವೈದಿಕ ಸಾಹಿತ್ಯವೆಲ್ಲವನ್ನೂ ಸಾಮೂಹಿಕವಾಗಿ ಸ್ಮೃತಿಸಾಹಿತ್ಯ ಎನ್ನುತ್ತಾರೆ. ಕಿವಿಯಿಂದ ಕೇಳಿಸಿಕೊಂಡದ್ದು "ಶ್ರುತಿ"ಯಾದರೆ ಜ್ಞಾಪಿಸಿಕೊಂಡದ್ದು "ಸ್ಮೃತಿ" ಆಯಿತು. ಸ್ಮೃತಿ ಸಾಹಿತ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು – ವೇದಾಂಗಗಳು, ಧರ್ಮಶಾಸ್ತ್ರ ಗ್ರಂಥಗಳೂ ಸೇರಿದಂತೆ, ವೇದಗಳ ಅರ್ಥವನ್ನು ತಿಳಿಯಲು ಅನುಸರಿಸಬೇಕಾದ ವಿಷಯಗಳನ್ನು, ನಿಯಮಗಳನ್ನು ತಿಳಿಸುವ ಗ್ರಂಥಗಳ ಸಮೂಹ ವೇದಾಂಗ. ಇದರಲ್ಲಿನ ಮುಖ್ಯ ಭಾಗಗಳು – ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪ (ಇವಿಷ್ಟು ಸಂಗತಿಗಳ ಜ್ಞಾನ ಮತ್ತು ಹಿನ್ನೆಲೆ ಇಲ್ಲದೆ ವೇದಗಳನ್ನು ಅಧ್ಯಯನ ಮಾಡುವುದು ಅಸಾಧ್ಯ. ಯಾವೊಂದು ಹಿನ್ನೆಲೆಯೂ ಇಲ್ಲದೆ ವೇದಾಧ್ಯಯನಕ್ಕೆ ತೊಡಗಿದರೆ ಅಲ್ಲಿನ ಮಂತ್ರಗಳನ್ನು ತಪ್ಪುತಪ್ಪಾಗಿ ಗ್ರಹಿಸುವ, ಅರ್ಥೈಸುವ ಅಪಾಯವಿದೆ). ಧರ್ಮಶಾಸ್ತ್ರವು ವ್ಯಕ್ತಿಯ ಧಾರ್ಮಿಕ ಬದುಕಿಗೆ ಮತ್ತು ಸುಸಂಸ್ಕೃತ ಸಮಾಜ ವ್ಯವಸ್ಥೆಗೆ ಅಗತ್ಯವಾದ ನಿಯಮಗಳನ್ನು ತಿಳಿಸುತ್ತದೆ. ಮನುಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ, ಪರಾಶರ ಸ್ಮೃತಿ ಮುಂತಾದ ಹಲವು ಗ್ರಂಥಗಳಲ್ಲಿ ಸಮಾಜವು ಧರ್ಮಮಾರ್ಗದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಸೂಚನೆಗಳಿವೆ.

ಸ್ಮೃತಿ ಸಾಹಿತ್ಯದ ಎರಡನೆ ಭಾಗ ಇತಿಹಾಸ ಗ್ರಂಥಗಳೆನಿಸುವ ರಾಮಾಯಣ, ಮಹಾಭಾರತ; ಹದಿನೆಂಟು ಪುರಾಣಗಳು ಹಾಗೂ ಅಷ್ಟೇ ಸಂಖ್ಯೆಯ ಉಪಪುರಾಣಗಳು. ಅಂತೆಯೇ ಪೌರಾಣಿಕ ಉಪನಿಷತ್ತುಗಳು ಹಾಗೂ ಪೌರಾಣಿಕ ಗೀತೆಗಳು ಈ ಭಾಗದಲ್ಲಿ ಬರುತ್ತವೆ. ಸ್ಮೃತಿಸಾಹಿತ್ಯದ ಮೂರನೆಯ ವಿಭಾಗ – ಭಾರತೀಯ ತತ್ತ್ವಶಾಸ್ತ್ರದ ಆಧಾರಸ್ತಂಭಗಳೆನಿಸಿದ ಷಡ್ದರ್ಶನಗಳು. ಇವು: ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸಾ ಹಾಗೂ ಉತ್ತರಮೀಮಾಂಸಾ.

## ಮತಗಳು ಹಾಗೂ ಮತಾಚಾರ್ಯರು

ಉತ್ತರಮೀಮಾಂಸೆ ಅಥವಾ ವೇದಾಂತದಲ್ಲಿರುವ ಮೂರು ಮುಖ್ಯ ಕವಲುಗಳು ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ. ಇವುಗಳ ಸ್ಥಾಪಕರು ಕ್ರಮವಾಗಿ ಶಂಕರಾಚಾರ್ಯರು, ರಾಮಾನುಜಾಚಾರ್ಯರು ಮತ್ತು ಮಧ್ವಾಚಾರ್ಯರು. ಈ ಮೂರು ಮತಗಳನ್ನು ಅನುಸರಿಸಿ ಶುದ್ಧಾದ್ವೈತ, ಭೇದಾಭೇದ, ಅಚಿಂತ್ಯಭೇದಾಭೇದ ಇತ್ಯಾದಿ ಸಿದ್ಧಾಂತಗಳೂ ಬಂದವು. ಇವುಗಳ ಪೈಕಿ ಶಕ್ತಿವಿಶಿಷ್ಟಾದ್ವೈತವು ಶಿವಪರವಾದುದು. ಇದರ ಪರಂಪರೆಯಲ್ಲಿ ಬಂದ ಕಾಶ್ಮೀರ ಶೈವದರ್ಶನ, ಶೈವಸಿದ್ಧಾಂತ, ವೀರಶೈವ ಮತಗಳು ಮುಖ್ಯವಾದವು. ಶೈವಪಂಥದಲ್ಲಿರುವ ಇತರ ಪಂಗಡಗಳೆಂದರೆ ಪಾಶುಪತ, ಕಾಳಾಮುಖ, ಕಾಪಾಲಿಕ, ಮಾಹೇಶ್ವರ ಲಾಕುಲಿಸ ಮುಂತಾದವು.

## ಜೈನ ಹಾಗೂ ಬೌದ್ಧ ಮತಗಳು

"ದೇವರನ್ನು ನಂಬುವವರು ಆಸ್ತಿಕರು, ನಂಬದವರು ನಾಸ್ತಿಕರು" ಎಂದು ಸಾಮಾನ್ಯ ಜನರ ಗ್ರಹಿಕೆ. ಆದರೆ ಆಸ್ತಿಕ ಎಂಬುದಕ್ಕೂ ದೇವರಲ್ಲಿ ನಂಬಿಕೆ ಇಟ್ಟಿರುವುದಕ್ಕೂ ಯಾವುದೇ ಸಂಬಂಧವಿಲ್ಲ. ವಾಸ್ತವದಲ್ಲಿ "ಒಬ್ಬ / ಒಬ್ಬಳು ದೇವರನ್ನು ನಂಬುವುದು" ಎಂಬುದೇ ಸನಾತನಧರ್ಮಕ್ಕೆ ಹೊರತಾದ ಪರಿಕಲ್ಪನೆ. ಇದು ಭಾರತದಲ್ಲಿ ಸೆಮೆಟಿಕ್ ರಿಲಿಜನ್‌ಗಳ ಪ್ರವೇಶವಾದ ನಂತರ ಹುಟ್ಟಿಬೆಳೆದ ಪರಿಕಲ್ಪನೆಯಾಗಿದೆ. ಎಲ್ಲವೂ ದೈವವೇ, ದೇವರಲ್ಲದ್ದು ಯಾವುದೂ ಇಲ್ಲ ಎಂಬುದು ನಮ್ಮ ಅರಿವು. ಭಾರತೀಯ ಸನಾತನಧರ್ಮದ ಪರಂಪರೆಯಲ್ಲಿ ಆಸ್ತಿಕ ಮತ್ತು ನಾಸ್ತಿಕ ಎಂಬ ಶಬ್ದಗಳಿಗೆ ಬೇರೆಯೇ ಆದ ಅರ್ಥಗಳಿವೆ. ವೇದಪ್ರಾಮಾಣ್ಯ, ಕರ್ಮಫಲ ಮತ್ತು ಪುನರ್ಜನ್ಮಗಳಲ್ಲಿ ನಂಬಿಕೆ – ಈ ಮೂರನ್ನು ಒಪ್ಪಿರುವ ಎಲ್ಲರೂ ಆಸ್ತಿಕರು; ಈ ಮೂರನ್ನು ಒಪ್ಪಿರುವ ಎಲ್ಲ ಸಾಹಿತ್ಯವೂ ಆಸ್ತಿಕವೇ. ಹಾಗಾಗಿ ಈ ಮೂರನ್ನು ಒಪ್ಪಿಕೊಂಡಿರುವ ಆದರೆ ದೇವರ ಇರುವಿಕೆಯ ಅಗತ್ಯವೇ ಇಲ್ಲದೆ ಬೆಳೆದುಬಂದ ಸಾಂಖ್ಯ ಮತ್ತು ಪೂರ್ವಮೀಮಾಂಸಾ ದರ್ಶನಗಳು ಆಸ್ತಿಕ ಸಾಹಿತ್ಯ ಎಂದೇ ಕರೆಯಲ್ಪಡುತ್ತವೆ. ಕರ್ಮಫಲ ಮತ್ತು ಪುನರ್ಜನ್ಮಗಳಲ್ಲಿ ನಂಬಿಕೆ ಇಟ್ಟಿರುವ ಜೈನ, ಬೌದ್ಧ ಮತಗಳು ವೇದಪ್ರಮಾಣದ ನಿರಾಕರಣೆಯಿಂದಾಗಿ ನಾಸ್ತಿಕ ದರ್ಶನಗಳಾಗಿವೆ. ಜೈನ ಮತ್ತು ಬೌದ್ಧ ದರ್ಶನಗಳು ಪಾಪ, ಪುಣ್ಯ, ಮೋಕ್ಷ ಇತ್ಯಾದಿ ವೈದಿಕ ಪರಿಕಲ್ಪನೆಗಳನ್ನು ನಿರಾಕರಿಸುವುದಿಲ್ಲ. ಆದರೆ ಈ ಎರಡೂ ಮತಗಳಲ್ಲಿ ವೇದಪ್ರಾಮಾಣ್ಯ, ವೈದಿಕ ಯಜ್ಞಕರ್ಮಗಳು ಹಾಗೂ ಸೃಷ್ಟಿಕರ್ತನಾದ ಬ್ರಹ್ಮನ ನಿರಾಕರಣೆ ಇದೆ. ಬೌದ್ಧ ಮತವು ಚಿರಸ್ಥಿರವಾದ ಆತ್ಮವನ್ನು ನಿರಾಕರಿಸಿದರೆ ಜೈನ ಮತವು ಆತ್ಮವನ್ನು ನಂಬುತ್ತದೆ. ಆನಂದದ ನೆಲೆಯಾಗಿ ಆತ್ಮವನ್ನು ಕಾಣುವುದೇ ಸನಾತನಧರ್ಮದ ಬುನಾದಿಯಾಗಿದೆ.

## ವಿಗ್ರಹಾರಾಧನೆಯ ಪ್ರಾರಂಭ

ವೇದಗಳಲ್ಲಿ ಬ್ರಹ್ಮವನ್ನು ಸಗುಣ ಮತ್ತು ನಿರ್ಗುಣ ಎಂದು ಇಬ್ಬಗೆಯಾಗಿ ಗಣಿಸಿದೆ. ನಾಮ (ಹೆಸರು), ರೂಪ (ಆಕೃತಿ) – ಇವುಗಳನ್ನು ಹೊಂದಿರುವುದು ಸಗುಣ. ಅವನ್ನು ಮೀರಿದ್ದು ನಿರ್ಗುಣ. ಹೆಸರು ಮತ್ತು ಆಕೃತಿಗಳನ್ನು ಹೊತ್ತ ದೇವತೆಗಳ ಆರಾಧನೆ ವೇದಗಳಲ್ಲಿಯೇ ಕಂಡುಬರುತ್ತದೆ. ವೇದಗಳನ್ನು ಒಪ್ಪಿಕೊಂಡು ಆಸ್ತಿಕ ಶಾಖೆಯಾಗಿ ಬೆಳೆದುಬಂದ ಆಗಮ ಸಾಹಿತ್ಯವು ದೇವರ ವಿಗ್ರಹಾರಾಧನೆಗೆ ಹೆಚ್ಚಿನ ಅವಕಾಶ ಕಲ್ಪಿಸಿತು. ವೈಷ್ಣವ, ಶೈವ ಹಾಗೂ ಶಾಕ್ತ – ಇವು ಮೂರು ಪ್ರಮುಖ ಆಗಮಶಾಖೆಗಳು.

NOT TO BE REPUBLISHED ©KTBS

ಆಚರಣೆಯಲ್ಲಿ ವೇದಪ್ರಾಮಾಣ್ಯ, ಕರ್ಮಫಲ ಹಾಗೂ ಪುನರ್ಜನ್ಮಗಳನ್ನು ಒಪ್ಪಿಕೊಂಡಿದ್ದರಿಂದ ಈ ಮೂರೂ ಆಸ್ತಿಕ ಪಂಥಗಳೆಂದೇ ಪರಿಗಣಿಸಲ್ಪಡುತ್ತವೆ. ಶೈವ ಮತ್ತು ವೈಷ್ಣವ ಆಗಮಗಳಿಂದಾಗಿ ಮುಂದೆ ಪೂಜಾವಿಧಾನ, ವಿಗ್ರಹ ವರ್ಣನೆ, ದೇವಸ್ಥಾನದ ವಾಸ್ತುವಿನ್ಯಾಸ ಇತ್ಯಾದಿ ಸಂಗತಿಗಳು ಬೆಳೆದವು. ಹಾಗೆಯೇ ಶಾಕ್ತಾಗಮವು ಮುಂದೆ ತಂತ್ರ ಎಂಬ ವಿಸ್ತಾರವಾದ ಕ್ಷೇತ್ರಕ್ಕೆ ಮುನ್ನುಡಿ ಬರೆಯಿತು. ಈ ಮೂರು ಆಗಮಗಳು ಸನಾತನ ಧರ್ಮದಲ್ಲಿ ಬೆಳೆದುಬಂದ ದೇವಸ್ಥಾನಗಳ ರಚನೆ, ಪೂಜಾಪದ್ಧತಿ, ಹಬ್ಬಗಳ ಆಚರಣೆ, ಸಂಪ್ರದಾಯ–ಆಚರಣೆ ಮುಂತಾದ ಹಲವು ಸಂಗತಿಗಳಿಗೆ ಕಾರಣೀಭೂತವಾದವು.

## ಐಕ್ಯ ಇದ್ದರೂ ವೈವಿಧ್ಯಮಯ ಧರ್ಮ

ಇಂಥ ವಿಶಾಲವಾದ ತಳಹದಿಯಿಂದಾಗಿ ಸನಾತನ ಧರ್ಮವು ಭಾರತದಲ್ಲಿ ಮೂರ್ನಾಲ್ಕು ಸಹಸ್ರ ವರ್ಷಗಳಲ್ಲಿ ಸಮೃದ್ಧವಾಗಿ ಅರಳಿನಿಂತಿತು. ಮೇಲೆ ವಿವರಿಸಿದ ಅಂಶಗಳಿಂದಾಗಿ ಸನಾತನ ಧರ್ಮ ಮತ್ತು ಪಾಶ್ಚಾತ್ಯ ರಿಲಿಜನ್‌ಗಳ (ರಿಲಿಜನ್‌ಗಳ ಕುರಿತು ಮುಂದಿನ ಅಧ್ಯಾಯಗಳಲ್ಲಿ ವಿವರಿಸಿದೆ) ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರುತಿಸಬಹುದು. ರಿಲಿಜನ್‌ಗಳ ಅನುಯಾಯಿಗಳು ಒಬ್ಬರು ದೇವದೂತ (ಪ್ರವಾದಿ), ಒಂದು ದೇವರು, ಒಂದು ಧರ್ಮಗ್ರಂಥ – ಇವಿಷ್ಟನ್ನು ನಂಬಬೇಕು ಹಾಗೂ ದೇವದೂತನ ಮೂಲಕ ದೇವರು ವಿಧಿಸಿದ ನಿರ್ದಿಷ್ಟವಾದ ಕಟ್ಟಳೆಗಳನ್ನು ಅನುಸರಿಸಬೇಕು. ಆದರೆ ಸನಾತನ ಧರ್ಮದಲ್ಲಿ ದೇವದೂತ, ಏಕ ದೇವ, ಏಕ ಗ್ರಂಥ ಹಾಗೂ ನಿರ್ದಿಷ್ಟ ಕಟ್ಟಳೆ – ಈ ಪರಿಕಲ್ಪನೆ ಇಲ್ಲ. ಸನಾತನ ಧರ್ಮದಲ್ಲಿ ಪೂಜಿಸಲ್ಪಡುವ ಹಲವು ದೇವರುಗಳು ವಿಶ್ವನಿಯಾಮಕನಾದ ಪರಬ್ರಹ್ಮನ ಅಂಶಗಳು ಮಾತ್ರವೇ. ಸನಾತನ ಧರ್ಮದಲ್ಲಿ ವೈದಿಕ ಹಾಗೂ ಅವೈದಿಕ – ಎರಡೂ ಬಗೆಯ ಸಾಹಿತ್ಯ ಮತ್ತು ಸಂಪ್ರದಾಯಗಳಿಗೆ ಅವಕಾಶವಿದೆ. ಹಾಗೆಯೇ ಆಸ್ತಿಕ ಮತ್ತು ನಾಸ್ತಿಕ – ಈ ಎರಡೂ ಪಂಥಗಳಿಗೆ ಅವಕಾಶವಿದೆ. “ಆ ನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ”, ಎಂದರೆ “ವಿಶ್ವದ ಎಲ್ಲ ಕಡೆಗಳಿಂದಲೂ ಒಳ್ಳೆಯ ಸಂಗತಿಗಳು ನಮ್ಮೆಡೆಗೆ ಹರಿದುಬರಲಿ” ಎಂಬುದೇ ಸನಾತನ ಧರ್ಮದ ಆಶಯವಾಗಿದೆ.
ಸದ್ವಿಚಾರಗಳನ್ನೇ ಕೇಳೋಣ, ಆಡೋಣ. ಸದ್ವರ್ತನೆಯನ್ನು ಬೆಳೆಸಿಕೊಳ್ಳೋಣ. ಆರೋಗ್ಯದಿಂದ ಸುಖವಾಗಿ ಬಾಳೋಣ. ದ್ವೇಷ–ಅಸೂಯೆಗಳನ್ನು ಕೈಬಿಡೋಣ. ಹಿಂಸೆ–ದ್ರೋಹಗಳನ್ನು ಮಾಡದಿರೋಣ. ಗುರು–ಹಿರಿಯರಲ್ಲಿ ಗೌರವ ಇರಿಸಿ, ದೇವರಲ್ಲಿ ಭಕ್ತಿ ಇರಿಸಿ, ನಮ್ಮ ಶಕ್ತಿ–ಸ್ವಭಾವಗಳಿಗೆ ಸರಿಯಾದ ಕೆಲಸ ಮಾಡುತ್ತ ಜ್ಞಾನ ಗಳಿಸೋಣ – ಎಂಬುದು ಸನಾತನ ಧರ್ಮದ ಸಂದೇಶ.

ವೇದಗಳಲ್ಲಿ ಪದ್ಯವೂ ಇದೆ, ಗದ್ಯವೂ ಇದೆ. ಋಗ್ವೇದದ ಮಂತ್ರಗಳು ಪದ್ಯರೂಪದಲ್ಲಿದ್ದರೆ ಯಜುರ್ವೇದದ ಬಹಳಷ್ಟು ಭಾಗವು ಗದ್ಯಾತ್ಮಕವಾಗಿದೆ. ವೇದಗಳ ವಿವರಣೆಗಾಗಿ ಬಂದ ಅನೇಕ ಗ್ರಂಥಗಳು (ವೇದಾಂಗಗಳು) ಸೂತ್ರರೂಪದಲ್ಲಿವೆ. ಹಾಗಾಗಿ ಇದನ್ನು ಸೂತ್ರಸಾಹಿತ್ಯ ಎಂದೂ ಕರೆಯುತ್ತಾರೆ. ಅಸಂದಿಗ್ಧವಾದ, ಅಲ್ಪಾಕ್ಷರಗಳಿರುವ, ಸಮಗ್ರ ಅರ್ಥವನ್ನು ಕೊಡುವ, ವಿಶ್ವಾತ್ಮಕವಾದ ಸಾಲುಗಳೇ ಸೂತ್ರಗಳು. ಇವನ್ನು ಆಧುನಿಕ ಜಗತ್ತಿನ ಈಕ್ವೇಷನ್, ಫಾರ್ಮ್ಯುಲಾ ಇತ್ಯಾದಿಗಳಿಗೆ ಸಮೀಕರಿಸಬಹುದು. ಪತಂಜಲಿ ಮುನಿಗಳ ಯೋಗಸೂತ್ರ, ಗೌತಮ ಮುನಿಗಳ ನ್ಯಾಯಸೂತ್ರ ಮುಂತಾದವೆಲ್ಲ ಸೂತ್ರಸಾಹಿತ್ಯಗಳೇ. ಅತಿ ಚಿಕ್ಕ, ಕೇವಲ ಮೂರು ಅಕ್ಷರಗಳ ಸೂತ್ರ “ಅಣುಶ್ಚ” ಬ್ರಹ್ಮಸೂತ್ರಗಳಲ್ಲಿದೆ.

@KTBS NOT TO BE REPUBLISHED

ಭಾರತದಲ್ಲಿ ಸನಾತನಧರ್ಮದ ಭಾಗವಾಗಿ ಅಪಾರವಾದ ಲೌಕಿಕ ಸಾಹಿತ್ಯವೂ ಬೆಳೆದುಬಂದಿತು. ಆಯುರ್ವೇದ, ವೃಕ್ಷಾಯುರ್ವೇದ, ಸಂಗೀತ, ಶಿಲ್ಪಶಾಸ್ತ್ರ, ಗಣಿತ, ರಸವಿದ್ಯೆ (ರಸಾಯನವಿಜ್ಞಾನ), ನ್ಯಾಯ ಮುಂತಾದ ಹಲವು ಶಾಸ್ತ್ರಗಳು ಭಾರತದಲ್ಲಿ ಸಮೃದ್ಧವಾಗಿ ಬೆಳೆದವು. ಇವೆಲ್ಲವೂ ತಮ್ಮ ಬೆಳವಣಿಗೆಗೆ ಒಂದಿಲ್ಲೊಂದು ರೂಪದಲ್ಲಿ ವೇದಗಳಿಗೆ ಋಣಿಯಾಗಿವೆ. ಉದಾಹರಣೆಗೆ ವೇದಗಳನ್ನು ಓದಲು ಹೊರಡುವ ಪಂಡಿತರಿಗೆ ಖಗೋಳದ ಜ್ಞಾನವಿರಬೇಕಾದ್ದು ಅಗತ್ಯ. ಹಾಗೆಯೇ ವೇದೋಕ್ತ ಯಜ್ಞಗಳನ್ನು ಆಚರಿಸುವವರಿಗೆ ಯಜ್ಞಕುಂಡಗಳ ರಚನೆಯ ಜ್ಞಾನವಿರಬೇಕಾದ್ದು ಅಗತ್ಯ. ಇವೆರಡೂ ಗಣಿತಕ್ಕೆ ತಳುಕುಹಾಕಿಕೊಂಡಿರುವುದರಿಂದ ವೇದಪ್ರಸಾರದ ಜೊತೆ ಜೊತೆಗೇ ಗಣಿತಶಾಸ್ತ್ರವೂ ಬೆಳೆಯಿತು. ಹೀಗೆ ಭಾರತದಲ್ಲಿ ಲೌಕಿಕ ವಿದ್ಯೆಗಳು ಮತ್ತು ಸನಾತನ ಧರ್ಮದ ಸಂಬಂಧವು ಬೇರ್ಪಡಿಸಲಾರದಂತೆ ಹೆಣೆದುಕೊಂಡಿದೆ.

## ಅಭ್ಯಾಸಗಳು

### I ಕೆಳಗಿನ ವಾಕ್ಯಗಳನ್ನು ಸೂಕ್ತ ಪದಗಳಿಂದ ಪೂರ್ಣಗೊಳಿಸಿ.

1. ಸನಾತನ ಧರ್ಮದ ಇನ್ನೊಂದು ಹೆಸರು __________ .
2. ಉಪನಿಷತ್ತು ಎಂಬುದು _______ದ ಒಂದು ಭಾಗ.
3. ವೇದ ಎಂಬ ಶಬ್ದವು ____ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ.
4. ವಿದ್ ಎಂದರೆ ____ ಎಂದರ್ಥ.
5. ಕೇಳಿಸಿಕೊಂಡದ್ದು ____ ಆದರೆ ಜ್ಞಾಪಿಸಿಕೊಂಡದ್ದು ____ ಆಯಿತು.
6. ಭಾರತದ ಎರಡು ಪ್ರಮುಖ ಇತಿಹಾಸ ಕೃತಿಗಳೆಂದರೆ ______ ಹಾಗೂ ________ .
7. ______ ಎಂಬುದು ಭಾರತೀಯ ತತ್ತ್ವಶಾಸ್ತ್ರದ ಆಧಾರಸ್ತಂಭಗಳು.
8. ಶಾಕ್ತಾಗಮವು _____ ಎಂಬ ವಿಸ್ತಾರವಾದ ಕ್ಷೇತ್ರಕ್ಕೆ ಮುನ್ನುಡಿ ಬರೆಯಿತು.

### II ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

9. ವೇದ ಎಂದರೇನು?
10. ಋಗ್ವೇದದಲ್ಲಿ ಎಷ್ಟು ಮಂತ್ರಗಳಿವೆ? ಅವನ್ನು ಹೇಗೆ ವಿಭಾಗಿಸಲಾಗಿದೆ?
11. ಋಗ್ವೇದದಲ್ಲಿ ಬಳಸಿರುವ ಯಾವುದಾದರೂ ಎರಡು ಛಂದಸ್ಸುಗಳನ್ನು ಹೆಸರಿಸಿ.
12. ವೇದಗಳ ನಾಲ್ಕು ಸ್ಕಂದಗಳನ್ನು ಹೆಸರಿಸಿ.
13. ವೇದಗಳನ್ನು ವಿಭಜಿಸಿದವರು ಯಾರು? ಯಾಕೆ ವಿಭಜಿಸಿದರು?
14. ಶಕ್ತಿವಿಶಿಷ್ಟಾದ್ವೈತದ ಪರಂಪರೆಯಲ್ಲಿ ಬಂದ ನಾಲ್ಕು ಪಂಥಗಳನ್ನು ಹೆಸರಿಸಿ.
15. ಆಸ್ತಿಕ ಸಾಹಿತ್ಯ ಎಂದರೇನು? ಯಾವುದಾದರೂ ಎರಡು ಆಸ್ತಿಕ ಸಾಹಿತ್ಯಗಳನ್ನು ಹೆಸರಿಸಿ.

NOT TO BE REPUBLISHED ©KTBS

16. ಸೂತ್ರ ಎಂದರೇನು? ಸೂತ್ರಸಾಹಿತ್ಯಕ್ಕೆ ಉದಾಹರಣೆ ಕೊಡಿ.

17. ಸನಾತನ ಧರ್ಮ ಮತ್ತು ಸೆಮೆಟಿಕ್ ರಿಲಿಜನ್‌ಗಳ ನಡುವಿನ ವ್ಯತ್ಯಾಸ ಏನು?

18. ಸನಾತನ ಧರ್ಮದ ಸಂದೇಶ ಏನು?

**III ಚಟುವಟಿಕೆಗಳು**

19. ವೇದಮಂತ್ರಗಳ ಸಸ್ವರ ಪಠಣವನ್ನು ಆಲಿಸಿ. ವೇದಗಳನ್ನು ಯಾವ ಭಾಷೆಯಲ್ಲಿ ರಚಿಸಿದ್ದಾರೆಂಬ ಮಾಹಿತಿ ಸಂಗ್ರಹಿಸಿ.

20. ಕನಿಷ್ಠ ಐದು ಶಾಂತಿಮಂತ್ರಗಳನ್ನೂ ಅವುಗಳ ಅರ್ಥಗಳನ್ನೂ ಸಂಗ್ರಹಿಸಿರಿ.

21. ವೇದಗಳಲ್ಲಿ ಬಂದಿರುವ ಬೋಧನೆ / ಸಂದೇಶಗಳನ್ನು ಸಂಗ್ರಹಿಸಿ ಬರೆಯಿರಿ.

✲ ✲ ✲

@KTBS
NOT TO BE REPUBLISHED

## ಅಧ್ಯಾಯ–6
# ಜೈನ ಮತ್ತು ಬೌದ್ಧ ಮತಗಳು

N1K8I9

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಜೈನ ಮತ್ತು ಬೌದ್ಧಮತಗಳ ಬಗ್ಗೆ ತಿಳಿಯುವುದು.
- ಜೈನ ಮತ್ತು ಬೌದ್ಧಮತಗಳ ತತ್ವಗಳನ್ನು ಅರ್ಥೈಸಿಕೊಳ್ಳುವುದು.
- ಜೈನ ಮತ್ತು ಬೌದ್ಧಮತಗಳ ಬೆಳವಣಿಗೆ ಬಗ್ಗೆ ತಿಳಿಯುವುದು.

## ಜೈನ ಮತ

ಅತ್ಯಂತ ಪುರಾತನ ಮತಗಳಲ್ಲಿ ಜೈನ ಮತವೂ ಒಂದು. ಸಾಂಪ್ರದಾಯಕವಾಗಿ ಜೈನರಲ್ಲಿ 24 ತೀರ್ಥಂಕರರಿದ್ದರೆಂಬ ನಂಬಿಕೆಯಿದೆ. ಋಷಭ ಇವರಲ್ಲಿ ಮೊದಲನೆಯ ತೀರ್ಥಂಕರನಾದರೆ ಪಾರ್ಶ್ವನಾಥ 23ನೆಯ ತೀರ್ಥಂಕರ. ಪಾರ್ಶ್ವನಾಥನು ಸಾ.ಶ.ಪೂ. 8ನೆಯ ಶತಮಾನದಲ್ಲಿ ರಾಜ ಅಶ್ವಸೇನನ ಮಗನಾಗಿ ಜನಿಸಿದನು. ಇವನು ಸುಖ ಭೋಗವನ್ನು ತ್ಯಜಿಸಿ ಅಮರನಾದನೆಂಬ ನಂಬಿಕೆಯಿದೆ. ಸರ್ವಸಂಘ ಪರಿತ್ಯಾಗಿಯಾಗಿ ಇವನು ಸನ್ಯಾಸಿಯಾದನು. ಇವನು ಸುಖಮಯ ಬದು–ಕಿಗೆ ನಾಲ್ಕು ತತ್ವಗಳನ್ನು ಸೂಚಿಸಿದ್ದನು.

NOT TO BE REPUBLISHED @KTBS


### ಪಾರ್ಶ್ವನಾಥನು ಬೋಧಿಸಿದ ನಾಲ್ಕು ತತ್ವಗಳು

1. ಅಹಿಂಸೆ,
2. ಸತ್ಯ
3. ಆಸ್ತೇಯ (ಕದಿಯದಿರುವುದು)
4. ಅಪರಿಗ್ರಹ (ಆಸ್ತಿಯನ್ನು ಹೊಂದದಿರುವುದು).

5ನೆಯ ತತ್ವವಾದ ಬ್ರಹ್ಮಚರ್ಯವನ್ನು ವರ್ಧಮಾನನು ಬೋಧಿಸಿದನು. ಇವನೇ 24ನೆಯ ತೀರ್ಥಂಕರ.

### ವರ್ಧಮಾನ ಮಹಾವೀರ
### (ಸಾ.ಶ.ಪೂ. 599–527)

ವರ್ಧಮಾನನು ಗಣರಾಜ್ಯಗಳಲ್ಲೊಂದಾದ ವೈಶಾಲಿಯ ಕುಂಡಲಗ್ರಾಮದಲ್ಲಿ ಜನಿಸಿದನು. ಇವನ ತಂದೆ ಸಿದ್ಧಾರ್ಥ, ಜ್ಞಾತ್ರಿಕ ಎಂಬ ಬುಡಕಟ್ಟಿನ ರಾಜ.



**ವರ್ಧಮಾನ ಮಹಾವೀರ**

ತಾಯಿ ತ್ರಿಶಲಾದೇವಿ, ಪ್ರಬಲ ಗಣರಾಜ್ಯವಾಗಿದ್ದ ಲಿಚ್ಛವಿಗಳ ಯುವರಾಣಿ.

ತನ್ನ 30ನೆಯ ವಯಸ್ಸಿನಲ್ಲಿ ಸತ್ಯಾನ್ವೇಷಣೆಯ ಹುಡುಕಾಟದಲ್ಲಿ ತೊಡಗಿದ ಈತ ಮನೆಯನ್ನು, ಸಂಸಾರವನ್ನೂ ತ್ಯಜಿಸಿದನು. ನಂತರ ಇವನು 12 ವರ್ಷಗಳ ಕಾಲ ಸತ್ಯದ ಹುಡುಕಾಟದಲ್ಲಿ ಅಲೆದಾಡಿದ, ತಪಸ್ಸು ಮಾಡಿದ. ಇವನು ಉಪವಾಸ ಮಾಡುವ ಮೂಲಕ ಸ್ವತಃ ತನ್ನ ದೇಹವನ್ನು ದಂಡಿಸಿ ಕೊಂಡನು. 42ನೆಯ ವಯಸ್ಸಿನಲ್ಲಿ ಕೈವಲ್ಯ ಜ್ಞಾನವನ್ನು ಪಡೆದನು. ಕೈವಲ್ಯ ಜ್ಞಾನವೆಂದರೆ ಜ್ಞಾನೋದಯವೆಂದರ್ಥ. ಇವನು ಇಂದ್ರಿಯಗಳನ್ನು ನಿಗ್ರಹಿಸಿ ಸುಖ ಹಾಗೂ ಯಾತನೆಗಳ ಮೇಲೆ ನಿಯಂತ್ರಣವನ್ನು ಸಾಧಿಸಿಕೊಂಡ. ಈ ಸಾಧನೆಗಾಗಿ ಇವನು 'ಮಹಾವೀರ'ನೆಂದು ಕರೆಸಿಕೊಂಡು 'ಜಿನ'ನಾದನು. 'ಜಿನ'ನೆಂದರೆ ಎಲ್ಲವನ್ನು ನಿಗ್ರಹಿಸಿದವನು, ಜಯಿಸಿದವನು ಎಂದರ್ಥ. ಹೀಗಾಗಿಯೆ ಇವನ ಅನುಯಾಯಿಗಳನ್ನು ಜೈನರೆಂದು ಕರೆಯುತ್ತಾರೆ.

ಮಹಾವೀರನು ತನ್ನ ಉಳಿದ 30 ವರ್ಷಗಳ ಬದುಕನ್ನು ಗಂಗಾ ಮತ್ತು ಯಮುನಾ ನದಿಗಳ ಪ್ರದೇಶದ ಜನತೆಗೆ ತನ್ನ ತಿಳಿವನ್ನು ಬೋಧಿಸುತ್ತಾ ಕಳೆದನು. ಇವನು ಪಶ್ಚಿಮ ಭಾರತಕ್ಕೂ ಬೋಧಿಸುತ್ತಾ ಪ್ರಯಾಣಿಸಿದ. ತನ್ನ 72ನೆಯ ವಯಸ್ಸಿನಲ್ಲಿ ಬಿಹಾರದ ಪಾವಾಪುರಿ ಎಂಬಲ್ಲಿ ನಿರ್ವಾಣವನ್ನು ಹೊಂದಿದನು.

ಮಹಾವೀರನು 5 ಪ್ರತಿಜ್ಞೆಗಳನ್ನು ಹಾಗೂ ನಡವಳಿಕೆಯ 3 ನಿಯಮಗಳನ್ನು ಬೋಧಿಸಿದನು. ಇವುಗಳನ್ನು ಪಂಚಪ್ರತಿಜ್ಞೆಗಳು ಮತ್ತು ತ್ರಿರತ್ನಗಳೆಂದು ಕರೆಯುತ್ತಾರೆ.

**ಪಂಚ ಪ್ರತಿಜ್ಞೆಗಳು:** 1. ಅಹಿಂಸೆ 2. ಸತ್ಯ 3. ಅಸ್ತೇಯ 4. ಅಪರಿಗ್ರಹ 5. ಬ್ರಹ್ಮಚರ್ಯ

**ತ್ರಿರತ್ನಗಳು:** 1. ಸಮ್ಯಕ್‌ಜ್ಞಾನ 2. ಸಮ್ಯಕ್‌ದರ್ಶನ 3. ಸಮ್ಯಕ್‌ಚಾರಿತ್ರ

ಜೈನ ಮತವು ಪೂರ್ಣವಾಗಿ ದೇವರ ಇರುವಿಕೆಯನ್ನು ನಿರಾಕರಿಸುವುದಿಲ್ಲ. ಆದರೂ ಅದು ನಾಸ್ತಿಕವಾದವನ್ನು ಒಪ್ಪುತ್ತದೆ. ಪ್ರಪಂಚದ ಆಗು–ಹೋಗುಗಳಲ್ಲಿ ದೇವರ ಪಾತ್ರವನ್ನು ನಿರಾಕರಿಸುತ್ತದೆ. ಇಲ್ಲಿ ಜಿನನಿಗಿಂತ ಕೆಳಗಿನ ಸ್ಥಾನದಲ್ಲಿ ದೇವರನ್ನು ಇಡಲಾಗಿದೆ.

ಎಲ್ಲ ಚರಾಚರ ವಸ್ತುಗಳಲ್ಲಿಯೂ ಆತ್ಮ (ಜೀವ)ವಿದೆ ಎಂಬುವುದು ಇವರ ನಂಬಿಕೆ. ಆತ್ಮ (ಜೀವ) ದ ಶುದ್ಧೀಕರಣವು ಮಾತ್ರ ಪುನರ್‌ಜನ್ಮದಿಂದ ಮುಕ್ತಿಯನ್ನು ನೀಡುತ್ತದೆ ಹಾಗೂ ನಿರ್ವಾಣ ಸಾಧ್ಯ. ಶುದ್ದೀಕರಣವು ತಪಸ್ಸು, ಉಪವಾಸ, ದೇಹದಂಡನೆ ಹಾಗೂ ಅದರ ಮೂಲಕದಿಂದಾಗುವ ದೇಹ ನಾಶದಿಂದ ಮಾತ್ರ ಸಾಧ್ಯವೆಂಬುದು ಇವರ ನಂಬಿಕೆ. ಇದನ್ನು ಸಲ್ಲೇಖನವೆನ್ನುವರು. ಕರ್ಮಫಲದ ಮೇಲಿನ ನಂಬಿಕೆಯು ಜೈನರ ಬಹುಮುಖ್ಯ ಆಯಾಮ. ಈ ಧರ್ಮದ ಪ್ರಕಾರ ಉತ್ತಮ ಮತ್ತು ಪುಣ್ಯಕಾರ್ಯಗಳ ಮೂಲಕ ಮಾತ್ರ ವಿಮೋಚನೆಯನ್ನು ಪಡೆಯಬಹುದಾಗಿದೆ. ಕೈವಲ್ಯ ಜ್ಞಾನವನ್ನು ಪಡೆಯಲು ದೇಹದ ಬಂಧನದಿಂದ ಆತ್ಮವು ವಿಮುಕ್ತವಾಗಬೇಕು.

ಸಾಂಪ್ರದಾಯಿಕವಾಗಿ ಜೈನರಲ್ಲಿ ಶ್ವೇತಾಂಬರ ಹಾಗೂ ದಿಗಂಬರರೆಂಬ ಎರಡು ಮುಖ್ಯ ಪಂಗಡಗಳನ್ನು ಕಾಣುತ್ತೇವೆ. ಬಿಳಿಯ ಉಡುಪು ಧರಿಸಿದ ಜೈನ ಮುನಿಗಳನ್ನು ಹಾಗೂ ಅವರ ಅನುಯಾಯಿಗಳನ್ನು ಶ್ವೇತಾಂಬರರೆಂದು ಕರೆಯುತ್ತಾರೆ. ಉಡುಪನ್ನು ಧರಿಸದ ಜೈನ ಮುನಿಗಳನ್ನು ಹಾಗೂ ಅವರ ಅನುಯಾಯಿಗಳನ್ನು ದಿಗಂಬರ ಪಂಥಕ್ಕೆ ಸೇರಿದವರೆಂದು ಪರಿಗಣಿಸಲಾಗಿದೆ. ಮೊದಲ

NOT TO BE REPUBLISHED ©KTBS

ಜೈನ ಸಮಾವೇಶದ ನಂತರ ಮಹಾವೀರನ ವಿಚಾರಗಳನ್ನು 12 ಗ್ರಂಥಗಳಲ್ಲಿ ಸಂಗ್ರಹಿಸಿಡಲಾಯಿತು. ಇವುಗಳನ್ನು ಜೈನರು 12 ಅಂಗಗಳೆಂದು ಕರೆದರು. ಇವುಗಳು ಪ್ರಾಕೃತ ಭಾಷೆಯಲ್ಲಿವೆ.

ಬಹಳ ಹಿಂದೆಯೆ ಜೈನರ ಒಂದು ಗುಂಪು ಬಿಹಾರದ ಕ್ಷಾಮದಿಂದಾಗಿ ದಕ್ಷಿಣಕ್ಕೆ ಬಂದು ಶ್ರವಣಬೆಳಗೊಳದಲ್ಲಿ ನೆಲಸಿತು. ಹೀಗೆ ದಕ್ಷಿಣ ಭಾರತದಲ್ಲಿ ಕೂಡ ಜೈನಮತದ ಪ್ರಚಾರವಾಯಿತು. ಇದರಿಂದ ಅಪಾರವಾದ ಗ್ರಂಥಗಳು ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ ರಚನೆಯಾದವು. ಕನ್ನಡದ ಸುಪ್ರಸಿದ್ಧ ಕವಿಗಳಾದ ಪಂಪ, ರನ್ನ, ಪೊನ್ನ, ಜನ್ನ ಇವರುಗಳು ಜೈನರಾಗಿದ್ದರು.

## ಬೌದ್ಧ ಮತ


ಗೌತಮ ಬುದ್ಧ

ಗೌತಮ ಬುದ್ಧನೆಂದೇ ಪ್ರಖ್ಯಾತನಾದ ಸಿದ್ಧಾರ್ಥನು ಸಾ.ಶ.ಪೂ. 6ನೆಯ ಶತಮಾನದಲ್ಲಿ ಜನಿಸಿದನು. ತಂದೆ ಶುದ್ಧೋದನನು ಶಾಕ್ಯ ಗಣ–ಸಂಘದ ರಾಜ. ಸಿದ್ಧಾರ್ಥನು ರಾಜರ ಭೋಗವನ್ನು ಹಾಗು ಸಂಸಾರದ ಸುಖವನ್ನು ತ್ಯಜಿಸಿ ಸನ್ಯಾಸಿಯಾದನು. ಪ್ರಚಲಿತ ಬದುಕಿನ ದಾರಿಗಳ ನಿರರ್ಥಕತೆಯನ್ನು ಕಂಡು ಸತ್ಯದ ಹುಡುಕಾಟದಲ್ಲಿ ನಿರತನಾಗಿ ಜ್ಞಾನೋದಯವನ್ನು ಪಡೆದು ಬುದ್ಧನಾದನು. ಜ್ಞಾನೋದಯದ ನಂತರ ಈತ ಮೊದಲಿಗೆ ತೆರಳಿದ್ದು ವಾರಾಣಸಿ (ಕಾಶಿ)ಯ ಸಮೀಪದ ಸಾರನಾಥಕ್ಕೆ. ಇಲ್ಲಿನ ಜಿಂಕೆವನದಲ್ಲಿ ಈತನು ತನ್ನ ಮೊಟ್ಟ ಮೊದಲ ಬೋಧನೆಯನ್ನು ಮಾಡಿದನು. ಇದು 'ಧರ್ಮ ಚಕ್ರ ಪ್ರವರ್ತನ'ವೆಂದು ಕರೆಯಲ್ಪಟ್ಟಿದೆ. ಇಲ್ಲಿ ಬುದ್ಧನು ಚತುರ್ ಆರ್ಯಸತ್ಯ ಹಾಗೂ ಅಷ್ಟಾಂಗಿಕ ಮಾರ್ಗವನ್ನು ಬೋಧಿಸಿದನು.

ಲೋಕವೆಲ್ಲ ದುಃಖ ಹಾಗೂ ನೋವಿನಿಂದ ಆವರಿಸಿದೆ. ದುಃಖದ ಮೂಲವನ್ನು, ಅದರ ಕಾರಣವನ್ನು ಚತುರ್‌ಆರ್ಯ ಸತ್ಯವು ವಿವರಿಸುತ್ತದೆ. ಆಸೆಯೇ ದುಃಖಕ್ಕೆ ಮೂಲಕಾರಣ ಎಂಬ ಸತ್ಯವನ್ನು ಬುದ್ಧನು ಕಂಡನು. ಅತಿಯಾದ ಆಸೆಯ ವಿಮುಕ್ತಿಯಿಂದ ಮಾತ್ರ ನೆಮ್ಮದಿಯ ಬದುಕು ಸಾಧ್ಯ. ಆಸೆಯ ವಿಮುಕ್ತಿಗಾಗಿ ಅಷ್ಟಾಂಗಿಕ ಮಾರ್ಗವನ್ನು ಬುದ್ಧನು ಬೋಧಿಸಿದನು. ಇದನ್ನು ಮಧ್ಯಮ ಪಥವೆಂದು ಕರೆಯುವರು.

## ಅಷ್ಟಾಂಗಿಕ ಮಾರ್ಗ

1. ಒಳ್ಳೆಯ ನಡತೆ 2. ಮಾತು 3. ನೋಟ (ದೃಷ್ಟಿ) 4. ಬದುಕು
5. ಪ್ರಯತ್ನ 6. ನೆನಪು 7. ನಿರ್ಧಾರ 8. ಚಿಂತನೆ

## ಹೊಸ ಮತದ ಅನುಯಾಯಿಗಳು

ಶ್ರೀಮಂತ ವರ್ತಕರು, ಕುಶಲಕರ್ಮಿಗಳು, ಜನಸಾಮಾನ್ಯರು ಈ ಪ್ರತಿಪಾದನೆಯಿಂದ ಪ್ರೇರಿತರಾದರು. ಜನಸಾಮಾನ್ಯರ ಭಾಷೆಯಾದ ಪ್ರಾಕೃತದ ಮೂಲಕ ಬುದ್ಧನು ತನ್ನ ಬೋಧನೆಗಳನ್ನು ಮಾಡಿದನು ಹಾಗೂ ಅವುಗಳನ್ನು ಸ್ಥಳೀಯ ಸಂಪ್ರದಾಯಗಳ ಅಂಶಗಳೊಂದಿಗೆ ಸಂಬಂಧ ಕಲ್ಪಿಸಿದನು. ಹೊಸ

© KTBS NOT TO BE REPUBLISHED

ನಗರಗಳ ವಾತಾವರಣವು ಜನರ ಬದುಕಿನ ವಿಧಾನಗಳನ್ನು ಬದಲಾಯಿಸಿತು. ಬದಲಾದ ಪರಿಸ್ಥಿತಿಗಳಲ್ಲಿ ಈ ಮತಗಳು ಆಶಾಕಿರಣಗಳಾದವು. ಅದರಲ್ಲೂ ಬೌದ್ಧಮತ ಹೊಸ ಪಾತ್ರವನ್ನು ವಹಿಸಿಕೊಂಡು ಪ್ರವರ್ತನೆಯ ಹಾದಿಯನ್ನು ಹಿಡಿಯಿತು.

ಬುದ್ಧ ಹಾಗೂ ಅವನ ಅನುಯಾಯಿಗಳು ಕೋಸಲ, ಮಗಧ ಹಾಗೂ ಗಂಗಾನದಿಯ ಬಯಲು ಪ್ರದೇಶದ ಉಳಿದ ಹಲವು ನಗರಗಳಿಗೆ ಭೇಟಿಕೊಟ್ಟು ತಮ್ಮ ವಿಚಾರಗಳನ್ನು ಬೋಧಿಸಿದರು. ಇವರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕಾಲ್ನಡಿಗೆಯಲ್ಲಿಯೇ ಪ್ರಯಾಣಿಸುತ್ತಿದ್ದರು ಮತ್ತು ತಮ್ಮ ಜೀವನವನ್ನು ಪರರ ಬದುಕಿಗಾಗಿಯೆ ಮೀಸಲಿಟ್ಟರು. 80ನೆಯ ಇಳಿ ವಯಸ್ಸಿನಲ್ಲಿ ಬುದ್ಧನ ಅವಿರತವಾದ ಸಾರ್ಥಕ ಬದುಕು ಕುಶಿನಗರದಲ್ಲಿ ಅಂತ್ಯಗೊಂಡಿತು. ಇದನ್ನು 'ಮಹಾಪರಿನಿರ್ವಾಣ'ವೆಂದು ಕರೆಯಲಾಗಿದೆ.


ಸಾಂಚಿ ಸ್ತೂಪ

ಬುದ್ಧನು ವಿಹರಿಸಿದ ಪ್ರದೇಶಗಳಲ್ಲಿ ವಿಹಾರಗಳನ್ನು ಕಾಲಾಂತರದಲ್ಲಿ ನಿರ್ಮಿಸಿದರು. ಅವನ ಅಸ್ಥಿಪಂಜರ ಕಳೆಬರವನ್ನು ಹಾಗೂ ಮೂಳೆಗಳನ್ನು ಜನ ಅವನ ನೆನಪಿನಲ್ಲಿ ಸಂರಕ್ಷಿಸಿದರು. ಅವುಗಳ ಮೂಲಕ ಚೈತ್ಯಾಲಯ ಹಾಗೂ ಸ್ತೂಪಗಳಲ್ಲಿ ಅವನ ಸಾಧನೆಯನ್ನು ಸ್ಮರಿಸುತ್ತಾ ಪೂಜಿಸತೊಡಗಿದರು. ಹೀಗೆ ಪ್ರಾರಂಭವಾದದ್ದೆ ಮೊಟ್ಟಮೊದಲ ದೇವಾಲಯಗಳು, ವಿಗ್ರಹಗಳು ಹಾಗೂ ಮೂರ್ತಿಪೂಜೆ.

ಬೌದ್ಧ ಮತವು ನಾಡಿನ ತುಂಬೆಲ್ಲ ಪಸರಿಸಿದ್ದಲ್ಲದೆ ದೇಶ ವಿದೇಶಗಳಿಗೂ ಹರಡಿತು. ಇದರ ವೈಭವವನ್ನು ಚೀನಾದ ಪ್ರವಾಸಿಗಳಾದ ಫಾಹಿಯಾನ್, ಇತ್ಸಿಂಗ್ ಹಾಗೂ ಹ್ಯೂಯನ್‌ತ್ಸಾಂಗ್ ಕಣ್ಣುಕಟ್ಟುವಂತೆ ಅವರ ಬರವಣಿಗೆಗಳಲ್ಲಿ ವಿವರಿಸಿದ್ದಾರೆ. ಮಲಯ, ಬರ್ಮ, ಥೈಲ್ಯಾಂಡ್, ವಿಯಟ್ನಾಂ, ಕಂಬೋಡಿಯ, ಶ್ರೀಲಂಕ ಹಾಗೂ ಬಾಮಿಯಾನಿನವರೆವಿಗೂ ಬೌದ್ಧ ಮತವು ಹರಡಿತ್ತು. ಇಲ್ಲೆಲ್ಲ ಬೆಟ್ಟಗಳ ಶಿಲೆಗಳನ್ನೆ ಕಡೆದು ಬುದ್ಧನ ಮೂರ್ತಿಗಳನ್ನು ನಿರ್ಮಿಸಿದ್ದಾರೆ. ಹಲವೆಡೆಗಳಲ್ಲಿ ಬೃಹತ್ ಪ್ರತಿಮೆಗಳನ್ನು ನಿರ್ಮಿಸಿರುವುದನ್ನು ನಾವು ಇಂದಿಗೂ ಕಾಂಬೋಡಿಯಾದ ಅಂಕೊರ್ವಟ್ ಹಾಗೂ ಆಫ್‌ಘಾನಿಸ್ಥಾನದ ಬಾಮಿಯಾನ್‌ನಲ್ಲಿ ಕಾಣಬಹುದು. ದುರಾದೃಷ್ಟವೆಂದರೆ ಬಾಮಿಯಾನ್‌ನ ಬುದ್ಧನ ಬೃಹತ್ ಪ್ರತಿಮೆಗಳು ಮುಸ್ಲಿಂ ಮೂಲಭೂತವಾದಿಗಳ ದಾಳಿಗೆ ತುತ್ತಾಗಿ ಇತ್ತೀಚಿನ ದಿನಗಳಲ್ಲಿ ನಾಶವಾದವು.

1956ರಲ್ಲಿ ಭಾರತದ ಪ್ರಮುಖ ಸಾಮಾಜಿಕ ಚಿಂತಕರಾದ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್‌ರವರು ಬುದ್ಧನ ಬೋಧನೆಗಳಿಂದ ಪ್ರೇರಿತರಾಗಿ ಬೌದ್ಧ ಮತವನ್ನು ಸ್ವೀಕರಿಸಿದರು.

**ಧರ್ಮ ಮತ್ತು ರಿಲಿಜನ್**

ರಿಲಿಜನ್ ಎಂಬುದು ಐರೋಪ್ಯ ಕಲ್ಪನೆಯಾಗಿದೆ. ಇದು ಒಬ್ಬ ನಿರ್ದಿಷ್ಟ ವ್ಯಕ್ತಿಯಿಂದ ಪ್ರಾರಂಭವಾಗುವ ಒಬ್ಬ ವ್ಯಕ್ತಿ ಹಾಗೂ ಸಮಾಜವನ್ನು ಕುರಿತಾದ ನಂಬಿಕೆ. ಪ್ರತಿಯೊಂದು ರಿಲಿಜನ್ನಿಗೂ ಪವಿತ್ರಗ್ರಂಥಗಳಿರುತ್ತವೆ. ಪವಿತ್ರಗ್ರಂಥಗಳು ಮೂಲಪುರುಷನ ಆಶಯಗಳನ್ನು ತಿಳಿಸುತ್ತವೆ. ರಿಲಿಜನ್ನುಗಳು ಬೆಳೆದಂತೆಲ್ಲ ಅವುಗಳಲ್ಲಿ ಪಂಥಗಳು ಹುಟ್ಟಿಕೊಂಡವು.

ಭಾರತದ ಸಂದರ್ಭದಲ್ಲಿ ಯೊಹೂದ್ಯ, ಕ್ರೈಸ್ತ ಹಾಗೂ ಇಸ್ಲಾಂ ಮತಗಳನ್ನು ಮಾತ್ರವೇ ರಿಲಿಜನ್ ಎಂಬುದಾಗಿ ಕರೆಯಬಹುದು. ಬೌದ್ಧರು, ಜೈನರಾದಿಯಾಗಿ ವಿಭಿನ್ನ ಸಂಪ್ರದಾಯಗಳ ಸ್ವರೂಪವು ರಿಲಿಜನ್ನಿಗಿಂತ ಭಿನ್ನವಾಗಿದೆ. ಇವರಲ್ಲಿ ಆಸ್ತಿಕರು ಹಾಗೂ ನಾಸ್ತಿಕರೆಂಬುದಾಗಿ ಭಿನ್ನತೆಯನ್ನು ಗುರುತಿಸಬಹುದು. ವೇದಮೂಲವನ್ನು ಒಪ್ಪುವ ಸಂಪ್ರದಾಯಗಳನ್ನು ಆಸ್ತಿಕ ಸಂಪ್ರದಾಯಗಳೆನ್ನುತ್ತಾರೆ. ವೇದಮೂಲವನ್ನು ಒಪ್ಪದವರನ್ನು ನಾಸ್ತಿಕರೆನ್ನುತ್ತಾರೆ. ಧರ್ಮವೆಂಬುದು ಒಂದು ಜೀವನಕ್ರಮಕ್ಕೆ ಸಂಬಂಧಿಸಿದ ಪರಿಕಲ್ಪನೆ.

ಬುದ್ಧನ ಮರಣದ ನಂತರ ಅವನ ಅನುಯಾಯಿಗಳು ಬುದ್ಧನ ಬೋಧನೆ ಹಾಗೂ ಸಂಪ್ರದಾಯವನ್ನು ತ್ರಿಪಿಟಕಗಳಲ್ಲಿ ಕ್ರೋಡೀಕರಿಸಿದರು. ಇವೇ ವಿನಯ, ಸುತ್ತ ಹಾಗೂ ಅಭಿಧಮ್ಮ ಪಿಟಕವೆಂದು ಕರೆಯಲ್ಪಟ್ಟಿವೆ. ಕಾಲಕ್ರಮೇಣ ಬೋಧನೆಗಳಲ್ಲಿ ಹುಟ್ಟಿಕೊಂಡ ಭಿನ್ನಾಭಿಪ್ರಾಯದಿಂದಾಗಿ ಒಳಪಂಗಡಗಳು ಹುಟ್ಟಿಕೊಂಡವು. ಹೀಗೆ ಹೀನಯಾನ, ಮಹಾಯಾನ, ವಜ್ರಯಾನ ಹಾಗೂ ಅವುಗಳಲ್ಲಿನ ಸೂತ್ರಗಳು ಹುಟ್ಟಿಕೊಂಡವು. ಇಂದು ಬುದ್ಧನನ್ನು ಅರಸುವ ಅನೇಕ ಹಾದಿಗಳನ್ನು ಹುಡುಕಿಕೊಂಡಿರುವ ಸಂಘಟನೆಗಳನ್ನು ಜಗತ್ತಿನಾದ್ಯಂತ ನಾವು ಕಾಣುತ್ತೇವೆ.

## ವಿದೇಶಿಯರ ದಾಳಿ

ಇದೇ ಕಾಲಘಟ್ಟದಲ್ಲಿ ಗ್ರೀಸ್‌ನಲ್ಲಿ ನಗರ ರಾಜ್ಯಗಳು ವಿಕಸಿತಗೊಂಡಿದ್ದವು. ಪ್ರಾಚೀನ ಪರ್ಶಿಯ ಒಂದು ಪ್ರಬಲ ಸಾಮ್ರಾಜ್ಯವಾಗಿ ಬೆಳೆದಿತ್ತು. ಈ ಎರಡು ಪ್ರದೇಶಗಳು ನಿರಂತರವಾದ ಸಂಘರ್ಷಕ್ಕೆ ಗುರಿಯಾದವು. ಪ್ರಾಚೀನ ಪರ್ಶಿಯವನ್ನು ಆಳಿದವರಲ್ಲಿ ಅಖಿಮೇನಿಯನ್ನರು ಕೂಡ ಮುಖ್ಯರು. ಸಾ.ಶ.ಪೂ.6ನೇ ಶತಮಾನದಲ್ಲಿ ಈ ಮನೆತನದ ದೊರೆಯಾದ ಡೇರಿಯಸನು ಪ್ರಬಲ ಸಾಮ್ರಾಜ್ಯವೊಂದನ್ನು ಕಟ್ಟಿದನು. ಇವನ ಕಾಲದಲ್ಲಿ ಅವನ ಸಾಮ್ರಾಜ್ಯವು ಭಾರತದ ಗಡಿಯವರೆವಿಗೂ ಹರಡಿತ್ತು. ಸಾ.ಶ.ಪೂ. 4ನೆಯ ಶತಮಾನದಲ್ಲಿ ಮ್ಯಾಸೆಡೋನಿಯಾದ ದೊರೆ ಅಲೆಗ್ಸಾಂಡರ್ ಗ್ರೀಕ್ ನಗರ ರಾಜ್ಯಗಳನ್ನು ಗೆದ್ದು ಪರ್ಶಿಯಾವನ್ನು ವಶಪಡಿಸಿಕೊಂಡನು. ಇದರಿಂದಾಗಿ ಭಾರತದ ಗಡಿಯವರೆವಿಗಿದ್ದ ಪರ್ಷಿಯಾ ಭಾಗವು ಅಲೆಗ್ಸಾಂಡರನ ಕೈವಶವಾಯಿತು. ಪರ್ಶಿಯಾವನ್ನು ಗೆದ್ದ ನಂತರ ಅಲೆಗ್ಸಾಂಡರ್ ಕಂದಹಾರ್ ಹಾಗೂ ಹಿಂದುಕುಶ್‌ನ ಮಾರ್ಗವಾಗಿ ಭಾರತವನ್ನು ಪ್ರವೇಶಿಸಿದ. ರಾವಿ ಮತ್ತು ಬಿಯಾಸ್ ನದಿಯವರೆಗೂ ಸಾಗಿದ ಈತನಿಗೆ ಇನ್ನು ಹೆಚ್ಚು ಮುಂದುವರಿಯಲಾಗದೆ ಜೀಲಂ ನದಿಯ ಮೂಲಕ ಭಾರತದ ಗಡಿದಾಟಿ ಹಿಂದಿರುಗುವ ಮಾರ್ಗದಲ್ಲಿ ಬ್ಯಾಬಿಲೋನಿನವರೆವಿಗೆ ಸಾಗಿ ಅಲ್ಲಿ ಮೃತನಾದ.

© KTBS NOT TO BE REPUBLISHED

**ಅಲೆಗ್ಸಾಂಡರ್–ಪೌರವರ ಕದನ**

ತಕ್ಷಶಿಲೆಯ ರಾಜನಾದ ಅಂಬಿಯ ಆಮಂತ್ರಣವನ್ನು ಪಡೆದು ಬಂದ ಅಲೆಗ್ಸಾಂಡರನಿಗೆ ಎದುರಾದದ್ದು ಪೌರವ. ಇವನನ್ನು ಪೋರಸ್ ಎಂದೂ ಕರೆಯುತ್ತಾರೆ. ಭೀಕರವಾದ ಚಂಡಮಾರುತ ಹಾಗೂ ಪ್ರವಾಹಭರಿತ ಜೀಲಂನದಿಯ ಎದುರು ಎರಡು ಸೇನೆಗಳು ಮುಖಾಮುಖಿಯಾದವು. ಪ್ರವಾಹದ ಮಧ್ಯದಲ್ಲಿ ನದಿಯನ್ನು ದಾಟುವುದನ್ನು ನಿರೀಕ್ಷಿಸದ ಪೌರವನ ಮೇಲೆ ಅಲೆಗ್ಸಾಂಡರನ ಸೇನೆಯು ಆಕ್ರಮಣ ಮಾಡಿತು. ಹೋರಾಟದಲ್ಲಿ ಅಲೆಗ್ಸಾಂಡರನ ಸೇನೆಯು ಜಯಗಳಿಸಿತು. ಸೆರೆಯಾದ ಪೌರವನನ್ನು ಕುರಿತು ಅಲೆಗ್ಸಾಂಡರ್ 'ನಿನ್ನನ್ನು ನಾನು ಹೇಗೆ ನಡೆಸಿಕೊಳ್ಳಬೇಕು' ಎಂದು ಕೇಳಿದನು. ಆಗ ಪೌರವನು ಅತ್ಯಂತ ಧೈರ್ಯ, ಸ್ವಾಭಿಮಾನಗಳಿಂದ 'ಒಬ್ಬ ರಾಜ ಮತ್ತೊಬ್ಬ ರಾಜನನ್ನು ಹೇಗೆ ನಡೆಸಿಕೊಳ್ಳಬೇಕೋ ಹಾಗೆ' ಎಂದು ಉತ್ತರಿಸಿದ. ಪೌರವನ ಧೈರ್ಯ ಸಾಹಸಗಳು ಗ್ರೀಕರ ಬರವಣಿಗೆಗಳಲ್ಲಿ ಅಮರವಾಗಿವೆ. ಅಲೆಗ್ಸಾಂಡರ್‌ನ ಆಕ್ರಮಣವು ಮೌರ್ಯರ ರಾಜಪ್ರಭುತ್ವಕ್ಕೆ ಕಾರಣವಾಯಿತು. ಮಹಾಜನಪದಗಳ ನಡುವೆ ಇದ್ದ ವ್ಯಾಪಾರಿ ಸಂಪರ್ಕಗಳು ಈ ಸಂದರ್ಭದಲ್ಲಿ ಕುಸಿದವು. ಆದರೆ ಗ್ರೀಕರ ಪ್ರವೇಶವು ಉತ್ತರ ಭಾರತದ ಕಲೆ ಹಾಗೂ ವಿಜ್ಞಾನದ ಮೇಲೆ ಪರಿಣಾಮವನ್ನುಂಟುಮಾಡಿತು.ಆಗ ರೂಢಿಯಲ್ಲಿದ್ದ ಗಾಂಧಾರ ಶಿಲ್ಪಕಲೆ ಯು ಗ್ರೀಕರ ಪ್ರಭಾವಕ್ಕೆ ಒಳಗಾಗಿತ್ತು.

© KTBS NOT TO BE REPUBLISHED

## ಅಭ್ಯಾಸಗಳು

**I ಬಿಟ್ಟ ಸ್ಥಳಗಳಲ್ಲಿ ಸೂಕ್ತ ಪದಗಳಿಂದ ಭರ್ತಿ ಮಾಡಿ.**

1 ಜೈನರ ಮೊದಲ ತೀರ್ಥಂಕರನು __________ .

2 ವರ್ಧಮಾನನು ಜನಿಸಿದ ಸ್ಥಳ __________ .

3 ಮಹಾವೀರನು ತನ್ನ 42 ನೆಯ ವಯಸ್ಸಿನಲ್ಲಿ __________ ಪಡೆದನು.

4 ಮಹಾವೀರನು ತನ್ನ 72 ನೆಯ ವಯಸ್ಸಿನಲ್ಲಿ __________ ಎಂಬಲ್ಲಿ ನಿರ್ವಾಣ ಹೊಂದಿದನು.

5 ಗೌತಮ ಬುದ್ಧನ ಮೊದಲ ಹೆಸರು __________ .

6 ಬುದ್ಧನು ತನ್ನ ಮೊದಲ ಬೋಧನೆಯನ್ನು __________ ದಲ್ಲಿ ಮಾಡಿದನು.

7 ಬುದ್ಧನ ಮೊದಲ ಬೋಧನೆಯನ್ನು __________ಎಂದು ಕರೆಯಲಾಗಿದೆ.

**II ಈ ಕೆಳಕಂಡ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

8 ಮಹಾವೀರನ ಜೀವನ ಕುರಿತು ಬರೆಯಿರಿ.

9 ತ್ರಿರತ್ನಗಳೆಂದರೇನು ?

10 ಜೈನರ ಪಂಗಡಗಳನ್ನು ಹೆಸರಿಸಿರಿ.

11 ಮಧ್ಯಮ ಪಥವೆಂದರೇನು ?

12 ಹೊಸ ಧರ್ಮದಿಂದ ಪ್ರೇರಿತರಾದವರು ಯಾರು ?

13 ತ್ರಿಪಿಟಿಕಗಳ ಬಗ್ಗೆ ಟಿಪ್ಪಣಿ ಬರೆಯಿರಿ.

**III ಚಟುವಟಿಕೆಗಳು.**

14 ಮಹಾವೀರನ ಜೀವನ ಚರಿತ್ರೆಯ ಬಗ್ಗೆ ವಿಷಯ ಸಂಗ್ರಹಿಸಿ.

15 ಗೌತಮ ಬುದ್ಧನ ಜೀವನ ಸಂಬಂಧ ಚಿತ್ರಗಳನ್ನು ಸಂಗ್ರಹಿಸಿ.

16 ಧರ್ಮ, ಮತ, ಪಂಥ, ಆಸ್ತಿಕ ಮತ್ತು ನಾಸ್ತಿಕ ಪದಗಳಿಗೆ ಅರ್ಥವನ್ನು ತಿಳಿದುಕೊಳ್ಳಿರಿ.

@KTBS
NOT TO BE REPUBLISHED

***

# ರಾಜ್ಯಶಾಸ್ತ್ರ

## ಅಧ್ಯಾಯ – 7

## ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಮುಖ್ಯತೆ

M7K2M7

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ರಾಜ್ಯಶಾಸ್ತ್ರದ ಪರಿಕಲ್ಪನೆ ತಿಳಿಯುವುದು.
- ರಾಜ್ಯಶಾಸ್ತ್ರವು ಬೆಳವಣಿಗೆಯಾದ ಕ್ರಮವನ್ನು ವಿವರಿಸುವುದು.
- ರಾಜ್ಯಶಾಸ್ತ್ರದ ಚಿಂತಕರುಗಳನ್ನು ಗುರುತಿಸುವುದು.
- ರಾಜ್ಯಶಾಸ್ತ್ರದ ಪ್ರಾಮುಖ್ಯ ತಿಳಿಯುವುದು.

©KTBS NOT TO BE REPUBLISHED

**ಅರ್ಥ :** ರಾಜ್ಯಶಾಸ್ತ್ರವು ಒಂದು ಸಮಾಜ ವಿಜ್ಞಾನ. ಇದು ಮಾನವನ ಜೀವನದ ರಾಜಕೀಯ ಚಟುವಟಿಕೆಗಳಿಗೆ ಮತ್ತು ರಾಜ್ಯದ ರೂಪರೇಷಗಳಿಗೆ ಸಂಬಂಧಿಸಿದ್ದಾಗಿದೆ. ಇದು ರಾಜ್ಯ ಮತ್ತು ಸರ್ಕಾರಕ್ಕೂ ಸಂಬಂಧಿಸಿದೆ. ರಾಜ್ಯದ ಉಗಮ, ಲಕ್ಷಣ ಹಾಗೂ ರಾಜಕೀಯ ಸಂಸ್ಥೆಗಳ ಅಧ್ಯಯನ ಮಾಡುತ್ತದೆ. ರಾಜ್ಯದ ಬಗೆಗಿನ ಅಧ್ಯಯನವೇ ರಾಜ್ಯಶಾಸ್ತ್ರದ ಮುಖ್ಯ ವಿಷಯವಾಗಿದೆ.

ರಾಜ್ಯಶಾಸ್ತ್ರದ ಮೂಲವನ್ನು ನಾವು ಗ್ರೀಸ್ ದೇಶದಲ್ಲಿ ಕಾಣಬಹುದು. ಗ್ರೀಕರಿಗಿಂತಲೂ ಮೊದಲು ಈಜಿಪ್ಷಿಯನ್ನರು, ಬೆಬಿಲೋನಿಯರು, ಪರ್ಶಿಯನ್ನರು, ಭಾರತೀಯರು ಹಾಗೂ ಚೀನಿಯರು 'ರಾಜನೀತಿಗೆ' ಸಂಬಂಧಿಸಿದಂತೆ ಕೆಲವೊಂದು ವಿಚಾರಗಳನ್ನು ವ್ಯಕ್ತಪಡಿಸಿದ್ದರೂ ಸಹ ಅವರು ರಾಜ್ಯಶಾಸ್ತ್ರವನ್ನು ಒಂದು ಕ್ರಮಬದ್ಧ ಅಧ್ಯಯನವನ್ನಾಗಿ ಅಭಿವೃದ್ಧಿ ಪಡಿಸಲಿಲ್ಲ. ರಾಜ್ಯಶಾಸ್ತ್ರಕ್ಕೆ ಒಂದು ಸ್ವತಂತ್ರ ವಿಜ್ಞಾನದ ಸ್ಥಾನಮಾನ ಕೊಟ್ಟವರೇ ಗ್ರೀಕರು.

ಗ್ರೀಕ್ ತತ್ವಜ್ಞಾನಿಗಳಾದ ಸಾಕ್ರೆಟೀಸ್ ಮತ್ತು ಆತನ ಶಿಷ್ಯ ಪ್ಲೇಟೋ ರಾಜ್ಯಶಾಸ್ತ್ರದ ಚಿಂತಕರಾಗಿದ್ದರು. ಪ್ಲೇಟೋ ತನ್ನ 'ರಿಪಬ್ಲಿಕ್' ಎಂಬ ಮಹಾಕೃತಿಯಲ್ಲಿ ಪ್ರಥಮ ಬಾರಿಗೆ ರಾಜ್ಯ ಮತ್ತು ಸರ್ಕಾರದ ಸ್ವರೂಪ ಮತ್ತು ಕರ್ತವ್ಯಗಳ ಬಗ್ಗೆ ಚರ್ಚಿಸಿದ್ದಾರೆ. ಆದರೆ ಗ್ರೀಸ್ ದೇಶದ ಮತ್ತೊಬ್ಬ ದಾರ್ಶನಿಕ ಅರಿಸ್ಟಾಟಲನಿಗೆ "ರಾಜ್ಯಶಾಸ್ತ್ರದ ಪಿತಾಮಹ" ಎಂದು ಗೌರವ ನೀಡಲಾಗಿದೆ, ಏಕೆಂದರೆ, ಅರಿಸ್ಟಾಟಲರು ರಾಜ್ಯಶಾಸ್ತ್ರ ಅಧ್ಯಯನವನ್ನು ಕ್ರಮಬದ್ಧಗೊಳಿಸಿ ರಾಜ್ಯಶಾಸ್ತ್ರಕ್ಕೆ ತಳಪಾಯ ಹಾಕಿದ ಪ್ರಥಮ ಚಿಂತಕರೆನಿಸಿದ್ದಾರೆ. ಅರಿಸ್ಟಾಟಲ್ ರಾಜ್ಯಶಾಸ್ತ್ರವನ್ನು ಕುರಿತು ಪ್ರಪಂಚದಲ್ಲಿಯೇ ಪ್ರಥಮ ಗ್ರಂಥ 'ಪಾಲಿಟಿಕ್ಸ್' ಎಂಬ ಕೃತಿಯನ್ನು ರಚಿಸಿದನು. ಈ ಕೃತಿಯಲ್ಲಿ ರಾಜ್ಯದ ಉಗಮ, ಬೆಳವಣಿಗೆ ಮತ್ತು ಕಾರ್ಯಗಳ ಬಗ್ಗೆ ಚರ್ಚಿಸಲಾಗಿದೆ. ಕೌಟಿಲ್ಯನ 'ಅರ್ಥಶಾಸ್ತ್ರ' ದಲ್ಲಿಯೂ ರಾಜಕೀಯ ನೀತಿಗಳ ಬಗ್ಗೆ ಬಹಳಷ್ಟು ವಿವರಗಳಿವೆ.

ಪ್ರಾಚೀನ ಗ್ರೀಕರು ರಾಜ್ಯದ ಸಮಸ್ತ ಚಟುವಟಿಕೆಗಳಿಗೂ ಅನ್ವಯಿಸಿ ಪಾಲಿಟಿಕ್ಸ್ (ರಾಜಕಾರಣ) ಎಂಬ ಪದವನ್ನು ಬಳಸುತ್ತಿದ್ದರು. 'ಪಾಲಿಟಿಕ್ಸ್' ಎಂಬ ಪದ 'ನಗರರಾಜ್ಯ' (City - State) ಎಂಬ

ಅರ್ಥವುಳ್ಳ ಮೂಲ ಗ್ರೀಕ್ ಪದವಾದ 'ಪೊಲಿಸ್' (Polis) ಎಂಬುದರಿಂದ ಹುಟ್ಟಿ ಬಂದಿದೆ. ಗ್ರೀಕರಿಗೆ ನಗರವೇ ರಾಜ್ಯವಾಗಿತ್ತು ಮತ್ತು ನಗರ ರಾಜ್ಯದ ಆಡಳಿತದ ಅಧ್ಯಯನವೇ ರಾಜಕಾರಣವಾಗಿದ್ದಿತು. ಆಧುನಿಕವಾಗಿ ತಜ್ಞರು ರಾಜ್ಯಶಾಸ್ತ್ರ ಎಂದು ಕರೆದಿದ್ದಾರೆ.

ರಾಜಕಾರಣ (ಪಾಲಿಟಿಕ್ಸ್) ಎನ್ನುವ ಪದವು ಸರ್ಕಾರ ದಿನನಿತ್ಯ ಎದುರಿಸುವ ವಿಭಿನ್ನ ಸಮಸ್ಯೆಗಳನ್ನು ಸೂಚಿಸುತ್ತದೆ. ಆದರೆ ರಾಜ್ಯಶಾಸ್ತ್ರವು (ಪೊಲಿಟಿಕಲ್‌ಸೈನ್ಸ್) ರಾಜ್ಯದ ಮೂಲ, ಬೆಳವಣಿಗೆ, ಸ್ವರೂಪ, ಆಡಳಿತ ಪದ್ಧತಿ, ರಾಜ್ಯದ ಕಾರ್ಯವ್ಯಾಪ್ತಿ, ಪೌರರ ಹಕ್ಕು ಬಾಧ್ಯತೆಗಳು ಮುಂತಾದ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತದೆ. ರಾಜ್ಯಶಾಸ್ತ್ರವು ರಾಜ್ಯದ ಎಲ್ಲ ಮುಖಗಳ ಅಧ್ಯಯನವಾಗಿದೆ.

ರಾಜ್ಯಶಾಸ್ತ್ರವು ರಾಜ್ಯದ ಭೂತ, ವರ್ತಮಾನ ಹಾಗೂ ಭವಿಷ್ಯದ ರಾಜಕೀಯ ಸಂಸ್ಥೆಗಳು, ರಾಜಕೀಯ ಕಾರ್ಯಗಳು ಹಾಗೂ ರಾಜಕೀಯ ಸಿದ್ಧಾಂತಗಳ ಅಧ್ಯಯನವಾಗಿರುತ್ತದೆ. ರಾಜ್ಯ, ಸರ್ಕಾರ ಮತ್ತು ಮಾನವನ ರಾಜಕೀಯ ಚಟುವಟಿಕೆಗಳನ್ನು ಕುರಿತು ಅಧ್ಯಯನ ಮಾಡುವ ವಿಷಯವೇ ರಾಜ್ಯಶಾಸ್ತ್ರವೆಂದು ಸಾಮಾನ್ಯವಾಗಿ ಹೇಳಬಹುದು.

**ರಾಜ್ಯಶಾಸ್ತ್ರದ ಪ್ರಾಮುಖ್ಯತೆ**

ಪ್ರಸ್ತುತ ಯುಗದಲ್ಲಿ ರಾಜ್ಯಶಾಸ್ತ್ರದ ಜ್ಞಾನವು ಪ್ರತಿಯೊಬ್ಬರಿಗೂ ಅತ್ಯಂತ ಅವಶ್ಯಕವಾದುದ್ದಾಗಿದೆ. ರಾಜ್ಯವೊಂದರ ಅಭಿವೃದ್ಧಿ ಮತ್ತು ಪ್ರಗತಿಯು ಅಲ್ಲಿನ ಜನಗಳ ಆಲೋಚನೆ, ಜ್ಞಾನ ಮತ್ತು ರಾಜಕೀಯದಲ್ಲಿ ತೊಡಗಿಸಿಕೊಳ್ಳುವಿಕೆಯ ಮೇಲೆ ಅವಲಂಬಿತವಾಗಿರುತ್ತದೆ.

- ರಾಜ್ಯಶಾಸ್ತ್ರವು ರಾಜ್ಯವೊಂದರ ಉಗಮ ಮತ್ತು ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗುತ್ತದೆ. ರಾಜ್ಯದ ಕಾರ್ಯಗಳಲ್ಲಿ ರಾಜಕೀಯ ಚಟುವಟಿಕೆಗಳು ಮತ್ತು ವಿವಿಧ ಸರ್ಕಾರಗಳು ತೊಡಗಿಸಿಕೊಂಡಿರುವುದರ ಬಗ್ಗೆ ಮಾಹಿತಿಯನ್ನು ರಾಜ್ಯಶಾಸ್ತ್ರವು ಒದಗಿಸುತ್ತದೆ.
- ರಾಜ್ಯಶಾಸ್ತ್ರವು ಚಕ್ರಾಧಿಪತ್ಯ, ಸ್ವಾತಂತ್ರ್ಯ, ನ್ಯಾಯ, ಕಾನೂನುಗಳ ಸಮಾನತೆ, ಉತ್ತಮ ಸರ್ಕಾರ, ಯುದ್ಧ ಮತ್ತು ಶಾಂತಿ ಇತ್ಯಾದಿ ಪರಿಕಲ್ಪನೆಗಳ ಉತ್ಪತ್ತಿ ಮತ್ತು ಅಭಿವೃದ್ಧಿಯ ಬಗ್ಗೆ ಮಾಹಿತಿ ಒದಗಿಸುತ್ತದೆ.
- ರಾಜ್ಯಶಾಸ್ತ್ರವು ರಾಜ್ಯ ಮತ್ತು ಸರ್ಕಾರಗಳ ರಚನೆ ಮತ್ತು ಕಾರ್ಯಗಳ ಬಗ್ಗೆ ಮಾಹಿತಿ ಒದಗಿಸುತ್ತದೆ.
- ರಾಜ್ಯಶಾಸ್ತ್ರವು ಸರ್ಕಾರದ ಭೂತ ಮತ್ತು ವರ್ತಮಾನ ಕಾಲದ ಚಟುವಟಿಕೆಗಳ ಬೆಳಕಿನಡಿಯಲ್ಲಿ ಭವಿಷ್ಯದ ಚಟುವಟಿಕೆಗಳನ್ನು ಯೋಜಿಸಲು ಸಹಕರಿಸುವುದರ ಜೊತೆಗೆ ಆಧುನಿಕ ಕಲ್ಯಾಣ ರಾಜ್ಯದ ಸ್ಥಾಪನೆಗೆ ಸಹಾಯಕವಾಗುತ್ತದೆ.
- ರಾಜ್ಯಶಾಸ್ತ್ರವು ರಾಜ್ಯದ ಸಂವಿಧಾನ ಮತ್ತು ಕಾನೂನುಗಳ ಬಗೆಗಿನ ಜ್ಞಾನವನ್ನು ಒದಗಿಸುತ್ತದೆ.
- ರಾಜ್ಯಶಾಸ್ತ್ರವು ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಮತ್ತು ಅವುಗಳ ಕಾರ್ಯಗಳ ಬಗ್ಗೆ ತಿಳುವಳಿಕೆ ನೀಡುತ್ತದೆ.

© KTBS NOT TO BE REPUBLISHED

- ರಾಜ್ಯಶಾಸ್ತ್ರವು ಸಾಮಾನ್ಯ ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸುವುದರ ಮೂಲಕ ಸರ್ಕಾರ ಮತ್ತು ಜನಪತ್ರಿನಿಧಿಗಳು ಜಾಗೃತವಾಗಿಯೂ ಮತ್ತು ಸಕ್ರಿಯವಾಗಿ ಇರುವಂತೆ ನೋಡಿಕೊಳ್ಳುತ್ತದೆ.
- ರಾಜ್ಯಶಾಸ್ತ್ರದ ಜ್ಞಾನವು ಉತ್ತಮ ನಾಯಕರು ಮತ್ತು ಸಮಾಜಸೇವಕರುಗಳು ಜನರ ಸಮಸ್ಯೆಗಳನ್ನು ತಿಳಿದು ಪರಿಣಾಮಕಾರಿಯಾದ ಪರಿಹಾರ ಕ್ರಮಗಳನ್ನು ಅನುಸರಿಸಲು ಸಹಾಯಕವಾಗುತ್ತದೆ.
- ರಾಜ್ಯಶಾಸ್ತ್ರದ ಜ್ಞಾನವು ಉತ್ತಮ ನಾಯಕರುಗಳನ್ನು ಮತ್ತು ಉತ್ತಮ ನಾಗರಿಕರನ್ನು ಸೃಷ್ಟಿಸುವಲ್ಲಿ ಸಹಕರಿಸುತ್ತದೆ.
- ರಾಜ್ಯಶಾಸ್ತ್ರವು ರಾಜಕೀಯ ಸಂಸ್ಥೆಗಳಾದಂತಹ ರಾಜಕೀಯ ಪಕ್ಷಗಳು, ಒಕ್ಕೂಟಗಳು, ಸ್ಥಳೀಯ ಸಂಸ್ಥೆಗಳು ಇತ್ಯಾದಿಗಳನ್ನು ತಿಳಿಯಲು ಸಹಾಯಕವಾಗುತ್ತದೆ.
- ಜನರು ಸಕ್ರಿಯವಾಗಿ ರಾಜಕೀಯದಲ್ಲಿ ತೊಡಗಿಸಿಕೊಳ್ಳಲು ಪೂರಕವಾಗುವ ತತ್ವ ಹಾಗೂ ನೀತಿಗಳನ್ನು ಪ್ರೋತ್ಸಾಹಿಸಲು ರಾಜ್ಯಶಾಸ್ತ್ರವು ನೆರವಾಗುತ್ತದೆ.
- ರಾಜ್ಯಶಾಸ್ತ್ರವು ಅಂತರಾಷ್ಟ್ರೀಯ ಸಂಬಂಧಗಳ ಬಗೆಗಿನ ಜ್ಞಾನವನ್ನು ನೀಡುವುದರ ಜೊತೆಗೆ ವಿಶೇಷವಾಗಿ ದೇಶದೇಶಗಳ ನಡುವಿನ ಯುದ್ಧಗಳ ಬಗ್ಗೆ ಹಾಗೂ ಶಾಂತಿ ಮತ್ತು ಸಹಕಾರದ ಮಹತ್ವವನ್ನು ತಿಳಿಸುತ್ತದೆ.

ಈ ಮೇಲಿನ ಎಲ್ಲಾ ಕಾರಣಗಳಿಂದಾಗಿ ರಾಜ್ಯಶಾಸ್ತ್ರದ ಅಧ್ಯಯನವು ರಾಜ್ಯವೊಂದರ ಅವಶ್ಯಕತೆ, ಉತ್ತಮ ರಾಜ್ಯಾಡಳಿತ, ನಾಯಕರುಗಳ ಪಾತ್ರ ಹಾಗು ಪ್ರಜೆಗಳ ಭಾಗವಹಿಸುವಿಕೆಯ ಸ್ಪಷ್ಟ ಅರಿವನ್ನುಂಟುಮಾಡುತ್ತದೆ. ರಾಜ್ಯಶಾಸ್ತ್ರವು ಪ್ರಜೆಗಳೆಲ್ಲರೂ ಉತ್ತಮ, ಜವಾಬ್ದಾರಿಯುತ, ಸುಸಂಸ್ಕೃತ ಮತ್ತು ಕ್ರಿಯಾಶೀಲ ನಾಗರಿಕರಾಗುವಂತೆ ಸಹಕರಿಸುತ್ತದೆ. ರಾಜ್ಯಶಾಸ್ತ್ರದ ಜ್ಞಾನವು ನ್ಯಾಯಯುತ, ಶಾಂತ, ಪ್ರಗತಿದಾಯಕ ಮತ್ತು ಸುಖಿ ರಾಜ್ಯವನ್ನು ಸಂಸ್ಥಾಪಿಸುವಲ್ಲಿ ಮಹತ್ತರ ಕೊಡುಗೆಯನ್ನು ನೀಡುವುದರ ಮೂಲಕ ಸಹಸ್ರ ಸಹಸ್ರ ಸಂಖ್ಯೆಯ ಜನರ ಕನಸನ್ನು ನನಸಾಗಿಸುತ್ತದೆ.

NOT TO BE REPUBLISHED @KTBS

## ಅಭ್ಯಾಸಗಳು

**I ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1 ಪಾಲಿಟಿಕ್ಸ್ ಎಂಬ ಪದವು __________ ಗ್ರೀಕ್ ಪದದಿಂದ ಉತ್ಪತ್ತಿಗೊಂಡಿದೆ.

2 'ರಿಪಬ್ಲಿಕ್' ಗ್ರಂಥದ ಕರ್ತೃ ______________ .

3 ಅರಿಸ್ಟಾಟಲ್ ರಾಜ್ಯಶಾಸ್ತ್ರವನ್ನು ಕುರಿತು ರಚಿಸಿದ ಕೃತಿ ______________ .

4 ರಾಜ್ಯಶಾಸ್ತ್ರದ ಬಗೆಗಿನ ಮಾಹಿತಿ ಹೊಂದಿರುವ ಕೌಟಿಲ್ಯನ ಕೃತಿ ______________ .

**II ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

5 ರಾಜ್ಯಶಾಸ್ತ್ರ ಎಂದರೇನು ?

6 ರಾಜ್ಯಶಾಸ್ತ್ರದ ಕ್ರಮಬದ್ಧ ಅಧ್ಯಯನ ಯಾರಿಂದ ಪ್ರಾರಂಭವಾಯಿತು?

7 ರಾಜ್ಯಶಾಸ್ತ್ರದ ಪಿತಾಮಹರೆಂದು ಯಾರನ್ನು ಕರೆಯುತ್ತಾರೆ?

8 ರಾಜ್ಯಶಾಸ್ತ್ರದ ಒಂದು ವ್ಯಾಖ್ಯೆ ನೀಡಿ.

9 ರಾಜ್ಯಶಾಸ್ತ್ರದ ಅಧ್ಯಯನದ ಯಾವುದಾದರೊಂದು ಪ್ರಯೋಜನ ತಿಳಿಸಿ?

**III ಚಟುವಟಿಕೆಗಳು.**

10 ಭಾರತದಲ್ಲಿ ಹಿಂದೆ ಇದ್ದ ರಾಜಕೀಯ ವ್ಯವಸ್ಥೆಯನ್ನು ಬಿಂಬಿಸುವ ಚಿತ್ರಪಟಗಳ ಸಂಗ್ರಹ ಪುಸ್ತಕವನ್ನು ಸಿದ್ಧಪಡಿಸಿ.

11 ನಿಮ್ಮ ತರಗತಿಯಲ್ಲಿ ಶಿಕ್ಷಕರ ಸಹಾಯದೊಂದಿಗೆ ಅರಿಸ್ಟಾಟಲನು ರಾಜ್ಯಶಾಸ್ತ್ರದ ಬಗ್ಗೆ ನೀಡಿದ ಹೇಳಿಕೆಯನ್ನು ಚರ್ಚಿಸಿ.

12 'ಮಾನವನ ಸಾಮಾಜಿಕ ಅವಶ್ಯಕತೆಗಳು ರಾಜ್ಯ ಸೃಷ್ಟಿಗೆ ನಾಂದಿಯಾದವು' ಈ ವಿಚಾರವಾಗಿ ನಿಮ್ಮ ತರಗತಿಯಲ್ಲಿ ವಿಚಾರವಿನಿಮಯದ ಕಾರ್ಯಕ್ರಮವೊಂದನ್ನು ಏರ್ಪಡಿಸಿ.

**IV ಯೋಜನೆಗಳು.**

13 ನೀವೊಬ್ಬ ಪುರಾತನ ಗ್ರೀಸ್ ದೇಶದ ಪ್ರಜೆಯೆಂದು ಭಾವಿಸಿಕೊಂಡು ನಗರ ರಾಜ್ಯದ ಯಾವುದಾದರೊಂದು ನಿರ್ದಿಷ್ಟ ವಿಚಾರವೊಂದರ ಬಗ್ಗೆ ಚರ್ಚಿಸಿ.

14 'ಸರ್ವಾಧಿಕಾರಿ ಧೋರಣೆಯು ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಸಂಸ್ಥೆಗಳನ್ನು ದಮನಗೊಳಿಸುತ್ತದೆ' – ಈ ವಿಚಾರಕ್ಕೆ ಸಂಬಂಧಿಸಿದ ಮಾಹಿತಿ ಮತ್ತು ಚಿತ್ರ ಪಟಗಳನ್ನು ಸಂಗ್ರಹಿಸಿ.

15 ಮಹಾಕಾವ್ಯಗಳಲ್ಲಿ ಕಾಣಬರುವ ರಾಜಕೀಯ ವಿಚಾರಗಳ ಬಗೆಗಿನ ಮಾಹಿತಿಯನ್ನು ಸಂಗ್ರಹಿಸಿ.

✲ ✲ ✲

@KTBS
NOT TO BE REPUBLISHED

# ಅಧ್ಯಾಯ-8
# ಪೌರ ಮತ್ತು ಪೌರತ್ವ

Q6Q9T6

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- 'ಪೌರ ಮತ್ತು 'ಪೌರತ್ವದ ಅರ್ಥ ವ್ಯತ್ಯಾಸ ತಿಳಿಯುವುದು.
- ಪೌರನಿಗೆ ದೇಶವು ನೀಡುವ ಸೌಲಭ್ಯಗಳ ಬಗ್ಗೆ ತಿಳಿಯುವುದು.
- ಪೌರ ಮತ್ತು ವಿದೇಶಿಯನ ನಡುವಿನ ವ್ಯತ್ಯಾಸ ಗುರುತಿಸುವುದು.
- 'ಪೌರತ್ವ ಪಡೆಯುವ, ವಿಧಾನಗಳು ಮತ್ತು ಕಳೆದುಕೊಳ್ಳುವ ವಿಧಾನಗಳ ಬಗ್ಗೆ ತಿಳಿಯುವುದು

**ಅರ್ಥ** : **'ಪೌರತ್ವ'** ಎಂಬ ಪದ ಕಾಲಕಾಲಕ್ಕೆ ವಿವಿಧ ಅರ್ಥವನ್ನು ಪಡೆದಿದೆ. ಗ್ರೀಕರ ಕಾಲದಲ್ಲಿ ಪೌರತ್ವ ಎಂಬುದು ಸಂಕುಚಿತ ಅರ್ಥವನ್ನು ಹೊಂದಿತ್ತು. ಆಗಿನ ಕಾಲದಲ್ಲಿ ಗ್ರೀಕ್ ನಗರ – ರಾಜ್ಯಗಳ ನಿವಾಸಿಗಳಾಗಿದ್ದು, ರಾಜ್ಯದ ಆಡಳಿತದಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದವರಿಗೆ ಮಾತ್ರ ಪೌರರು ಎನ್ನುವ ಮಾತು ಅನ್ವಯವಾಗುತ್ತಿತ್ತು. ರಾಜ್ಯದಲ್ಲಿ ವಾಸಿಸುತ್ತಿದ್ದವರೆಲ್ಲರೂ ಪೌರರಾಗಿರುವುದಿಲ್ಲ. ರಾಜ್ಯದ ಆಡಳಿತ, ನ್ಯಾಯ ವಿತರಣೆ ಮತ್ತು ಶಾಸನೀಯ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದವರಿಗೆ ಮಾತ್ರ ಪೌರರು ಎಂದು ಕರೆಯಲಾಗುತ್ತಿತ್ತು. ಉಳಿದಂತೆ ಸ್ತ್ರೀಯರು, ಗುಲಾಮರು, ಕಾರ್ಮಿಕರು, ಮಕ್ಕಳು, ವಿದೇಶಿಯರು, ವ್ಯಾಪಾರಿಗಳು ಮುಂತಾದವರು ಪೌರರಾಗಿರಲಿಲ್ಲ, ಇದು ಪೌರತ್ವದ ಬಗೆಗೆ ಇದ್ದ ಪುರಾತನ ಗ್ರೀಕರ ಪರಿಕಲ್ಪನೆಯಾಗಿತ್ತು.

ಆದರೆ, ಆಧುನಿಕ ಕಾಲದ ಪೌರತ್ವದ ಪರಿಕಲ್ಪನೆ ವಿಶಾಲಾರ್ಥವನ್ನು ಹೊಂದಿದೆ. ಒಂದು ನಾಗರಿಕ ಸಮಾಜದ / ರಾಜ್ಯದ ಸದಸ್ಯತ್ವ ಹೊಂದಿ, ತಾನು ವಾಸಿಸುವ ರಾಜ್ಯಕ್ಕೆ ನಿಷ್ಠೆಯಿಂದ ಇದ್ದು, ರಾಜ್ಯವು ನೀಡುವ ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ಅನುಭವಿಸುವ ಯಾವುದೇ ವ್ಯಕ್ತಿಯನ್ನು ಪೌರನೆಂದು ಕರೆಯಲಾಗಿದೆ. ನಾಗರಿಕ ಸಮಾಜದ ಸದಸ್ಯನಾಗಿದ್ದು, ನಿರ್ದಿಷ್ಟ ಕರ್ತವ್ಯಗಳಿಗೆ ಬದ್ಧನಾಗಿ, ಸಾಮಾನ್ಯ ಪ್ರಾಧಿಕಾರಕ್ಕೆ ಒಳಪಟ್ಟು, ಅದು ನೀಡುವ ಸೌಲಭ್ಯಗಳನ್ನು ಸಮಾನವಾಗಿ ಅನುಭೋಗಿಸುವವನೇ ಪೌರ ಎಂದು ವ್ಯಾಟೆಲ್ ವ್ಯಾಖ್ಯಾನ ಮಾಡಿದ್ದಾರೆ. ಹೀಗೆ ಒಬ್ಬ ವ್ಯಕ್ತಿಯು ಪೌರ ಎನಿಸಿಕೊಳ್ಳಬೇಕಾದರೆ, ಅವನು ರಾಜ್ಯದ ಖಾಯಂ ನಿವಾಸಿಯಾಗಿದ್ದು, ರಾಜ್ಯದ ಸದಸ್ಯತ್ವವನ್ನು ಹೊಂದಿರಬೇಕು; ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ಅನುಭೋಗಿಸುವುದು; ಹಕ್ಕುಗಳ ಜೊತೆಗೆ ಕೆಲವು ಕರ್ತವ್ಯಗಳನ್ನು ನಿರ್ವಹಿಸಬೇಕು ಮತ್ತು ರಾಜ್ಯಕ್ಕೆ ನಿಷ್ಠೆಯಿಂದ ಇರಬೇಕು.

ಪ್ರಜೆಗಳಿಗೂ ಮತ್ತು ಪೌರರಿಗೂ ನಿಖರ ವ್ಯತ್ಯಾಸವನ್ನು ಕಾಣುತ್ತೇವೆ. 1947 ಕ್ಕಿಂತ ಮುಂಚೆ ನಾವೆಲ್ಲ ಬ್ರಿಟಿಷರ ಆಳ್ವಿಕೆಯಲ್ಲಿನ ಪ್ರಜೆಗಳಾಗಿದ್ದೆವು. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ನಾವುಗಳೆಲ್ಲಾ ಭಾರತೀಯ ಪೌರರಾಗಿದ್ದೇವೆ. ಸಾಮಾನ್ಯವಾಗಿ ಒಂದು ರಾಜ್ಯಕ್ಕೆ ಸಂಬಂಧಿಸಿದ ಹಾಗೂ ಅಲ್ಲಿ ವಾಸಿಸುತ್ತಿರುವ ಜನರು ಆ ರಾಜ್ಯದ ಪೌರರೆನಿಸಿಕೊಳ್ಳುತ್ತಾರೆ. ಒಬ್ಬ ಪೌರನಾಗಿರಬೇಕಾದರೆ ಅವನು ವಾಸಿಸುವ ರಾಜ್ಯ ಅಥವಾ ದೇಶದ ಕಾನೂನುಗಳ ಅನುಪಾಲಕನಾಗಿರಬೇಕು. ರಾಜ್ಯ ಅಥವಾ ದೇಶವೊಂದು ಪೌರರಿಗೆ ರಕ್ಷಣೆ ಮತ್ತು ಸವಲತ್ತುಗಳನ್ನು ಒದಗಿಸಿದರೆ, ಪೌರನು ದೇಶದ ನೀತಿ, ನಿಯಮ, ಕಾನೂನುಗಳ ಪರಿಪಾಲಕನಾಗಿ ದೇಶದ ಪ್ರಗತಿಯಲ್ಲಿ ತನ್ನ ಏಳಿಗೆಯನ್ನು ಕಾಣಬೇಕು.

@KTBS NOT TO BE REPUBLISHED

ಪೌರನಾದವನು ಒಂದು ದೇಶದ ಸದಸ್ಯ ಪ್ರಜೆಯಾಗಿ ಆ ದೇಶದಲ್ಲಿ ಹಲವಾರು ಅನುಕೂಲಗಳನ್ನು ಹಾಗೂ ಸೌಲಭ್ಯತೆಗಳನ್ನು ಅನುಭೋಗಿಸುತ್ತಾನೆ, ಅವುಗಳೆಂದರೆ

- ರಾಷ್ಟ್ರದಿಂದ ಭದ್ರತೆ ಮತ್ತು ರಕ್ಷಣೆಗಳನ್ನು ಪಡೆಯುತ್ತಾನೆ.
- ರಾಷ್ಟ್ರವು ಕಾನೂನು ಮತ್ತು ಸುವ್ಯವಸ್ಥೆಯನ್ನು ನೀಡುವುದರಿಂದ ಅವನು ಶಾಂತಿಯುತ ಜೀವನ ನಡೆಸುತ್ತಾನೆ.
- ಇಂದಿನ ಸಮಾಜ ಕಲ್ಯಾಣ ಯೋಜನೆಗಳ ಅಡಿಯಲ್ಲಿ ರಾಜ್ಯ ಒದಗಿಸುವ ಶಿಕ್ಷಣ, ಆರೋಗ್ಯ, ವಿಮೆ, ಆಶ್ರಯ, ಉದ್ಯೋಗ ಹಾಗೂ ಇತರೆ ಸೌಲಭ್ಯಗಳನ್ನು ಅನುಭವಿಸುತ್ತಾನೆ.
- ಪೌರನು ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ಅನುಭೋಗಿಸುತ್ತಾನೆ.
- ರಾಜ್ಯ ನೀಡುವ ಮೂಲಭೂತ ಹಕ್ಕುಗಳನ್ನು ಅನುಭವಿಸುತ್ತಾನೆ.
- ಚುನಾವಣೆಗಳಲ್ಲಿ ಪ್ರತಿನಿಧಿಸುವ, ಸ್ಪರ್ಧಿಸುವ ಮತ್ತು ಮತ ಚಲಾಯಿಸುವ ರಾಜಕೀಯ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಪಡೆಯುತ್ತಾನೆ.
- ರಾಷ್ಟ್ರಾಧ್ಯಕ್ಷ, ಉಪರಾಷ್ಟ್ರಾಧ್ಯಕ್ಷ, ಸರ್ವೋಚ್ಚ ಹಾಗೂ ಶ್ರೇಷ್ಠ ನ್ಯಾಯಾಲಯಗಳ ನ್ಯಾಯಾಧೀಶರು ಹಾಗೂ ಇತರೆ ಉನ್ನತ ಹುದ್ದೆಗಳನ್ನು ಅಲಂಕರಿಸುವ ಅರ್ಹತೆಗಳನ್ನು ಪಡೆಯುತ್ತಾನೆ.
- ಎಲ್ಲಾ ಸಾರ್ವಜನಿಕ ಸೇವೆಗಳಿಗೆ ನೇಮಕಾತಿ ಪಡೆಯುವ ಅರ್ಹತೆ ಹೊಂದಿರುತ್ತಾನೆ.

**ಪೌರ ಮತ್ತು ವಿದೇಶಿ ನಡುವಿನ ವ್ಯತ್ಯಾಸಗಳು**

ಒಂದು ರಾಜ್ಯದಲ್ಲಿ ಹುಟ್ಟಿ, ಬೆಳೆದು ಅಲ್ಲಿಯ ಪೌರತ್ವವನ್ನು ಹೊಂದಿ ಅಲ್ಲಿಯೇ ಶಾಶ್ವತವಾಗಿ ನೆಲೆಸಿರುವವರನ್ನು ಅಲ್ಲಿನ ಪೌರರು ಎಂದು ಕರೆಯಲಾಗುತ್ತದೆ. ಆದರೆ, ಯಾವುದೇ ರಾಜ್ಯದ ಪೌರನಾಗಿದ್ದು ತಾತ್ಕಾಲಿಕವಾಗಿ ಬೇರೊಂದು ದೇಶದಲ್ಲಿ ನೆಲೆಸಿದವರನ್ನು ವಿದೇಶಿಯರು ಎಂದು ಕರೆಯಲಾಗುತ್ತದೆ. ಅವನು ತಾತ್ಕಾಲಿಕವಾಗಿ ನೆಲೆಸಿರುವ ದೇಶದಲ್ಲಿ ವಿದೇಶಿಯನಾಗಿರುತ್ತಾನೆ. ಆದರೆ ತನ್ನ ತಾಯಿನಾಡಿನ ಪೌರನಾಗಿರುತ್ತಾನೆ. ಪೌರ ಮತ್ತು ವಿದೇಶಿ ನಡುವಿನ ವ್ಯತ್ಯಾಸಗಳನ್ನು ಈ ಕೆಳಗಿನಂತೆ ವಿವರಿಸಬಹುದು.

1. ಪೌರನು ತನ್ನ ದೇಶದ ಶಾಶ್ವತ ನಿವಾಸಿಯಾಗಿದ್ದು, ಪೂರ್ಣಸದಸ್ಯನಾಗಿರುತ್ತಾನೆ. ವಿದೇಶಿಯನು ತಾತ್ಕಾಲಿಕ ನಿವಾಸಿ ಅಥವಾ ಪ್ರವಾಸಿಗನು.

2. ಪೌರನಿಗೆ ರಾಜಕೀಯ ಹಕ್ಕು ಲಭ್ಯವಿರುತ್ತವೆ. ಅವನು ಮತದಾನದಲ್ಲಿ ಭಾಗವಹಿಸಬಹುದು. ಚುನಾವಣೆಯಲ್ಲಿ ಸ್ಪರ್ಧಿಸಬಹುದು; ಸರ್ಕಾರದ ಹುದ್ದೆಯನ್ನು ಹೊಂದಬಹುದು. ವಿದೇಶಿಯನಿಗೆ ಇವು ದೊರಕುವುದಿಲ್ಲ.

3. ಪೌರ ಅಥವಾ ನಾಗರಿಕನು ತನ್ನ ರಾಜ್ಯಕ್ಕೆ ನಿಷ್ಠೆ ತೋರುತ್ತಾನೆ. ಆದರೆ ವಿದೇಶಿಯನು ಪೌರನಾಗಿ ಮತ್ತೊಂದು ರಾಷ್ಟ್ರದ ಹಂಗಾಮಿ ಸದಸ್ಯನಾಗಿರುತ್ತಾನೆ. ತಾನು ಹಂಗಾಮಿಯಾಗಿ ನೆಲೆಸಿರುವ ರಾಷ್ಟ್ರದ ಕಾನೂನುಗಳನ್ನು ಗೌರವಿಸಬೇಕು ಹಾಗೂ ಪಾಲಿಸಬೇಕು.

4. ರಾಜ್ಯಸರ್ಕಾರ ಅನಪೇಕ್ಷಿತ ವಿದೇಶಿಯನನ್ನು ಕಾನೂನು ಬಾಹಿರ ಚಟುವಟಿಕೆ, ವಿದೇಶಿ ಪರವನಾಗಿ ಅವಧಿಯ ಮುಕ್ತಾಯ ಮುಂತಾದ ಕಾರಣಗಳಿಂದ ದೇಶ ಬಿಟ್ಟು ಹೋಗುವಂತೆ ಆದೇಶಿಸಬಹುದು. ಆದರೆ ಪೌರನಿಗೆ ಅಂತಹ ಆಜ್ಞೆ ವಿಧಿಸುವಂತಿಲ್ಲ.

© KTBS NOT TO BE REPUBLISHED

**ಪೌರತ್ವವನ್ನು ಪಡೆಯುವ ವಿಧಾನಗಳು**

ಪೌರತ್ವ ಪಡೆಯುವಲ್ಲಿ ಎರಡು ವಿಧಾನಗಳಿವೆ. ಅವುಗಳೆಂದರೆ :

1. ಜನನ ಸ್ಥಾನ 2. ದೇಶೀಕರಣ

**1. ಜನನ :** ಜನನ ಸ್ಥಾನದ ಆಧಾರದ ಮೇಲೆ ಪೌರತ್ವ ನೀಡಿಕೆಯ ನಿಯಮಗಳು ಆಚರಣೆಯಲ್ಲಿರುವುದು ಕಂಡು ಬರುತ್ತದೆ. ಒಂದು ರಾಜ್ಯದಲ್ಲಿ ಜನನವಾದರೆ ಪೌರತ್ವ ಪಡೆಯಲು ಅರ್ಹನಾಗುತ್ತಾನೆ. ಆದರೆ ಜನ್ಮಸ್ಥಳವನ್ನು ಆಧರಿಸಿ ಪೌರತ್ವ ನೀಡುವುದು ತರ್ಕಬದ್ಧವಾಗಿಲ್ಲ ಎಂದು ವಾದಿಸಲಾಗಿದೆ. ಏಕೆಂದರೆ ಹೆರಿಗೆ ಆಕಸ್ಮಿಕವಾಗಿ ಇನ್ನೊಂದು ದೇಶದಲ್ಲಿ ಆಗುವ ಸಾಧ್ಯತೆ ಇರುತ್ತದೆ.

**2. ದೇಶೀಕರಣ (Naturalisation) :** ದೇಶೀಕರಣ ಮೂಲಕವೂ ಒಂದು ರಾಜ್ಯದ ಪೌರತ್ವ ಪಡೆಯಬಹುದಾಗಿದೆ. ಯಾವುದೇ ದೇಶವು ವಿಧಿಸುವ ಕರಾರು ಹಾಗೂ ನಿಯಮಗಳನ್ನು ಈಡೇರಿಸಿದಾಗ ಆ ದೇಶದ ಪೌರತ್ವ ಪಡೆಯಲು ಅರ್ಹರಾಗುತ್ತಾರೆ. ದೇಶೀಕರಣದ ನಿಯಮಗಳು ದೇಶದಿಂದ ದೇಶಕ್ಕೆ ಭಿನ್ನವಾಗಿರುವುದಾದರೂ ಅದರ ಸಾಮಾನ್ಯ ನಿಯಮಗಳು ಈ ಕೆಳಗಿನಂತಿವೆ :

ಎ) **ವಾಸಸ್ಥಳ :** ಒಂದು ದೇಶದ ಪೌರನು ಬೇರೊಂದು ದೇಶದಲ್ಲಿ ದೀರ್ಘಕಾಲ ವಾಸವಾಗಿದ್ದರೆ ಆ ದೇಶದ ಪೌರತ್ವವನ್ನು ಪಡೆಯಬಹುದು. ಈ ರೀತಿಯ ವಾಸದ ಅವಧಿ ದೇಶದಿಂದ ದೇಶಕ್ಕೆ ಭಿನ್ನವಾಗಿದೆ. ಅಮೆರಿಕ ಮತ್ತು ಇಂಗ್ಲೆಂಡ್ ರಾಷ್ಟ್ರಗಳಲ್ಲಿ ನಿರಂತರ ವಾಸದ ಅವಧಿ 5 ವರ್ಷಗಳಾಗಿದ್ದರೆ, ಫ್ರಾನ್ಸ್ ದೇಶದಲ್ಲಿ ಈ ಅವಧಿ 10 ವರ್ಷ.

ಬಿ) **ವಿವಾಹ :** ಒಂದು ದೇಶದ ಮಹಿಳೆ ವಿದೇಶದ ಪುರುಷನೊಂದಿಗೆ ವಿವಾಹವಾದರೆ ಅವಳು ತನ್ನ ಪತಿಯ ದೇಶದ ಪೌರತ್ವ ಪಡೆಯುತ್ತಾಳೆ. ಆದರೆ ಪತಿಯು ತನ್ನ ಹೆಂಡತಿಯ ದೇಶದ ಪೌರತ್ವ ಪಡೆಯುವುದಿಲ್ಲ. ಜಪಾನ್ ಹಾಗೂ ಕೆಲವು ದೇಶಗಳು ಮಾತ್ರ ಇದಕ್ಕೆ ಅಪವಾದವಾಗಿವೆ.

ಸಿ) **ವಿದೇಶಿ ಸರ್ಕಾರಿ ಸೇವೆ :** ಒಂದು ದೇಶದ ಪೌರನು ವಿದೇಶಿ ಸರ್ಕಾರ ಸೇವೆಗೆ ಸೇರಿದರೆ ಆ ದೇಶದ ಪೌರತ್ವವನ್ನು ಪಡೆಯಬಹುದು. ವಿದೇಶಿಯರ ದೇಶನಿಷ್ಠೆಯ ಬಗ್ಗೆ ಸಂಶಯದಿಂದಾಗಿ ಹಲವು ದೇಶಗಳು ವಿದೇಶಿಯರನ್ನು ರಾಜ್ಯಸೇವೆಗೆ ಸೇರಿಸಿಕೊಳ್ಳುವುದಿಲ್ಲ.

ಡಿ) **ಆಸ್ತಿ ಸಂಪಾದನೆಯ ಮೂಲಕ :** ಒರ್ವ ವ್ಯಕ್ತಿಯು ಬೇರೆ ದೇಶದಲ್ಲಿ ಆಸ್ತಿಯನ್ನು ಖರೀದಿಸಿದರೆ ಆ ದೇಶವು ಆತನಿಗೆ ಪೌರತ್ವ ನೀಡಬಹುದು. ಮೆಕ್ಸಿಕೊ ದೇಶದಲ್ಲಿ ಇಂತಹ ನಿಯಮವಿದೆ. ಆದರೆ ಇಂದಿನ ರಾಷ್ಟ್ರಗಳು ವಿದೇಶಿಯರಿಗೆ ಭೂಮಿಯನ್ನು ಕೊಳ್ಳಲು ಆಸ್ಪದ ಕೊಡುವುದು ಅಪರೂಪ.

ಇ) **ಮನವಿಯ ಮೂಲಕ :** ನಿಗದಿತ ಅರ್ಜಿ ಅಥವಾ ಮನವಿ ಸಲ್ಲಿಸುವ ಮೂಲಕ ಬೇರೆ ದೇಶದ ಪೌರತ್ವವನ್ನು ಪಡೆಯಬಹುದು. ಹೀಗೆ ಮನವಿ ಸಲ್ಲಿಸುವವರು ನಿರ್ದಿಷ್ಟ ಕರಾರುಗಳನ್ನು ಪೂರೈಸಬೇಕಾಗುತ್ತದೆ. ಸಾಮಾನ್ಯವಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಯು ದಿವಾಳಿಕೋರನಾಗಿರದೆ ಉತ್ತಮ ನಡತೆಯನ್ನು ಹೊಂದಿರಬೇಕೆಂದು ಪೌರತ್ವ ನೀಡುವ ದೇಶ ಬಯಸುತ್ತದೆ.

© KTBS NOT TO BE REPUBLISHED

**ಭಾರತದ ಪೌರತ್ವವನ್ನು ಪಡೆಯುವ ವಿಧಾನಗಳು**

ಭಾರತದೇಶದಲ್ಲಿ ಪೌರತ್ವಕ್ಕೆ ಸಂಬಂಧಿಸಿದಂತೆ ಕಾನೂನು ಮತ್ತು ಶಾಸನಗಳನ್ನು ನಿರ್ಮಿಸುವ ಅಧಿಕಾರವನ್ನು ಸಂಸತ್ತು ಹೊಂದಿರುತ್ತದೆ. ರಾಜ್ಯ ಶಾಸಕಾಂಗವು ಈ ವಿಚಾರದಲ್ಲಿ ಯಾವುದೇ ಅಧಿಕಾರ ಹೊಂದಿರುವುದಿಲ್ಲ. ಭಾರತದಲ್ಲಿ 1955ರಲ್ಲಿ ಪೌರತ್ವ ಕಾಯಿದೆಯನ್ನು ಜಾರಿಗೆ ತರಲಾಯಿತು. ಈ ಕಾಯಿದೆಯು ಪೌರತ್ವ ಪಡೆಯುವ ಮತ್ತು ಕಳೆದುಕೊಳ್ಳುವ ಬಗೆಯನ್ನು ವಿವರಿಸಿದೆ. ಈ ಕಾಯಿದೆಯು ಪುನಃ 1986 ರಲ್ಲಿ ತಿದ್ದುಪಡಿಯಾಗಿದೆ. ಪೌರತ್ವ ಪಡೆಯುವ ನಿಯಮಗಳನ್ನು ಬಹು ಕಟ್ಟುನಿಟ್ಟಾಗಿ ರೂಪಿಸಿದೆ. 1955 ರ ಪೌರತ್ವ ಕಾಯಿದೆಯು ಪೌರತ್ವ ಪಡೆಯುವ ವಿಧಿಗಳನ್ನು ಕೆಳಗಿನಂತೆ ನಿರ್ದೇಶಿಸುತ್ತದೆ. ಅವುಗಳೆಂದರೆ:

1. **ಜನ್ಮದತ್ತ ಪೌರತ್ವ (Citizenship by Birth):** ಭಾರತದಲ್ಲಿ 26ನೇ ಜನವರಿ 1950ರಿಂದ ಜನ್ಮ ಪಡೆದಿರುವ ಪ್ರತಿಯೊಬ್ಬ ವ್ಯಕ್ತಿಯು ಜನ್ಮದತ್ತವಾಗಿ ಭಾರತೀಯ ಪೌರನಾಗುತ್ತಾನೆ. 1950ರ ಜನವರಿ 26 ಕ್ಕೆ ಮೊದಲು ಜನಿಸಿದವರಿಗೆ (ಹಾಗೂ ಭಾರತದಲ್ಲಿ ನೆಲೆಸಿದವರಿಗೆ) ಪೌರತ್ವವನ್ನು ನೀಡಲಾಗಿದೆ.

2. **ರಕ್ತಸಂಬಂಧ (Citizenship by Descent) / ಅನುವಂಶಿಕ ಪೌರತ್ವ :** ವ್ಯಕ್ತಿಯೊಬ್ಬ 26ನೇ ಜನವರಿ 1950ರ ನಂತರದಲ್ಲಿ ವಿದೇಶದಲ್ಲಿ ಹುಟ್ಟಿದ್ದು, ಆ ಸಮಯದಲ್ಲಿ ಆ ವ್ಯಕ್ತಿಯ ತಾಯಿ ಅಥವಾ ತಂದೆ ಭಾರತದ ಪೌರನಾಗಿದ್ದರೆ ಅವನೂ ಕೂಡ ಭಾರತೀಯ ಪೌರತ್ವ ಪಡೆಯಬಹುದಾಗಿದೆ.

3. **ನೋಂದಣಿ ಪೌರತ್ವ (Citizenship by Registration):** ಭಾರತೀಯ ನಾಗರಿಕನಲ್ಲದ ಯಾವುದೇ ವ್ಯಕ್ತಿಯು ಭಾರತದ ಪೌರನಾಗಬೇಕೆಂದು ಬಯಸಿದರೆ ಭಾರತ ಸಂವಿಧಾನದ ಪ್ರಕಾರ ಅಥವಾ ಪೌರತ್ವ ಕಾಯಿದೆಯ ಪ್ರಕಾರ ನೋಂದಣಿ ಮಾಡಿಕೊಂಡು ಪೌರತ್ವವನ್ನು ಪಡೆಯಬಹುದು.

4. **ಸಹಜ ಪೌರತ್ವ (Citizenship by Naturalisation) :** ಭಾರತದ ರಾಷ್ಟ್ರಪತಿಯವರಿಗೆ ಪೌರತ್ವಕ್ಕಾಗಿ ಪರಕೀಯರು ಅಂದರೆ ಅನ್ಯ ದೇಶದವರು ಅರ್ಜಿಸಲ್ಲಿಸಿ ಪೌರತ್ವವನ್ನು ಸಂಪಾದಿಸಿಕೊಳ್ಳಬಹುದು. ಇಂತಹ ಸಂಧರ್ಭದಲ್ಲಿ ಅರ್ಜಿದಾರರು ಭಾರತದಲ್ಲಿ ಕನಿಷ್ಠ ಐದು ವರ್ಷಗಳ ವಾಸವಾಗಿದ್ದು ಇನ್ನಿತರೆ ನಿಬಂಧನೆಗಳನ್ನು ಪೂರೈಸಬೇಕಾಗುತ್ತದೆ.

5. **ನೂತನ ಭೂಪ್ರದೇಶದ ಸೇರ್ಪಡೆಯಿಂದ ಪೌರತ್ವ (By incorporation of new Territory):** ಯಾವುದಾದರೂ ನೂತನ ಪ್ರದೇಶವು ಭಾರತದ ಭೂಪ್ರದೇಶಕ್ಕೆ ಸೇರ್ಪಡೆಯಾದರೆ ಆ ಭೂ ಪ್ರದೇಶದಲ್ಲಿರುವಂತಹ ಜನತೆ ಭಾರತ ಸರ್ಕಾರದ ಆದೇಶದ ಮೂಲಕ ಭಾರತದ ಪೌರತ್ವ ಪಡೆಯುತ್ತಾರೆ.

**ಭಾರತದ ಪೌರತ್ವವನ್ನು ಕಳೆದುಕೊಳ್ಳುವ ವಿಧಾನ (Loss of Citizenship)**

ಪೌರತ್ವವನ್ನು ಪಡೆಯುವಂತೆ ಅದನ್ನು ಹಲವು ಕಾರಣಗಳಿಂದಾಗಿ ಕಳೆದುಕೊಳ್ಳಬಹುದು. ಅಂತಹ ಕಾರಣಗಳೆಂದರೆ :

1. **ಪರಿತ್ಯಾಗ (Renunciation) :** ಯಾವುದೇ ಭಾರತೀಯ ಪೌರ, ಮತ್ತೊಂದು ರಾಷ್ಟ್ರದ ಪೌರತ್ವ ಪಡೆದರೆ ಸ್ವ–ಇಚ್ಛೆಯಿಂದ ನೋಂದಣಿಯ ಮೂಲಕ ಪ್ರಕಟಿಸಿ ಭಾರತದ ಪೌರತ್ವವನ್ನು ತ್ಯಾಗಮಾಡಬಹುದು.

© KTBS NOT TO BE REPUBLISHED

2. **ಅಂತ್ಯಗೊಳ್ಳುವಿಕೆ** (Termination) : ಭಾರತದ ಯಾವುದೇ ಪೌರನೊಬ್ಬ ವಿದೇಶವೊಂದರ ಪೌರತ್ವ ಪಡೆದರೆ ಅವನಿಂದ ಅರ್ಜಿ ಸಲ್ಲಿಕೆಯನ್ನು ನಿರೀಕ್ಷಿಸದೆ ಕಾನೂನು ಬದ್ಧವಾಗಿ ಆತನ ಭಾರತದ ಪೌರತ್ವವನ್ನು ಅಂತ್ಯಗೊಳಿಸಲಾಗುತ್ತದೆ.

3. **ಪದಚ್ಯುತಿ** (By Deprivation) : ಯಾರಾದರು ವ್ಯಕ್ತಿಯೊಬ್ಬ ವಂಚನೆಯ ಮೂಲಕ ಭಾರತದ ಪೌರತ್ವವನ್ನು ಹೊಂದಿದ್ದರೆ ಅಥವಾ ಅವನು / ಅವಳು ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೆ ಅಥವಾ ಭಾರತದ ಸಂವಿಧಾನಕ್ಕೆ ಅವಿಧೇಯನಾಗಿ ನಡೆದುಕೊಂಡರೆ ಅಂತಹವರನ್ನು ಭಾರತ ಸರ್ಕಾರವು ಪೌರತ್ವದಿಂದ ರದ್ದುಗೊಳಿಸಬಹುದು. ಇದು ಬಲವಂತದ ಪದಚ್ಯುತಿಯಾಗಿದೆ.

**ಪೌರತ್ವದ ವಿಧಗಳು:** ಪೌರತ್ವದಲ್ಲಿ ಎರಡು ವಿಧಗಳಿವೆ. ಮೊದಲನೆಯದು ಏಕ ಪೌರತ್ವ ಮತ್ತೊಂದು ದ್ವಿ ಪೌರತ್ವ. ಏಕ ಪೌರತ್ವದಲ್ಲಿ ವ್ಯಕ್ತಿಯೊಬ್ಬ ತಾನು ವಾಸಿಸುವ ದೇಶದ ಯಾವುದೇ ರಾಜ್ಯದವನಾಗಿದ್ದರೂ ರಾಷ್ಟ್ರೀಯ ಪೌರತ್ವವನ್ನು ಹೊಂದುವುದಾಗಿದೆ. ಇಂತಹ ಸಂಧರ್ಭದಲ್ಲಿ ರಾಜ್ಯಗಳ ಪೌರತ್ವ ಎಂಬುದಿರುವುದಿಲ್ಲ. ಉದಾ : ಒಕ್ಕೂಟ ರಾಜ್ಯ ವ್ಯವಸ್ಥೆಯಿರುವ ಅಮೆರಿಕಾ ಮತ್ತು ಸ್ವಿಟ್ಜರ್‌ಲೆಂಡ್‌ಗಳಲ್ಲಿ ದ್ವಿ ಪೌರತ್ವ ವ್ಯವಸ್ಥೆ ಜಾರಿಯಲ್ಲಿದೆ. ಇದರಲ್ಲಿ ರಾಜ್ಯ ಹಾಗೂ ರಾಷ್ಟ್ರಗಳಿಗೆ ಪ್ರತ್ಯೇಕವಾಗಿ ಪೌರತ್ವ ಹೊಂದಿರುತ್ತಾರೆ.

**ಪೌರತ್ವ ಮತ್ತು ಸರ್ಕಾರ :** ರಾಜ್ಯ ಮತ್ತು ಪೌರರ ನಡುವೆ ಅತ್ಯಂತ ನಿಕಟ ಸಂಬಂಧವಿದ್ದು, ಪೌರರಿಲ್ಲದೆ ರಾಜ್ಯವಿರುವುದಿಲ್ಲ ಎಂಬುದು ತಿಳಿದುಬರುತ್ತದೆ. ರಾಜ್ಯ ಅಥವಾ ಸರ್ಕಾರವೊಂದು ಪ್ರಜೆಗಳ ಹಿತರಕ್ಷಣೆ ಮಾಡುವುದರ ಜೊತೆಗೆ ಪರಕೀಯರ ದಾಳಿಗಳಿಂದ ರಕ್ಷಣೆ ಒದಗಿಸಿ ಕಾನೂನು ವ್ಯವಸ್ಥೆಯ ಮೂಲಕ ಐಕ್ಯತೆಯನ್ನು ಕಾಪಾಡುವಲ್ಲಿ ಯಶಸ್ವಿಯಾಗುತ್ತದೆ.

ರಾಜ್ಯವು ಕಾನೂನುಗಳನ್ನು ರಚಿಸಿಕೊಂಡು ದಂಗೆ ದಾಳಿಗಳನ್ನು ಹತ್ತಿಕ್ಕಿ ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ನೋಡಿಕೊಳ್ಳುತ್ತದೆ. ಸರ್ಕಾರವು ಪ್ರಜೆಗಳ ಉಪಯೋಗಕ್ಕಾಗಿ ಹಲವು ಸಾಮಾಜಿಕ, ಆರ್ಥಿಕ, ಮತ್ತು ಶೈಕ್ಷಣಿಕ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತದೆ. ಸರ್ಕಾರವು ಅನಕ್ಷರತೆ, ಬಡತನ, ಅಸಮಾನತೆ ಮತ್ತು ನಿರುದ್ಯೋಗಗಳಂತಹ ಸಮಸ್ಯೆಗಳ ನಿವಾರಣೆಗೆ ವಿವಿಧ ಕಾರ್ಯಯೋಜನೆಗಳನ್ನು ಕೈಗೊಳ್ಳುವುದರ ಜೊತೆಗೆ ಸಂವಿಧಾನವು ಮೂಲಭೂತ ಹಕ್ಕುಗಳನ್ನು ನೀಡಿದೆ.

ರಾಷ್ಟ್ರದ ಪೌರರು ತನ್ನ ದೇಶಕ್ಕಾಗಿ ಕೆಲವು ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಹಕ್ಕು ಮತ್ತು ಕರ್ತವ್ಯಗಳೆರಡೂ ಒಂದೇ ನಾಣ್ಯದ ಎರಡು ಮುಖಗಳಂತಿದ್ದು ಪೌರನಿಗೆ ಹಲವು ಪ್ರಯೋಜನಗಳನ್ನು ನೀಡುತ್ತದೆ. ಆದ್ದರಿಂದ ಪೌರನು ತನ್ನ ರಾಷ್ಟ್ರಕ್ಕೆ ಕೆಳಗಿನ ಕೆಲವು ನಿರ್ಬಂಧನೆ ಮತ್ತು ಕಾರ್ಯಗಳನ್ನು ನೆರವೇರಿಸಬೇಕಾಗುತ್ತದೆ.

- ಪೌರನು ಸರ್ಕಾರದ ಕಾನೂನುಗಳಿಗೆ ವಿಧೇಯನಾಗಿದ್ದು ಸಂವಿಧಾನವನ್ನು ಗೌರವಿಸಬೇಕು.
- ಪೌರನು ರಾಷ್ಟ್ರದ ಗೌರವ ಮತ್ತು ಘನತೆಗಳನ್ನು ರಕ್ಷಿಸಿಕೊಂಡು ವಚನಬದ್ಧನಾಗಿರಬೇಕು.
- ಪೌರನು ರಾಷ್ಟ್ರವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಾರದು.

© KTBS NOT TO BE REPUBLISHED

- ಪೌರನು ಭ್ರಷ್ಟಾಚಾರ, ಪಕ್ಷಪಾತ, ವರದಕ್ಷಿಣೆ, ಬಾಲ್ಯವಿವಾಹ ಇತ್ಯಾದಿ ಅನಿಷ್ಟ ಪದ್ಧತಿಗಳನ್ನು ವಿರೋಧಿಸಿ ಅವುಗಳನ್ನು ತಡೆಯಲು ಸಂವಿಧಾನಾತ್ಮಕ ಮಾರ್ಗೋಪಾಯಗಳನ್ನು ಪಾಲಿಸಬೇಕು.
- ಸರ್ಕಾರದ ಗುಣಮಟ್ಟವು ಅಲ್ಲಿನ ಪೌರರ ಗುಣಮಟ್ಟದ ಮೇಲೆ ಅವಲಂಬಿತವಾಗಿರುವುದರಿಂದ ಪೌರರು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು.
- ಪೌರನು ತನ್ನ ವೈಯಕ್ತಿಕ ಆಸಕ್ತಿಗಿಂತ ರಾಷ್ಟ್ರದ ಆಸಕ್ತಿಯನ್ನು ಎತ್ತಿ ಹಿಡಿದು ರಾಷ್ಟ್ರದ ಪ್ರಗತಿಗಾಗಿ ಶ್ರಮಿಸಬೇಕು.
- ಪೌರನು ಸ್ವಾರ್ಥಿಯಾಗದೆ ಸೇವಾಮನೋಭಾವನೆಯನ್ನು ರೂಢಿಸಿಕೊಂಡು ದೇಶಕ್ಕಾಗಿ ತ್ಯಾಗಮಾಡುವುದಕ್ಕೂ ಸಿದ್ದನಿರಬೇಕು.
- ಪೌರನು ರಾಷ್ಟ್ರ ರಕ್ಷಣೆ ಹಾಗೂ ತೆರಿಗೆ ಪಾವತಿಸುವ ಜವಾಬ್ದಾರಿಗಳನ್ನು ಹೊಂದಿರಬೇಕು.

ಈ ಮೇಲಿನ ಕಾರ್ಯಗಳ ಜೊತೆಗೆ ಇನ್ನೂ ಅನೇಕ ಕರ್ತವ್ಯಗಳನ್ನು ಸಂವಿಧಾನದಲ್ಲಿ ಸಂಯೋಜನೆಗೊಳಿಸಿಕೊಳ್ಳಲಾಗಿದೆ. ಪೌರರಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದೇ ಮೂಲಭೂತ ಕರ್ತವ್ಯಗಳ ಉದ್ದೇಶವಾಗಿರುತ್ತದೆ. ರಾಷ್ಟ್ರದ ಹಿತದೃಷ್ಟಿಯಿಂದ ಪೌರನು ಯಾವುದನ್ನು ಮಾಡಬೇಕು ಹಾಗೂ ಮಾಡಬಾರದು ಎಂಬುದನ್ನು ತಿಳಿಯಲು ಇದು ಸಹಾಯಕವಾಗಿದೆ. ಪ್ರತಿಯೊಬ್ಬ ಪೌರನೂ ತನ್ನ ಸಮುದಾಯ, ರಾಷ್ಟ್ರ ಮತ್ತು ಸ್ವಂತ ಪ್ರಗತಿಗಾಗಿ ಮೂಲಭೂತ ಕರ್ತವ್ಯಗಳನ್ನು ಪಾಲಿಸಿಕೊಂಡು ಹೋಗಬೇಕಾಗುತ್ತದೆ. ಪೌರ ಹಾಗೂ ಸರ್ಕಾರದ ನಡುವೆ ಸೌಹಾರ್ದ ಸಂಬಂಧ ಇರಬೇಕಾಗುತ್ತದೆ. ಈ ಸಂಬಂಧವು ಕೊಡುಕೊಳ್ಳುವಿಕೆಗಳ ತತ್ವವನ್ನು ಆಧರಿಸಿರಬೇಕು.

NOT TO BE REPUBLISHED ©KTBS

ನಮ್ಮ ಸಂವಿಧಾನದ 42ರ ತಿದ್ದುಪಡಿಯಲ್ಲಿ ಮೂಲಭೂತ ಕರ್ತವ್ಯಗಳನ್ನು 1976ರಲ್ಲಿ ಅಳವಡಿಸಲಾಗಿದೆ. ಸಂವಿಧಾನದ ಪರಿಚ್ಛೇದ 51(A) ರಲ್ಲಿ ಮೂಲಭೂತ ಕರ್ತವ್ಯಗಳು ಸೇರಿಸಲ್ಪಟ್ಟಿವೆ.

## ಅಭ್ಯಾಸಗಳು

**I ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1 ಬ್ರಿಟೀಷರ ಆಳ್ವಿಕೆಯಲ್ಲಿ ಭಾರತದಲ್ಲಿ ವಾಸವಿದ್ದ ಜನರನ್ನು ________ ಎಂದು ಕರೆಯಲಾಗುತ್ತದೆ.

2 ನಮ್ಮ ದೇಶದಲ್ಲಿ ಪರದೇಶದವರು ತಾತ್ಕಲಿಕವಾಗಿ ವಾಸವಾಗಿದ್ದರೆ ಅವರನ್ನು ________ ಎಂದು ಕರೆಯಲಾಗುತ್ತದೆ.

3 ಪೌರತ್ವ ಕಾಯಿದೆಯು ಜಾರಿಗೆ ಬಂದ ವರ್ಷ________.

4 ನೀವು ಪೌರತ್ವ ಪಡೆದಿರುವ ವಿಧಾನವೆಂದರೆ ಅದು ________ ವಿಧವಾಗಿದೆ.

## II ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

5 ಪೌರತ್ವ ಎಂದರೇನು ?

6 ಪೌರ ಅನುಭೋಗಿಸುವ ಲಾಭಗಳಾವುವು?

7 ಭಾರತದಲ್ಲಿ ಪೌರತ್ವದ ಕಾನೂನು ಮತ್ತು ಶಾಸನಗಳನ್ನು ರೂಪಿಸುವ ಅಧಿಕಾರ ಹೊಂದಿರುವ ಅಂಗವನ್ನು ಹೆಸರಿಸಿ.

8 ಪೌರತ್ವ ಪಡೆಯುವ ವಿಧಾನಗಳನ್ನು ತಿಳಿಸಿ.

9 ಪರಕೀಯರ ಪೌರತ್ವ ಸಂಪಾದನೆಯ ವಿಧಾನವನ್ನು ವಿವರಿಸಿ.

10 ಪೌರತ್ವವನ್ನು ಕಳೆದುಕೊಳ್ಳುವ ವಿಧಾನಗಳಾವುವು?

11 ಪೌರತ್ವವನ್ನು ಮುಕ್ತಗೊಳಿಸುವ ಸನ್ನಿವೇಶವೊಂದನ್ನು ತಿಳಿಸಿ.

12 ಪೌರತ್ವದ ವಿಧಗಳನ್ನು ತಿಳಿಸಿ ಹಾಗೂ ಅವುಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ.

13 ಪೌರನ ಕರ್ತವ್ಯಗಳಾವುವು?

## III ಚಟುವಟಿಕೆಗಳು.

14 ಮೂಲಭೂತ ಹಕ್ಕುಗಳ ಸಚಿತ್ರ ಮಾಲಿಕೆಯೊಂದನ್ನು ತಯಾರಿಸಿ ನಿಮ್ಮ ಶಾಲೆಯಲ್ಲಿ ಪ್ರದರ್ಶಿಸಿ.

15 ನಿಮ್ಮ ಶಿಕ್ಷಕರ ಮಾರ್ಗದರ್ಶನದಡಿಯಲ್ಲಿ ಮೂಲಭೂತ ಹಕ್ಕುಗಳಿಂದಾಗುವ ಅನುಕೂಲತೆಗಳನ್ನು ಚರ್ಚಿಸಿ.

16 ನಿಮ್ಮ ಶಿಕ್ಷಕರ ಮಾರ್ಗದರ್ಶನದಡಿಯಲ್ಲಿ ಸಮಾನತೆಯ ಹಕ್ಕು ಮತ್ತು ಸ್ವಾತಂತ್ರ್ಯದ ಹಕ್ಕುಗಳ ಪ್ರಾಮುಖ್ಯತೆಯನ್ನು ಚರ್ಚಿಸಿ.

17 ಪೌರತ್ವವನ್ನು ಸಂಪಾದಿಸುವ ಮತ್ತು ಕಳೆದುಕೊಳ್ಳುವ ವಿಧಾನಗಳ ಚಿತ್ರಪಟವನ್ನು ತಯಾರಿಸಿ ನಿಮ್ಮ ಶಾಲೆಯಲ್ಲಿ ಪ್ರದರ್ಶಿಸಿ.

18 ಭಾರತದಲ್ಲಿನ ಏಕ ಪೌರತ್ವ ವಿಧಾನದ ಅನುಕೂಲಗಳನ್ನು ಚರ್ಚಿಸಿ.

19 ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿರುವಂತೆ ದ್ವಿಪೌರತ್ವ ನೀತಿಯನ್ನು ಭಾರತದಲ್ಲಿ ಅಳವಡಿಸಿಕೊಂಡರೆ ಅದರಿಂದಾಗುವ ಪ್ರಯೋಜನಗಳನ್ನು ಚರ್ಚಿಸಿ.

## IV ಯೋಜನೆಗಳು.

20 ಮೂಲಭೂತ ಹಕ್ಕುಗಳ ಉಲ್ಲಂಘನೆ ಮತ್ತು ಅವುಗಳಿಗಾಗಿ ಕೈಗೊಂಡ ಪರಿಹಾರ ಕ್ರಮಗಳ ಬಗ್ಗೆ ದಿನ ಪತ್ರಿಕೆ ಮತ್ತು ನಿಯತಕಾಲಿಕಗಳಿಂದ ಮಾಹಿತಿ ಸಂಗ್ರಹಿಸಿ.

21 ಭಾರತೀಯನೊಬ್ಬ ವಿದೇಶದಲ್ಲಿ ತಾತ್ಕಾಲಿಕವಾಗಿ ನೆಲೆಸುವುದಕ್ಕಾಗಿ ಅನುಸರಿಸಬೇಕಾದ ಪ್ರಕ್ರಿಯೆಯ ಬಗ್ಗೆ ಸಂಬಂಧಿಸಿದ ಅಧಿಕಾರಿಯಿಂದ ಮಾಹಿತಿ ಸಂಗ್ರಹಿಸಿ.

***

NOT TO BE REPUBLISHED ©KTBS

# ಸಮಾಜಶಾಸ್ತ್ರ

## ಅಧ್ಯಾಯ-9

# ಮಾನವ ಮತ್ತು ಸಮಾಜ

E2T6R4

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಮಾನವನು ಸಮಾಜಜೀವಿ ಹೇಗೆಂಬುದನ್ನು ಅರ್ಥೈಸಿಕೊಳ್ಳುವುದು.
- ಮಾನವನ ಸಾಮಾಜೀಕರಣ ಭಾವನೆಗಳ ವ್ಯಕ್ತತೆ, ಬಗ್ಗೆ ತಿಳಿಯುವುದು.
- ಆರಂಭಿಕ ಸಮಾಜಶಾಸ್ತ್ರಜ್ಞರ ಬಗ್ಗೆ ಪರಿಚಯಿಸಿಕೊಳ್ಳುವುದು.

ಜಗತ್ತಿನ ಜೀವಜಂತುಗಳಲ್ಲಿ ಮಾನವರು ಮಾತ್ರ ತಮ್ಮ ಇರುವಿಕೆಯ ಬಗ್ಗೆ ಅರಿವನ್ನು ಹೊಂದಿದ್ದಾರೆ. ತಮ್ಮ ಜೀವನದ ಉದ್ದೇಶದ ಬಗ್ಗೆ ಚಿಂತನೆ ಮಾಡುತ್ತಾರೆ. ಇದರಿಂದ ಮಾನವರ ಮನಸ್ಸಿನಲ್ಲಿ ಹಲವಾರು ಪ್ರಶ್ನೆಗಳು ಹುಟ್ಟಿಕೊಂಡವು. ಮಾನವನು ಏಕೆ ಸಮಾಜ ಜೀವಿಯಾಗಿದ್ದಾನೆ? ಮಾನವ ದೈವಸೃಷ್ಟಿಯೋ ಅಥವಾ ದೇವರೇ ಮಾನವ ಸೃಷ್ಟಿಯೋ? ಸಮೂಹ ಸಮೂಹಗಳ ನಡುವೆ ವ್ಯತ್ಯಾಸವೇಕೆ? ಜನರನ್ನು ಮತ್ತು ಸಮೂಹಗಳನ್ನು ಒಂದುಗೂಡಿಸುವ ಶಕ್ತಿ ಯಾವುದು? ಸಮಾಜ ನಿರಂತರವಾಗಿ ಬದಲಾವಣೆಗೆ ಒಳಪಡುತ್ತಿರುವುದೇಕೆ? ಈ ಬದಲಾವಣೆ ಪ್ರಗತಿಸೂಚಕವೇ? ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯಲು ಮತ್ತು ಮಾನವ ಸಮಾಜವನ್ನು ಕ್ರಮಬದ್ಧವಾಗಿ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಪ್ರಯತ್ನ ನೂರೈವತ್ತು ವರ್ಷಗಳ ಹಿಂದೆ ಆರಂಭವಾಯಿತು.

ಇಂತಹ ಪ್ರಯತ್ನದ ಫಲವಾಗಿ ಹೊಸದೊಂದು ಅಧ್ಯಯನ ಶಾಸ್ತ್ರವು ಹುಟ್ಟಿಕೊಂಡಿತು. ಈ ಅಧ್ಯಯನ ಶಾಸ್ತ್ರವೇ ಸಮಾಜಶಾಸ್ತ್ರ. ಮಾನವ ಸಮಾಜದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡಲು ನಾವು ಪ್ರಾಣಿಸಮಾಜ ಮತ್ತು ಮಾನವ ಸಮಾಜದ ನಡುವೆ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕಾಗುತ್ತದೆ.

ಮಾನವ ಇತರ ಪ್ರಾಣಿಗಳಿಗಿಂತ ಭಿನ್ನ. ಅವನು ನಾಗರಿಕತೆ ಮತ್ತು ವಿಕಾಸದಲ್ಲಿ ಮುಂದುವರೆದಿದ್ದಾನೆ. ಮಾನವನು ಸೃಜನಶೀಲ. ಇದಕ್ಕೆ ಅನೇಕ ಕಾರಣಗಳಿವೆ. ಅದರಲ್ಲಿ ಒಂದು, ಈತನ ಕೈಬೆರಳುಗಳು. ಅದರಲ್ಲಿಯೂ ಹೆಬ್ಬೆರಳು. ಪ್ರಾಣಿಗಳಿಗೆ ಮಾನವನಂತೆ ಬೆರಳುಗಳಿದ್ದರೂ ಸಹ ಅವು ಅಷ್ಟೊಂದು ಸಹಾಯಕವಾಗಿಲ್ಲ. ನಾವು ಬರೆಯುವಾಗ ಗಮನಿಸಿದರೆ ನಮ್ಮ ಹೆಬ್ಬೆರಳಿನ ಪ್ರಾಮುಖ್ಯತೆ ಗೊತ್ತಾಗುತ್ತದೆ. ಎರಡನೆಯದಾಗಿ, ಆತನ ನೇರ ನಿಲುವು. ತನಗೆ ಒದಗಬಹುದಾದ ಅಪಾಯವನ್ನು ಎದುರಿಸಲು ಇದು ಅತ್ಯಂತ ಸಹಕಾರಿ. ಮೂರನೆಯದಾಗಿ, ಮಾನವನ ಹಲ್ಲುಗಳು. ಇವು ಆಹಾರ ಸೇವನೆಗೆ ಪೂರಕವಾಗಿದ್ದು ಪರೋಕ್ಷವಾಗಿ ಅವನ ದೈಹಿಕ, ಮಾನಸಿಕ ಆರೋಗ್ಯದ ಬೆಳವಣಿಗೆಗೆ ಕಾರಣವಾಗಿವೆ. ನಾಲ್ಕನೆಯ ಮತ್ತು ಅತೀ ಮುಖ್ಯವಾದ ಕಾರಣವೆಂದರೆ, ಮಾನವನ ಮಿದುಳು. ಈ ಮಿದುಳು ವಿಕಾಸಹೊಂದಿದ್ದು, ಇದರ ಗ್ರಹಿಕೆ  ಮತ್ತು ಕ್ರಿಯಾಶೀಲತೆಯಿಂದಲೇ ಇಂದು ನಾವು ಕಾಣುತ್ತಿರುವ ನಾಗರಿಕ ಸಮಾಜ ಸೃಷ್ಟಿಯಾಗಿರುವುದು.

© KTBS NOT TO BE REPUBLISHED

**ಮಾನವನು ಸಮಾಜ ಜೀವಿ**

ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧ ಅನನ್ಯವಾದುದು. ವ್ಯಕ್ತಿಯಿಲ್ಲದೆ ಸಮಾಜವಿಲ್ಲ. ಸಮಾಜವಿಲ್ಲದೆ ವ್ಯಕ್ತಿಯಿಲ್ಲ. ಆದುದರಿಂದಲೇ ಮಾನವ ಸಮಾಜದ ಸೃಷ್ಟಿ, ಸಮಾಜವು ಮಾನವನ ಸೃಷ್ಟಿ ಎಂದು ಕೆಲವು ಸಮಾಜಶಾಸ್ತ್ರಜ್ಞರು ಹೇಳುತ್ತಾರೆ. ನಾವು ಒಂದುಕ್ಷಣ ಕಣ್ಣುಮುಚ್ಚಿ ನಾನೊಬ್ಬನೇ ನನ್ನ ಊರಿನಲ್ಲಿ ಇರಲು ಸಾಧ್ಯವೇ? ಎಂದು ಯೋಚಿಸೋಣ. ಆಗ ಎಲ್ಲರಿಗೂ ಸಿಗುವ ಉತ್ತರ ಒಂದೇ. ಅದು 'ಅಸಾಧ್ಯ' ಎಂಬುದಲ್ಲವೇ? ಮಾನವ ಸಂಘಜೀವಿ. ಎಲ್ಲರೊಟ್ಟಿಗೂ ಬದುಕಲು ಪ್ರಯತ್ನಿಸುತ್ತಾನೆ. ನಮ್ಮೆಲ್ಲರ ಬೆಳವಣಿಗೆಗೆ ಸಮಾಜ ಅಗತ್ಯ. ಏಕೆಂದರೆ, ಮಾನವನ ಅಸ್ತಿತ್ವಕ್ಕೆ ಸಾಮಾಜಿಕ ಸಂಬಂಧಗಳು ಅಗತ್ಯವಾಗಿವೆ. ಆದುದರಿಂದಲೇ ಮಾನವ ಸಮಾಜವನ್ನು ಸಾಮಾಜಿಕ ಸಂಬಂಧಗಳ ಬಲೆ ಎಂದು ಕರೆಯಲಾಗುತ್ತದೆ. ಮಾನವನನ್ನು ಸಮಾಜ ಜೀವಿ ಎಂದು ಕರೆಯಲಾಗುತ್ತದೆ.

**ಸಾಮಾಜೀಕರಣ**

ನಾವು ಸಮಾಜದ ಸದಸ್ಯರಾಗಬೇಕಾದರೆ ಸಮಾಜದಲ್ಲಿಯೇ ಬಾಳಬೇಕು. ಸಮಾಜದಲ್ಲಿ ಇಲ್ಲದೆ ಹೋದರೆ, ಈಗ ನಾವು ಕಲಿತಿರುವ ಭಾಷೆ, ಓದು, ಆಟ, ಯೋಚನಾ ವಿಧಾನ ಮತ್ತು ನಮ್ಮ ದೈಹಿಕ ಭಾಷೆ ಮೊದಲಾದವುಗಳನ್ನು ಕಲಿತುಕೊಳ್ಳಲು ಸಾಧ್ಯವಿಲ್ಲ. ಹೀಗೆ ಕಲಿತುಕೊಳ್ಳುವ ಕ್ರಿಯೆಯನ್ನು ಸಾಮಾಜೀಕರಣ ಎನ್ನುತ್ತಾರೆ. ಕುಟುಂಬ, ಶಾಲೆ, ಸ್ನೇಹಿತರ ಗುಂಪು, ಸಮೂಹ ಮಾಧ್ಯಮಗಳು ಮೊದಲಾದವು ನಮ್ಮ ಸಾಮಾಜೀಕರಣಕ್ಕೆ ನೆರವಾಗುತ್ತವೆ. ಕುಟುಂಬವು ನಮಗೆ ಆಹಾರ, ಪಾಲನೆ ಪೋಷಣೆ, ಶಿಕ್ಷಣ, ರಕ್ಷಣೆ ಮೊದಲಾದುವನ್ನು ನೀಡುತ್ತದೆ. ಪೋಷಕರು ನಮ್ಮನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯಕರವಾಗಿ ಬೆಳೆಯುವಂತೆ ನೋಡಿಕೊಳ್ಳುತ್ತಾರೆ.

ಶಾಲೆಯಲ್ಲಿ ಔಪಚಾರಿಕ ಶಿಕ್ಷಣ ದೊರೆಯುತ್ತದೆ. ಸ್ನೇಹಿತರ ಗುಂಪಿನಲ್ಲಿ ನಾವು ಇತರರೊಡನೆ ಸಹಕರಿಸಿ ಒಟ್ಟಾಗಿ ಬಾಳುವುದನ್ನು ಕಲಿಯುತ್ತೇವೆ. ಸಮೂಹ ಮಾಧ್ಯಮಗಳು ನಮಗೆ ಹೊರಜಗತ್ತಿನ ತಿಳಿವಳಿಕೆಯನ್ನು ನೀಡುತ್ತವೆ. ಅದಕ್ಕೆ ಹೊಂದಿಕೊಂಡು ಹೋಗಲು ನೆರವಾಗುತ್ತವೆ. ಇದರಿಂದ ಸಮಾಜದಲ್ಲಿ ಮಾನವನು ಯಶಸ್ವಿಯಾಗಿ ಬಾಳಲು ಸಾಧ್ಯವಾಗುತ್ತದೆ.

**ಮಾನವನಿಗೆ ಸಾಮಾಜಿಕ ಪರಿಸರ ಅಗತ್ಯ**

ಮಾನವನು ಸಾಮಾಜಿಕ ಪರಿಸರದಲ್ಲಿ ಬೆಳೆಯದೆ ಹೋದರೆ ತನ್ನಲ್ಲಿ ಮಾನವನ ಗುಣಗಳನ್ನು ಮೈಗೂಡಿಸಿಕೊಳ್ಳಲಾರ. ಸಮಾಜ ಮತ್ತು ಸಮೂಹದ ಹೊರತಾಗಿ ವಾಸಿಸುವವನು ಸಾಮಾಜೀಕರಣಕ್ಕೆ ಒಳಗಾಗುವುದಿಲ್ಲ. ಈ ಹೇಳಿಕೆಯನ್ನು ಸಮರ್ಥಿಸಲು ಕೆಳಕಂಡ ಉದಾಹರಣೆಯನ್ನು ನೋಡಬಹುದು.

1920ರಲ್ಲಿ ಮಿಡ್ನಾಪುರದಲ್ಲಿ ಸಿಕ್ಕ ಕಮಲ ಎಂಬ ಹುಡುಗಿಯು 9 ವರ್ಷಗಳನ್ನು ಕಾಡಿನಲ್ಲಿ ಪ್ರಾಣಿಗಳೊಂದಿಗೆ ಕಳೆದಿದ್ದಳು. ಅಲ್ಲಿ ಹಸಿ ಮಾಂಸ ತಿನ್ನುತ್ತಾ ಪಶುಗಳಂತೆ ನಾಲ್ಕು ಕಾಲುಗಳಲ್ಲಿ ನಡೆಯುತ್ತಿದ್ದಳು. ಆ ನಂತರ ಮನುಷ್ಯ ಸಹವಾಸದಿಂದ ಬೇಯಿಸಿದ ಪದಾರ್ಥಗಳನ್ನು ತಿನ್ನುವುದು, ಮಾತನಾಡುವುದು, ಇತರೆ ಮಕ್ಕಳಂತೆ ವರ್ತಿಸುವುದನ್ನು ಕಲಿತಳು. ಅವಳಿಗೆ ಸ್ವಂತ ಪ್ರಜ್ಞೆ ಇರಲಿಲ್ಲ. ಈ ಉದಾಹರಣೆಯಿಂದ ಕಂಡುಬರುವುದೇನೆಂದರೆ ಮಾನವ ಸಮಾಜದಲ್ಲಿ ಇಲ್ಲದೆ ಹೋದರೆ ಅವನು ಪ್ರಾಣಿಯಂತೆ ಆಗುತ್ತಾನೆ. ಇದನ್ನು ಅನೇಕ ಪ್ರಯೋಗಗಳ ಮೂಲಕ ಸಮಾಜ ವಿಜ್ಞಾನಿಗಳು ಸಮರ್ಥಿಸಿದ್ದಾರೆ.

©KTBS NOT TO BE REPUBLISHED

**ಮಾನವರು ಮತ್ತು ಭಾಷೆ**

ನಾವು ನಮ್ಮ ಭಾವನೆಗಳನ್ನು ಹೇಗೆ ವ್ಯಕ್ತಪಡಿಸುತ್ತೇವೆ? ದೈಹಿಕ ಸಂಜ್ಞೆ, ಸೂಚನೆಗಳ ಮೂಲಕ ನಮ್ಮ ಭಾವನೆಗಳಾದ ಹಸಿವು, ನಿದ್ರೆ, ಬಾಯಾರಿಕೆ, ನೋವು ಸಂತೋಷ ಮೊದಲಾದುವುಗಳನ್ನು ತಿಳಿಸಬಹುದು. ಆದರೆ ಮಾನವರು ತಮ್ಮ ಈ ಎಲ್ಲಾ ಭಾವನೆಗಳನ್ನು ಆಂಗಿಕ ಭಾಷೆಯ ಮೂಲಕ ತಿಳಿಸಲು ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ಭಾಷೆಯು ಅನಿವಾರ್ಯವಾಗುತ್ತದೆ.

ನಾವು ಮಾತನಾಡುವಾಗ ಅಪ್ಪ, ಅಮ್ಮ, ಅಣ್ಣ, ಅಕ್ಕ, ಚಿಕ್ಕಪ್ಪ, ದೊಡ್ಡಪ್ಪ ಮೊದಲಾದ ಪದಗಳನ್ನು ಬಳಸುತ್ತೇವೆ. ನೀವು ಅಣ್ಣ, ಅಕ್ಕ ಎನ್ನುವ ಪದಗಳು ನಮ್ಮ ಹಿರಿಯ ಸಹೋದರ ಮತ್ತು ಸಹೋದರಿಯನ್ನು ಉದ್ದೇಶಿಸಿ ಬಳಸುವ ಪದಗಳಾಗಿವೆ. ನಿರ್ದಿಷ್ಟವಾಗಿ ಸಂಬಂಧಗಳನ್ನು ಮತ್ತು ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಭಾಷೆಯು ಬಹಳ ಮುಖ್ಯ.

ಮನುಷ್ಯನಿಗೆ ಭಾಷೆಯಿದೆ. ಪ್ರಾಣಿಗಳಿಗೆ ಭಾಷೆಯಿಲ್ಲ. ಅದೇ ಮನುಷ್ಯನಿಗೂ ಮತ್ತು ಪ್ರಾಣಿಗೂ ಇರುವ ವ್ಯತ್ಯಾಸ. ಭಾಷೆ ಇಲ್ಲದೆ ಹೋದರೆ ಏನಾಗುತ್ತಿತ್ತೆಂದು ಒಮ್ಮೆ ಕಲ್ಪಿಸಿಕೊಳ್ಳಿ. ಪಠ್ಯಪುಸ್ತಕಗಳಾಗಲಿ, ಶಾಲೆಗಳಾಗಲಿ, ಸಮೂಹ ಮಾಧ್ಯಮಗಳಾಗಲಿ ನಾಗರಿಕತೆಯಾಗಲಿ ಅಸ್ತಿತ್ವದಲ್ಲಿರುತ್ತಿರಲಿಲ್ಲ. ಮಾನವ ಸಮಾಜವು ಪ್ರಾಣಿ ಸಮಾಜದಂತೆಯೇ ಇರುವ ಸಾಧ್ಯತೆ ಇತ್ತು. ಆದುದರಿಂದ ಸಮಾಜಶಾಸ್ತ್ರದಲ್ಲಿ ಸಮಾಜವನ್ನು ಅಧ್ಯಯನ ಮಾಡುವಾಗ ಭಾಷೆಯನ್ನು ಬಹಳ ಪ್ರಮುಖ ಅಂಶವೆಂದು ಪರಿಗಣಿಸಲಾಗುತ್ತದೆ.

**ಆರಂಭಿಕ ಸಮಾಜಶಾಸ್ತ್ರಜ್ಞರು**



ಆಗಸ್ಟ್ ಕಾಮ್ಟೆ

ಸಮಾಜ, ಸಂಸ್ಕೃತಿ, ವರ್ತನೆ, ಸಾಮಾಜಿಕ ಸಂಬಂಧಗಳು ಮೊದಲಾದವುಗಳನ್ನು ಕುರಿತು ಅಧ್ಯಯನ ಮಾಡುವವರೇ ಸಮಾಜಶಾಸ್ತ್ರಜ್ಞರು. ಅಂತಹ ಕೆಲವು ಆರಂಭಿಕ ಸಮಾಜಶಾಸ್ತ್ರಜ್ಞರನ್ನು ಕುರಿತು ಪರಿಚಯ ಮಾಡಿಕೊಳ್ಳಬಹುದು.

ಆಗಸ್ಟ್ ಕಾಮ್ಟೆ ಅವರು ಸಮಾಜವನ್ನು ಅಧ್ಯಯನ ಮಾಡುವ ವಿಜ್ಞಾನಕ್ಕೆ 'ಸಮಾಜ ಶಾಸ್ತ್ರ' ಎಂದು ಕರೆದರು. ಆದುದರಿಂದ ಅವರನ್ನು ಸಮಾಜಶಾಸ್ತ್ರದ ಪಿತಾಮಹ ಎಂದು ಕರೆಯಲಾಗುತ್ತದೆ. ಹರ್ಬರ್ಟ್ ಸ್ಪೆನ್ಸರ್ ಅವರು ಹತ್ತೊಂಬತ್ತನೇ ಶತಮಾನದ ಬ್ರಿಟಿಷ್ ಸಮಾಜಶಾಸ್ತ್ರಜ್ಞರು. ಅವರು ಸಮಾಜದ ವಿಕಾಸವನ್ನು ಅಧ್ಯಯನ ಮಾಡಿದರು.

ಫ್ರಾನ್ಸ್‌ನ ಎಮಿಲಿ ಡರ್ಕಿಮ್ ಎಂಬ ಸಮಾಜಶಾಸ್ತ್ರಜ್ಞರು 19ನೇ ಶತಮಾನದ ಕಡೆಯ ಭಾಗ ಹಾಗೂ 20ನೇ ಶತಮಾನದ ಆದಿಭಾಗದಲ್ಲಿದ್ದರು. ಇವರು ಸಮಾಜಶಾಸ್ತ್ರವನ್ನು ವಿಜ್ಞಾನವನ್ನಾಗಿ ಮಾಡಲು ಶ್ರಮಿಸಿದರು. ಮ್ಯಾಕ್ಸ್‌ವೆಬರ್ ಅವರು ಜರ್ಮನಿಯ ಸಮಾಜಶಾಸ್ತ್ರಜ್ಞರು. ಇವರು ಅರ್ಥಶಾಸ್ತ್ರ, ತತ್ವಶಾಸ್ತ್ರ ಹಾಗೂ ಇತಿಹಾಸಗಳನ್ನು ಕುರಿತು ಅಪಾರ ಪಾಂಡಿತ್ಯಗಳಿಸಿದ್ದರು. ನೌಕರಶಾಹಿ ಮತ್ತು ಕ್ರಿಶ್ಚಿಯನ್ ರಿಲಿಜನ್ ಕುರಿತು ಸಮಾಜಶಾಸ್ತ್ರೀಯ ಅಧ್ಯಯನ ಮಾಡಿದರು.

@KTBS NOT TO BE REPUBLISHED




ಹರ್ಬಟ್ ಸ್ಪೆನ್ಸರ್




ಮ್ಯಾಕ್ಸ್‌ವೆಬರ್

ಕಾರ್ಲ್‌ಮಾರ್ಕ್ಸ್‌ರವರು ಜರ್ಮನಿಯ ತತ್ವಜ್ಞಾನಿ. ಇವರು ಇತಿಹಾಸ, ಅರ್ಥಶಾಸ್ತ್ರ, ತತ್ವಶಾಸ್ತ್ರ ಮತ್ತು ಕ್ರಿಶ್ಚಿಯನ್ ರಿಲಿಜನ್ ಶಾಸ್ತ್ರಗಳಲ್ಲಿ ಅಪಾರ ತಿಳುವಳಿಕೆಯನ್ನು ಹೊಂದಿದ್ದರು. ಸಮಾಜಶಾಸ್ತ್ರದ ವ್ಯಾಪ್ತಿಯನ್ನು ವಿಸ್ತರಿಸಿದರು. ಭಾರತಕ್ಕೆ ಬ್ರಿಟಿಷರು ಬಂದನಂತರ 1914ನೇ ಇಸವಿಯಲ್ಲಿ ಮುಂಬೈ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರವನ್ನು ಪರಿಚಯಿಸಲಾಯಿತು. ಭಾರತದ ಪ್ರಮುಖ ಸಮಾಜಶಾಸ್ತ್ರಜ್ಞರೆಂದರೆ ಜಿ.ಎಸ್. ಘುರ್ಯೆ, ಎಂ.ಎನ್. ಶ್ರೀನಿವಾಸ್, ಎ.ಆರ್. ದೇಸಾಯಿ, ಇರಾವತಿ ಕರ್ವೆ. ಎಸ್.ಸಿ.ದುಬೆ ಮೊದಲಾದವರು.

©KTBS NOT TO BE REPUBLISHED



ಕಾರ್ಲ್ ಮಾರ್ಕ್ಸ್



ಎಮಿಲಿ ಡರ್ಕಿಮ್

# ಅಭ್ಯಾಸಗಳು

**I ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1 ಮಾನವನು____________ ಜೀವಿ.

2 ಔಪಚಾರಿಕ ಶಿಕ್ಷಣ ____________ ಯಲ್ಲಿ ದೊರೆಯುತ್ತದೆ.

3 ಸಮಾಜಶಾಸ್ತ್ರದ ಪಿತಾಮಹ____________

4 ಮಾನವನು ಮಾನವನಂತಾಗಲು________________ ಅಗತ್ಯ

5 ಮಾನವನು ತಮ್ಮ ಭಾವನೆಯನ್ನು _______________ ತಮ್ಮ ಭಾವನೆ ವ್ಯಕ್ತಪಡಿಸುತ್ತಾರೆ.

**II ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

6 ಮಾನವ ಸಮಾಜ ಜೀವಿ ಹೇಗೆ?

7 ಸಾಮಾಜೀಕರಣ ಎಂದರೇನು?

8 ಮಿಡ್ನಾಪುರದಲ್ಲಿ ಸಿಕ್ಕ ಕಮಲೆಯು ಹೇಗಿದ್ದಳು?

9 ಆರಂಭಿಕ ಸಮಾಜಶಾಸ್ತ್ರಜ್ಞರನ್ನು ಹೆಸರಿಸಿ.

**III ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ.**

10 ಮಾನವನು ಸಮಾಜ ಜೀವಿ ಎಂಬುದನ್ನು ವಿವರಿಸಿ.

11 ಮಾನವರಿಗೂ ಭಾಷೆಗೂ ಇರುವ ಸಂಬಂಧವನ್ನು ಬರೆಯಿರಿ.

12 ಮಾನವ ಸಮಾಜಕ್ಕೂ ಪ್ರಾಣಿ ಸಮಾಜಕ್ಕೂ ಇರುವ ವ್ಯತ್ಯಾಸ ತಿಳಿಸಿ.

13 ಸಮಾಜಶಾಸ್ತ್ರವು ಏನನ್ನು ಅಧ್ಯಯನ ಮಾಡುತ್ತದೆ?

**IV ಚಟುವಟಿಕೆ.**

14 ಭಾರತೀಯ ಸಮಾಜಶಾಸ್ತ್ರಜ್ಞರ ಚಿತ್ರಗಳನ್ನು ಸಂಗ್ರಹಿಸಿರಿ.

***

@KTBS NOT TO BE REPUBLISHED

# ಅಧ್ಯಾಯ–10

# ಮಾನವ ಮತ್ತು ಸಂಸ್ಕೃತಿ

U3J1J9

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಸಂಸ್ಕೃತಿಯ ಬೆಳವಣಿಗೆಯ ಬಗ್ಗೆ ತಿಳಿಯುವುದು.
- ಸಾಂಸ್ಕೃತಿಕ ವೈವಿಧ್ಯ ಮತ್ತು ಆಚಾರ ವಿಚಾರಗಳ ಬಗ್ಗೆ ವಿಶ್ಲೇಷಿಸುವುದು.

ನಮ್ಮ ದಿನನಿತ್ಯದ ಸಂಭಾಷಣೆಯಲ್ಲಿ ಸಂಸ್ಕೃತಿ ಎಂಬ ಪದವು ಉತ್ತಮ ವರ್ತನೆಯನ್ನು ಸೂಚಿಸಲು, ಆಚಾರ ವಿಚಾರ, ರೂಢಿ ಸಂಪ್ರದಾಯಗಳನ್ನು ವಿವರಿಸಲು ವ್ಯಾಪಕವಾಗಿ ಬಳಸಲ್ಪಡುತ್ತದೆ. ಹಾಗಾದರೆ ಸಮಾಜಶಾಸ್ತ್ರದಲ್ಲಿ ಈ ಪದವನ್ನು ಹೇಗೆ ಬಳಸಲಾಗುತ್ತದೆ ಎಂಬುದನ್ನು ತಿಳಿದುಕೊಳ್ಳೋಣ.

ಸಂಸ್ಕೃತಿ ಎನ್ನುವ ಪದವು ಇಂಗ್ಲಿಷ್ ಭಾಷೆಯಲ್ಲಿ 'ಕಲ್ಚರ್' ಎಂದು ಜನಪ್ರಿಯವಾಗಿದೆ. ಈ ಪದವು ಲ್ಯಾಟಿನ್ ಭಾಷೆಯ 'ಕೋಲೆರೆ' ಪದದಿಂದ ಬಂದಿದೆ. ಅಂದರೆ ಕೃಷಿ ಮಾಡು ಎಂದರ್ಥ. ಸಂಸ್ಕೃತಿಯನ್ನು ವಿವಿಧ ಸಮಾಜಶಾಸ್ತ್ರಜ್ಞರು ವಿವಿಧ ರೀತಿಯಲ್ಲಿ ವಿವರಿಸಿದ್ದಾರೆ. ಮಾನವನು ಸಮಾಜದ ಸದಸ್ಯನಾಗಿದ್ದುಕೊಂಡು ಕಲಿತುಕೊಳ್ಳುವ ಜ್ಞಾನ, ಕಲೆ, ನೈತಿಕ ನಿಯಮ, ಕಾನೂನು, ರೂಢಿ, ಸಾಮರ್ಥ್ಯ, ನೈಪುಣ್ಯಗಳನ್ನು ಒಳಗೊಂಡ ಒಂದು ಸಂಕೀರ್ಣವಾದ ವ್ಯವಸ್ಥೆಯಾಗಿದೆ ಅಥವಾ ನಾವು ಏನಾಗಿದ್ದೇವೆಯೋ ಅದೇ ಸಂಸ್ಕೃತಿ.

NOT TO BE REPUBLISHED ©KTBS

ಸಂಸ್ಕೃತಿಯು ಆಯಾ ಸಮಾಜದ ಭೌಗೋಳಿಕ ರಚನೆ, ಪರಂಪರೆ, ಅಗತ್ಯಗಳು ಮುಂತಾದವುಗಳನ್ನು ಅವಲಂಬಿಸಿ ರೂಪುಗೊಂಡಿರುತ್ತದೆ. ಒಂದು ಸಮಾಜದ ಸಂಸ್ಕೃತಿಯು ಮತ್ತೊಂದು ಸಮಾಜದ ಸಂಸ್ಕೃತಿಗಿಂತ ಭಿನ್ನವಾಗಿರುತ್ತದೆ. ಆದುದರಿಂದ ನಾವು ಯಾವುದೇ ಸಂಸ್ಕೃತಿಯನ್ನು ಉತ್ತಮ ಸಂಸ್ಕೃತಿ ಎಂದೂ, ಮತ್ತೊಂದು ಸಂಸ್ಕೃತಿಯನ್ನು ಕೆಟ್ಟ ಸಂಸ್ಕೃತಿ ಎಂದೂ ಹೇಳಲು ಸಾಧ್ಯವಿಲ್ಲ. ಸಂಸ್ಕೃತಿಯು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾವಣೆಯಾಗುತ್ತದೆ. ಈಗ ನಾವು ಕಲಿತಿರುವ ಭಾಷೆ ನಮ್ಮ ಹಿರಿಯರಿಂದ ನಮಗೆ ಬಂದಿದೆ. ಸಂಸ್ಕೃತಿಯು ನಿರಂತರವಾಗಿ ಬದಲಾವಣೆಗೆ ಒಳಪಡುತ್ತಿರುತ್ತದೆ. ನೀವೇ ಗಮನಿಸಿರುವಂತೆ ಉಡುಪಿನ ಶೈಲಿ, ಕೇಶ ಶೈಲಿ, ಆಹಾರ ಶೈಲಿ ಕಳೆದ ಹತ್ತುವರ್ಷಗಳಲ್ಲಿ ಸಾಕಷ್ಟು ಬದಲಾಗಿದೆ.

## ಸಾಂಸ್ಕೃತಿಕ ವೈವಿಧ್ಯ

ನಾವು ಕರ್ನಾಟಕದ ರಾಜಧಾನಿ ಬೆಂಗಳೂರಿನ ಸುಪ್ರಸಿದ್ಧವಾದ ರಸ್ತೆಯೊಂದರಲ್ಲಿ ನಡೆದುಹೋಗುತ್ತಿದ್ದೇವೆ ಎಂದು ಭಾವಿಸೋಣ. ಆಗ ನಮ್ಮ ಕಣ್ಣಿಗೆ ವಿವಿಧ ರೀತಿಯ ಉಡುಪುಗಳನ್ನುಟ್ಟ ಜನರು ಕಣ್ಣಿಗೆ ಬೀಳುತ್ತಾರೆ. ವಿವಿಧ ಜನಾಂಗದವರು ಕಾಣಿಸಿಕೊಳ್ಳುತ್ತಾರೆ. ವಿವಿಧ ಭಾಷೆಗಳಲ್ಲಿ ಜನರು ಸಂಭಾಷಿಸುವುದು ಕಂಡುಬರುತ್ತದೆ.

ಯಾವುದೇ ಸಮಾಜದಲ್ಲಿ ಒಂದೇ ರೀತಿ ಎನ್ನುವ ಸಂಸ್ಕೃತಿ ಇರಲು ಸಾಧ್ಯವಿಲ್ಲ. ವಿವಿಧ ಧರ್ಮ, ಜೀವನ ವಿಧಾನ ಆಧರಿಸಿ ಬೇರೆ ಬೇರೆ ರೀತಿಯ ಸಂಸ್ಕೃತಿಗಳು ಕಂಡುಬರುತ್ತವೆ. ಇದನ್ನು ನಾವು ವೈವಿಧ್ಯಮಯ ಸಂಸ್ಕೃತಿ ಎಂದು ಕರೆಯುತ್ತೇವೆ.

ಸಂಸ್ಕೃತಿಗಳು ಬೇರೆ ಬೇರೆಯಾಗಿದ್ದರೂ ಸಹ ಒಂದು ಮತ್ತೊಂದನ್ನು ಗಾಢವಾಗಿ ಪ್ರಭಾವಿಸುವುದೂ ಕಂಡುಬರುತ್ತದೆ. ಉದಾಹರಣೆಗೆ ಹೆಣ್ಣುಮಕ್ಕಳು ಧರಿಸುವ ಚೂಡಿದಾರ್ ವಾಯುವ್ಯ ಭಾರತೀಯರಿಂದ ಬಂದಂತಹ ಉಡುಪು. ಹಾಗೆಯೇ ಸಾಮಾನ್ಯವಾಗಿ ಗಂಡಸರು ಧರಿಸುವ ಪ್ಯಾಂಟು, ಶರ್ಟು, ಇಂಗ್ಲಿಷ್ ಭಾಷೆ ಬ್ರಿಟೀಷರಿಂದ ಬಂದಿವೆ. ಭಾರತದಲ್ಲಿ ನೂರಾರು ಬುಡಕಟ್ಟುಗಳು, ಸಾವಿರಾರು ಜಾತಿಗಳು, ಹಲವು ಜನಾಂಗಗಳು, ನೂರಾರು ಭಾಷೆಗಳು ಹೀಗೆ ವೈವಿಧ್ಯವಾದ ಸಂಸ್ಕೃತಿಯು ಕಂಡುಬರುತ್ತದೆ. ಆದುದರಿಂದ ಭಾರತದಲ್ಲಿ ವಿವಿಧತೆಯಲ್ಲಿ ಏಕತೆ ಕಂಡುಬರುತ್ತದೆ.

**ಆಚಾರ ವಿಚಾರಗಳು**

ನಾವು ಸಂಸ್ಕೃತಿ ಹಾಗೂ ಸಾಂಸ್ಕೃತಿಕ ವೈವಿಧ್ಯವನ್ನು ಕುರಿತು ತಿಳಿದುಕೊಂಡ ಮೇಲೆ ಸಂಸ್ಕೃತಿಯ ಅಂಶಗಳನ್ನು ತಿಳಿದುಕೊಳ್ಳೋಣ. ಸಂಸ್ಕೃತಿಯ ಅಂಶಗಳೆಂದರೆ, ನಂಬಿಕೆಗಳು, ಮೌಲ್ಯಗಳು, ನಿಯಮಗಳು, ಲೋಕ ರೂಢಿಗಳು ಮತ್ತು ನೈತಿಕ ಅಂಶಗಳಾಗಿವೆ. ಸರಳವಾಗಿ ಇವುಗಳನ್ನು ಆಚಾರ ವಿಚಾರಗಳೆನ್ನಬಹುದು.

ಸ್ವಾತಂತ್ರ್ಯ, ಪ್ರಾಮಾಣಿಕತೆ, ಶುಚಿತ್ವ, ವಿಧೇಯತೆ, ರಾಷ್ಟ್ರಪ್ರೇಮ ಮೊದಲಾದವು ಮೌಲ್ಯಗಳಾಗಿವೆ. ಮೌಲ್ಯಗಳೆಂದರೆ ಸಮಾಜವು ವ್ಯಕ್ತಿಗಳಿಂದ ನಿರೀಕ್ಷಿಸುವ ನಡತೆಯ ಕ್ರಮ ಎಂದು ಭಾವಿಸಬಹುದು. ಪ್ರತಿಯೊಂದು ಸಂಸ್ಕೃತಿಯಲ್ಲಿಯೂ ಯಾವುದು ಒಳ್ಳೆಯದು, ಯಾವುದು ಕೆಟ್ಟದು ಎಂಬುದನ್ನು ನಿರ್ಧರಿಸುವಲ್ಲಿ ಮೌಲ್ಯಗಳು ನೆರವಾಗುತ್ತವೆ.

ನಿಯಮಗಳಿಗೆ ಪೂರಕವಾಗಿ ಲೋಕರೂಢಿಗಳು ಮತ್ತು ನೈತಿಕ ನಿಯಮಗಳಿರುತ್ತವೆ. ಲೋಕರೂಢಿಗಳೆಂದರೆ ನಾವು ದಿನನಿತ್ಯದ ಜೀವನದಲ್ಲಿ ಮತ್ತೆ ಮತ್ತೆ ತೊಡಗುವ ಚಟುವಟಿಕೆಗಳು. ಉದಾಹರಣೆಗೆ–ಊಟ ಮಾಡುವುದು, ನಿದ್ರಿಸುವುದು, ಶುಭಾಶಯ ಹೇಳುವುದು ಇತ್ಯಾದಿ ಚಟುವಟಿಕೆಗಳನ್ನು ಹೆಚ್ಚು ಯೋಚಿಸದೆ ರೂಢಿಯ ಆಧಾರದ ಮೇಲೆ ಮಾಡುತ್ತೇವೆ. ನೀವು ಊಟ ಮಾಡುವಾಗ ಅಥವಾ ಶಾಲೆಯಲ್ಲಿ ಕುಳಿತುಕೊಳ್ಳುವಾಗ ಹೇಗೆ ಊಟ ಮಾಡಬೇಕು, ಹೇಗೆ ಕುಳಿತುಕೊಳ್ಳಬೇಕು ಎಂಬ ಪ್ರಶ್ನೆಯನ್ನು ದಿನವೂ ಕೇಳುವುದಿಲ್ಲ. ನಿಮಗೆ ರೂಢಿಯಿಂದಲೇ ಇವೆಲ್ಲಾ ಅಭ್ಯಾಸವಾಗಿರುತ್ತದೆ. ನಮ್ಮ ದಿನನಿತ್ಯದ ಚಟುವಟಿಕೆಗಳು ಯಾವುದೇ ಅಡೆತಡೆಯಿಲ್ಲದೆ ಸಾಗಲು ಲೋಕರೂಢಿಗಳು ನೆರವಾಗಿವೆ.

NOT TO BE REPUBLISHED @KTBS

## ಅಭ್ಯಾಸಗಳು

**I ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1 ಸಂಸ್ಕೃತಿ ಎಂದರೆ ____________ ಎಂದರ್ಥ.

2 ಲೋಕ ರೂಢಿಗಳೆಂದರೆ ನಾವು ____________ ಮತ್ತೆ ಮತ್ತೆ ತೊಡಗಿಸಿಕೊಳ್ಳುವ ಚಟುವಟಿಕೆಗಳು.

3 ಭಾರತದಲ್ಲಿ ____________ಯಲ್ಲಿ ಏಕತೆ ಕಂಡುಬರುತ್ತದೆ.

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

4 ಸಂಸ್ಕೃತಿ ಎಂದರೇನು?

5 ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಇರುವ ಸಾಂಸ್ಕೃತಿಕ ವೈವಿಧ್ಯತೆಗೆ ಉದಾಹರಣೆ ಕೊಡಿ.

6 ಆಚಾರ ವಿಚಾರಗಳು ಎಂದರೇನು?

7 ಆಚಾರ ವಿಚಾರಗಳಿಗೆ ಉದಾಹರಣೆ ಕೊಡಿ.

**III ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ.**

8 ಲೋಕರೂಢಿಗಳೆಂದರೇನು? ಉದಾಹರಣೆ ಕೊಡಿ.

9 ಸಾಂಸ್ಕೃತಿಕ ವೈವಿಧ್ಯವನ್ನು ವಿವರಿಸಿ.

10 ಸಂಸ್ಕೃತಿಯ ಗುಣಲಕ್ಷಣಗಳನ್ನು ತಿಳಿಸಿ.

**IV ಚಟುವಟಿಕೆ.**

11 ನಿಮ್ಮ ಊರಿನಲ್ಲಿ ನಡೆಯುವ ಜಾತ್ರೆಗೆ ಸಂಬಂಧಿಸಿದಂತೆ ಹಿರಿಯರಿಂದ ಮಾಹಿತಿ ಸಂಗ್ರಹಿಸಿ. ಜಾತ್ರೆಯ ರೀತಿ ನೀತಿಗಳ ಪಟ್ಟಿ ತಯಾರಿಸಿ.

✲✲✲

NOT TO BE REPUBLISHED @KTBS

# ಭೂಗೋಳಶಾಸ್ತ್ರ

## ಅಧ್ಯಾಯ–11

X2P8Q8

## ಭೂಮಿ–ನಮ್ಮ ಜೀವಂತ ಗ್ರಹ

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಭೂಮಿಗೆ ಇರುವ ವಿವಿಧ ಹೆಸರುಗಳನ್ನು ಪರಿಚಯಿಸಿಕೊಳ್ಳುವುದು.
- ಭೂಮಿಯ ಗಾತ್ರ ಮತ್ತು ಭೂಮಿಯಲ್ಲಿನ ಜಲರಾಶಿಯ ಹಂಚಿಕೆಯನ್ನು ತಿಳಿಯುವುದು.
- ಭೂ ಖಂಡಗಳನ್ನು ಹಾಗೂ ಮಹಾಸಾಗರಗಳನ್ನು ಗುರುತಿಸುವುದು.
- ಅಕ್ಷಾಂಶ ಮತ್ತು ರೇಖಾಂಶಗಳ ಪರಿಚಯ, ಇವುಗಳಿಂದ ವೇಳೆ, ಸ್ಥಾನಿಕವೇಳೆ, ಪ್ರಮಾಣವೇಳೆ, ಅಂತರಾಷ್ಟ್ರೀಯ ದಿನಾಂಕಗಳನ್ನು ನಿರ್ಧರಿಸುವುದರ ಬಗ್ಗೆ ತಿಳಿಯುವುದು.
- ಪ್ರಪಂಚದ ಪ್ರಾಕೃತಿಕ ಭೂಪಟದಲ್ಲಿ ಭೂಖಂಡಗಳು ಮತ್ತು ಸಾಗರಗಳನ್ನು ಗುರುತಿಸುವುದು.


### ನಾವು ಎಲ್ಲಿ ಜೀವಿಸುತ್ತಿದ್ದೇವೆ ಎಂಬುದು ನಿಮಗೆ ತಿಳಿದಿದೆಯೆ?

ನಾವು ಭೂಮಿಯ ಮೇಲೆ ಜೀವಿಸುತ್ತಿದ್ದೇವೆ. ಇದು ಸೂರ್ಯನಿಂದ ಮೂರನೆ ಗ್ರಹವಾಗಿದೆ. ಸೌರವ್ಯೂಹದಲ್ಲಿರುವ ಗ್ರಹಗಳಲ್ಲಿ ಭೂಮಿಯು ಮಾತ್ರ ಜೀವಿಗಳನ್ನು ಹೊಂದಿದೆ. ಭೂಮಿ ಎಲ್ಲ ಬಗೆಯ ಜೀವಿಗಳಿಗೆ ವಾಸಸ್ಥಾನವಾಗಿದೆ. ಸಸ್ಯಗಳು, ಪ್ರಾಣಿಗಳು ಮತ್ತು ಮಾನವ ಜೀವಿಗಳು ಇಲ್ಲಿವೆ. ಇದಕ್ಕೆ ಕಾರಣ ಸೂರ್ಯನ ಮತ್ತು ಭೂಮಿಯ ನಡುವಿನ ಅನುಕೂಲಕರ ದೂರ, ಉಷ್ಣಾಂಶ, ಅನಿಲಗಳು, ವಾತಾವರಣ ಮತ್ತು ಜಲಚಕ್ರಗಳಾಗಿವೆ. ಭೂಮಿಯನ್ನು 'ಜೀವಂತ ಗ್ರಹ', 'ವಿಶಿಷ್ಟ ಗ್ರಹ', 'ಜಲಾವೃತ ಗ್ರಹ,' 'ನೀಲಿಗ್ರಹ' ಹೀಗೆ ವಿವಿಧ ಹೆಸರಿನಿಂದ ಕರೆಯಲಾಗಿದೆ.

NOT TO BE REPUBLISHED ©KTBS

### ಭೂಮಿಯ ಗಾತ್ರ, ಭೂಭಾಗ ಮತ್ತು ಜಲರಾಶಿಗಳ ಹಂಚಿಕೆ

ಸೂರ್ಯನ ಪರಿವಾರದಲ್ಲಿ ಭೂಮಿಯು ಐದನೇ ದೊಡ್ಡ ಗ್ರಹವಾಗಿದೆ. ಭೂಮಿಯ ವ್ಯಾಸವು ಚಂದ್ರನ ವ್ಯಾಸಕ್ಕಿಂತ ಸುಮಾರು ನಾಲ್ಕು ಪಟ್ಟು ದೊಡ್ಡದಾಗಿದೆ ಹಾಗೂ ಸೂರ್ಯನಿಗಿಂತ 107 ಪಟ್ಟು ಚಿಕ್ಕದಾಗಿದೆ.



ಪೃಥ್ವಿ

ಭೂಮಿಯು ಒಟ್ಟು ಭೌಗೋಳಿಕ ಕ್ಷೇತ್ರವು 510 ದಶಲಕ್ಷ ಚದರ ಕಿ.ಮೀ.ಗಳಾಗಿದ್ದು ಅದರಲ್ಲಿ 361 ದಶಲಕ್ಷ ಚದರ ಕಿ.ಮೀ.ಗಳಷ್ಟು (70.78%) ಕ್ಷೇತ್ರವು ನೀರಿನಿಂದ ಆವರಿಸಲ್ಪಟ್ಟಿದೆ. ಉಳಿದ 149 ದಶಲಕ್ಷ ಚದರ ಕಿ.ಮೀ.ನಷ್ಟು ಕ್ಷೇತ್ರವು (29.22%) ಭೂ ಭಾಗದಿಂದ ಕೂಡಿದೆ. ಹೀಗೆ ಭೂಮಿಯು ಜಲಭಾಗ ಹಾಗೂ ಭೂ ಭಾಗಗಳ ಅಸಮತೆಯಿಂದ ಕೂಡಿದೆ. ಭೂ ಮತ್ತು ಜಲರಾಶಿಗಳ ಕ್ಷೇತ್ರ 1 : 2.43ರಷ್ಟು ಅನುಪಾತವನ್ನು ಹೊಂದಿವೆ.

ಭೂಮಿಯ ಆಕಾರವನ್ನು 'ಭೂಮ್ಯಾಕಾರ' ಅಥವಾ 'ಜಿಯಾಡ್' ಎಂದು ಕರೆಯಲಾಗಿದೆ. ಏಕೆಂದರೆ ಭೂಮಿಯು ಧ್ರುವಗಳ ಬಳಿ ಸ್ವಲ್ಪ ಚಪ್ಪಟೆಯಾಗಿದ್ದು ಸಮಭಾಜಕವೃತ್ತದ ಬಳಿ ಉಬ್ಬಿದಂತಿದೆ. ಭೂಮಿಯ ಸಮಭಾಜಕವೃತ್ತದ ವ್ಯಾಸ 12,756 ಕಿ.ಮೀ.ಗಳು ಮತ್ತು ಧ್ರುವೀಯ ವ್ಯಾಸ 12,714 ಕಿ.ಮೀ ಆಗಿದೆ. ಅದೇ ರೀತಿ ಸಮಭಾಜಕವೃತದ ಸುತ್ತಳತೆ 40,076 ಕಿ.ಮೀಗಳು ಮತ್ತು ಧ್ರುವೀಯ ಸುತ್ತಳತೆ 40,008 ಕಿ.ಮೀ.ಗಳಷ್ಟಿದೆ. ವ್ಯಾಸದಲ್ಲಿ 42ಕಿ.ಮೀಗಳಷ್ಟು ವ್ಯತ್ಯಾಸ ಇರುವುದು ಭೂಮಿಯು ಜೆಯಾಡ್ ಆಗಿರುವುದರಿಂದ ಸ್ಪಷ್ಟಪಡಿಸುವುದು.

ಭೂಮಿಯಲ್ಲಿನ ಭೂಭಾಗಗಳನ್ನು ಖಂಡಗಳೆಂದು ಕರೆಯುತ್ತಾರೆ. ಇಡೀ ಭೂ ಭಾಗವನ್ನು ಏಳು ಖಂಡಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಏಷಿಯಾ, ಆಫ್ರಿಕಾ, ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಅಂಟಾರ್ಕ್ಟಿಕ, ಯುರೋಪ್ ಮತ್ತು ಆಸ್ಟ್ರೇಲಿಯಾ. ಈ ಖಂಡಗಳು ವಿಸ್ತಾರವಾದ ಭೂ ಭಾಗಗಳಾಗಿವೆ. ಏಷ್ಯಾವು ಅತಿ ದೊಡ್ಡ ಖಂಡವಾಗಿದ್ದು ಆಸ್ಟ್ರೇಲಿಯಾವು ಅತಿ ಚಿಕ್ಕ ಖಂಡವಾಗಿದೆ. ಭೂಮಿಯ ಮೇಲಿನ ವಿಸ್ತಾರವಾದ ಜಲರಾಶಿಯನ್ನು ಮಹಾಸಾಗರಗಳೆಂದು ಕರೆಯುತ್ತಾರೆ. ಅವುಗಳನ್ನು ನಾಲ್ಕು ಮಹಾಸಾಗರಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಪೆಸಿಫಿಕ್‌ಸಾಗರ, ಅಟ್ಲಾಂಟಿಕ್‌ಸಾಗರ, ಹಿಂದೂಮಹಾಸಾಗರ ಮತ್ತು ಆರ್ಕ್ಟಿಕ್‌ಸಾಗರ. ಪೆಸಿಫಿಕ್ ಸಾಗರವು ಅತಿ ದೊಡ್ಡದು ಹಾಗೂ ಹೆಚ್ಚು ಆಳವಾದುದಾಗಿದೆ. ಆರ್ಕ್ಟಿಕ್ ಸಾಗರವು ಅತಿಚಿಕ್ಕದು ಮತ್ತು ಕಡಿಮೆ ಆಳಹೊಂದಿದೆ.


ಭೂಮಿ ಮತ್ತು ಜಲರಾಶಿಗಳು ಉತ್ತರಗೋಳಾರ್ಧ ಮತ್ತು ದಕ್ಷಿಣಗೋಳಾರ್ಧದಲ್ಲಿ ಸಮನಾಗಿ ಹಂಚಿಕೆಯಾಗಿಲ್ಲ. ಉತ್ತರಗೋಳಾರ್ಧದಲ್ಲಿ ಶೇ 60 ಭಾಗದಷ್ಟು ಭೂ ಭಾಗವಿದ್ದು, ಶೇ 40 ಭಾಗದಷ್ಟು ಜಲರಾಶಿಯಿರುವುದು. ಆದ್ದರಿಂದ ಇದನ್ನು 'ಭೂ ಪ್ರಧಾನಗೋಳ' (ಭೂಗೋಳಾರ್ಧ)ವೆಂದೂ ಕರೆಯಲಾಗಿದೆ. ಇದಕ್ಕೆ ವಿರುದ್ಧವಾಗಿ ದಕ್ಷಿಣಗೋಳಾರ್ಧದಲ್ಲಿ ಶೇ 81 ಭಾಗದಷ್ಟು ಜಲರಾಶಿಯಿದ್ದು ಶೇ 19ರಷ್ಟು ಭಾಗ ಭೂ ಭಾಗವಿದೆ. ಇದರಿಂದ ಇದನ್ನು 'ಜಲ ಪ್ರಧಾನಗೋಳ' (ಜಲಗೋಳಾರ್ಧ) ವೆಂದು ಕರೆಯುವರು.

© KTBS NOT TO BE REPUBLISHED

**ಅಕ್ಷಾಂಶಗಳು ಮತ್ತು ರೇಖಾಂಶಗಳು**

**ಒಂದು ಸ್ಥಳದ ಸನ್ನಿವೇಶ, ದಿಕ್ಕು ಮತ್ತು ಅಂತರವನ್ನು ಹೇಗೆ ತಿಳಿಯುತ್ತೇವೆ?**


ಭೂಮಿಯು ಗೋಳಾಕಾರವಾಗಿದೆ. ಆದ್ದರಿಂದ ಭೂಮಿಯ ಮೇಲಿನ ಸ್ಥಳಗಳನ್ನು, ದಿಕ್ಕುಗಳನ್ನು ಹಾಗೂ ಎರಡು ಸ್ಥಳಗಳ ನಡುವಿನ ಅಂತರವನ್ನು ಗುರುತಿಸುವುದು ಕಠಿಣ. ಭೂಮಿಯ ಮೇಲಿನ ಒಂದು ಸ್ಥಳದ ನಿರ್ದಿಷ್ಟ ಸ್ಥಾನ, ಸನ್ನಿವೇಶ, ಅಂತರ ಮತ್ತು ದಿಕ್ಕುಗಳನ್ನು ಅರಿಯಲು ಕಾಲ್ಪನಿಕ ರೇಖಾಜಾಲ ವ್ಯವಸ್ಥೆಯನ್ನು ನಕ್ಷೆ ಅಥವಾ ಗೋಳದ ಮೇಲೆ ಊಹಾರೇಖೆಗಳನ್ನು ಎಳೆಯಲಾಗಿದೆ. ಈ ಊಹಾರೇಖೆಗಳನ್ನು ಪೂರ್ವ ಪಶ್ಚಿಮವಾಗಿ ಮತ್ತು ಉತ್ತರ ದಕ್ಷಿಣವಾಗಿ ಎಳೆಯಲಾಗಿದ್ದು, ಇವುಗಳನ್ನು ಅಕ್ಷಾಂಶಗಳು ಮತ್ತು ರೇಖಾಂಶಗಳೆನ್ನುವರು. ಇವುಗಳನ್ನು ಭೌಗೋಳಿಕ ನಿರ್ದೇಶಾಂಕಗಳು (Geographic Co-ordinates) ಅಥವಾ ಭೌಗೋಳಿಕ ಜಾಲ ವ್ಯವಸ್ಥೆ ಎಂದೂ ಕರೆಯುವರು.


ಆರ್ಕ್ಟಿಕ್ ಸಾಗರ
ಗ್ರೀನ್ ಲ್ಯಾಂಡ್
ಆರ್ಕ್ಟಿಕ್ ವೃತ್ತ
ಆರ್ಕ್ಟಿಕ್ ಸಾಗರ
ಏಷ್ಯಾ
ಉತ್ತರ ಅಮೇರಿಕ
ಫೆಸಿಫಿಕ್ ಸಾಗರ
ಫೆಸಿಫಿಕ್ ಸಾಗರ
ಕರ್ಕಾಟಕ ಸಂಕ್ರಾಂತಿ ವೃತ್ತ
ಸಹರಾ ಆಫ್ರೀಕ
ಭಾರತ
ಅರಬ್ಬೀ ಸಮುದ್ರ
ಬಂಗಾಳ ಕೊಲ್ಲಿ
ಭೂ ಮಧ್ಯರೇಖೆ
ದಕ್ಷಿಣ ಅಮೇರಿಕ
ಹಿಂದೂ ಮಹಾ ಸಾಗರ
ಮಕರ ಸಂಕ್ರಾಂತಿ ವೃತ್ತ
ಅಟ್ಲಾಂಟಿಕ್ ಸಾಗರ
ಮಕರ ಸಂಕ್ರಾಂತಿ ವೃತ್ತ
ಆಸ್ಟ್ರೇಲಿಯಾ
ಫೆಸಿಫಿಕ್ ಸಾಗರ
0 1500 3000 ml
0 1500 3000 km
ಮಾಪಕ ಸಮಭಾಪಕ ವೃತ್ತದಲ್ಲಿದ್ದಂತೆ
ದಕ್ಷಿಣ ಅಮೇರಿಕ
ಅಂಟಾರ್ಕ್ಟಿಕಾ

ಪ್ರಪಂಚ ಪ್ರಾಕೃತಿಕ

**ಅಕ್ಷಾಂಶಗಳು :** ಭೂಅಕ್ಷವನ್ನು ಆಧಾರವಾಗಿಟ್ಟುಕೊಂಡು ಗೋಳದ ಮೇಲೆ ಅಕ್ಷಾಂಶಗಳನ್ನು ಎಳೆಯಲಾಗಿದೆ. ಉತ್ತರ ಮತ್ತು ದಕ್ಷಿಣ ಧ್ರುವಗಳ ಮಧ್ಯದಲ್ಲಿ ಭೂಅಕ್ಷಕ್ಕೆ ಲಂಬವಾಗಿ ಸಮಭಾಜಕವೃತ್ತವನ್ನು ರಚಿಸಲಾಗಿದೆ. ಈ ಸಮಭಾಜಕ ವೃತ್ತಕ್ಕೆ ಸಮಾನಾಂತರವಾಗಿರುವಂತೆ ಗೋಳದ ಮೇಲೆ ಪೂರ್ವ ಪಶ್ಚಿಮವಾಗಿ ಎಳೆದಿರುವ ಕಾಲ್ಪನಿಕ ರೇಖೆಗಳನ್ನೇ 'ಅಕ್ಷಾಂಶಗಳು' (Latitudes) ಎನ್ನುವರು. ಸಮಭಾಜಕವೃತ್ತವು $0^0$ ಮಹಾವೃತ್ತವಾಗಿದ್ದು ಅಲ್ಲಿಂದ ಉತ್ತರ ಹಾಗೂ ದಕ್ಷಿಣಕ್ಕಿರುವ ಅಕ್ಷಾಂಶಿಕ ವರ್ತುಲಗಳು ಚಿಕ್ಕದಾಗುತ್ತವೆ. ಅಂದರೆ $90^0$ ಉತ್ತರ ಹಾಗೂ ದಕ್ಷಿಣ ಅಕ್ಷಾಂಶಗಳು ಬಿಂದುಗಳಾಗಿವೆ. ಸಮಭಾಜಕವೃತ್ತದಿಂದ ಉತ್ತರಗೋಳಾರ್ಧದಲ್ಲಿ $90^0$ ಹಾಗೂ ದಕ್ಷಿಣಗೋಳಾರ್ಧದಲ್ಲಿ $90^0$ ಅಕ್ಷಾಂಶಗಳನ್ನು ರಚಿಸಲಾಗಿದೆ. ಒಂದು ಅಕ್ಷಾಂಶದಿಂದ ಮತ್ತೊಂದು ಅಕ್ಷಾಂಶಕ್ಕಿರುವ ಭೂಮಿಯ ಮೇಲಿನ ಅಂತರ 110.4 ಕಿ.ಮೀಗಳಾಗುತ್ತದೆ.

**ಪ್ರಮುಖ ಅಕ್ಷಾಂಶಗಳು**




**ಅಕ್ಷಾಂಶಗಳು ಮತ್ತು ರೇಖಾಂಶಗಳ ಜಾಲ**

1) $0^0$ ಅಕ್ಷಾಂಶ – ಸಮಭಾಜಕ ವೃತ್ತ ಅಥವಾ ಮಹಾವೃತ್ತ.
2) $23\frac{1}{2}^0$ ಉತ್ತರ ಅಕ್ಷಾಂಶ – ಕರ್ಕಾಟಕ ಸಂಕ್ರಾಂತಿ ವೃತ್ತ
3) $23\frac{1}{2}^0$ ದಕ್ಷಿಣ ಅಕ್ಷಾಂಶ – ಮಕರ ಸಂಕ್ರಾಂತಿ ವೃತ್ತ.
4) $66\frac{1}{2}^0$ ಉತ್ತರ ಅಕ್ಷಾಂಶ – ಉತ್ತರಧ್ರುವ ವೃತ್ತ (ಆರ್ಕ್ಟಿಕ್ ವೃತ್ತ)
5) $66\frac{1}{2}^0$ ದಕ್ಷಿಣ ಅಕ್ಷಾಂಶ– ದಕ್ಷಿಣಧ್ರುವ ವೃತ್ತ (ಅಂಟಾರ್ಕ್ಟಿಕ್ ವೃತ್ತ)
6) $90^0$ ಉತ್ತರ ಅಕ್ಷಾಂಶ – ಉತ್ತರಧ್ರುವ
7) $90^0$ ದಕ್ಷಿಣ ಅಕ್ಷಾಂಶ – ದಕ್ಷಿಣಧ್ರುವ.

**ರೇಖಾಂಶಗಳು:** ಸಮಭಾಜಕ ವೃತ್ತವನ್ನು ಸಮಾನಾಂತರವಾಗಿ ಛೇದಿಸಿ ಉತ್ತರ ಮತ್ತು ದಕ್ಷಿಣಧ್ರುವಗಳನ್ನು ಸಂಧಿಸುವ ರೇಖೆಗಳನ್ನು ರೇಖಾಂಶಗಳು ಎನ್ನುವರು. ರೇಖಾಂಶಗಳು ಪ್ರಧಾನ ರೇಖಾಂಶಕ್ಕೆ (ಗ್ರೀನ್‌ವಿಚ್ ರೇಖಾಂಶ) ಪೂರ್ವ ಮತ್ತು ಪಶ್ಚಿಮಕ್ಕೆ ಒಂದೇ ಕೋನಿಯ ಅಂತರದಲ್ಲಿರುವ ಪ್ರದೇಶಗಳನ್ನು ಸಂಧಿಸುವ ಹಾಗೂ ಸಮಭಾಜಕವೃತ್ತದ ಮೇಲೆ ಡಿಗ್ರಿಗಳಲ್ಲಿ ಅಳೆಯುವ ಕಾಲ್ಪನಿಕ ರೇಖೆಗಳಾಗಿವೆ.

ಗೋಳದ ಮೇಲೆ ರೇಖಾಂಶಗಳು ಅರ್ಧವೃತ್ತಗಳ ಶ್ರೇಣಿಗಳಂತೆ ಕಂಡು ಬರುತ್ತವೆ. ಇವು ಉತ್ತರ ಮತ್ತು ದಕ್ಷಿಣ ಧ್ರುವಗಳಿಂದ ಸಮಭಾಜಕವೃತ್ತದ ಮೂಲಕ ಹಾದು ಹೋಗುತ್ತವೆ. ಎಲ್ಲ ರೇಖಾಂಶಗಳ ಉದ್ದ ಒಂದೇ ಆಗಿದೆ. ರೇಖಾಂಶಗಳನ್ನು ಮಧ್ಯಾಹ್ನ ಅಥವಾ ಮೆರಿಡಿಯನ್ ರೇಖೆಗಳೆನ್ನುವರು. (ಮೆರಿ–ಮಧ್ಯ, ಡಿಯನ್– ದಿನ) ಏಕೆಂದರೆ ಒಂದು ರೇಖಾಂಶದುದ್ದಕ್ಕು ಎಲ್ಲ ಸ್ಥಳಗಳಲ್ಲೂ ಒಂದೇ ಸಮಯದಲ್ಲಿ ಮಧ್ಯಾಹ್ನವಾಗುತ್ತದೆ.

© KTBS NOT TO BE REPUBLISHED

ಇಂಗ್ಲೆಂಡಿನ ಗ್ರೀನ್‌ವಿಚ್‌ನ ಮೇಲೆ ಹಾದು ಹೋಗುವ ರೇಖಾಂಶವನ್ನು ಪ್ರಧಾನ ರೇಖಾಂಶವೆಂದು ಆಯ್ಕೆಮಾಡಲಾಗಿದೆ. ಇದನ್ನು '0' ಡಿಗ್ರಿ ಎಂದು ಗುರುತಿಸಲಾಗಿದೆ. ಗ್ರೀನ್‌ವಿಚ್ ರೇಖಾಂಶದ ಪೂರ್ವಕ್ಕೆ 180 ಹಾಗೂ ಪಶ್ಚಿಮಕ್ಕೆ 180 ರೇಖಾಂಶಗಳಿವೆ. ಆದ್ದರಿಂದ ಒಟ್ಟು 360 ರೇಖಾಂಶಗಳಿರುತ್ತವೆ. ಪ್ರಧಾನ ರೇಖಾಂಶದಿಂದ 180 ಪೂರ್ವ ರೇಖಾಂಶದವರೆಗಿನ ವಲಯವನ್ನು ಪೂರ್ವಾರ್ಧಗೋಳವೆನ್ನುವರು. ಅದರ ವಿರುದ್ಧದ ಭಾಗವನ್ನು ಪಶ್ಚಿಮಾರ್ಧಗೋಳವೆನ್ನುವರು.

ಸಮಭಾಜಕ ವೃತ್ತದಿಂದ ಧ್ರುವದ ಕಡೆಗೆ ಹೋದಂತೆ ಎರಡು ರೇಖಾಂಶಗಳ ಅಂತರವು ನಿಧಾನವಾಗಿ ಕಡಿಮೆಯಾಗುತ್ತಾ ಹೋಗುತ್ತದೆ. ಇದಕ್ಕೆ ಕಾರಣ ಎಲ್ಲ ರೇಖಾಂಶಗಳು ಎರಡೂ ಧ್ರುವಗಳಲ್ಲಿ ಸಂಧಿಸುತ್ತವೆ. ಸಮಭಾಜಕ ವೃತ್ತದ ಮೇಲೆ ಎರಡು ರೇಖಾಂಶಗಳ ನಡುವಿನ ಅಂತರ ಅತಿ ಹೆಚ್ಚು ಅಂದರೆ ಸುಮಾರು 111 ಕಿ.ಮೀ ಗಳಷ್ಟು ಇರುತ್ತದೆ.

**ರೇಖಾಂಶ ಮತ್ತು ವೇಳೆ:** ರೇಖಾಂಶ ಮತ್ತು ವೇಳೆಗೆ ನಿಕಟವಾದ ಸಂಬಂಧವಿದೆ. ಭೂಮಿಯು ತನ್ನ ಅಕ್ಷದ ಸುತ್ತ ತಿರುಗುತ್ತಿರುತ್ತದೆ ಹಾಗೂ ಒಂದು ಸುತ್ತನ್ನು ಪೂರ್ಣಗೊಳಿಸಲು 24 ಗಂಟೆಗಳ ಸಮಯಬೇಕು. ಅಂದರೆ 360 ರೇಖಾಂಶಗಳನ್ನು ಸುತ್ತಿ ಪೂರ್ಣಗೊಳಿಸಲು 24 ಗಂಟೆಗಳು ಬೇಕು. ಒಂದು ರೇಖಾಂಶದಿಂದ ಮತ್ತೊಂದು ರೇಖಾಂಶಕ್ಕೆ ಇರುವ ವೇಳೆಯ ವ್ಯತ್ಯಾಸ 4 ನಿಮಿಷಗಳಾಗಿದ್ದು, ಪ್ರತಿ 15 ರೇಖಾಂಶಗಳಿಗೆ ಒಂದು ಗಂಟೆ ಅಥವಾ 60 ನಿಮಿಷಗಳಾಗುತ್ತವೆ. ($360 \times 4 = 1440 / 60 = 24$ ಗಂಟೆಗಳು). ನಾವು ಪಶ್ಚಿಮದಿಂದ ಪೂರ್ವದ ಕಡೆಗೆ ಚಲಿಸುವಾಗ ವೇಳೆಯು ಹೆಚ್ಚಾಗುತ್ತದೆ. (EGA- East Gain Add) ಹಾಗೂ ಪೂರ್ವದಿಂದ ಪಶ್ಚಿಮದ ಕಡೆಗೆ ಚಲಿಸುವಾಗ ವೇಳೆಯು ಕಡಿಮೆಯಾಗುತ್ತಾ ಹೋಗುತ್ತದೆ (WLS - West Lose Subtracts).

**ಸ್ಥಾನಿಕವೇಳೆ:** ಒಂದು ಸ್ಥಳದ ಸ್ಥಾನಿಕವೇಳೆಯನ್ನು ಆ ಸ್ಥಳದ ರೇಖಾಂಶ ಅಥವಾ ಸೂರ್ಯನ ಸ್ಥಾನಕ್ಕನುಸಾರವಾಗಿ ಹೇಳುತ್ತಾರೆ. ಸ್ಥಾನಿಕವೇಳೆಯು ಆ ಸ್ಥಳದ ಸ್ಥಳೀಯ ರೇಖಾಂಶವನ್ನು ಅದರಲ್ಲೂ ಸ್ಥಳೀಯ ಮಧ್ಯಾಹ್ನದ ರೇಖೆಯನ್ನು ಆಧರಿಸಿರುತ್ತದೆ. ಆ ಸ್ಥಳದ ಮೇಲೆ ಸೂರ್ಯನ ಕಿರಣ ನೇರವಾಗಿ ಬೀಳುವುದರಿಂದ ಮಧ್ಯಾಹ್ನ 12 ಗಂಟೆಯಾಗಿರುತ್ತದೆ. ಆ ಮಧ್ಯಾಹ್ನರೇಖೆ ಹಾದುಹೋಗುವ ಎಲ್ಲಾ ಸ್ಥಳಗಳಲ್ಲೂ ಒಂದೇ ಸ್ಥಾನಿಕ ವೇಳೆಯಿರುತ್ತದೆ. ಪ್ರತಿ ರೇಖಾಂಶವೂ ತನ್ನದೇ ಆದ ಸ್ಥಾನಿಕವೇಳೆ ಹೊಂದಿದೆ.

**ಪ್ರಮಾಣವೇಳೆ:** ಸ್ಥಾನಿಕ ವೇಳೆಯು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಪ್ರತಿಯೊಂದು ಸ್ಥಳವೂ ತನ್ನದೇ ಸ್ಥಾನಿಕ ವೇಳೆಯನ್ನು ಅನುಸರಿಸುವುದರಿಂದ, ಸಾಕಷ್ಟು ಗೊಂದಲವುಂಟಾಗುತ್ತದೆ. ಈ ಗೊಂದಲವನ್ನು ನಿವಾರಿಸಲು ಹಲವು ದೇಶಗಳು ಇಡೀ ದೇಶದಲ್ಲಿ ಏಕರೂಪದ ವೇಳೆಯನ್ನು ಅನುಸರಿಸುತ್ತವೆ. ಇಂತಹ ಏಕರೂಪದ ವೇಳೆಯು ಆ ದೇಶದ ಮಧ್ಯದಲ್ಲಿ ಹಾದುಹೋಗುವ ರೇಖಾಂಶದ ವೇಳೆಯನ್ನಾಧರಿಸಿರುತ್ತದೆ ಅಥವಾ ಆ ರೇಖಾಂಶದ ಮೇಲಿರುವ ಪ್ರಮುಖ ನಗರದ ವೇಳೆಯಾಗಿರುತ್ತದೆ. ಈ ವೇಳೆಯನ್ನು ದೇಶದ ಎಲ್ಲಾ ಭಾಗಗಳಲ್ಲೂ ಅನುಸರಿಸುವುದರಿಂದ ಇದನ್ನು ಪ್ರಮಾಣಿತ ವೇಳೆ (Standard Time) ಎಂದು ಕರೆಯುತ್ತಾರೆ.

©KTBS
NOT TO BE REPUBLISHED

ಭಾರತದಲ್ಲಿ $82\frac{1}{2}^0$ ಪೂರ್ವ ರೇಖಾಂಶವನ್ನು ದೇಶದ ಮಧ್ಯದ ರೇಖಾಂಶವೆಂದು ನಿರ್ಧರಿಸಲಾಗಿದೆ. ಇದು ಉತ್ತರ ಪ್ರದೇಶ ರಾಜ್ಯದ ಪ್ರಯಾಗ್ ನಗರದ ಮೂಲಕ ಹಾದು ಹೋಗಿದೆ. ಭಾರತದ ವೇಳೆ ಈ ರೇಖಾಂಶವನ್ನು ಆಧರಿಸುವುದರಿಂದ ಇದನ್ನು ಭಾರತದ ಪ್ರಮಾಣ ವೇಳೆ Indian Standard Time (IST) ಎನ್ನುವರು. ಇದು ಗ್ರೀನ್‌ವಿಚ್ ವೇಳೆಗಿಂತ 5 ಗಂಟೆ 30 ನಿಮಿಷಗಳಷ್ಟು ಮುಂದಿರುತ್ತದೆ.


**ವೇಳಾವಲಯಗಳು:–** ಪ್ರಪಂಚದ ಕೆಲವು ರಾಷ್ಟ್ರಗಳಲ್ಲಿ 45 ಕ್ಕಿಂತ ಹೆಚ್ಚು ರೇಖಾಂಶಗಳು ಹಾದುಹೋಗುವುದರಿಂದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ 3 ರಿಂದ 4 ಗಂಟೆಗಳಷ್ಟು ವ್ಯತ್ಯಾಸವಾಗುತ್ತದೆ. ಇಲ್ಲಿ ಒಂದೇ ಪ್ರಮಾಣವೇಳೆಯನ್ನು ಅನುಸರಿಸಲು ಸಾಧ್ಯವಾಗುವುದಿಲ್ಲ, ಆದುದರಿಂದ ಇಡೀ ರಾಷ್ಟ್ರವನ್ನು ಕಾಲವಲಯಗಳನ್ನಾಗಿ ವಿಭಾಗಿಸಲಾಗಿದೆ. ಹಾಗೂ ಇಡೀ ಗೋಳವನ್ನು 24 ವೇಳಾವಲಯಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿ ವೇಳಾವಲಯಕ್ಕೆ ಒಂದು ಗಂಟೆಯಷ್ಟು ಮಾತ್ರ ವ್ಯತ್ಯಾಸವಾಗುತ್ತದೆ.

ವಿಸ್ತಾರವಾದ ರಾಷ್ಟ್ರಗಳಲ್ಲಿ ಅನೇಕ ರೇಖಾಂಶಗಳು ಹಾದುಹೋಗುವುದರಿಂದ ಹೆಚ್ಚು ವೇಳಾವಲಯಗಳನ್ನು ಹೊಂದಿರುತ್ತವೆ. ಉದಾಹರಣೆಗಾಗಿ, ರಷ್ಯಾದಲ್ಲಿ 11 ವೇಳಾವಲಯಗಳು, ಯುಎಸ್‌ಎ ಮತ್ತು ಕೆನಡಾಗಳಲ್ಲಿ 5 ವೇಳಾವಲಯ ಹಾಗೂ ಆಸ್ಟ್ರೇಲಿಯಾದಲ್ಲಿ 3 ವೇಳಾವಲಯಗಳಿವೆ.

**ಅಂತರರಾಷ್ಟ್ರೀಯ ದಿನಾಂಕ ರೇಖೆ** International Date Line (IDL) **:–** ಪ್ರಪಂಚದ ವೇಳೆಯ ಸಮಸ್ಯೆಯನ್ನು ಮೊದಲು ಪ್ರಮಾಣ ವೇಳೆಯಿಂದ, ನಂತರ ವೇಳಾವಲಯದಿಂದಲೂ ಪರಿಹರಿಸಲಾಗಿದೆ. ಆದರೆ ಪ್ರಪಂಚದ ಸುತ್ತು ಸಂಚರಿಸುವ ಪ್ರಯಾಣಿಕರಿಗೆ ವಾರದಲ್ಲಿನ ಸರಿಯಾದ ದಿನಾಂಕ ಮತ್ತು ದಿನಗಳನ್ನು ಸರಿಪಡಿಸಲು ಹೊಸ ಸಮಸ್ಯೆ ಎದುರಾಗುತ್ತದೆ. ಆದ್ದರಿಂದ ಗ್ರೀನ್‌ವಿಚ್ ರೇಖಾಂಶದ ವಿರುದ್ಧವಾದ $180^0$ ರೇಖಾಂಶದ ಮೇಲೆ ಪ್ರಪಂಚ ಪರ್ಯಟನೆ ಮಾಡುವವರು ತಮ್ಮ ಅನುಕೂಲಕ್ಕೆ ದಿನ ಮತ್ತು ದಿನಾಂಕವನ್ನು ಸರಿದೂಗಿಸಿಕೊಳ್ಳಬೇಕಾಗುತ್ತದೆ. ಇದು ಪೆಸಿಫಿಕ್ ಸಾಗರದ ಮೂಲಕ ಹಾದು ಹೋಗುವ $180^0$ ರೇಖಾಂಶದ ಮೇಲೆ ಇದ್ದರೂ ಕೆಲವು ಭೂಭಾಗಗಳನ್ನು ತಪ್ಪಿಸಲು ಅಲ್ಲಲ್ಲಿ ಅಂಕುಡೊಂಕಾಗಿ ಎಳೆಯಲಾಗಿದೆ. ಇದನ್ನೇ ಅಂತರರಾಷ್ಟ್ರೀಯ ದಿನಾಂಕರೇಖೆ ಎನ್ನುವರು.

ಹಡಗು ಮತ್ತು ವಿಮಾನದಲ್ಲಿ ಪ್ರಯಾಣಿಸುವವರು ರೇಖೆಯನ್ನು ದಾಟುವಾಗ ಪ್ರಯಾಣಿಕರು ದಿನಾಂಕ ಮತ್ತು ದಿನಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಯಾವುದೇ ಹಡಗು ಈ ರೇಖೆಯನ್ನು ಪಶ್ಚಿಮದಿಂದ ಪೂರ್ವಕ್ಕೆ ದಾಟಿದಾಗ (ಏಷ್ಯಾದಿಂದ ಉತ್ತರ ಅಮೆರಿಕಾ) ಒಂದೇ ದಿನವನ್ನು ಎರಡು ಬಾರಿ ಪಡೆಯುತ್ತದೆ. ಅದೇರೀತಿ ಈ ರೇಖೆಯನ್ನು ಪೂರ್ವದಿಂದ ಪಶ್ಚಿಮದ ಕಡೆಗೆ ಹಾದುಹೋಗುವಾಗ (ಉತ್ತರ ಅಮೇರಿಕಾದಿಂದ ಏಷ್ಯಾ) ಒಂದು ದಿನವನ್ನು ಕಳೆದುಕೊಳ್ಳಬೇಕಾಗುತ್ತದೆ.

© KTBS NOT TO BE REPUBLISHED




**ಪ್ರಪಂಚದ ವೇಳಾವಲಯಗಳು ಮತ್ತು ಅಂತಾರಾಷ್ಟ್ರೀಯ ದಿನರೇಖೆ**

©KTBS NOT TO BE REPUBLISHED

## ಅಭ್ಯಾಸಗಳು

**I ಬಿಟ್ಟಿರುವ ಸ್ಥಳಗಳಲ್ಲಿ ಸೂಕ್ತವಾದ ಉತ್ತರಗಳಿಂದ ಭರ್ತಿಮಾಡಿ.**

1 ಭೂಮಿಯ ಒಟ್ಟು ಭೌಗೋಳಿಕ ಕ್ಷೇತ್ರವು ___________ಚ.ಕಿ.ಮೀ.

2 ಭೂಮಿಯು ___________ ಆಕಾರದಲ್ಲಿದೆ.

3 ಭೂಮಿಯ ಸಮಭಾಜಕವೃತ್ತ ಮತ್ತು ದ್ರವ ಪ್ರದೇಶಗಳ ವ್ಯಾಸವು ______ ಮತ್ತು______ಕಿ.ಮೀ. ಗಳು.

4 $23\frac{1}{2}^{0}$ ಉತ್ತರ ಅಕ್ಷಾಂಶವನ್ನು ___________ ಎಂದು ಕರೆಯುತ್ತಾರೆ.

5 ಭಾರತದ ಪ್ರಮಾಣವೇಳೆಯು ___________ ರೇಖಾಂಶವನ್ನು ಆಧರಿಸಿದೆ.

**II ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.**

6 ಭೂಮಿಯನ್ನು 'ಜೀವಂತಗ್ರಹ'ವೆಂದು ಏಕೆ ಕರೆಯುತ್ತಾರೆ?

7 ಉತ್ತರಗೋಳಾರ್ಧವನ್ನು 'ಭೂಪ್ರಧಾನಗೋಳ'ವೆಂದು ಹಾಗು ದಕ್ಷಿಣಗೋಳಾರ್ಧವನ್ನು 'ಜಲಪ್ರಧಾನಗೋಳ'ವೆಂದು ಏಕೆ ಕರೆಯುತ್ತಾರೆ ?

8 ಅಕ್ಷಾಂಶಗಳು ಮತ್ತು ರೇಖಾಂಶಗಳೆಂದರೇನು ?

9 ಸ್ಥಾನಿಕ ವೇಳೆ ಮತ್ತು ಪ್ರಮಾಣವೇಳೆಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ.

10 ಅಂತರರಾಷ್ಟ್ರೀಯ ದಿನಾಂಕ ರೇಖೆ ಎಂದರೇನು ?

## III ಈ ಕೆಳಗಿನವುಗಳ ಅರ್ಥ ಬರೆಯಿರಿ.

11. ವಿಶಿಷ್ಟ ಗ್ರಹ
12. ಭೂಮಿಯ ಗಾತ್ರ
13. ಭೂಮ್ಯಾಕಾರ
14. ಭೂಖಂಡಗಳು
15. ಪ್ರಧಾನ ರೇಖಾಂಶ
16. ಭಾರತದ ಪ್ರಮಾಣ ವೇಳೆ

## IV ನೆನಪಿನಲ್ಲಿಡಬೇಕಾದ ಅಂಶಗಳು.

17. ಜೀವಂತಗ್ರಹ
18. ಸಮಭಾಜಕವೃತ್ತ
19. ಉತ್ತರ ಧ್ರುವವೃತ್ತ (ಆರ್ಕ್ಟಿಕ್ ವೃತ್ತ)
20. ಅಂಟಾರ್ಕ್ಟಿಕ್ ವೃತ್ತ
21. ವೇಳಾವಲಯ
22. ಅಂತಾರಾಷ್ಟ್ರೀಯ ದಿನಾಂಕ ರೇಖೆ

## V ಚಟುವಟಿಕೆ.

23. ರೇಖಾಂಶಗಳ ಆಧಾರದ ಮೇಲೆ ಪೂರ್ವಾರ್ಧ ಗೋಳದ ರಾಷ್ಟ್ರಗಳು ಮತ್ತು ಪಶ್ಚಿಮಾರ್ಧ ಗೋಳದ ರಾಷ್ಟ್ರಗಳನ್ನು ಪಟ್ಟಿ ಮಾಡಿರಿ.

***

@KTBS
NOT TO BE REPUBLISHED

# ಅಧ್ಯಾಯ–12
# ಶಿಲಾಗೋಳ

V9G7Z6

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಶಿಲಾಗೋಳದ ಅರ್ಥ ಮತ್ತು ಪ್ರಾಮುಖ್ಯತೆ ತಿಳಿಯುವುದು.
- ಭೂಮಿಯ ಅಂತರಾಳದಲ್ಲಿರುವ ರಚನೆ ಮತ್ತು ಸಂಯೋಜನೆಯನ್ನು ಅರ್ಥೈಸಿಕೊಳ್ಳುವುದು.
- ಶಿಲೆಗಳ ರಚನೆಯ ಪರಿಚಯ ಮಾಡಿಕೊಳ್ಳುವುದು.
- ಭೂಮಿಯ ಅಂತರ್ಜನಿಕ ಶಕ್ತಿಗಳಾದ, ಜ್ವಾಲಾಮುಖಿಗಳು, ಭೂಕಂಪನಗಳು ಇವುಗಳ ಕಾರಣ ಪರಿಣಾಮಗಳ ಬಗ್ಗೆ ತಿಳಿಯುವುದು.
- ಭೂಮಿಯ ಬಾಹ್ಯ ಶಕ್ತಿಗಳಾದ ಉಷ್ಣಾಂಶ, ಮಾರುತಗಳು, ಮಳೆ, ನದಿ, ಇವುಗಳ ಮಹತ್ವ ತಿಳಿಯುವುದು.
- ಅಂತರ್ಜಲದ ಅರ್ಥ ಮತ್ತು ಮಹತ್ವದ ಬಗ್ಗೆ ತಿಳಿಯುವುದು.

NOT TO BE REPUBLISHED © KTBS

**ಅರ್ಥ ಮತ್ತು ಪ್ರಾಮುಖ್ಯ**

ಭೂಮಿಯ ಅತ್ಯಂತ ಮೇಲ್ಭಾಗದ ಘನ ಪದರವನ್ನು 'ಶಿಲಾಗೋಳ' ಎನ್ನುವರು. ಈ ಪದರವು ಭೂಖಂಡಗಳಲ್ಲಿ ಹೆಚ್ಚು ದಪ್ಪವಾಗಿದ್ದು ಮತ್ತು ಸಾಗರಗಳ ತಳಭಾಗದಲ್ಲಿ ಸ್ವಲ್ಪ ತೆಳುವಾಗಿದೆ. ಶಿಲಾಗೋಳವು ವಿವಿಧ ಬಗೆಯ ಶಿಲೆಗಳು, ಖನಿಜಗಳು, ಮಣ್ಣುಗಳು ಇತ್ಯಾದಿಗಳಿಂದ ಕೂಡಿರುವುದು. ವಾಯುಗೋಳ ಮತ್ತು ಜಲಗೋಳಗಳ ಸಹಾಯದಿಂದ ಈ ಪದರದ ಮೇಲೆ ಜೀವಿಗಳು ಅಸ್ತಿತ್ವದಲ್ಲಿವೆ. ಭೂಖಂಡಗಳು ಶಿಲಾಗೋಳದ ಭಾಗಗಳಾಗಿವೆ, ಇಲ್ಲಿ ವಿವಿಧ ರೀತಿಯ ಭೂಸ್ವರೂಪಗಳು ಅಂದರೆ ಪರ್ವತಗಳು, ಪ್ರಸ್ಥಭೂಮಿಗಳು, ಮೈದಾನಗಳು ಇತ್ಯಾದಿಗಳನ್ನು ಹೊಂದಿದೆ.


**ಭೂಮಿಯ ಅಂತರಾಳದ ರಚನೆ ಮತ್ತು ಸಂಯೋಜನೆ.**

**ಭೂಮಿಯ ಒಳಗೆ ಏನಿದೆಯೆಂದು ನಿಮಗೆ ತಿಳಿದಿದೆಯೇ ?**

ನಮ್ಮ ಭೂಗ್ರಹವು 460 ಕೋಟಿ ವರ್ಷಗಳಿಗಿಂತ ಹಳೆಯದಾಗಿದ್ದು ನಿರಂತರವಾಗಿ ಭೌತಿಕ ಬೆಳವಣಿಗೆಯ ಪ್ರಕ್ರಿಯೆಗೆ ಒಳಗಾಗುತ್ತ ಬಂದಿದೆ. ಮಾನವನು ಈ ಬದಲಾವಣೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಭೂಮಿಯ ಅಂತರಾಳದ ಬಗ್ಗೆ ಹೆಚ್ಚು ತಿಳಿಯಲು ಪ್ರಯತ್ನಿಸುತ್ತಿರುವನು. ಹಲವಾರು ವರ್ಷಗಳ ಅಧ್ಯಯನ ಮತ್ತು ಸಂಶೋಧನೆಯ ಫಲವಾಗಿ ಮಾನವನು ಭೂಮಿಯ 10 ರಿಂದ 12 ಕಿ.ಮೀ. ಗಳ ಒಳಗಿನ ವಸ್ತುಗಳ ಬಗ್ಗೆ ಮಾಹಿತಿ ಪಡೆಯಲು ಸಾಧ್ಯವಾಗಿದೆ. ಇನ್ನು ಹೆಚ್ಚು ಆಳಕ್ಕೆ ಹೋದಂತೆ ಉಷ್ಣಾಂಶವು ಹೆಚ್ಚಾಗುವುದರಿಂದ (ಪ್ರತಿ 32 ಮೀಟರಿಗೆ $1^0$ ಸೆಂಟಿಗ್ರೇಡ್) ಆಳದ ಬಗ್ಗೆ ಹೆಚ್ಚು ತಿಳಿಯಲು ಕಷ್ಟವಾಗುತ್ತದೆ.

ಭೂಮಿಯ ಅಂತರಾಳದ ಬಗ್ಗೆ ಹೆಚ್ಚು ತಿಳಿಯಲು ಮಾನವನು ಪರೋಕ್ಷ ಮೂಲಗಳನ್ನು ಅವಲಂಬಿಸಿದ್ದಾನೆ. ಅವುಗಳಾವುವೆಂದರೆ ಭೂಕಂಪನದ ಅಲೆಗಳು, ಜ್ವಾಲಾಮುಖಿಯ ವಸ್ತುಗಳು

ಇತ್ಯಾದಿ. ಭೂಮಿಯ ಅಂತರಾಳವು ವಿವಿಧ ಬಗೆಯ ವಸ್ತುಗಳನ್ನು ವಿವಿಧ ರೂಪಗಳಲ್ಲಿ ಒಳಗೊಂಡಿದೆ. ವಸ್ತುಗಳ ಸಾಂದ್ರತೆ, ರಾಸಾಯನಿಕ ಸಂಯೋಜನೆ ಮತ್ತು ಭೌತದ್ರವ್ಯಗಳ ರೂಪದ ಆಧಾರದ ಮೇಲೆ ಭೂಮಿಯ ಅಂತರಾಳವನ್ನು 3 ಪ್ರಮುಖ ಪದರುಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ– ಭೂಕವಚ, ಮ್ಯಾಂಟಲ್ ಮತ್ತು ಕೇಂದ್ರ ಗೋಳ.



ಭೂಮಿಯ ಅಂತರಾಳ

**ಭೂಕವಚ:** (Crust) ಇದು ಭೂಮಿಯ ಅಂತ್ಯಂತ ಮೇಲ್ಭಾಗದ ಪದರಾಗಿದೆ. ಇದು ಹೆಚ್ಚಾಗಿ ಸಿಲಿಕ, ಅಲ್ಯೂಮಿನಿಯಂ ಮತ್ತು ಮ್ಯಾಗ್ನೀಷಿಯಂಗಳಿಂದ ಕೂಡಿದೆ. ಇದನ್ನು ಸಾಮಾನ್ಯವಾಗಿ 'ಶಿಲಾಗೋಳ'ವೆಂದೂ ಕರೆಯಲಾಗಿದೆ. ಈ ವಲಯವು ಸುಮಾರು 60 ಕಿ.ಮೀ. ಆಳದವರೆಗೆ ವಿಸ್ತರಿಸಿದೆ. ಈ ಪದರದ ಮೇಲ್ಭಾಗವು ಹೆಚ್ಚು ಹಗುರವಾದ ವಸ್ತುಗಳಿಂದ ಕೂಡಿದೆ. ಇವುಗಳಲ್ಲಿ ಸಿಲಿಕ ಮತ್ತು ಅಲ್ಯೂಮಿನಿಯಂಗಳ ಪ್ರಮಾಣ ಹೆಚ್ಚಾಗಿರುವುದರಿಂದ ಇದನ್ನು 'ಸಿಯಾಲ್' (Sial) ಎಂದು ಕರೆಯಲಾಗಿದೆ. ಇದನ್ನು 'ಭೂಖಂಡಗಳ ಮೇಲ್ಪದರು' ಎಂದೂ ಸಹ ಕರೆಯುವರು. ಇದರ ಕೆಳಭಾಗವು ಸಿಲಿಕ ಮತ್ತು ಮ್ಯಾಗ್ನೀಷಿಯಂಗಳಿಂದ ಕೂಡಿದ್ದು. ಹೆಚ್ಚು ಸಾಂದ್ರಯುತವಾಗಿದೆ. ಇದನ್ನು 'ಸೈಮಾ' (Sima) ಎಂದು ಕರೆಯಲಾಗಿದೆ. ಇದನ್ನು ಕೆಲವೊಮ್ಮೆ 'ಸಾಗರಿಕ ವಲಯದ ಮೇಲ್ಪದರು' ಎಂತಲೂ ಕರೆಯುವರು.

**ಮ್ಯಾಂಟಲ್:** ಇದು ಭೂಮಿಯ ಅಂತರಾಳದ ಎರಡನೆಯ ಹಾಗೂ ಮಧ್ಯಭಾಗದ ಪದರು. ಮ್ಯಾಂಟಲ್ ವಲಯವು ಭೂ ಮೇಲ್ಮೈನಿಂದ ಸುಮಾರು 2900 ಕಿ.ಮಿಗಳ ಆಳದವರೆಗೆ ಇರುವುದು. ಇದರ ಮೇಲ್ಪರದಲ್ಲಿನ ವಸ್ತಗಳು ಭಾಗಶ: ದ್ರವೀಕರಿಸಿದ ಸ್ಥಿತಿಯಲ್ಲಿರುವುದರಿಂದ. ಇದನ್ನು 'ಶಿಲಾಪಾಕ' (ಮ್ಯಾಗ್ಮಾ) ಎಂದು ಕರೆಯುವರು. ಮ್ಯಾಂಟಲ್ ವಲಯವು ಹೆಚ್ಚು ಸಾಂದ್ರತೆಯುಳ್ಳ ಹಾಗೂ ಕಠಿಣ ಶಿಲಾ ವಸ್ತುಗಳಿಂದ ಕೂಡಿದ್ದು ಪ್ರಮುಖವಾಗಿ ಖನಿಜಗಳನ್ನು ಹೆಚ್ಚಾಗಿ ಹೊಂದಿದೆ. ಅವುಗಳೆಂದರೆ ಮೆಗ್ನೀಷಿಯಂ ಮತ್ತು ಕಬ್ಬಿಣ. ಮ್ಯಾಂಟಲ್‌ನಲ್ಲಿ ಎರಡು ಭಾಗಗಳಿವೆ. a) ಮ್ಯಾಂಟಲ್‌ನ ಮೇಲ್ಪದರು ಅಥವಾ 'ಏಸ್ತೆನೋಸ್ಫಿಯರ್' ಎನ್ನುವರು. ಇದು ಭಾಗಶಃ ದ್ರವರೂಪದಲ್ಲಿದೆ. b) ಮ್ಯಾಂಟಲ್‌ನ ಕೆಳಪದರು ಅಥವಾ ಮೆಸಾಸ್ಫಿಯರ್ ಎನ್ನುವರು. ಇದು ಘನರೂಪದಲ್ಲಿರುತ್ತದೆ.

ಭೂಕವಚ ಮತ್ತು ಮ್ಯಾಂಟಲ್ ಸಂಧಿಸುವ ವಲಯವನ್ನು ಮೊಹೊರೋವಿಸಿಕ್ ಅಥವಾ ಮೋಹೋ ವಲಯ ಎನ್ನುವರು ಅದೆ ರೀತಿ ಮ್ಯಾಂಟಲ್ ಮತ್ತು ಕೇಂದ್ರಗೋಳವನ್ನು ಬೇರ್ಪಡಿಸುವ ಗಡಿಯನ್ನು 'ಗುಟೆನ್‌ಬರ್ಗ್ ಸೀಮಾ ವಲಯ' ಎನ್ನುವರು. ಇಲ್ಲಿಂದ ಮೇಲೆ ಅಥವಾ ಕೆಳಗೆ ಶಿಲೆಗಳು ವಿವಿಧ ರಾಸಾಯನಿಕ ಸಂಯೋಜನೆಗಳಿಂದ ಕೂಡಿರುತ್ತವೆ.

©KTBS NOT TO BE REPUBLISHED

**ಕೇಂದ್ರ ಗೋಳ (ಭೂ ತಿರುಳು):** ಇದು ಭೂಮಿಯ ಅತ್ಯಂತ ಒಳಭಾಗ. ಇದು ಭೂಮಿಯ ಮೇಲ್ಮೈನಿಂದ 6,371 ಕಿ.ಮಿ ಆಳದವರೆಗೆ ಇರುವುದು. ಕೇಂದ್ರಗೋಳವು ನಿಕ್ಕಲ್ (Ni) ಮತ್ತು ಕಬ್ಬಿಣ (Fe) ದ ವಸ್ತುಗಳಿಂದ ಕೂಡಿರುವುದು. ಇದರಿಂದ ಕೇಂದ್ರವಲಯವನ್ನು 'ನಿಫೆ' (Nife) ಎಂದು ಸಹ ಕರೆಯಲಾಗಿದೆ. ಕೇಂದ್ರವಲಯವನ್ನು ಎರಡು ಉಪ ವಲಯಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ a) ಹೊರಕೇಂದ್ರ –ಇದು ಅರೆದ್ರವರೂಪ ಸ್ಥಿತಿಯಲ್ಲಿದೆ. b) ಒಳಕೇಂದ್ರ – ಇದು ಘನರೂಪದಲ್ಲಿದೆ.

**ಇದು ನಿಮಗೆ ತಿಳಿದಿರಲಿ.**


**ಪ್ರಪಂಚದ ಅತಿ ಆಳವಾದ ಕೆಲವು ಗಣಿಪ್ರದೇಶಗಳು**

1. ರಷ್ಯಾದ ಅಕೋಲ ಪರ್ಯಾಯ ದ್ವೀಪ ಸುಮಾರು 12.26 ಕಿ.ಮೀ. ಆಳವಾಗಿದೆ.
2. ದಕ್ಷಿಣ ಆಫ್ರಿಕಾದಲ್ಲಿ ಕಿಂಬರ್ಲಿ ವಜ್ರದ ಗಣಿಯು ಸುಮಾರು 3.9 ಕಿ.ಮೀ. ಆಳವಿದೆ
3. ಭಾರತದ ಕರ್ನಾಟಕದಲ್ಲಿನ ಕೆ.ಜಿ.ಎಫ್‌ನ ಗಣಿಯು ಸುಮಾರು 1.5ಕಿ.ಮೀ. ಆಳವಿದೆ.

## ಶಿಲೆಗಳು (Rocks)


ಶಿಲೆಗಳು ವಿವಿಧ ಬಗೆಯ ಖನಿಜಗಳಿಂದ ಕೂಡಿರುವ ಕಠಿಣ ವಸ್ತುಗಳಾಗಿವೆ. ಇವುಗಳು ಶಿಲಾಗೋಳದಲ್ಲಿ ಸ್ವಾಭಾವಿಕವಾಗಿ ಘನ ರೂಪದಲ್ಲಿದ್ದು ಇನಾರ್ಗ್ಯಾನಿಕ್ (Inorganic) ವಸ್ತುಗಳನ್ನು ಒಳಗೊಂಡಿರುತ್ತವೆ. ಇದರಿಂದ ಶಿಲೆಗಳನ್ನು ಖನಿಜಗಳ ಮಿಶ್ರಣವೆಂದೂ ಕರೆಯುವರು. ಈ ಶಿಲೆಗಳು ವಿವಿಧ ನೈಸರ್ಗಿಕ ಪ್ರಕ್ರಿಯೆಗಳಿಂದ ನಿರ್ಮಿತವಾಗುವುದರಿಂದ ಇವುಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ; ಅಗ್ನಿ ಶಿಲೆಗಳು, ಕಣ ಶಿಲೆಗಳು ಮತ್ತು ರೂಪಾಂತರ ಶಿಲೆಗಳು.

**1. ಅಗ್ನಿ ಶಿಲೆಗಳು** (Igneous Rocks): ಅಗ್ನಿ ಶಿಲೆಗಳನ್ನು ಆಂಗ್ಲಭಾಷೆಯಲ್ಲಿ 'ಇಗ್ನೀಯಸ್ ರಾಕ್ಸ್' ಎಂದು ಕರೆಯುವರು. ಇಗ್ನೀಯಸ್ ಎಂದರೆ ಬೆಂಕಿ ಎಂದರ್ಥ. ಇದು ಲ್ಯಾಟಿನ್ ಭಾಷೆಯ 'ಇಗ್ನೀಸ್' ಅಥವಾ ಸಂಸ್ಕೃತದ 'ಅಗ್ನಿ' ಎಂಬ ಪದದಿಂದ ಬಂದಿದೆ. ಅಗ್ನಿ ಶಿಲೆಗಳು ಭೂಮಿಯ ಅಂತರಾಳದಿಂದ ಶಿಲಾಪಾಕವು ಹೊರ ಹೊಮ್ಮಿ ಭೂ ಮೇಲ್ಮೈಯಲ್ಲಿ ತಂಪಾಗಿ ಘನೀಭವಿಸುವುದರಿಂದ ನಿರ್ಮಿತವಾಗುತ್ತವೆ. ಅಗ್ನಿಶಿಲೆಗಳು ಮೊದಲು ನಿರ್ಮಾಣವಾಗುವುದರಿಂದ ಇವುಗಳನ್ನು ಪ್ರಾಥಮಿಕ ಶಿಲೆಗಳೆಂದೂ ಕರೆಯುವರು. ಅಗ್ನಿ ಶಿಲೆಗಳಲ್ಲಿ ಈ ಕೆಳಕಂಡಂತೆ ಎರಡು ವಿಧಗಳಿವೆ.




©KTBS NOT TO BE REPUBLISHED

**ಅಂತಸ್ಸರಣ ಶಿಲೆಗಳು:** ಶಿಲಾಪಾಕ ಅಥವಾ ಮ್ಯಾಗ್ಮಾ ಭೂ ಮೇಲ್ಮೈಯನ್ನು ತಲುಪುವ ಮೊದಲೇ ಕೆಲವು ವೇಳೆ ಅಂತರಾಳದಲ್ಲಿ ತಂಪಾಗಿ ಘನೀಭವಿಸಿ ನಿಧಾನವಾಗಿ ಅಂತರಾಗ್ನಿ ಶಿಲೆಗಳು ನಿರ್ಮಿತವಾಗುತ್ತವೆ. ಈ ಶಿಲೆಗಳು ದಪ್ಪ ಹರಳಿನಿಂದ ಕೂಡಿರುತ್ತವೆ ಮತ್ತು ಇವುಗಳು ಭೂಮಿಯ ಒಳಭಾಗದಲ್ಲಿ ಹೆಚ್ಚು ಆಳದಲ್ಲಿರುತ್ತವೆ. ಉದಾ: ಗ್ರಾನೈಟ್, ಡಯೊರೈಟ, ಗ್ಯಾಬ್ರೊ ಇತ್ಯಾದಿ.





**ಶಿಲಾ ಚಕ್ರ**

**ಬಹಿಸ್ಸರಣ ಶಿಲೆಗಳು :** ಶಿಲಾಪಾಕವು (ಮ್ಯಾಗ್ಮ) ಹೊರಹೊಮ್ಮಿ ಕ್ರಮೇಣ ಭೂಮೇಲ್ಮೈಯಲ್ಲಿ ಘನೀಭವಿಸಿ ಬಹಿಸ್ಸರಣ ಶಿಲೆಗಳು ನಿರ್ಮಿತವಾಗುತ್ತವೆ. ಈ ಶಿಲೆಗಳು ಸಾಮಾನ್ಯವಾಗಿ ಸಣ್ಣ ಹರಳುಗಳಿಂದ ಕೂಡಿದ್ದು ಗಾಜಿನಂತೆ ನಯವಾಗಿರುತ್ತದೆ. ಏಕೆಂದರೆ ಲಾವಾರಸವು ಭೂಮಿಯ ಮೇಲೆ ಬಹುಬೇಗ ತಂಪಾಗಿ, ಘನೀಭವಿಸಿ ಶಿಲೆಗಳಾಗುತ್ತವೆ. ಉದಾ: ಬಸಾಲ್ಟ್, ಆಂಡೆಸೈಟ್.

| |
|---|
| ಶಿಲಾವಸ್ತುಗಳು ಭೂಮಿಯ ಒಳಭಾಗದಲ್ಲಿ ಕರಗಿ ದ್ರವ ಅಥವಾ ಅರೆ ದ್ರವರೂಪದಲ್ಲಿರುತ್ತವೆ. ಇದನ್ನು 'ಮ್ಯಾಗ್ಮಾ' (ಶಿಲಾಪಾಕ) ಎನ್ನುವರು. ಇದು ಭೂಮಿಯ ಹೊರಭಾಗಕ್ಕೆ ಬಂದಾಗ 'ಲಾವಾರಸ' ಎನ್ನುವರು. |

**2. ಕಣ ಶಿಲೆಗಳು:** ಇದು ಆಂಗ್ಲಭಾಷೆಯ ಸೆಡಿಮೆಂಟರಿ ಅಥವಾ ಲ್ಯಾಟಿನ್ ಭಾಷೆಯ **'ಸೆಡಿಮೆಂಟಮ್'** ಎಂಬ ಪದದಿಂದ ಬಳಕೆಗೆ ಬಂದಿದೆ, ಅಂದರೆ ತಳಸೇರುವಿಕೆ ಎಂದರ್ಥ. ಕಣಶಿಲೆಗಳು ನೀರು, ಗಾಳಿ ಮತ್ತು ಹಿಮ ಮುಂತಾದ ಕರ್ತೃಗಳಿಂದ ನಿರ್ಮಾಣವಾಗುತ್ತವೆ. ಇವು ಆಗ್ನಿಶಿಲೆಗಳನ್ನು ಚೂರುಚೂರಾಗಿ ಒಡೆದು ಸವೆಸುತ್ತವೆ. ಒಡೆದ ಶಿಲಾಚೂರುಗಳು ಸಾಗಿಸಲ್ಪಟ್ಟು ಕೆಲವು ಸ್ಥಳಗಳಲ್ಲಿ ಸಂಚಯಗೊಳ್ಳುತ್ತವೆ. ಇವು ಪದರು ರೂಪದಲ್ಲಿ ರಚನೆಯಾಗುವುದರಿಂದ ಕಣಶಿಲೆಗಳನ್ನು ಪದರು ಶಿಲೆಗಳೆಂದು ಕರೆಯುವರು. ಕಣಶಿಲೆಗಳು ಅಗ್ನಿಶಿಲೆಯ ನಂತರ ರಚನೆಯಾಗುವುದರಿಂದ ದ್ವಿತೀಯ ಶಿಲೆಗಳೆಂದೂ ಕರೆಯುವರು. ಸಾಮಾನ್ಯವಾಗಿ ಇವು ಸಮುದ್ರ, ಸಾಗರ, ಮೊದಲಾದ ಜಲರಾಶಿಗಳಲ್ಲಿ ಸಂಚಯಿತವಾಗಿ ನಿರ್ಮಿತವಾಗುವುದರಿಂದ ಇವುಗಳನ್ನು 'ಜಲಶಿಲೆ'ಗಳೆಂದೂ ಕರೆಯುವರು. ಇವುಗಳ ನಿರ್ಮಾಣದಲ್ಲಿ ನೀರು ಮುಖ್ಯ ಪಾತ್ರ ವಹಿಸುವುದು. ಕಣ ಶಿಲೆಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಭೌತಿಕ ಕ್ರಿಯೆಯಿಂದಾದ ಕಣ ಶಿಲೆಗಳು ಮತ್ತು ರಾಸಾಯನಿಕ ಕ್ರಿಯೆಯಿಂದಾದ ಕಣ ಶಿಲೆಗಳು.

©KTBS NOT TO BE REPUBLISHED




**ಭೌತಿಕ ಕ್ರಿಯೆಯಿಂದಾದ ಶಿಲೆಗಳು :** ಇವುಗಳು ಮೂಲಶಿಲೆಯ ಶಿಥಿಲೀಕರಣ ಮತ್ತು ಸವೆತ ಕಾರ್ಯದಿಂದ ಉತ್ಪತ್ತಿಯಾದ ಶಿಲಾ ಚೂರುಗಳಿಂದ ಈ ಶಿಲೆಗಳು ನಿರ್ಮಿತವಾಗುತ್ತವೆ. ಉದಾ: ಮರಳುಗಲ್ಲು (ಮರುಳುಮಯಶಿಲೆ) ಮತ್ತು ಜೇಡಿಶಿಲೆ (ಮೃಣ್ಮಯಶಿಲೆಗಳು).

**ರಾಸಾಯನಿಕ ಕ್ರಿಯೆಯಿಂದಾದ ಕಣಶಿಲೆಗಳು :** ಲವಣಾಂಶಗಳಿಂದ ಕೂಡಿರುವ ನೀರಿನ ದ್ರಾವಣವು ಉಷ್ಣಾಂಶದಿಂದ ಬಾಷ್ಪೀಭವನಗೊಳ್ಳುವುದರಿಂದ ರಾಸಾಯನಿಕ ಕಣಗಳು ಸಂಚಯಗೊಂಡು ಈ ಶಿಲೆಗಳು ನಿರ್ಮಿತವಾಗುತ್ತವೆ. ಉದಾ : ಕಲ್ಲುಪ್ಪು, ಜಿಪ್ಸಂ ಇತ್ಯಾದಿ.

**ಜೈವಿಕ ಕ್ರಿಯೆಗಳಿಂದಾದ ಕಣಶಿಲೆಗಳು :** ಜೀವಾವಶೇಷಗಳಾದ ಜಲಚರಗಳ ಚಿಪ್ಪುಗಳು, ಸಸ್ಯವರ್ಗ ಮತ್ತು ಪ್ರಾಣಿವರ್ಗಗಳ ಪಳೆಯುಳಿಕೆಗಳು ಮಣ್ಣಿನಲ್ಲಿ ಸೇರಿ ಗಟ್ಟಿಯಾಗಿ ಜೈವಿಕ ಕಣಶಿಲೆಗಳಾಗುತ್ತವೆ. ಉದಾ: ಸುಣ್ಣಕಲ್ಲು (ಚೂರ್ಣಾಧಿಕ್ಯಶಿಲೆ) ಮತ್ತು ಕಲ್ಲಿದ್ದಲು (ಇಂಗಾಲಾಧಿಕ್ಯಶಿಲೆ)

**3. ರೂಪಾಂತರ ಶಿಲೆಗಳು:** ಅಗ್ನಿಶಿಲೆಗಳು ಹಾಗೂ ಕಣಶಿಲೆಗಳು ಅತ್ಯಧಿಕ ಉಷ್ಣ ಹಾಗೂ ಒತ್ತಡದ ಪರಿಣಾಮದಿಂದ ಮಾರ್ಪಾಡುಹೊಂದಿ ರೂಪಾಂತರ ಶಿಲೆಗಳಾಗಿ ರೂಪುಗೊಳ್ಳುತ್ತವೆ.

**ಉದಾ:**

| | |
|---|---|
| ಗ್ರಾನೈಟ್–>ನೀಸ್, | ಮರುಳು ಶಿಲೆ–>ಸ್ಫಟಿಕ ಶಿಲೆ, |
| ಬಸಾಲ್ಟ್–> ಶಿಸ್ಟ್, | ಕಲ್ಲಿದ್ದಲು–>ಗ್ರಾಫೈಟ್, |
| ಸುಣ್ಣಕಲ್ಲು–>ಅಮೃತ ಶಿಲೆ, | ಗ್ರಾಫೈಟ್–>ವಜ್ರ |

ರೂಪಾಂತರ ಶಿಲೆಗಳು ಅತ್ಯಂತ ಕಠಿಣವಾದವು. ಇವುಗಳು ಅಮೂಲ್ಯವಾದ ಖನಿಜಗಳನ್ನು ಮತ್ತು ಬೆಲೆಬಾಳುವ ಹರಳುಗಳನ್ನು ಒಳಗೊಂಡಿರುತ್ತವೆ. ಉದಾ: ವಜ್ರ, ರೂಬಿ, ಎಮರಾಲ್ಡ್, ಇತ್ಯಾದಿ.

©KTBS NOT TO BE REPUBLISHED

## ಭೂಕವಚದ ಶಕ್ತಿಗಳು


ಭೂಮಿಯು ಎರಡು ಬಗೆಯ ಶಕ್ತಿಗಳನ್ನು ಹೊಂದಿದೆ. ಈ ಶಕ್ತಿಗಳು ಭೂ ಮೇಲ್ಮೈನ ಸ್ವರೂಪಗಳ ಮೇಲೆ ಪರಿಣಾಮವನ್ನು ಬೀರುತ್ತವೆ. ಅವುಗಳೆಂದರೆ ಅಂತರ್ಜನಿತ (Internal force) ಅಥವಾ ಆಂತರಿಕ ಶಕ್ತಿ ಹಾಗೂ ಬಹಿರ್ಜನಿತ ಅಥವಾ ಬಾಹ್ಯ ಶಕ್ತಿ (External force)ಗಳು.

### ಅಂತರ್ಜನಿತ ಶಕ್ತಿಗಳು

ಇವುಗಳು ಭೂಮಿಯ ಒಳಗಿನ ಅಥವಾ ಆಂತರಿಕ ಶಕ್ತಿಗಳು. ಇವುಗಳಿಂದ ಭೂ ಮೇಲ್ಮೈನ ಸ್ವರೂಪಗಳು ಕ್ಷಿಪ್ರವಾಗಿ ಬದಲಾವಣೆಯನ್ನು ಹೊಂದುತ್ತವೆ. ಉದಾ: ಜ್ವಾಲಾಮುಖಿಗಳು ಮತ್ತು ಭೂಕಂಪಗಳು.

### ಜ್ವಾಲಾಮುಖಿಗಳು (Volcanoes)

ಭೂ ಮೇಲ್ಮೈನಲ್ಲಿ ಬಿರುಕು ಅಥವಾ ರಂಧ್ರಗಳು ಅಥವಾ ದ್ವಾರಗಳು ಉಂಟಾಗಿ ಅವುಗಳ ಮೂಲಕ ಭೂಮಿಯ ಒಳಗಿನ ಶಿಲಾಪಾಕವು ಹೊರಬೀಳುವುದನ್ನು ಜ್ವಾಲಾಮುಖಿಯೆಂದು ಕರೆಯುವರು. ಭೂಕವಚದಿಂದ ನೇರವಾಗಿ ಆಳದಲ್ಲಿರುವ ಶಿಲಾಪಾಕದ ಜಾಗಕ್ಕೆ ಸಂಪರ್ಕ ಕಲ್ಪಿಸುವ ರಂಧ್ರಗಳನ್ನು ನಾಳವೆನ್ನುವರು. ಇದರ ಮೂಲಕ ಶಿಲಾಪಾಕ, ಶಿಲಾಚೂರುಗಳು, ಲಾವಾರಸ, ಬೂದಿ, ನೀರಾವಿ, ಜ್ವಾಲೆಗಳು ಮತ್ತು ಇತರೆ ಅನಿಲಗಳು ಭೂಮಿಯ ಅಂತರಾಳದಿಂದ ಹೊರ ಹೊಮ್ಮುತ್ತವೆ.



ಜ್ವಾಲಾಮುಖಿಯ ರಚನೆ

ಆಲಿಕೆಯಾಕಾರದ ಜ್ವಾಲಾಮುಖಿ ಬಾಯಿಯನ್ನು ಜ್ವಾಲಾಮುಖಿ ಕುಂಡ ಎನ್ನುವರು. ತಗ್ಗಾದ ವಿಸ್ತಾರವಾದ ಜ್ವಾಲಾಮುಖಿಯ ದ್ವಾರವನ್ನು ಕಾಲ್ಡೆರಾ (caldera) ಎನ್ನುತ್ತಾರೆ.

**ಜ್ವಾಲಾಮುಖಿಯ ವಿಧಗಳು:** ಜ್ವಾಲಾಮುಖಿಗಳನ್ನು ಅವುಗಳ ಕಾರ್ಯಾಚರಣೆ ಆಧರಿಸಿ ಮೂರು ವಿಧಗಳಾಗಿ ವಿಂಗಡಿಸಬಹುದು.

**ಜಾಗೃತ ಜ್ವಾಲಾಮುಖಿಗಳು (Active Volcanoes):** ಇವು ಮೇಲಿಂದ ಮೇಲೆ ಸ್ಫೋಟಗೊಂಡು ಲಾವಾರಸ, ಅನಿಲ, ಬೂದಿ ಇತ್ಯಾದಿಗಳನ್ನು ಹೊರಚಿಮ್ಮುತ್ತವೆ. ಇವನ್ನೇ ಜಾಗೃತ ಜ್ವಾಲಾಮುಖಿ ಎನ್ನುವರು. ಪ್ರಪಂಚದಾದ್ಯಂತ ಸುಮಾರು 600 ಜೀವಂತ ಜಾಗೃತ ಜ್ವಾಲಾಮುಖಿಗಳಿವೆ. ಉದಾ: ಫಿಲಿಫೈನ್ಸ್ ದ್ವೀಪದ ಪಿನಾಟುಬೊ, ಇಟಲಿಯ ಸ್ಟ್ರಾಂಬೋಲಿ ಮತ್ತು ಎಟ್ನಾ, ಯುಎಸ್‌ಎಯ ಸೇಂಟ್ ಹೆಲೆನಾ, ಹವಾಯಿ ದ್ವೀಪದ ಮೌನಲೋವ ಮೊದಲಾದವು.

©KTBS NOT TO BE REPUBLISHED

**ಸುಪ್ತ ಜ್ವಾಲಾಮುಖಿಗಳು(Dormant Volcanoes) :** ಒಮ್ಮೆ ಸ್ಫೋಟಿಸಿ ಅನಂತರ ಬಹುಕಾಲ ಕಾರ್ಯಾಚರಣೆ ನಡೆಸದೆ ಸುಪ್ತವಾಗಿದ್ದು ಯಾವಾಗಲೋ ಒಮ್ಮೆ ಜಾಗೃತವಾಗಿ ಕಾರ್ಯಾಚರಣೆ ನಡೆಸುವ ಜ್ವಾಲಾಮುಖಿಗಳನ್ನು ಸುಪ್ತ ಜ್ವಾಲಾಮುಖಿ ಎನ್ನುವರು. ಉದಾ: ಇಟಲಿಯ ಮೌಂಟ್ ವೆಸೂವಿಯಸ್, ಜಪಾನಿನ ಪ್ಯೂಜಿಯಾಮ, ಇಂಡೋನೇಷಿಯಾದ ಕ್ರಕಟೋವ, ತಾಂಜೇನಿಯಾದ ಕಿಲಿಮಂಜಾರೆ ಮೊದಲಾದವು.

**ಲುಪ್ತ ಜ್ವಾಲಾಮುಖಿಗಳು (Extinct Volcanoes):** ಇವುಗಳು ಪುರಾತನಕಾಲದಲ್ಲಿ ಕಾರ್ಯಾಚರಣೆ ನಡೆಸಿದ್ದು ನಂತರದಲ್ಲಿ ಯಾವುದೇ ಕಾರ್ಯಾಚರಣೆ ನಡೆಸಿರುವುದಿಲ್ಲ. ಉದಾ: ಅರ್ಜೆಂಟೀನಾದ ಅಕಾಂಕಗುವಾ, ತಾಂಜೇನಿಯಾದ ಗೊರಾಂಗೊರೊ, ಸ್ಕಾಟ್ಲೆಂಡಿನ ಆರ್ಥರ್‌ಸೀಟ್ ಮೊದಲಾದವು.

**ನಿಮಗೆ ತಿಳಿದಿರಲಿ**

**ಪ್ರಪಂಚದ ಪ್ರಸಿದ್ಧ ಜ್ವಾಲಾಮುಖಿಗಳು**

1. ಮೌಂಟ್ ವೆಸೂವಿಯಸ್, (ಇಟಲಿ)
2. ಕ್ರಕಟೋವ, (ಇಂಡೋನೇಷಿಯ)
3. ಮೌಂಟ್ ಪೀಲೀ (ವೆಸ್ಟ್ ಇಂಡೀಸ್)
4. ಮೌಂಟ್ ಪ್ಯೂಜಿಯಾಮ ಜ್ವಾಲಾಮುಖಿಯನ್ನು ಜಪಾನಿಯರು ದೇವರೆಂದು ಪೂಜಿಸುತ್ತಾರೆ.

©KTBS NOT TO BE REPUBLISHED

**ಜ್ವಾಲಾಮುಖಿಯ ವಸ್ತುಗಳು :** ಜ್ವಾಲಾಮುಖಿಗಳಿಂದ ಮೂರು ಬಗೆಯ ವಸ್ತುಗಳು ಹೊರಬೀಳುತ್ತವೆ. ಅವುಗಳೆಂದರೆ:–

**ಘನವಸ್ತುಗಳು**–ಜ್ವಾಲಾಮುಖಿಯ ಗುಂಡುಗಳು, ಕಿಟ್ಟಧೂಳು, ಬೂದಿ.

**ಅನಿಲಗಳು**–ಗಂಧಕ, ಹೈಡ್ರೋಜನ್, ಇಂಗಾಲದ ಡೈ ಆಕ್ಸೈಡ್, ನೀರಾವಿ ಮೊದಲಾದವು.

**ದ್ರವವಸ್ತು** –ಲಾವಾರಸ.

**ಜ್ವಾಲಾಮುಖಿಯ ಹಂಚಿಕೆ :** ಪ್ರಪಂಚದ ಅನೇಕ ಪ್ರದೇಶಗಳಲ್ಲಿ ಜ್ವಾಲಾಮುಖಿಗಳು ಸಂಭವಿಸುತ್ತವೆ. ದ್ವೀಪಗಳು, ಹೊಸಮಡಿಕೆ ಪರ್ವತ ಶ್ರೇಣಿಗಳು ಹಾಗೂ ಭೂ ಖಂಡಗಳಲ್ಲಿರುವ ಪ್ರಸ್ಥಭೂಮಿಗಳಲ್ಲೂ ಕಂಡುಬರುತ್ತವೆ. ಜ್ವಾಲಾಮುಖಿ ಕಂಡುಬರುವ ಪ್ರಮುಖ ಪ್ರದೇಶಗಳೆಂದರೆ –


ಪೆಸಿಪಿಕ್ ವೃತ್ತಪ್ರದೇಶ ಅಥವಾ ಪೆಸಿಪಿಕ್ ಅಗ್ನಿವೃತ್ತ : ಪೆಸಿಪಿಕ್ ಸಾಗರ ಕರಾವಳಿ ತೀರಗಳಲ್ಲಿ ಅಂದರೆ ಫಿಲಿಫೈನ್ಸ್, ಜಪಾನ್, ಯುಎಸ್‌ಎ, ಮಧ್ಯಅಮೇರಿಕಾ, ದಕ್ಷಿಣಅಮೇರಿಕಾ ಇತ್ಯಾದಿಗಳಲ್ಲಿ ಜ್ವಾಲಾಮುಖಿಗಳಿವೆ

ಮಧ್ಯ ಅಟ್ಲಾಂಟಿಕ್‌ವಲಯ : ಐಸ್‌ಲ್ಯಾಂಡ್, ವೆಸ್ಟ್‌ಇಂಡೀಸ್ ದ್ವೀಪಗಳು

ಮಧ್ಯ ಭೂಖಂಡವಲಯ : ಇಟಲಿ, ಸ್ಪೇನ್, ಪ್ರಾನ್ಸ್, ಗ್ರೀಸ್, ಟರ್ಕಿ ಇತ್ಯಾದಿ

ಪ್ರಮುಖ ದ್ವೀಪಗಳು : ಹವಾಯಿ, ಇಂಡೋನೇಷಿಯಾ ಇತ್ಯಾದಿ.

**ಭೂಕಂಪಗಳು: (Earthquakes)**



ಭೂಕಂಪದ ಕ್ರಿಯೆಗಳು

ಭೂ ಮೇಲ್ಮೈಯಲ್ಲಿ ಉಂಟಾಗುವ ನಡುಗುವಿಕೆ, ಕಂಪನ ಹಾಗೂ ಕಂಪನಗಳ ಸರಣಿಯನ್ನು ಭೂಕಂಪವೆಂದು ಕರೆಯುವರು. ಇವುಗಳು ಭೂಕವಚದ ಶಿಲೆಗಳ ಕ್ಷಿಪ್ರ ಚಲನೆಯಿಂದ ಭೂಕವಚ ಅಥವಾ ಮ್ಯಾಂಟಲ್ ಪದರದೊಳಗೆ ಉಂಟಾಗುತ್ತವೆ. ಭೂಕಂಪದ ಕಂಪನದ ತೀವ್ರತೆಯು ಭೂಕಂಪನದ ಹೊರಕೇಂದ್ರದ ಸಮೀಪ ಗರಿಷ್ಠ ಪ್ರಮಾಣದಲ್ಲಿರುತ್ತದೆ ಮತ್ತು ಭೂಕಂಪ ಹೊರಕೇಂದ್ರದಿಂದ ದೂರ ಹೋದಂತೆ ಕಂಪನದ ತೀವ್ರತೆಯು ಕಡಿಮೆಯಾಗುತ್ತಾ ಹೋಗುತ್ತದೆ. ಭೂಕಂಪನಾಭಿಯು ಭೂ ಮೇಲ್ಮೈನ ಸಮೀಪದಲ್ಲಿದ್ದರೆ ಭೂಕಂಪದ ಅಲೆಗಳು ಪ್ರಬಲವಾಗಿದ್ದು ಹೆಚ್ಚು ಪರಿಣಾಮವನ್ನುಂಟು ಮಾಡುತ್ತವೆ.

ಭೂಮಿಯ ಅಂತರಾಳದಲ್ಲಿ ಉಂಟಾಗುವ ಭೂಕಂಪದ ಉಗಮಸ್ಥಾನವನ್ನು ಭೂಕಂಪನಾಭಿಕೇಂದ್ರ ಅಥವಾ ಭೂಕಂಪ ಒಳಕೇಂದ್ರವೆಂದು ಕರೆಯುವರು. ಭೂಕಂಪ ನಾಭಿಯಿಂದ ಲಂಬಕೋನದಲ್ಲಿರುವ ಭೂ ಮೇಲ್ಮೈನ ಸ್ಥಳವನ್ನು ಭೂಕಂಪ ಹೊರಕೇಂದ್ರವೆನ್ನುವರು.

ಭೂಕಂಪದ ವೈಜ್ಞಾನಿಕ ಅಧ್ಯಯನವನ್ನು ಭೂಕಂಪಶಾಸ್ತ್ರ (Seismology) ಎನ್ನುವರು. ಭೂಕಂಪ ಅಲೆಗಳ ಆರಂಭ ಸ್ಥಳ, ವೇಳೆ, ವೇಗ ಹಾಗೂ ದಿಕ್ಕನ್ನು ದಾಖಲಿಸುವ ಉಪಕರಣವನ್ನು ಭೂಕಂಪಮಾಪಕ (Seismograph) ಎನ್ನುವರು.

**ಭೂಕಂಪನಗಳು ಉಂಟಾಗಲು ಕಾರಣಗಳು**

**ಭೂರಚನಾ ಕಾರಣಗಳು** : ಭೂಕವಚವು ಹಲವಾರು ದೊಡ್ಡ ಮತ್ತು ಸಣ್ಣ ಶಿಲಾಫಲಕಗಳಿಂದ ಕೂಡಿದೆ. ಈ ಫಲಕಗಳ ಅಂಚುಗಳು ಚಲಿಸುವ ಸ್ಥಳಗಳಾಗಿದ್ದು ಇವು ಭೂಕಂಪಗಳುಂಟಾಗುವ ಮೂಲಸ್ಥಳಗಳಾಗಿವೆ. (ಪೆಸಿಫಿಕ್ ಸಾಗರದ ಸುತ್ತಮುತ್ತಲಿನ ವಲಯ).

**ಜ್ವಾಲಾಮುಖಿ ಕಾರ್ಯಾಚರಣೆಗಳು** : ಜ್ವಾಲಾಮುಖಿಗಳಲ್ಲಿ ಅನಿಲಗಳ ಸ್ಫೋಟನೆಯಿಂದ ಭೂಕಂಪಗಳುಂಟಾಗುತ್ತವೆ. (ಇಂಡೋನೇಸಿಯಾದ ಕ್ರಕಟೋವ ಜ್ವಾಲಾಮುಖಿ).

**ಸ್ತರಭಂಗ** : ಭೂಮಿಯ ಶಿಲಾಸ್ತರಗಳ ಮರುಹೊಂದಾಣಿಕೆಯು ಹಲವು ವಿಧಗಳಲ್ಲಿ ಕಂಡುಬರುವುದು. ಅವುಗಳ ಸ್ಥಾನಪಲ್ಲಟ, ಭೂಕುಸಿತ ಇವುಗಳಿಂದ ಭೂಸ್ತರಗಳು ಮೇಲಕ್ಕೆ ಅಥವಾ ಕೆಳಮುಖವಾಗಿ ಜರುಗುವುದರಿಂದ ಉದ್ದವಾದ ಬಿರುಕುಗಳುಂಟಾಗುತ್ತವೆ. ಈ ರೀತಿ ಭೂಫಲಕಗಳು ಚಲಿಸುವುದರಿಂದ ಭೂಕಂಪಗಳುಂಟಾಗುತ್ತವೆ. (ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿರುವ ಸಾನ್ ಆಂಡ್ರಿಯಾಸ್ ಸ್ತರಭಂಗ ಪ್ರದೇಶ.)

@KTBS NOT TO BE REPUBLISHED

**ಮಾನವ ನಿರ್ಮಿತ ಅಂಶಗಳು :** ಪ್ರಕೃತಿಯೊಡನೆ ಮಾನವನು ನಡೆಸುವ ಅತಿಯಾದ ಕಾರ್ಯಚರಣೆಗಳು ಭೂಕಂಪಗಳುಂಟಾಗಲು ಪ್ರಮುಖ ಕಾರಣಗಳಾಗಿವೆ. ಅವುಗಳೆಂದರೆ ಗಣಿಗಾರಿಕೆ, ಬೃಹತ್ ಆಣೆಕಟ್ಟುಗಳು, ಜಲಾಶಯಗಳು ಮತ್ತು ಬೈಜಿಕ ಪರೀಕ್ಷೆಗಳು ಇತ್ಯಾದಿ (ಮಹಾರಾಷ್ಟ್ರದ ಕೊಯ್ನಾ ಅಣೆಕಟ್ಟು, ಯು.ಎಸ್.ಎಯ ಹೂವರ್‌ಡ್ಯಾಂ.)

**ಭೂಕಂಪನ ಅಲೆಗಳು**

ಭೂಕಂಪನ ಒಳಕೇಂದ್ರದಿಂದ ಕಂಪನಗಳು ನಿರ್ಮಿತಗೊಂಡು ಅಲ್ಲಿಂದ ವೃತ್ತಾಕಾರದಲ್ಲಿ ಅಲೆಗಳ ರೀತಿ ಭೂ ಹೊರಕೇಂದ್ರದ ಕಡೆ ಹರಡುತ್ತವೆ. ಭೂಕಂಪನ ಅಲೆಗಳಲ್ಲಿ ಮೂರು ವಿಧಗಳಿವೆ. ಅವುಗಳೆಂದರೆ

1. **ಪ್ರಾಥಮಿಕ ಅಥವಾ ತಳ್ಳುವ ಅಲೆಗಳು :** ಇವುಗಳು ಭೂಕಂಪನದ ಒಳಕೇಂದ್ರದಿಂದ ಮೊದಲು ಹೊರಕೇಂದ್ರವನ್ನು ತಲುಪುತ್ತವೆ. ಇವುಗಳು ನೀಳ ಅಲೆಗಳಾಗಿದ್ದು ಅತ್ಯಂತ ವೇಗವಾಗಿ ಚಲಿಸುತ್ತವೆ. ಇವುಗಳು ಘನ, ದ್ರವ ಮತ್ತು ಅನಿಲಗಳ ಮೂಲಕ ಚಲಿಸುತ್ತವೆ.

2. **ದ್ವಿತೀಯ ಅಲೆಗಳು :** ಇವುಗಳನ್ನು 'ಅಡ್ಡ ಅಲೆ' (Transverse) ಗಳೆಂದು ಸಹ ಕರೆಯುವರು. ಇವು ದ್ರವ ವಸ್ತುಗಳ ಮೂಲಕ ಚಲಿಸಲಾರವು. ಪ್ರಾಥಮಿಕ ಅಲೆಗಳ ನಂತರ ಇವು ಹೊರ ಕೇಂದ್ರವನ್ನು ತಲಪುತ್ತವೆ.

3. **ಮೇಲ್ಮೈ ಅಲೆಗಳು :** ಇವುಗಳನ್ನು ಉದ್ದ ಅಲೆಗಳೆಂದೂ ಸಹ ಕರೆಯುವರು. ಇವು ಅತ್ಯಂತ ನಿಧಾನ ಗತಿಯ ಭೂಕಂಪನ ಅಲೆಗಳಾಗಿವೆ. ಆದರೆ ಇವು ಅತ್ಯಂತ ಹಾನಿಕಾರಕ ಅಲೆಗಳಾಗಿವೆ.

> ಭೂಕಂಪನದ ತೀವ್ರತೆ ಮತ್ತು ಪ್ರಮಾಣವನ್ನು ರಿಕ್ಟರ್ ಮಾಪನದಿಂದ ಅಳತೆ ಮಾಡಲಾಗುವುದು.

ಭೂಕಂಪಗಳು ಅತ್ಯಂತ ವಿನಾಶಕಾರಿಯಾದವು. ಇವುಗಳಿಂದ ಅಪಾರ ಜೀವಹಾನಿ ಹಾಗೂ ಆಸ್ತಿ–ಪಾಸ್ತಿ ನಷ್ಟವುಂಟಾಗುವುದು. ಇವುಗಳಿಂದ ಉಂಟಾಗುವ ಭೂಕುಸಿತ, ಕ್ಷಿಪ್ರ ಪ್ರವಾಹ ಮೊದಲಾದವುಗಳಿಂದ ಅಪಾರ ಜನರು ಸಾವಿಗೀಡಾಗುವರು. ಕಟ್ಟಡ, ಸೇತುವೆ, ರಸ್ತೆ ಹಾಗೂ ರೈಲು ಮಾರ್ಗಗಳು ಹಾನಿಗೀಡಾಗುತ್ತವೆ.

**ಸುನಾಮಿ:** ಸಮುದ್ರ ಮತ್ತು ಸಾಗರ ತಳದಲ್ಲಿ ಉಂಟಾಗುವ ಭೂಕಂಪನಗಳಿಂದ ಸಾಗರಗಳಲ್ಲಿ ಅತಿ ಎತ್ತರವಾದ ಭೀಕರ ಅಲೆಗಳು ತೀರಕ್ಕೆ ಅಪ್ಪಳಿಸುತ್ತವೆ. ಇವುಗಳನ್ನು ಸುನಾಮಿ ಎಂದು ಕರೆಯುವರು. ಇದು ಜಪಾನ್ ಭಾಷೆಯ ಪದವಾಗಿದ್ದು, ಇದರ ಅರ್ಥ ತೀರಕ್ಕೆ ಅಪ್ಪಳಿಸುವ ಎತ್ತರದ ಅಲೆಗಳು (ಬಂದರು ಅಲೆಗಳು).


**ನಿಮಗೆ ತಿಳಿದಿರಲಿ.**

1. 2004 ಡಿಸೆಂಬರ್ 26 ರಂದು ಸುನಾಮಿ ಅಲೆಗಳು ಭಾರತ, ಇಂಡೋನೇಷಿಯಾ, ಥೈಲ್ಯಾಂಡ್, ಶ್ರೀಲಂಕಾ ದೇಶಗಳ ತೀರಕ್ಕೆ ಅಪ್ಪಳಿಸಿ ಅಪಾರ ಹಾನಿಯನುಂಟುಮಾಡಿದವು.
2. 2011 ರ ಮಾರ್ಚಿ 11 ರಂದು ಸುನಾಮಿ ಅಲೆಗಳು ಜಪಾನಿನ ಪುಕುಶೀಮ, ಸೆಂಡೈ, ಮಿಯಾಗಿ ಪ್ರದೇಶಗಳಿಗೆ ಅಪ್ಪಳಿಸಿ ಅಪಾರ ಹಾನಿಯನ್ನುಂಟು ಮಾಡಿವೆ.
3. ಭಾರತದಲ್ಲಿರುವ ಕೆಲವು ಭೂಕಂಪನ ದಾಖಲೆಯ ಕೇಂದ್ರಗಳೆಂದರೆ : ಗೌರಿಬಿದನೂರು, ಕೊಡೈಕೆನಾಲ್, ಪುಣೆ, ಹೈದರಾಬಾದ್ ಮತ್ತು ಡೆಹರಾಡೂನ್.

© KTBS NOT TO BE REPUBLISHED

**ಭೂಕಂಪನದ ಹಂಚಿಕೆ : ಭೂಕಂಪನದ ಹಂಚಿಕೆಯು ಈ ಕೆಳಕಂಡಂತೆ ಇದೆ. ಅವುಗಳೆಂದರೆ:**

- ಪೆಸೆಫಿಕ್ ಸಾಗರದ ಸುತ್ತಲಿನ ತೀರ ಪ್ರದೇಶ. ಇದು ನ್ಯೂಜಿಲ್ಯಾಂಡ್, ಫಿಲಿಫೈನ್ಸ್, ಯು.ಎಸ್.ಎ, ಜಪಾನ್ ಪೆರು, ಮೊದಲಾದವುಗಳನ್ನು ಒಳಗೊಂಡಿದೆ.
- ಮೆಡಿಟರೇನಿಯನ್ ಸಮುದ್ರದ ಸುತ್ತಲಿನ ತೀರ ಪ್ರದೇಶ.
- ಭಾರತದ ಹಿಮಾಲಯ ಪರ್ವತ ಪ್ರದೇಶ. (ಸಿವಾಲಿಕ್ ಪ್ರದೇಶ).




**ಭೂಕಂಪಗಳು ಮತ್ತು ಜ್ವಾಲಾಮುಖಿ ಪ್ರದೇಶಗಳು**

NOT TO BE REPUBLISHED @KTBS

## ಬಾಹ್ಯಶಕ್ತಿಗಳು (Exogenic forces)

ಬಾಹ್ಯಶಕ್ತಿಗಳು ಭೂಮಿಯ ಮೇಲಿನ ಪ್ರಾಕೃತಿಕ ಶಕ್ತಿಗಳಾಗಿವೆ. ಇವು ತಮ್ಮ ಕಾರ್ಯದಿಂದ ಭೂಮೇಲ್ಮೈನ ಸ್ವರೂಪಗಳನ್ನು ಮಾರ್ಪಡಿಸುತ್ತವೆ. ಪ್ರಮುಖ ಬಾಹ್ಯ ಶಕ್ತಿಗಳೆಂದರೆ ಉಷ್ಣಾಂಶ, ಮಾರುತಗಳು, ಮಳೆ, ಹಿಮವೃಷ್ಟಿ, ನದಿ, ಹಿಮನದಿ, ಗಾಳಿ.

**ಶಿಥಿಲೀಕರಣ :** ಶಿಲೆಗಳು ಒಡೆದು ಚೂರಾಗುವ ಮತ್ತು ಕ್ಷೀಣಿಸುವ ಸ್ವಾಭಾವಿಕ ಪ್ರಕ್ರಿಯೆಯೇ ಶಿಥಿಲೀಕರಣ. ಇದು ವಾಯುಮಂಡಲದಲ್ಲಿನ ಉಷ್ಣಾಂಶ, ಮಳೆ, ಗಾಳಿ ಮುಂತಾದವುಗಳಿಂದ ನಡೆಯುತ್ತದೆ. ಶಿಥಿಲೀಕರಣದ ವಿಧಗಳೆಂದರೆ:

**1. ಭೌತಿಕ ಶಿಥಿಲೀಕರಣ:** ಶಿಲೆಗಳು ಯಾವುದೇ ರಾಸಾಯನಿಕ ಬದಲಾವಣೆಯಾಗದೇ ಒಡೆದು ಚೂರಾಗುವ ಮತ್ತು ಕ್ಷೀಣಿಸುವ ಕ್ರಿಯೆಯನ್ನು ಭೌತಿಕ ಶಿಥಿಲೀಕರಣವೆನ್ನುವರು. ಪ್ರಮುಖ ಭೌತಿಕ ಶಿಥಿಲೀಕರಣದ ಕ್ರಿಯೆಗಳೆಂದರೆ ಕಣವಿಭಜನೆ, ಶಿಲಾವಿಭಜನೆ, ಪದರುವಿಭಜನೆ. ಭೌತಿಕ ಶಿಥಿಲೀಕರಣಕ್ಕೆ ಉಷ್ಣಾಂಶ, ಮಳೆ, ಹಿಮ ಇತ್ಯಾದಿ ಮುಖ್ಯಕಾರಣ.

**2. ರಾಸಾಯನಿಕ ಶಿಥಿಲೀಕರಣ:** ಈ ವಿಧದ ಶಿಥಿಲೀಕರಣದಲ್ಲಿ ಮಳೆಯ ನೀರು ವಾಯುಮಂಡಲದ ಅನಿಲಗಳೊಡನೆ ವಿಲೀನಗೊಂಡು ಶಿಲೆಗಳನ್ನು ಒಡೆಯುವುದು ಹಾಗೂ ವಿಘಟಿಸುವುದು. ಈ ಶಿಥಿಲೀಕರಣದ ಪರಿಣಾಮವೆಂದರೆ ಶಿಲೆಗಳಲ್ಲಿರುವ ಖನಿಜಗಳ ಸಂಯೋಜನೆಯಲ್ಲಿ ಬದಲಾವಣೆಯಾಗುತ್ತವೆ. ರಾಸಾಯನಿಕ ಶಿಥಿಲೀಕರಣದಲ್ಲಿ ನಾಲ್ಕು ವಿಧಗಳಿವೆ.

**1. ಆಕ್ಸಿಡೇಷನ್ (Oxidation):** ಆಕ್ಸಿಜನಿಂದ ಕೂಡಿರುವ ಮಳೆಯ ನೀರು ಕೆಲವು ಖನಿಜಗಳ ಮೇಲೆ ಪ್ರಭಾವ ಬೀರುತ್ತವೆ. ಇದರಿಂದ ಶಿಲೆಗಳು ನಶಿಸುತ್ತವೆ. ವಿಶೇಷವಾಗಿ ಕಬ್ಬಿಣವು ಕಬ್ಬಿಣದ ಆಕ್ಸೈಡ್ ಆಗುತ್ತದೆ.

**2. ಕಾರ್ಬೋನೇಷನ್ (Carbonation) :** ಕಾರ್ಬನ್‌ಯುಕ್ತ ಮಳೆನೀರು ಸುಣ್ಣಕಲ್ಲುಗಳ ಮೇಲೆ ಬಿದ್ದಾಗ, ಶಿಲೆಗಳಲ್ಲಿರುವ ಕ್ಯಾಲ್ಸಿಯಂ ಕಾರ್ಬೋನೇಟ್‌ಗಳನ್ನು ಮಳೆಯ ನೀರಿನಲ್ಲಿರುವ ಕಾರ್ಬನ್ ಡೈ–ಆಕ್ಸೈಡ್ ಹೀರಿಕೊಳ್ಳುವುದರಿಂದ ಕ್ಯಾಲ್ಸಿಯಂ ಬೈಕಾರ್ಬೋನೇಟ್ ಆಗಿ ಬದಲಾಗುತ್ತದೆ.

**3. ಹೈಡ್ರೇಷನ್ (Hydration) :** ಈ ಕ್ರಿಯೆಯಲ್ಲಿ ಕೆಲವು ಬಗೆಯ ಖನಿಜಗಳಲ್ಲಿನ ಕಣಗಳು ನೀರನ್ನು ಹೀರುವುದರಿಂದ ಉಬ್ಬಿಕೊಂಡು ಪುಡಿರೂಪದಲ್ಲಿ ಕ್ರಮೇಣ ನಶಿಸುತ್ತವೆ. ಫೆಲ್ಸ್‌ಫರ್ ಇದು ಹರಳುಗಳಿಂದುಂಟಾದ ಪ್ರಮುಖ ಶಿಲೆಯಾಗಿದೆ.

**4. ಸಲ್ಯೂಷನ್ (Solution) :** ಮಳೆಯ ನೀರು ಕೆಲವು ಶಿಲೆಗಳನ್ನು ಕರಗಿಸಿ ಸಲ್ಯೂಷನ್‌ಗೊಳಿಸುವುದು. ಉದಾ: ಜಿಪ್ಸಂ, ಉಪ್ಪು, ಫಾಸ್ಫೇಟ್ ಇತ್ಯಾದಿ.

**3. ಜೈವಿಕ ಶಿಥಿಲೀಕರಣ (Biological Weathering):** ಸಸ್ಯವರ್ಗ, ಪ್ರಾಣಿವರ್ಗ ಮತ್ತು ಮಾನವನಿಂದ ಶಿಲೆಗಳು ಒಡೆದು ಚೂರಾಗುವುದನ್ನು ಜೈವಿಕ ಶಿಥಿಲೀಕರಣ ಎನ್ನುವರು. ಇದರಲ್ಲಿ ಭೌತಿಕ ಹಾಗೂ ರಾಸಾಯನಿಕ ಕ್ರಿಯೆಗಳೆರಡರಿಂದಲೂ ಶಿಥಿಲೀಕರಣವಾಗುತ್ತವೆ.

**ಸಸ್ಯವರ್ಗ** – ಸಸ್ಯಗಳ ಬೇರುಗಳು ಬೆಳೆದು ದಪ್ಪವಾಗುವುದರಿಂದ ಶಿಲೆಗಳು ಒಡೆದು ಚೂರಾಗುತ್ತವೆ.
**ಪ್ರಾಣಿವರ್ಗ** – ಬಿಲಗಳಲ್ಲಿ ವಾಸಿಸುವ ಪ್ರಾಣಿಗಳು, ಎರೆಹುಳು, ಮೊಲಗಳು, ಇಲಿಗಳು ಇತ್ಯಾದಿ.

**ಮಾನವಜೀವಿ** – ಗಣಿಗಾರಿಕೆ, ಕಲ್ಲುಗಣಿ, ಕಟ್ಟಡನಿರ್ಮಾಣ ಕೆಲಸ ಇತ್ಯಾದಿ.

## ಭೂ ಸವಕಳಿ (Denudation)


**ಭೂ ಸವಕಳಿಗೆ ಕಾರಣ ಕರ್ತೃಗಳು:** ವಿವಿಧ ರೀತಿಯ ನೈಸರ್ಗಿಕ ಶಕ್ತಿಗಳು ಭೂಮಿಯ ಮೇಲ್ಭಾಗವನ್ನು ಸವೆಸುವ ಕಾರ್ಯವನ್ನು ಭೂ ಸವಕಳಿಕರಣ ಎನ್ನುವರು. ಸವಕಳಿಕರಣದ ಕಾರಣ ಕರ್ತೃಗಳೆಂದರೆ; ನದಿ, ಹಿಮನದಿ, ಅಂತರ್ಜಲ, ಮಾರುತ ಹಾಗೂ ಸಮುದ್ರದ ಅಲೆಗಳು. ಇವು ಸವೆತ, ಸಾಗಾಣಿಕೆ ಮತ್ತು ಸಂಚಯನ ಎಂಬ ಮೂರು ಕಾರ್ಯಗಳನ್ನು ನಡೆಸಿ ಭೂಮಿಯ ಮೇಲ್ಭಾಗದಲ್ಲಿ ವಿಶಿಷ್ಟವಾದ ಭೂಸ್ವರೂಪಗಳನ್ನು ನಿರ್ಮಿಸುತ್ತವೆ.

**ನದಿ :** ಉಗಮದಿಂದ ಸಮುದ್ರದವರೆಗೆ ತನ್ನ ಕಣಿವೆಯಲ್ಲಿ ಹರಿಯುವ ಶುದ್ಧನೀರಿನ ಜಲಧಾರೆಯೇ ನದಿ. ಹರಿಯುವ ನದಿಯ ನೀರು ಭೂಮೇಲ್ಮೈ ವಿಸ್ತಾರವಾದ ಭಾಗದಲ್ಲಿ ಸವಕಳಿಕರಣ ಕಾರ್ಯವನ್ನು ನಿರ್ವಹಿಸುವ ಮುಖ್ಯ ಕರ್ತೃ. ನದಿಗಳು ಸಾಮಾನ್ಯವಾಗಿ ಚಿಲುಮೆ, ಹಿಮನದಿ ಅಥವಾ ಮಳೆನೀರಿನ ಮೂಲದಿಂದ ಉಗಮವಾಗುತ್ತದೆ. ನದಿ ಹರಿಯುವ ಮಾರ್ಗವೇ 'ನದಿಯ ಪಾತ್ರ'. ನದಿಯು

NOT TO BE REPUBLISHED © KTBS

ಆರಂಭಗೊಳ್ಳುವ ಸ್ಥಾನವನ್ನು 'ನದಿಯಮೂಲ' ಎಂದೂ, ನದಿ ಅಂತ್ಯಗೊಂಡು ಸಮುದ್ರ ಸೇರುವ ಭಾಗವನ್ನು 'ನದಿಮುಖ' ಎಂದೂ ಕರೆಯುವರು. ಒಂದು ಸಣ್ಣ ನದಿಯು ತನ್ನ ಕಣಿವೆಯಲ್ಲಿ ಮತ್ತೊಂದು ಪ್ರಧಾನ ನದಿಯನ್ನು ಸೇರಿದಲ್ಲಿ ಅದನ್ನು 'ಉಪನದಿ' ಎಂದು ಕರೆಯುವರು. ಒಂದು ನದಿ ಮತ್ತೊಂದು ನದಿಯನ್ನು ಸೇರುವ ಸ್ಥಳವನ್ನು 'ಸಂಗಮ' ಎನ್ನುವರು.

**ನದಿಯ ಪಾತ್ರ** : ನದಿಯ ಪಾತ್ರವನ್ನು ಮೇಲ್ಕಣಿವೆ ಪಾತ್ರ, ಮಧ್ಯಕಣಿವೆ ಪಾತ್ರ ಮತ್ತು ಕೆಳಕಣಿವೆ ಪಾತ್ರ ಎಂದು ಮೂರುಹಂತಗಳಾಗಿ ವಿಂಗಡಿಸಬಹುದು. ಈ ಹಂತಗಳ ನದಿಯ ನೀರಿನ ಪ್ರಮಾಣ, ನೀರಿನ ವೇಗ ಮತ್ತು ನದಿ ಪಾತ್ರದ ಭೂ ಸ್ವರೂಪ ಬೇರೆ ಬೇರೆ ರೀತಿಯಲ್ಲಿರುವುದು. ಪ್ರತಿ ಹಂತದಲ್ಲಿಯೂ ನದಿಯ ಕಾರ್ಯ ಹಾಗೂ ಅದರಿಂದ ಉಂಟಾಗುವ ಭೂ ಸ್ವರೂಪಗಳು ವಿಶಿಷ್ಟವಾಗಿವೆ.





**ನದಿಯ ಪಾತ್ರದ ವಿವಿಧ ಹಂತಗಳು ಮತ್ತು ಅವುಗಳಿಗೆ ಸಂಬಂಧಿಸಿದ ಭೂಸ್ವರೂಪಗಳು**

@KTBS NOT TO BE REPUBLISHED

**ಮೇಲ್ಕಣಿವೆ ಪಾತ್ರ:** ನದಿಯು ಈ ಹಂತದಲ್ಲಿ ಎತ್ತರ ಭಾಗದಲ್ಲಿದ್ದು ಮುಖ್ಯವಾಗಿ ಸವೆತ ಕಾರ್ಯವನ್ನು ನಿರ್ವಹಿಸುವುದು. ಅದರಲ್ಲಿಯೂ ತಳಸವೆತ ಹೆಚ್ಚು. ಅಂದರೆ ನದಿಯು ತನ್ನ ಕಣಿವೆಯನ್ನು ಆಳವಾಗಿ ಕೊರೆಯುವುದು. ಇದರಿಂದ ಆಳವಾದ ಕಂದರಗಳು, ಮಹಾಕಂದರ **'V'** ಆಕಾರದ ಕಣವೆಗಳು, ಜಲಪಾತಗಳು, (ಏಂಜಲ್ ಜಲಪಾತ, ನಯಾಗರ ಜಲಪಾತ, ಜೋಗ್ ಜಲಪಾತ ಇತ್ಯಾದಿ) ಮತ್ತು ಕುಂಭಕಗಳು ಮೊದಲಾದ ಭೂಸ್ವರೂಪಗಳು ನಿರ್ಮಾಣವಾಗುತ್ತವೆ.

**ಮಧ್ಯಕಣಿವೆ ಪಾತ್ರ:** ಈ ಹಂತದಲ್ಲಿ ನದಿಯು ಮೈದಾನವನ್ನು ಪ್ರವೇಶಿಸುವುದು. ಇಲ್ಲಿ ನದಿಯ ಪಾತ್ರದ ಇಳಿಜಾರು ಕಡಿಮೆಯಾಗುವುದರಿಂದ ನೀರಿನ ವೇಗವೂ ಸಹ ಕಡಿಮೆಯಾಗುವುದು. ಪ್ರಧಾನ ನದಿಗೆ ಅನೇಕ ಉಪ ನದಿಗಳು ಸೇರುವುದರಿಂದ ನದಿಯ ನೀರಿನ ಪ್ರಮಾಣ ಹೆಚ್ಚುವುದು. ಈ ಹಂತದಲ್ಲಿ ನದಿಯು ಮುಖ್ಯವಾಗಿ ಸಾಗಾಣಿಕೆ ಕಾರ್ಯವನ್ನು ನಿರ್ವಹಿಸುವುದು. ಜೊತೆಗೆ ಅಲ್ಲಲ್ಲಿ ಇದರ ಸಂಚಯನ ಕಾರ್ಯವನ್ನೂ ಕಾಣಬಹುದು. ಇದರಿಂದ ಹಲವು ವಿಶಿಷ್ಟ ಭೂ ಸ್ವರೂಪಗಳು ನಿರ್ಮಿತವಾಗುತ್ತವೆ. ಅವುಗಳೆಂದರೆ ಮೆಕ್ಕಲು ಬೀಸಣಿಗೆ, ನದಿಯ ತಿರುವುಗಳು ಮೊದಲಾದವು.

**ಕೆಳಕಣಿವೆ ಪಾತ್ರ:** ಈ ಹಂತದಲ್ಲಿ ನದಿಯು ಅತ್ಯಂತ ನಿಧಾನವಾಗಿ ಹರಿಯುವುದು. ಇದಕ್ಕೆ ಕಾರಣ ಇಳಿಜಾರು ಅತ್ಯಂತ ಕಡಿಮೆಯಾಗುವುದು ಹಾಗೂ ನದಿಯ ಪಾತ್ರ ದೊಡ್ಡದಾಗುವುದು. ಈ ಹಂತದಲ್ಲಿ ನದಿಯು ಮುಖ್ಯವಾಗಿ ಸಂಚಯನ ಕಾರ್ಯವನ್ನು ನಿರ್ವಹಿಸುವುದು. ಕೆಳಕಣಿವೆ ಪಾತ್ರದಲ್ಲಿ ಪ್ರವಾಹ ಮೈದಾನ, ಸ್ವಾಭಾವಿಕ ದಡಕಟ್ಟೆ, ಶೃಂಗ ಸರೋವರ, ಸುಂದರಬನ್ ಮುಖಜಭೂಮಿ, ನೈಲ್‌ನದಿ ಮುಖಜಭೂಮಿ ಮೊದಲಾದ ಭೂ ಸ್ವರೂಪಗಳು ನಿರ್ಮಿತವಾಗುತ್ತವೆ.




**ನದಿ ಸಂಚಯನದಿಂದಾದ ಪ್ರಮುಖ ಭೂಸ್ವರೂಪಗಳು**

**ನಿಮಗೆ ತಿಳಿದಿರಲಿ**

**ಅಳಿವೆ(Estuary):** ನದಿಯು ಸಮುದ್ರವನ್ನು ಸೇರುವ ಭಾಗದಲ್ಲಿ ಅಗಲವಾಗಿ ಕಂಡುಬರುವ ಉಬ್ಬರವಿಳಿತ ಮುಖ ಭಾಗ.

**ಮುಖಜ ಭೂಮಿ :** ನದಿಯು ಸಮುದ್ರ ಸೇರುವ ಅಂತಿಮ ಭಾಗದಲ್ಲಿ ಸಂಚಯದಿಂದ ನಿರ್ಮಿತವಾಗಿರುವ ಮೈದಾನಗಳು.


**ಹಿಮನದಿ:** ಪರ್ವತದ ಅತಿ ಎತ್ತರ ಭಾಗಗಳಲ್ಲಿ ಮತ್ತು ಧ್ರುವ ಪ್ರದೇಶಗಳಲ್ಲಿ ಮಂಜುಗಡ್ಡೆಯ ಅಗಾಧವಾದ ಹಿಮರಾಶಿ ಕಂಡುಬರುತ್ತದೆ. ಹಿಮರಾಶಿಯು ಅದರ ಭಾರ ಹಾಗೂ ಗುರುತ್ವಾಕರ್ಷಣ ಬಲದಿಂದ ಇಳಿಜಾರಿನವರೆಗೆ ಜಾರುವುದನ್ನು ಹಿಮನದಿ ಎನ್ನುವರು. ಹಿಮರಾಶಿಯ ಕೆಳಭಾಗ ಹೆಚ್ಚು ಒತ್ತಡದಿಂದ ಕರಗಿ ಇಳಿಜಾರನ್ನು ಅನುಸರಿಸಿ ಚಲಿಸುವುದು.

**ಹಿಮನದಿಯ ವಿಧಗಳು :–** ಹಿಮನದಿಗಳಲ್ಲಿ ಎರಡು ಮುಖ್ಯ ವಿಧಗಳಿವೆ. ಅವುಗಳೆಂದರೆ ಖಂಡಾಂತರ ಹಿಮನದಿ ಮತ್ತು ಪರ್ವತ ಹಿಮನದಿ

**ಖಂಡಾಂತರ ಹಿಮನದಿ :** ಧ್ರುವಪ್ರದೇಶಗಳಲ್ಲಿರುವ ವಿಸ್ತಾರವಾದ ಮಂಜುಗಡ್ಡೆಯ ಹಾಳೆಯನ್ನು ಖಂಡಾಂತರ ಹಿಮನದಿ ಎನ್ನುವರು. ಉದಾ : ಗ್ರೀನ್‌ಲ್ಯಾಂಡ್ ಮತ್ತು ಅಂಟಾರ್ಕ್ಟಿಕಾ

**ಪರ್ವತ ಅಥವಾ ಆಲ್ಪೈನ್ ಅಥವಾ ಕಣಿವೆ ಹಿಮನದಿಗಳು :** ಎತ್ತರದ ಪರ್ವತ ಪ್ರದೇಶಗಳಲ್ಲಿರುವ ಹಿಮನದಿಗಳನ್ನು ಪರ್ವತ ಹಿಮನದಿ ಎನ್ನುವರು.

ಭೂ ಸವಕಳಿಕರಣದ ಕಾರಣಕರ್ತೃವಾಗಿ ಹಿಮನದಿಯು ಸವೆತ, ಸಾಗಾಣಿಕೆ ಮತ್ತು ಸಂಚಯನ ಕಾರ್ಯವನ್ನು ನಿರ್ವಹಿಸುತ್ತದೆ. ಹಿಮನದಿಯ ಸವೆತಕಾರ್ಯ ಬಹುತೇಕ ಪಾರ್ಶ್ವ ಕೊರೆತವಾಗಿರುವುದು. ಇದರಿಂದ ಹಲವು ಬಗೆಯ ವಿಶಿಷ್ಟವಾದ ಭೂ ಸ್ವರೂಪಗಳು ನಿರ್ಮಿತವಾಗುತ್ತವೆ. ಇವುಗಳೆಂದರೆ ಹಿಮಾಗಾರ, ಗಿರಿಶೃಂಗ, ಪರ್ವತಕಟಕ, ಶಿಲಾಸೋಪಾನ, **U** ಆಕಾರದ ಕಣಿವೆ, ತೂಗುಕಣಿವೆ ಮೊದಲಾದವು.



**ಹಿಮನದಿ**

ಹಿಮನದಿಯು ಸಾಗಾಣಿಕೆ ಮತ್ತು ಸಂಚಯನ ಕಾರ್ಯಗಳನ್ನು ಜೊತೆ ಜೊತೆಯಲ್ಲಿಯೇ ನಿರ್ವಹಿಸುವುದು. ಸಂಚಯನ ಕಾರ್ಯದಿಂದ ನಿರ್ಮಿತವಾಗುವ ಮುಖ್ಯ ಸ್ವರೂಪಗಳೆಂದರೆ ಶಿಲಾನಿಚಯಗಳು, ಸರ್ಪಾಕಾರದ ದಿಣ್ಣೆಗಳು, ರೇವೆಮೈದಾನಗಳು, ತ್ರಿಕೋನಾಕೃತಿಯ ದಿಣ್ಣೆಗಳು ಹಾಗೂ ಹಿಮಜಲ ಪ್ರವಾಹ ಮೈದಾನಗಳು (out wash plains).

'ಶಿಲಾನಿಚಯ'ಗಳು ಹಿಮನದಿ ಸವಕಳಿಕರಣ ಪ್ರದೇಶದಲ್ಲಿ ಕಂಡುಬರುವ ಅತಿ ಮುಖ್ಯ ಭೂ ಸ್ವರೂಪಗಳು. ಇವು ಹಿಮನದಿಯಿಂದ ಸಂಚಯಿತವಾಗಿರುವ ವಿವಿಧ ಆಕಾರ, ಗಾತ್ರದ ಅಗಾಧ ಪ್ರಮಾಣದ ಶಿಲಾವಸ್ತುಗಳು. ಶಿಲಾನಿಚಯಗಳನ್ನು ಅವುಗಳು ಸಂಚಯಿತಗೊಂಡಿರುವ ಸ್ಥಳದ ಆಧಾರದಿಂದ ನಾಲ್ಕು ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ:

**ಪಾರ್ಶ್ವ ಶಿಲಾನಿಚಯ:** ಹಿಮನದಿಯ ಕಣಿವೆಯುದ್ದಕ್ಕೂ ಎರಡೂ ದಡಗಳಲ್ಲಿ ಶಿಲಾವಸ್ತುಗಳು ಸಂಚಯವಾಗುವುದನ್ನು ಪಾರ್ಶ್ವ ಶಿಲಾನಿಚಯ ಎನ್ನುವರು.

**ಮಧ್ಯ ಶಿಲಾನಿಚಯ:** ಎರಡು ಹಿಮನದಿಗಳು ಸಂಧಿಸಿದಾಗ ಅವುಗಳ ಪಾರ್ಶ್ವ ಶಿಲಾನಿಚಯಗಳು ಪರಸ್ಪರ ಒಗ್ಗೂಡಿದ್ದು ಇವುಗಳನ್ನು ಮಧ್ಯಶಿಲಾನಿಚಯವೆಂದು ಕರೆಯುವರು.

**ತಳದ ಶಿಲಾನಿಚಯ:** ಹಿಮನದಿಯ ಕಣಿವೆಯ ತಳಭಾಗದಲ್ಲಿ ಶಿಲಾವಸ್ತುಗಳು ಸಂಚಯವಾಗುವುದನ್ನು ತಳದ ಶಿಲಾನಿಚಯವೆನ್ನುವರು.

**ಅಂತ್ಯ ಶಿಲಾನಿಚಯ :** ಇವು ಹಿಮನದಿಯ ಅಂತ್ಯಭಾಗದಲ್ಲಿ ಸಂಚಯಗೊಳ್ಳುತ್ತವೆ.

@KTBS
NOT TO BE REPUBLISHED


## ಅಂತರ್ಜಲ

ಭೂಮಿಯ ಮೇಲೆ ಬೀಳುವ ಮಳೆಯ ನೀರಿನ ಸ್ವಲ್ಪ ಭಾಗವು ಇಂಗಿ ಒಳಸೇರುವುದು. ಹೀಗೆ ಒಳಪದರಗಳಲ್ಲಿ ಸಂಗ್ರಹವಾಗಿರುವ ನೀರನ್ನು 'ಅಂತರ್ಜಲ'ಎಂದು ಕರೆಯುವರು. ಅಂತರ್ಜಲವು ಸುಲಭವಾಗಿ ಪ್ರವಹಿಸಬಹುದಾದ ಶಿಲಾಪದರುಗಳನ್ನು 'ಪ್ರವೇಶ್ಯ ಶಿಲೆ' ಅಥವಾ 'ವ್ಯಾಪ್ಯಶಿಲೆ'ಗಳೆನ್ನುವರು. ಅಂತರ್ಜಲವು ಪ್ರವೇಶಿಸಲಾರದ ಶಿಲಾಪದರಗಳನ್ನು 'ಅಪ್ರವೇಶ್ಯ' ಅಥವಾ 'ಅವ್ಯಾಪ್ಯ' ಶಿಲೆಗಳೆಂದು ಕರೆಯುವರು. ಕೆಲವು ಪ್ರವೇಶ್ಯ ಶಿಲೆಗಳು ಅಪಾರ ಪ್ರಮಾಣದ ಅಂತರ್ಜಲವನ್ನು ಹೊಂದಿರುತ್ತವೆ. ಇವುಗಳನ್ನು 'ಜಲಜಶಿಲೆ' ಎನ್ನುವರು. ಪ್ರವೇಶ್ಯ ಶಿಲೆಗಳಲ್ಲಿ ಭರ್ತಿಯಾದ ನೀರು ಕೆಲವು ಸನ್ನಿವೇಶಗಳಲ್ಲಿ ಸ್ವಾಭಾವಿಕವಾಗಿ ಹೊರಬೀಳುವುದು. ಹೀಗೆ ಅಂತರ್ಜಲವು ಸ್ವಾಭಾವಿಕವಾಗಿ ಹೊರಬೀಳುವುದನ್ನು 'ಚಿಲುಮೆ' (Spring) ಗಳೆಂದು ಕರೆಯುವರು.

**ಚಿಲುಮೆಗಳ ವಿಧಗಳು:**


1. **ನಿರಂತರ ಚಿಲುಮೆಗಳು:** ಈ ಚಿಲುಮೆಗಳಲ್ಲಿ ವರ್ಷದ ಎಲ್ಲಾ ಕಾಲದಲ್ಲಿಯೂ ನಿರಂತರವಾಗಿ ನೀರು ಹೊರಬೀಳುವುದು.
2. **ನಿಯತಕಾಲಿಕ ಚಿಲುಮೆಗಳು:** ಈ ಚಿಲುಮೆಗಳಲ್ಲಿ ವರ್ಷದ ಕೆಲವುಕಾಲ (ಮಳೆಗಾಲ) ಮಾತ್ರ ಅಂತರ್ಜಲ ಹೊರಬೀಳುವುದು.
3. **ಬಿಸಿನೀರಿನ ಚಿಲುಮೆಗಳು:** ಈ ಚಿಲುಮೆಗಳಲ್ಲಿ ಬಿಸಿನೀರು ಹೊರಬೀಳುವುದು. ಇವುಗಳು ಸಾಮಾನ್ಯವಾಗಿ ಜ್ವಾಲಾಮುಖಿ ಪ್ರದೇಶದಲ್ಲಿ ಕಂಡು ಬರುತ್ತದೆ.
4. **ಬಿಸಿನೀರಿನ ಬುಗ್ಗೆಗಳು:** ಈ ಚಿಲುಮೆಗಳಲ್ಲಿ ಬಿಸಿನೀರು ನೀರಾವಿಯೊಡನೆ ಆಗಿಂದಾಗ್ಗೆ ಸಾಕಷ್ಟು ಎತ್ತರದವರೆಗೆ ಚಿಮ್ಮುವುದು. ಉದಾ: ಯು.ಎಸ್.ಎ.ಯಲ್ಲಿರುವ 'ಓಲ್ಡ್ ಫೇತ್ ಫುಲ್ ಗೇಸರ್'.
5. **ಆರ್ಟಿಸಿಯನ್ ಬಾವಿ:** ಕೆಲವು ಕಡೆಗಳಲ್ಲಿ ಶಿಲಾಪದರುಗಳು ಬೋಗುಣಿಯಾಕಾರದಲ್ಲಿ ಒಂದು ಪ್ರವೇಶ್ಯ ಶಿಲಾ ಪದರಿನ ಮೇಲೆ ಹಾಗೂ ಕೆಳಗೆ ಅಪ್ರವೇಶ್ಯ ಶಿಲಾಪದರುಗಳಿರುತ್ತವೆ. ಇದರಿಂದ ಶಿಲಾಪದರವನ್ನು ಸೇರುವ ನೀರು ಸ್ವಾಭಾವಿಕವಾಗಿ ಹೊರಬೀಳಲಾರದು. ಇಂತಹ ಕಡೆ ಪ್ರವೇಶ್ಯ ಶಿಲೆಯವರೆಗೆ ರಂಧ್ರವನ್ನು ಕೊರೆದಾಗ ನೀರು ಸ್ವಾಭಾವಿಕವಾಗಿ ಚಿಮ್ಮುವುದು. ಇವುಗಳನ್ನು ಆರ್ಟಿಸಿಯನ್ ಬಾವಿಗಳೆಂದು ಕರೆಯುವರು. ಇವುಗಳು ಆಸ್ಟ್ರೇಲಿಯಾದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.

©KTBS NOT TO BE REPUBLISHED



ಆರ್ಟಿಸಿಯನ್ ಬಾವಿಗಳು

ಅಂತರ್ಜಲವು ಸಹ ಸವೆತ, ಸಾಗಾಣಿಕೆ ಮತ್ತು ಸಂಚಯನ ಕಾರ್ಯವನ್ನು ನಿರ್ವಹಿಸುವುದು. ಸುಣ್ಣಕಲ್ಲಿನ ಪ್ರದೇಶದಲ್ಲಿ ಅಂತರ್ಜಲಕಾರ್ಯವು ಪ್ರಧಾನವಾಗಿರುವುದು. ಅಂತರ್ಜಲಕಾರ್ಯದಿಂದ ನಿರ್ಮಿತವಾಗುವ ಭೂ ಸ್ವರೂಪಗಳೆಂದರೆ ಲ್ಯಾಪೀಸ್, ನುಂಗುಬಿಲ, ಅಂತರ್ ಗುಹೆ, ಆರೋಹಿ ಮತ್ತು ಅವರೋಹಿಶಂಕುಗಳು, ಸುಣ್ಣಕಲ್ಲಿನ ಸ್ತಂಭಗಳು ಮೊದಲಾದವು.



ಅಂತರ್ಜಲ ಚಟುವಟಿಕೆ

©KTBS NOT TO BE REPUBLISHED

**ನಿಮಗೆ ತಿಳಿದಿರಲಿ – ಸುಣ್ಣಕಲ್ಲಿನ ಗುಹೆಗಳು.**


1. ಆಕಳ ಗವಿ (ಉಳವಿ) ಗುಹೆಗಳು – ಕರ್ನಾಟಕದ ಉತ್ತರಕನ್ನಡ ಜಿಲ್ಲೆ
2. ಬೇಲಂ ಮತ್ತು ಬೊಹ್ರಾ ಗುಹೆಗಳು –ಆಂಧ್ರಪ್ರದೇಶ.

ಅಂತರ್ಜಲ ಕಾರ್ಯದಿಂದ ನಿರ್ಮಿತವಾಗಿರುವ ಭೂಸ್ವರೂಪಗಳನ್ನು ಕಾರ್ಸ್ಟ್‌ಟೋಪೋಗ್ರಫಿ ಎಂದು ಕರೆಯುವರು.

## ಮಾರುತಗಳು

ಮಾರುತಗಳ ಕಾರ್ಯವು ಶುಷ್ಕ ಅಥವಾ ಮರುಭೂಮಿ ಪ್ರದೇಶಗಳಲ್ಲಿ ಸಾಮಾನ್ಯವಾಗಿದೆ. ಮರುಭೂಮಿಗಳಲ್ಲಿ ಅಡೆತಡೆಯಿಲ್ಲದೆ ಅತ್ಯಂತ ವೇಗವಾಗಿ ಬೀಸುವ ಗಾಳಿಯು, ಭೂಮೇಲ್ಮೈಯನ್ನು ಸವೆಸಿ, ಸಾಗಿಸಿ, ಅನಂತರ ಅವುಗಳನ್ನು ಸಂಚಯಿಸಿ ವಿವಿಧ ಬಗೆಯ ಭೂ ಸ್ವರೂಪಗಳನ್ನು

ನಿರ್ಮಿಸುತ್ತವೆ. ಮಾರುತದ ಕಾರ್ಯದಿಂದ ನಿರ್ಮಿತವಾಗುವ ಮುಖ್ಯ ಭೂಸ್ವರೂಪಗಳೆಂದರೆ ನಾಯಿಕೊಡೆ (ಅಣಬೆ) ಯಾಕಾರದ ಶಿಲೆ, ಶಿಲಾಪೀಠ, ಶಿಲಾದ್ವೀಪ, ಮರಳು ದಿಣ್ಣೆಗಳು, ನೀಳಮರಳು ದಿಣ್ಣೆ. ಅಡ್ಡಮರಳು ದಿಣ್ಣೆ ಅರ್ಧ ಚಂದ್ರಾಕೃತಿಯ ಮರಳು ದಿಣ್ಣೆ ಮತ್ತು ಲೋಯಸ್ ಮೈದಾನ ಮೊದಲಾದವು.




**ಅರ್ಧ ಚಂದ್ರಾಕೃತಿಯ ಮರುಳುದಿಣ್ಣೆ**

ಅರ್ಧಚಂದ್ರಾಕೃತಿಯ ಮರಳು ದಿಣ್ಣೆಗಳು ಮರುಭೂಮಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಭೂ ಸ್ವರೂಪಗಳು. ಮರುಭೂಮಿಗಳ ಅಂಚಿನಲ್ಲಿ ನುಣುಪಾದ ಹಳದಿಬಣ್ಣದ ಮಣ್ಣಿನ ಕಣಗಳಿಂದ ಸಂಚಯನಗೊಂಡ ಪ್ರದೇಶವನ್ನು 'ಲೋಯಿಸ್' ಎಂದು ಕರೆಯುವರು. ಉದಾ: ಚೈನಾದ ಲೋಯಿಸ್ ಮೈದಾನ.

NOT TO BE REPUBLISHED @KTBS

ಗಾಳಿಯ ಕಾರ್ಯವನ್ನು ಗಾಳಿಯ ಕಾರ್ಯದ ಆವರ್ತನ-(ಇಯೋಲಿಯನ್ ಸೈಕಲ್)-ಎಂದು ಕರೆಯುವರು.

**ಸಮುದ್ರದ ಅಲೆಗಳು:** ವಿವಿಧ ಭೂಸವಕಳಿಕರಣ ಕಾರಣ ಕೃರ್ತಗಳ ರೀತಿ ಸಮುದ್ರದ ಅಲೆಗಳು ಕೂಡ ಒಂದು ಪ್ರಮುಖ ಬಾಹ್ಯ ಶಕ್ತಿಯಾಗಿದೆ. ಸಮುದ್ರದ ಅಲೆಗಳು ಸಮುದ್ರದ ಮೇಲ್ಭಾಗದಲ್ಲಿ ಏರು ತಗ್ಗುಗಳನ್ನು ಹೊಂದಿರುವ ನೀರಿನ ಪ್ರಕಾರವಾಗಿದೆ. ಸಮುದ್ರದ ಅಲೆಗಳ ಕಾರ್ಯವು ಕರಾವಳಿಯಲ್ಲಿ ಪ್ರಮುಖವಾಗಿ ಕಂಡುಬರುವುದು. ಸಮುದ್ರದ ಅಲೆಗಳು ಉಂಟುಮಾಡುವ ಪ್ರಮುಖ ಭೂಸ್ವರೂಪಗಳೆಂದರೆ- ಶಿಲಾಪ್ರಪಾತ ಸಮುದ್ರಗುಹೆಗಳು, ಸಮುದ್ರಬಿಡಿಬಂಡೆ, ಸಮುದ್ರ ಕಮಾನು, ಭೂಶಿರ, ಮರಳುದಿಣ್ಣೆಗಳು, ಮರಳುದಂಡೆಗಳು, ಹಿನ್ನೀರಿನ ಸರೋವರಗಳು.



ಸಮುದ್ರದ ಅಲೆಗಳು

## ಅಭ್ಯಾಸಗಳು

**I ಬಿಟ್ಟಿರುವ ಸ್ಥಳಗಳನ್ನು, ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1 'ಭೂಖಂಡಗಳ' ಮೇಲ್ಪದರು ಎಂದು __________ ನ್ನು ಕರೆಯುತ್ತಾರೆ.

2 ತಗ್ಗಾದ, ವಿಸ್ತಾರವಾದ ಜ್ವಾಲಾಮುಖಿ ದ್ವಾರವನ್ನು __________ ಎನ್ನುವರು.

3 ಹೆಚ್ಚು ಹಾನಿಕಾರಕ ಭೂಕಂಪನ ಅಲೆಗಳೆಂದರೆ __________ .

4 ಆರೋಹಿ ಮತ್ತು ಅವರೋಹಿ ಶಂಕುಗಳು __________ ಗಳಲ್ಲಿ ಸಾಮಾನ್ಯವಾಗಿರುತ್ತವೆ.

5 ಮರಳು ದಂಡೆಗಳು __________ ಕಾರ್ಯದಿಂದ ನಿರ್ಮಿತವಾಗುತ್ತವೆ.

**II ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

6 ಭೂಮಿಯ ಅಂತರಾಳದ ಮೂರು ಪ್ರಮುಖ ಪದರುಗಳನ್ನು ತಿಳಿಸಿ.

7 ಕಾರ್ಯಾಚರಣೆ ಮಾಡುವ ಅವಧಿಯ ಆಧಾರದ ಮೇಲೆ ಜ್ವಾಲಾಮುಖಿಯ ವಿಧಗಳನ್ನು ಹೆಸರಿಸಿ.

8 ಪ್ರಪಂಚದ ಪ್ರಮುಖ ಭೂಕಂಪ ವಲಯಗಳನ್ನು ತಿಳಿಸಿ.

9 ಶಿಥಿಲೀಕರಣ ಎಂದರೇನು ? ಶಿಥಿಲೀಕರಣದ ಮೂರು ಮುಖ್ಯ ವಿಧಗಳನ್ನು ಹೆಸರಿಸಿ.

10 ಭೂ ಸವಕಳಿಕರಣದ ಕರ್ತೃವಾಗಿ ನದಿಗಳು ನಿರ್ಮಿಸುವ ಭೂಸ್ವರೂಪಗಳನ್ನು ಹೆಸರಿಸಿ.

**III ಹೊಂದಿಸಿ ಬರೆಯಿರಿ.**

| | ಅ | | ಬ |
|---|---|---|---|
| 11 | ಸಿಮಾ | ಅ) | ಭೂಕಂಪ |
| 12 | ಮರಳುಗಲ್ಲು | ಆ) | ಹಳದಿಮಣ್ಣು |
| 13 | ಹೊರ ಕೇಂದ್ರ | ಇ) | ಸಾಗರೀಕ ವಲಯದ ಮೇಲ್ಪದರು |
| 14 | ಬಿಸಿನೀರಬುಗ್ಗೆ | ಈ) | ಕಣಶಿಲೆ |
| 15 | ಲೋಯಸ್ | ಉ) | ಅಂತರ್ಜಲ |

**IV ಈ ಕೆಳಗಿನವುಗಳನ್ನು ಅರ್ಥೈಸಿ.**

16. ಜಲಶಿಲೆಗಳು

17. ಪೆಸಿಫಿಕ್ ಅಗ್ನಿವೃತ್ತ

18. ಭೌತಿಕ ಶಿಥಿಲೀಕರಣ

19. ಶಿಲಾನಿಚಯಗಳು

20. ಇಂಗಾಲಾಧಿಕ್ಯ ಶಿಲೆಗಳು

@KTBS NOT TO BE REPUBLISHED

21. ಸುನಾಮಿ

22. ಭೂಖಂಡ ಹಿಮನದಿ

23. ಬಿಸಿನೀರ ಚಿಲುಮೆ

## V ನೆನಪಿನಲ್ಲಿಡಬೇಕಾದ ಅಂಶಗಳು.

24. ನೀಫೆ

25. ಚೂರ್ಣಾಧಿಕ್ಯ ಮತ್ತು ಮೃಣ್ಮಯಶಿಲೆಗಳು

26. ಭೂರಚನಾ ಶಕ್ತಿಗಳು

27. ಪರ್ವತ ಹಿಮನದಿ

28. ಗಾಳಿಕಾರ್ಯದ ಆವರ್ತನ

29. ಸಮುದ್ರ ತೀರಗಳು

## VI ಚಟುವಟಿಕೆಗಳು.

30. ನಿಮ್ಮ ಸುತ್ತಮುತ್ತಲಿನ ಸ್ಥಳಗಳಲ್ಲಿ ಸಿಗುವ ವಿವಿಧ ಶಿಲೆಗಳನ್ನು ಸಂಗ್ರಹಿಸಿ, ಹೆಸರಿಸಿ.

31. ಸಮೀಪದ ಜಲಪಾತಗಳಿಗೆ ಬೇಟಿ ನೀಡಿ ಅವು ಹೇಗೆ ನಿರ್ಮಿತವಾಗಿವೆ ಎಂದು ತಿಳಿಯಿರಿ.

@KTBS NOT TO BE REPUBLISHED

***

J5J4X4

# ಅಧ್ಯಾಯ–13

# ವಾಯುಗೋಳ


**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ವಾಯುಗೋಳದ ಅರ್ಥ, ಪ್ರಾಮುಖ್ಯತೆ, ಸಂಯೋಜನೆ, ರಚನೆ ಬಗ್ಗೆ ಅರಿವು ಮೂಡಿಸಿಕೊಳ್ಳುವುದು.
- ಹವಾಮಾನದ ಘಟಕಾಂಶಗಳಾದ ಉಷ್ಣಾಂಶ, ಒತ್ತಡ, ಮಾರುತಗಳು, ತೇವಾಂಶ, ಮೋಡ, ಮಳೆ, ಇವುಗಳ ಕಾರ್ಯ, ವಿಧಗಳ ಬಗ್ಗೆ ತಿಳಿಯುವುದು.
- ಹವಾಮಾನ ಮತ್ತು ವಾಯುಗುಣದ ವ್ಯತ್ಯಾಸವನ್ನು ವಿಶ್ಲೇಷಿಸುವುದು.

ನಮ್ಮನ್ನು ಭೂಮಿಯ ಸುತ್ತಲಿನ ವಾಯುವಿನ ಪದರವು ಹೇಗೆ ರಕ್ಷಿಸುತ್ತಿದೆ ಎಂಬುದು ತಿಳಿದಿದೆಯೆ!

©KTBS
NOT TO BE REPUBLISHED

**ವಾಯುಗೋಳದ ಅರ್ಥ ಮತ್ತು ಪ್ರಾಮುಖ್ಯತೆ :** ಭೂಮಿಯನ್ನು ಸುತ್ತುವರಿದಿರುವ ಅನಿಲಗಳು, ದೂಳಿನಕಣ ಮತ್ತು ನೀರಾವಿಯ ತೆಳುವಾದ ಪದರವನ್ನು ವಾಯುಗೋಳವೆಂದು ಕರೆಯುತ್ತೇವೆ. ಈ ಅನಿಲದ ಪದರವು ಜೀವಗೋಳವನ್ನು ಬಾಹ್ಯಾಕಾಶದಿಂದ ಪ್ರತ್ಯೇಕಿಸಿ ರಕ್ಷಣೆಯನ್ನು ನೀಡಿದೆ. ವಾಯುಗೋಳದ ದಪ್ಪ ಸುಮಾರು 1000 ಕಿ.ಮಿಗಳಿದ್ದು, ಇದು ಎಲ್ಲಾ ಬಗೆಯ ಜೀವಿಗಳಿಗೆ ಅತ್ಯವಶ್ಯವಾಗಿದೆ. ವಾಯುಗೋಳದ ಕೆಲವು ಅನಿಲಗಳು ಮಾನವ ಮತ್ತು ಇತರ ಜೀವಿಗಳ ಉಸಿರಾಟಕ್ಕೆ ಅತ್ಯವಶ್ಯವಾಗಿದೆ. ಸಸ್ಯಗಳು ಈ ಅನಿಲಗಳ ನೆರವಿನಿಂದ ಆಹಾರವನ್ನು ಉತ್ಪಾದಿಸುತ್ತವೆ. ವಾಯುಗೋಳವು ಅನಿಲದ ಹೊದಿಕೆಯಾಗಿದ್ದು ಸೂರ್ಯನ ಶಾಖವನ್ನು ಹಿಡಿದಿರಿಸಿಕೊಂಡು ಭೂಮಿಯನ್ನು ಬೆಚ್ಚಗಿರಿಸಿ, ಜೀವಿಸಲು ಸೂಕ್ತವಾಗಿರುವಂತೆ ಮಾಡಿದೆ.




**ವಾಯುಮಂಡಲ ಸ್ತರಗಳು**

**ವಾಯುಗೋಳದ ಸಂಯೋಜನೆ:**

ವಾಯುಗೋಳವು ವಿವಿಧ ಬಗೆಯ ಅನಿಲಗಳು, ಧೂಳಿನ ಕಣಗಳು ಮತ್ತು ನೀರಾವಿಯ ಮಿಶ್ರಣವಾಗಿದೆ. ವಾಯುಮಂಡಲದ ಮುಖ್ಯ ಅನಿಲಗಳೆಂದರೆ ನೈಟ್ರೋಜನ್ ಶೇ 78.08, ಆಕ್ಸಿಜನ್ ಶೇ.20.94, ಆರ್ಗಾನ್ ಶೇ 0.93, ಇಂಗಾಲದ ಡೈಆಕ್ಸೈಡ್ ಶೇ0.03, ಓಜೋನ್ ಶೇ 0.000005. ವಾಯುಮಂಡಲವು ಧೂಳಿನ ಕಣಗಳನ್ನು ಸಹ ಒಳಗೊಂಡಿದ್ದು, ಇವು ಜಲಾಂಶದ ಘನೀಭವಿಸುವಿಕೆ ಮತ್ತು ಮೋಡದ ನಿರ್ಮಾಣಕ್ಕೆ ಸಹಾಯಕವಾಗಿದೆ. ವಾಯುಮಂಡಲದಲ್ಲಿರುವ ನೀರಾವಿಯು ಮೋಡದ ನಿರ್ಮಾಣ ಹಾಗೂ ವೃಷ್ಟಿಗೆ ಕಾರಣವಾಗುವುದಲ್ಲದೆ ವಾಯುಮಂಡಲದ ಶಾಖ ಮತ್ತು ಶಕ್ತಿಯನ್ನು

ಹಿಡಿದಿರಿಸಿಕೊಂಡು ಅದು ಒಂದು ಸ್ಥಳದ ಹವಾಮಾನದ ಮೇಲೆ ಪ್ರಭಾವವನ್ನು ಬೀರುವುದು.

**ವಾಯುಮಂಡಲದ ರಚನೆ:** ವಾಯುಮಂಡಲವನ್ನು ಅದರ ಹಲವಾರು ಲಕ್ಷಣಗಳನ್ನು ಆಧರಿಸಿ ಐದು ಪದರುಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಪರಿವರ್ತನಾಮಂಡಲ, ಸಮೋಷ್ಣಮಂಡಲ, ಮಧ್ಯಂತರಮಂಡಲ, ಅಯಾನ್‌ಮಂಡಲ ಮತ್ತು ಬಾಹ್ಯಮಂಡಲ.

**ಪರಿವರ್ತನಾಮಂಡಲ (Troposphere):** ಇದು ವಾಯುಮಂಡಲದ ಅತ್ಯಂತ ಕೆಳಪದರು. ಇದು ಸಮಭಾಜಕ ವೃತ್ತದ ಬಳಿ 18 ಕಿ.ಮೀ ಎತ್ತರದವರೆಗೆ ಹಾಗೂ ಧ್ರುವಪ್ರದೇಶದ ಬಳಿ 8ಕಿ.ಮೀ. ಎತ್ತರದ ವರೆಗೆ ಕಂಡುಬರುವುದು. ಈ ವಲಯದಲ್ಲಿಯೇ ಹವಾಮಾನದ ಉಷ್ಣಾಂಶ, ಒತ್ತಡ, ಮಾರುತಗಳು, ಮೋಡ, ಮಳೆ ಮೊದಲಾದ ಎಲ್ಲಾ ಅಂಶಗಳು ಕಂಡು ಬರುತ್ತವೆ. ಹವಾಮಾನದ ಎಲ್ಲಾ ಬದಲಾವಣೆಗಳು ಕಂಡು ಬರುವುದು ಈ ವಲಯದಲ್ಲಿ ಮಾತ್ರ. ಈ ವಲಯದಲ್ಲಿ ಎತ್ತರಕ್ಕೆ ಹೋದಂತೆ ಉಷ್ಣಾಂಶ ಮತ್ತು ಒತ್ತಡ ಪ್ರಮಾಣ ಕಡಿಮೆಯಾಗುತ್ತದೆ.

**ಸಮೋಷ್ಣಮಂಡಲ (Stratosphere):** ಇದು ವಾಯುಮಂಡಲದ ಎರಡನೆಯ ಪದರವಾಗಿದ್ದು, 50 ಕಿ.ಮೀ.ವರೆಗೆ ಹಬ್ಬಿದ್ದು ಪರಿವರ್ತನಾ ಮಂಡಲದ ಮೇಲಿರುವುದು. ಈ ಪದರದಲ್ಲಿ ಓಜೋನ್ ಅನಿಲವು ಅತ್ಯಂತ ಮುಖ್ಯವಾದುದು. ಇದು ಸೂರ್ಯನಿಂದ ಬರುವ ಅತಿನೇರಳೆ (ಆಲ್ಟ್ರಾವೈಲೆಟ್) ಕಿರಣಗಳನ್ನು ಹೀರಿಕೊಂಡು ಭೂಮಿಯ ಮೇಲಿನ ಎಲ್ಲಾ ಜೀವರಾಶಿಗಳನ್ನು ರಕ್ಷಿಸಿದೆ. ಈ ಪದರವು ಮೋಡ ಹಾಗೂ ಇತರೆ ಎಲ್ಲಾ ಬಗೆಯ ಹವಾಮಾನದ ಅಂಶಗಳಿಂದ ಮುಕ್ತವಾಗಿರುವುದು. ಇದರಿಂದ ಈ ಪದರದಲ್ಲಿ ಜೆಟ್ ವಿಮಾನಗಳು ಹಾರಾಡಲು ಸೂಕ್ತವಾಗಿದೆ.

**ಮಧ್ಯಂತರ ಮಂಡಲ (Mesosphere):** ಇದು ಸಮೋಷ್ಣಮಂಡಲದ ಮೇಲಿದ್ದು, ಸುಮಾರು 80 ಕಿ.ಮೀ. ಎತ್ತರದವರೆಗೆ ವಿಸ್ತರಿಸಿದೆ. ಈ ವಲಯದಲ್ಲಿಯೂ ಎತ್ತರಕ್ಕೆ ಹೋದಂತೆ ಉಷ್ಣಾಂಶವು ಕಡಿಮೆಯಾಗುವುದು. ಈ ಪದರು ವಾಯುಮಂಡಲದ ಅತಿ ಶೀತ ಉಷ್ಣಾಂಶವನ್ನು ಹೊಂದಿದೆ.

**ಉಷ್ಣತಾಮಂಡಲ (Thermosphere):** ಮಧ್ಯಂತರ ಮಂಡಲದ ನಂತರ ಉಷ್ಣತಾಮಂಡಲ ಕಂಡುಬರುತ್ತದೆ. ಈ ಪದರದಲ್ಲಿ ಉಷ್ಣಾಂಶವು ತೀವ್ರವಾಗಿ ಹೆಚ್ಚಾಗುತ್ತದೆ. ಈ ಪದರದಲ್ಲಿನ ಅತ್ಯಧಿಕ ಉಷ್ಣಾಂಶದ ಪರಿಣಾಮವಾಗಿ ಅನಿಲದ ಅಣುಗಳು ಆಯಾನುಗಳಾಗಿ ಪರಿವರ್ತನೆ ಹೊಂದಿರುತ್ತವೆ. ಆದುದರಿಂದ ಇದನ್ನು 'ಆಯಾನುಮಂಡಲ'ವೆಂದು ಕರೆಯುವರು. ಈ ಆಯಾನುಗಳು ಭೂಮಿಯಿಂದ ಪ್ರಸಾರಗೊಂಡ ರೇಡಿಯೋ ತರಂಗಗಳನ್ನು ಪುನಃ ಭೂಮಿಯ ಕಡೆಗೆ ಪ್ರತಿಫಲಿಸುತ್ತವೆ.

**ಬಾಹ್ಯಮಂಡಲ (Exosphere) :** ಬಾಹ್ಯಮಂಡಲವು ವಾಯುಮಂಡಲದ ಅತ್ಯಂತ ಮೇಲಿನ ಪದರವಾಗಿದೆ. ಈ ಪದರಲ್ಲಿ ವಾಯುಮಂಡಲ ಘಟಕಾಂಶಗಳು ವಿರಳವಾಗಿರುತ್ತದೆ ಮತ್ತು ಒತ್ತಡ ಅತ್ಯಂತ ಕಡಿಮೆ ಇರುತ್ತದೆ.

### ಹವಾಮಾನದ ಘಟಕಾಂಶಗಳು (Elements of Weather)

ಹವಾಮಾನದ ಪರಿಸ್ಥಿತಿಯು ಹಲವಾರು ಅಂಶಗಳಿಂದ ಪ್ರಭಾವಿತವಾಗಿದ್ದು ಅವುಗಳೆಂದರೆ ಉಷ್ಣಾಂಶ, ಒತ್ತಡ, ಮಾರುತಗಳು, ತೇವಾಂಶ, ಮೋಡ, ಮಳೆ ಇತ್ಯಾದಿ.


NOT TO BE REPUBLISHED ©KTBS

ಒಂದು ಸ್ಥಳದಲ್ಲಿ ನಿಗದಿತ ಸಮಯದಲ್ಲಿ ಕಂಡುಬರುವ ವಾಯುಮಂಡಲದ ಪರಿಸ್ಥಿತಿಯೇ ಹವಾಮಾನ. ಇದಕ್ಕೆ ಪ್ರತಿಯಾಗಿ ಒಂದು ಪ್ರದೇಶದ ದೀರ್ಘಾವಧಿಯ ಹವಾಮಾನದ ಸರಾಸರಿಯನ್ನು ವಾಯುಗುಣವೆಂದು ಕರೆಯುವರು.

**ಉಷ್ಣಾಂಶ**

ಭೂಮಿಯು ಪಡೆಯುವ ಎಲ್ಲಾ ಶಕ್ತಿಗೂ ಸೂರ್ಯನೇ ಮೂಲ. ಭೂಮಿಯು ಸೂರ್ಯನಿಂದ ಪಡೆಯುವ ಶಾಖವನ್ನು 'ಸೂರ್ಯಜನ್ಯ ಶಾಖ' (Insolation) ವೆಂದು ಕರೆಯುವರು. ಅಂದರೆ ಸೂರ್ಯನಿಂದ ಬರುವ 'ವಿಕಿರಣ'ಎಂದಾಗಿದೆ. ವಾಯು ಮಂಡಲದ ಉಷ್ಣಾಂಶವನ್ನು ಉಷ್ಣತಾಮಾಪಕ (Thermometer) ಉಪಕರಣದಿಂದ ಅಳೆಯಲಾಗುವುದು. ಸೆಂಟಿಗ್ರೇಡ್ ಅಥವಾ ಫ್ಯಾರನ್‌ಹೀಟ್ ಉಷ್ಣತಾಮಾಪಕಗಳನ್ನು ಉಷ್ಣಾಂಶವನ್ನು ಅಳೆಯಲು ಬಳಸುವರು. ಉಷ್ಣಾಂಶದ ಮೇಲೆ ಪ್ರಭಾವವನ್ನು ಬೀರುವ ಅಂಶಗಳೆಂದರೆ ಅಕ್ಷಾಂಶ, ಒಂದು ಸ್ಥಳದ ಎತ್ತರ, ಸಮುದ್ರದಿಂದ ಇರುವ ದೂರ, ಮಾರುತಗಳು, ಸಾಗರ ಪ್ರವಾಹಗಳು, ಮೋಡಗಳು, ಮಳೆ ಇತ್ಯಾದಿ.

**ಉಷ್ಣಾಂಶದ ಸಾಮಾನ್ಯ ಇಳಿಕೆಯ ಪ್ರಮಾಣ:** ಎತ್ತರಕ್ಕೆ ಹೋದಂತೆ ಅನಿಲಗಳ ಪ್ರಮಾಣ ಕಡಿಮೆಯಾಗುವುದರಿಂದ ಸಾಂದ್ರತೆ ಕಡಿಮೆಯಾಗಿ ಉಷ್ಣಾಂಶವು ಕಡಿಮೆಯಾಗುತ್ತದೆ. ಇದನ್ನು ಉಷ್ಣಾಂಶದ ಸಾಮಾನ್ಯ ಇಳಿಕೆ ಪ್ರಮಾಣ ಎನ್ನುವರು. ಇದು ಪ್ರತಿಸಾವಿರ ಮೀಟರ್‌ಗಳ ಎತ್ತರಕ್ಕೆ (1.ಕಿ.ಮೀ) $6.4^0$ ಸೆಂ. ಅಥವಾ 165 ಮೀಟರ್‌ಗೆ $1^0$. ಸೆಂ. ಉಷ್ಣಾಂಶವು ಕಡಿಮೆಯಾಗುತ್ತದೆ.



**ಉಷ್ಣಾಂಶ ವಲಯಗಳು**

**ಉಷ್ಣಾಂಶ ವಿಪರ್ಯಾಯ:** ಕೆಲವು ವಿಶೇಷ ಸನ್ನಿವೇಶಗಳಲ್ಲಿ ವಾಯುಮಂಡಲದಲ್ಲಿ ಎತ್ತರ–ಕ್ಕೆ ಹೋದಂತೆ ಉಷ್ಣಾಂಶವು ಕಡಿಮೆಯಾಗುವ ಬದಲು ಹೆಚ್ಚಾಗುತ್ತಾ ಹೋಗುವುದು. ಇದನ್ನು 'ಉಷ್ಣಾಂಶ ವಿಪರ್ಯಾಯ' ಎನ್ನುವರು. ಇದು ಪರ್ವತಗಳ ಕಣಿವೆ ಪ್ರದೇಶಗಳಲ್ಲಿ ಕಂಡುಬರುವುದು. ಇದಕ್ಕೆ ಕಾರಣಗಳೆಂದರೆ ದೀರ್ಘಾವಧಿಯ ರಾತ್ರಿ ಮೋಡರಹಿತ ಶುಭ್ರಆಕಾಶ, ಒಣಗಾಳಿ, ಮಾರುತರಹಿತ ಮತ್ತು ಹಿಮಾವೃತ ಪರ್ವತದ ಮೇಲ್ಭಾಗ ಇತ್ಯಾದಿ.

**ಉಷ್ಣಾಂಶದ ವಲಯಗಳು:** ಭೂ ಮೇಲ್ಮೈಯಲ್ಲಿ ಉಷ್ಣಾಂಶದ ಹಂಚಿಕೆಯು ಏಕ ರೀತಿಯಾಗಿಲ್ಲ. ಸೂರ್ಯಜನ್ಯಶಾಖದ ಆಧಾರದಿಂದ ಭೂಮಿಯನ್ನು ಮೂರು ಉಷ್ಣಾಂಶ ವಲಯಗಳಾಗಿ ವಿಂಗಡಿಸಬಹುದು. ಅವುಗಳೆಂದರೆ:

@KTBS NOT TO BE REPUBLISHED

**ಉಷ್ಣವಲಯ (Torrid Zone):** ಇದು ಹೆಚ್ಚು ಉಷ್ಣಾಂಶದ ವಲಯ. ಇದರಲ್ಲಿ ಸೌರಶಾಖ ಹೆಚ್ಚು. ಇದು $0^0$ ಅಕ್ಷಾಂಶ ಸಮಭಾಜಕ ವೃತ್ತದಿಂದ ಕರ್ಕಾಟಕ ಸಂಕ್ರಾಂತಿ ವೃತ್ತ ($23\frac{1}{2}^0$ ಉತ್ತರ) ಹಾಗೂ ಮಕರ ಸಂಕ್ರಾಂತಿ ವೃತ್ತದವರೆಗೆ ($23\frac{1}{2}^0$ ದಕ್ಷಿಣ) ವಿಸ್ತರಿಸಿದೆ. ಈ ವಲಯವು ಸೂರ್ಯನ ನೇರವಾದ ಕಿರಣಗಳನ್ನು ಪಡೆಯುವುದು.

**ಸಮಶೀತೋಷ್ಣವಲಯ (Temperate Zone):** ಈ ವಲಯದಲ್ಲಿ ಉಷ್ಣಾಂಶವು ಅತಿ ಹೆಚ್ಚು ಅಥವಾ ಅತಿಕಡಿಮೆಯಿರದೆ ಸಮತೋಲನವಾಗಿರುವುದು. ಇದು ಉತ್ತರಾರ್ಧಗೋಳದಲ್ಲಿ $23\frac{1}{2}^0$ ಉತ್ತರದಿಂದ, $66\frac{1}{2}^0$ ಉತ್ತರ (ಕರ್ಕಾಟಕ ಸಂಕ್ರಾಂತಿ ವೃತ್ತದಿಂದ ಆರ್ಕ್ಟಿಕ್ ವೃತ್ತ)ದವರೆಗೆ ಇರುವುದು. ಅದೇ ರೀತಿ ದಕ್ಷಿಣಾರ್ಧಗೋಳದಲ್ಲಿ $23\frac{1}{2}^0$ ದಕ್ಷಿಣದಿಂದ $66\frac{1}{2}^0$ ದಕ್ಷಿಣದವರೆಗೆ (ಮಕರ ಸಂಕ್ರಾಂತಿ ವೃತ್ತದಿಂದ ಅಂಟಾರ್ಕ್ಟಿಕ್ ವೃತ್ತ) ಇರುವುದು.

**ಶೀತವಲಯ (Frigid Zone):** ಇದು ಅತ್ಯಂತ ಶೀತಪ್ರದೇಶ. ಇದು $66\frac{1}{2}^0$ (ಆರ್ಕ್ಟಿಕ್ ವೃತ್ತ) ಉತ್ತರದಿಂದ $90^0$ ಉತ್ತರ ಧ್ರುವದವರೆಗೆ ಹಾಗೂ ದಕ್ಷಿಣಾರ್ಧಗೋಳದಲ್ಲಿ $66\frac{1}{2}^0$ ದಕ್ಷಿಣದಿಂದ (ಅಂಟಾರ್ಕ್ಟಿಕ್ ವೃತ್ತ) $90^0$ ದಕ್ಷಿಣ ಧ್ರುವದವರೆಗಿರುವುದು. ಈ ವಲಯದಲ್ಲಿ ಸೂರ್ಯನ ಕಿರಣಗಳು ಅತ್ಯಂತ ಓರೆಯಾಗಿ ಬೀಳುವುದರಿಂದ, ಉಷ್ಣಾಂಶ ಅತಿ ಕಡಿಮೆಯಿದೆ. ಇಲ್ಲಿ ಬೇಸಿಗೆಯಲ್ಲಿ ಉಷ್ಣಾಂಶ ಸ್ವಲ್ಪ ಹೆಚ್ಚಾಗುತ್ತದೆ ಮತ್ತು ಚಳಿಗಾಲದಲ್ಲಿ ಉಷ್ಣಾಂಶ ಕಡಿಮೆ ಇರುತ್ತದೆ.

**ಸಮೋಷ್ಣರೇಖೆ (Isotherm)**: ಒಂದೇ ಪ್ರಮಾಣದ ಉಷ್ಣಾಂಶವನ್ನು ಹೊಂದಿರುವ ಸ್ಥಳಗಳನ್ನು ಸೇರಿಸುವಂತೆ ಎಳೆಯಬಹುದಾದ ರೇಖೆಗಳೇ ಸಮೋಷ್ಣರೇಖೆಗಳು. ಇವುಗಳನ್ನು ಗೋಳ ಅಥವಾ ಭೂಪಟದ ಮೇಲೆ ಯಾವುದಾದರೊಂದು ಭಾಗದ ಉಷ್ಣಾಂಶದ ಹಂಚಿಕೆಯನ್ನು ತೋರಿಸಲು ಎಳೆಯಲಾಗುವುದು.

**ನಿಮಗಿದು ಗೊತ್ತೆ ?**

**ಅತೀ ಹೆಚ್ಚು ಹಾಗೂ ಅತಿ ಕಡಿಮೆ ಉಷ್ಣಾಂಶದ ಸ್ಥಳಗಳು**

1 ಆಫ್ರಿಕಾ ಖಂಡದ ಲಿಬಿಯಾ ದೇಶದಲ್ಲಿನ ಆಲ್‌ಅಜೀಜಿಯಾ ಪ್ರಪಂಚದಲ್ಲೇ ಅತಿಹೆಚ್ಚು ಉಷ್ಣಾಂಶವನ್ನು ದಾಖಲಿಸಿದೆ. (ಸರಾಸರಿ + $58^\circ$ ಸೆಂ) ಆದರೆ ರಷ್ಯಾದ ಸೈಬೀರಿಯಾ ಭಾಗದಲ್ಲಿರುವ ವರ್ಕೋಯನ್‌ಸ್ಕ್, ಭೂಭಾಗದಲ್ಲೇ (ಜನವಸತಿಯಿರುವ) ಅತಿಕಡಿಮೆ ಉಷ್ಣಾಂಶವನ್ನು ದಾಖಲಿಸಿದೆ. ( ಸರಾಸರಿ $-24^\circ$ ಸೆಂ).

2. ಭಾರತದಲ್ಲಿ ರಾಜಸ್ಥಾನದ ಗಂಗಾನಗರವು ಬೇಸಿಗೆಯಲ್ಲಿ ಅತ್ಯಂತ ಗರಿಷ್ಠ ಉಷ್ಣಾಂಶವನ್ನು ದಾಖಲಿಸಿದೆ.( ಸರಾಸರಿ $+54^\circ$ ಸೆಂ) ಮತ್ತು ಜಮ್ಮು ಕಾಶ್ಮೀರದ ಲೇಹ್ ಪ್ರದೇಶವು ಚಳಿಗಾಲದಲ್ಲಿ ಅತಿ ಕಡಿಮೆ ಉಷ್ಣಾಂಶ ದಾಖಲಿಸಿದೆ.(ಸರಾಸರಿ $-10^\circ$ ಸೆಂ).

3. ಅಂಟಾರ್ಕ್ಟಿಕ್‌ದಲ್ಲಿರುವ ವಸ್ಟೋಕ್ ಪ್ರದೇಶವನ್ನು ಪ್ರಪಂಚದ ಅತ್ಯಂತ ಶೀತ (ಸರಾಸರಿ $-89^\circ$ -ಸೆಂ) ಪ್ರದೇಶವೆಂದು ಪರಿಗಣಿಸಿದೆ.

© KTBS NOT TO BE REPUBLISHED

**ವಾಯುಮಂಡಲದ ಒತ್ತಡ**

ಗಾಳಿಯು ತೂಕವನ್ನು ಹೊಂದಿದ್ದು, ಭೂಮಿಯ ಮೇಲೆ ಒತ್ತಡವನ್ನುಂಟು ಮಾಡುವುದು. ಇದನ್ನೇ ವಾಯುಮಂಡಲದ ಒತ್ತಡ ಎನ್ನುವರು. ವಾಯುವಿನ ಒತ್ತಡವನ್ನು ಅಳೆಯಲು ಬಳಸುವ ಉಪಕರಣ ವಾಯುಭಾರಮಾಪಕ (Barometer). ಒತ್ತಡವನ್ನು ಮಿಲಿಬಾರ್ (mb) ಗಳಲ್ಲಿ ಅಳೆಯುವರು. ಸಮುದ್ರಮಟ್ಟದಲ್ಲಿ ವಾಯುಮಂಡಲದ ಸರಾಸರಿ ಒತ್ತಡ 1013.25 ಮಿಲಿಬಾರ್‌ಗಳಷ್ಟಿರುತ್ತದೆ. ವಾಯುಮಂಡಲದ ಒತ್ತಡವು ಉಷ್ಣಾಂಶ, ಭೂಮಿಯ ದೈನಂದಿನ ಚಲನೆ, ಸಮುದ್ರ ಮಟ್ಟದಿಂದ ಎತ್ತರ, ನೀರಾವಿ ಮೊದಲಾವುಗಳಿಂದ ಪ್ರಭಾವಿತವಾಗುವುದು. ಇವುಗಳಲ್ಲಿ ಉಷ್ಣಾಂಶವು ಅತಿಮುಖ್ಯವಾದುದು. ಉಷ್ಣಾಂಶವು ಹೆಚ್ಚಾಗಿರುವ ಪ್ರದೇಶಗಳಲ್ಲಿ ಒತ್ತಡವು ಕಡಿಮೆ ಇರುವುದು. ಇದಕ್ಕೆ ಕಾರಣ ಹೆಚ್ಚು ಉಷ್ಣಾಂಶದಿಂದ ವಾಯು ವಿಕಾಸ ಹೊಂದಿ ಒತ್ತಡವು ಕಡಿಮೆಯಾಗುವುದು. ಇದಕ್ಕೆ ಪ್ರತಿಯಾಗಿ ಕಡಿಮೆ ಉಷ್ಣಾಂಶ ಇರುವ ಪ್ರದೇಶಗಳಲ್ಲಿ ವಾಯುವು ಸಂಕುಚಿತಗೊಂಡು ಒತ್ತಡವು ಅಧಿಕವಾಗುವುದು. ಹೀಗೆ ಉಷ್ಣಾಂಶ ಮತ್ತು ಒತ್ತಡಗಳು ಪರಸ್ಪರ ತದ್ವಿರುದ್ಧ ಸಂಬಂಧವನ್ನು ಹೊಂದಿವೆ. ವಾಯುಮಂಡಲದ ಒತ್ತಡವು ಭೂಮೇಲ್ಮೈನಿಂದ ಎತ್ತರಕ್ಕೆ ಹೋದಂತೆ ಕಡಿಮೆಯಾಗುವುದು. ಈ ಇಳಿಕೆಯ ಪ್ರಮಾಣವು ಪ್ರತಿ 300 ಮಿ.ಗಳಿಗೆ 34 ಮಿಲಿಬಾರ್‌ಗಳಷ್ಟಿರುವುದು.

NOT TO BE REPUBLISHED @KTBS

**ಪ್ರಪಂಚದ ಮುಖ್ಯ ಒತ್ತಡ ಪಟ್ಟಿಗಳು**


ವಾಯುವಿನ ಒತ್ತಡವು ಪಟ್ಟಿಗಳ ರೂಪದಲ್ಲಿ ಹಂಚಿಕೆಯಾಗಿದ್ದು ಗೋಳದ ಮೇಲೆ ಒಟ್ಟು ಏಳು ಒತ್ತಡ ಪಟ್ಟಿಗಳಿವೆ. ಅವುಗಳೆಂದರೆ

1. ಸಮಭಾಜಕ ವೃತ್ತದ ಕಡಿಮೆ ಒತ್ತಡ ಪಟ್ಟಿ,
2. ಉತ್ತರ ಉಪಉಷ್ಣವಲಯದ ಅಧಿಕ ಒತ್ತಡ ಪಟ್ಟಿ
3. ದಕ್ಷಿಣ ಉಪ ಉಷ್ಣವಲಯದ ಅಧಿಕ ಒತ್ತಡ ಪಟ್ಟಿ
4. ಉತ್ತರ ಉಪಧ್ರುವೀಯ ಕಡಿಮೆ ಒತ್ತಡ ಪಟ್ಟಿ
5. ದಕ್ಷಿಣ ಉಪ ಧ್ರುವೀಯ ಕಡಿಮೆ ಒತ್ತಡ ಪಟ್ಟಿ.
6. ಉತ್ತರ ಧ್ರುವೀಯ ಅಧಿಕ ಒತ್ತಡ ಪಟ್ಟಿ.
7. ದಕ್ಷಿಣ ಧ್ರುವೀಯ ಅಧಿಕ ಒತ್ತಡ ಪಟ್ಟಿ.

**ಸಮಭಾಜಕ ವೃತ್ತದ ಕಡಿಮೆ ಒತ್ತಡ ಪಟ್ಟಿ:** ಇದು ಹೆಚ್ಚು ಉಷ್ಣಾಂಶದ ವಲಯವಾಗಿದ್ದು ಕಡಿಮೆ ಒತ್ತಡವನ್ನು ಹೊಂದಿದೆ. ಈ ಪಟ್ಟಿಯು ಸಮಭಾಜಕವೃತ್ತದಿಂದ $5^{0}$ ಉತ್ತರ ಮತ್ತು ದಕ್ಷಿಣ ಅಕ್ಷಾಂಶದವರೆಗೆ ಕಂಡು ಬರುವುದು. ಈ ಭಾಗವು ವರ್ಷವೆಲ್ಲಾ ಸೂರ್ಯನ ನೇರವಾದ ಕಿರಣಗಳನ್ನು ಪಡೆಯುವುದು. ಇದರಿಂದ ಗಾಳಿಯು ಹೆಚ್ಚು ಉಷ್ಣಾಂಶದಿಂದ ಕೂಡಿದ್ದು, ಬಿಸಿಯಾಗಿರುತ್ತದೆ ಹಾಗೂ ಅದರ ಚಲನೆ ಕಡಿಮೆಯಾಗಿರುತ್ತದೆ. ಈ ವಲಯವು ಪ್ರಶಾಂತವಾಗಿದ್ದು (calm) ಲಘುಮಾರುತಗಳಿರುವುದರಿಂದ ಇದನ್ನು ಶಾಂತವಲಯ (Doldrum) ಎಂದೂ ಕರೆಯುವರು. ಈ ಪ್ರದೇಶವನ್ನು ಅಂತರ ಉಷ್ಣ ಸಂಧಿವಲಯ (Inter Tropical Convergence Zone –ITCZ) ಎಂಬ ಹೆಸರಿನಲ್ಲೂ ಕರೆಯುವರು. ವಾಣಿಜ್ಯ ಮಾರುತಗಳು ಈ ವಲಯದಲ್ಲಿ ಬಂದು ಸಂಧಿಸುತ್ತವೆ.

**ಉಪ ಉಷ್ಣವಲಯದ ಅಧಿಕ ಒತ್ತಡ ಪಟ್ಟಿಗಳು :** ಈ ಪಟ್ಟಿಗಳು ಉತ್ತರ ಹಾಗೂ ದಕ್ಷಿಣಾ ಗೋಳಾರ್ಧಗಳೆರಡರಲ್ಲಿಯೂ $30^0$ ಯಿಂದ $35^0$ ಅಕ್ಷಾಂಶಗಳ ನಡುವೆ ಕಂಡು ಬರುತ್ತವೆ. ಇಲ್ಲಿ ಎರಡು ಉಪ–ಉಷ್ಣವಲಯದ ಅಧಿಕ ಒತ್ತಡ ಪಟ್ಟಿಗಳಿವೆ. **ಅ) ಉತ್ತರ ಉಪ–ಉಷ್ಣವಲಯದ ಅಧಿಕ ಒತ್ತಡ ಪಟ್ಟಿ:** ಈ ಪಟ್ಟಿಗಳು $30^0$ ಉ. ದಿಂದ $35^0$ ಉ. ಅಕ್ಷಾಂಶಗಳವರೆಗೆ ಕಂಡು ಬರುತ್ತವೆ. ಈ ವಲಯವನ್ನು ಅಶ್ವ ಅಕ್ಷಾಂಶಗಳೆಂದೂ ಸಹ ಕರೆಯುವರು. **ಬ) ದಕ್ಷಿಣ ಉಪ–ಉಷ್ಣವಲಯದ ಅಧಿಕ ಒತ್ತಡ ಪಟ್ಟಿ :** ಇದು $30^0$ ದಕ್ಷಿಣ ದಿಂದ ದಕ್ಷಿಣ $35^0$ ಅಕ್ಷಾಂಶಗಳವರೆಗೆ ಕಂಡುಬರುತ್ತವೆ.

**ಉಪ ಧ್ರುವೀಯ ಕಡಿಮೆ ಒತ್ತಡ ಪಟ್ಟಿಗಳು:** ಇವು $60^0$ ಯಿಂದ $65^0$ ಉತ್ತರ ಮತ್ತು ದಕ್ಷಿಣ ಅಕ್ಷಾಂಶಗಳ ನಡುವೆ ಕಂಡುಬರುತ್ತವೆ. ಭೂ ಗೋಳದ ಮೇಲೆ ಎರಡು ಉಪಧ್ರುವೀಯ ಕಡಿಮೆ ಒತ್ತಡ ಪಟ್ಟಿಗಳಿವೆ. ಅವುಗಳೆಂದರೆ **ಅ) ಉತ್ತರ ಉಪಧ್ರುವೀಯ ಕಡಿಮೆ ಒತ್ತಡ ಪಟ್ಟಿ,** ($60^0$ಉತ್ತರದಿಂದ $65^0$ ಉತ್ತರದವರೆಗೆ) **ಬ) ದಕ್ಷಿಣ ಉಪಧ್ರುವೀಯ ಕಡಿಮೆ ಒತ್ತಡ ಪಟ್ಟಿ.** ($60^0$ ದಕ್ಷಿಣದಿಂದ $65^0$ ದಕ್ಷಿಣದವರೆಗೆ) ಚಂಡ ಮಾರುತಗಳು ವಿಶೇಷವಾಗಿ ಚಳಿಗಾಲದಲ್ಲಿ ಕಂಡುಬರುತ್ತವೆ.




**ಪ್ರಪಂಚದ ಒತ್ತಡ ಪಟ್ಟಿಗಳು**

**ಧ್ರುವೀಯ ಅಧಿಕ ಒತ್ತಡ ಪಟ್ಟಿಗಳು:** ಈ ವಲಯವು ಎರಡೂ ಗೋಳಾರ್ಧಗಳಲ್ಲಿ $80^0$ ಯಿಂದ $90^0$ ಅಕ್ಷಾಂಶಗಳ ನಡುವೆ ಕಂಡುಬರುವುದು. ಇವು ಅತ್ಯಂತ ಶೀತವಾಗಿದ್ದು ಇದರಿಂದ ವರ್ಷವೆಲ್ಲಾ ಹೆಚ್ಚು ಒತ್ತಡದಿಂದ ಕೂಡಿರುತ್ತವೆ.


**ಸಮಭಾರ ರೇಖೆಗಳು (Isobars):** ಇವುಗಳನ್ನು ನಕ್ಷೆಯ ಮೇಲೆ ಒತ್ತಡದ ಹಂಚಿಕೆಯನ್ನು ತೋರಿಸಲು ಬಳಸುವರು. ಒಂದೇ ಪ್ರಮಾಣದ ಒತ್ತಡ ಹೊಂದಿರುವ ಸ್ಥಳಗಳನ್ನು ಸೇರಿಸುವಂತೆ ಎಳೆಯಬಹುದಾದ ರೇಖೆಗಳೇ ಸಮಭಾರರೇಖೆಗಳು.

## ಮಾರುತಗಳು


ಭೂಮಿಯ ಮೇಲ್ಮೈಗೆ ಸಮಾನಾಂತರವಾಗಿ ಚಲಿಸುವ ವಾಯುವನ್ನು 'ಮಾರುತ' ಗಳೆನ್ನುವರು. ಮಾರುತಗಳು ಭೂಮಿಯ ದೈನಂದಿನ ಚಲನೆ ಮತ್ತು ಒತ್ತಡದ ಹಂಚಿಕೆಯಲ್ಲಿ ಆಗುವ ವ್ಯತ್ಯಾಸಗಳಿಂದ ಉಂಟಾಗುತ್ತವೆ.

ವಾಯುವು ಯಾವ ದಿಕ್ಕಿನಿಂದ ಬೀಸುತ್ತದೆ ಎಂಬುದನ್ನು ತಿಳಿಯಲು 'ಪವನದಿಕ್ಸೂಚಿ' ಉಪಕರಣವನ್ನು ಬಳಸುವರು. ಇದೇ ರೀತಿಯಲ್ಲಿ ವಾಯುವಿನ ವೇಗವನ್ನು ಅಳೆಯಲು 'ಪವನವೇಗಮಾಪಕ' (Anemometer) ಉಪಕರಣವನ್ನು ಉಪಯೋಗಿಸುವರು.

@KTBS NOT TO BE REPUBLISHED




ಪವನ ದಿಕ್ಸೂಚಿ




ಪವನ ವೇಗ ಮಾಪಕ

**ಮಾರುತಗಳ ವಿಧಗಳು:** ಮಾರುತಗಳನ್ನು ನಾಲ್ಕು ಪ್ರಮುಖ ವಿಧಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ನಿರಂತರ ಮಾರುತಗಳು, ನಿಯತಕಾಲಿಕ ಮಾರುತಗಳು, ಸ್ಥಳೀಯ ಮಾರುತಗಳು, ಆವರ್ತ ಮತ್ತು ಪ್ರತ್ಯಾವರ್ತ ಮಾರುತಗಳು.

NOT TO BE REPUBLISHED ©KTBS

1. **ನಿರಂತರ ಮಾರುತಗಳು (Planetary Winds) :** ಇವುಗಳನ್ನು 'ನಿತ್ಯ ಮಾರುತ' ಅಥವಾ ಭೂಮಂಡಲಿಯ ಮಾರುತಗಳೆಂದೂ ಸಹ ಕರೆಯುವರು. ಇವುಗಳು ವರ್ಷದ ಎಲ್ಲಾ ಕಾಲದಲ್ಲಿಯೂ ಬಹುತೇಕ ಒಂದೇ ದಿಕ್ಕಿನಿಂದ ಬೀಸುತ್ತವೆ. ಈ ಮಾರುತಗಳು ವಾಯುಗುಣ ಬದಲಾವಣೆ, ಮರು ಭೂಮಿಗಳ ನಿರ್ಮಾಣ, ನೌಕಾಯಾನದ ಮಾರ್ಗ ಮೊದಲಾದವುಗಳ ಮೇಲೆ ಹೆಚ್ಚು ಪ್ರಭಾವವನ್ನು ಬೀರುತ್ತವೆ. ನಿತ್ಯಮಾರುತಗಳಲ್ಲಿ ಮೂರು ವಿಧಗಳಿದ್ದು ಅವುಗಳೆಂದರೆ ವಾಣಿಜ್ಯ ಮಾರುತಗಳು, ಪ್ರತಿ ವಾಣಿಜ್ಯ ಮಾರುತಗಳು ಹಾಗೂ ಧ್ರುವೀಯ ಮಾರುತಗಳು.

- **ವಾಣಿಜ್ಯ ಮಾರುತಗಳು (Trade Winds) :** ಇವುಗಳು ಉಪ ಉಷ್ಣವಲಯದ ಅಧಿಕ ಒತ್ತಡ ಪ್ರದೇಶದಿಂದ ಸಮಭಾಜಕ ವೃತ್ತದ ಕಡಿಮೆ ಒತ್ತಡ ಪ್ರದೇಶದ ಕಡೆಗೆ ಬೀಸುತ್ತವೆ. ಉತ್ತರಗೋಳಾರ್ಧದಲ್ಲಿ ಇವು ಈಶಾನ್ಯದಿಂದ ನೈರುತ್ಯ ದಿಕ್ಕಿನ ಕಡೆಗೆ ಹಾಗೂ ದಕ್ಷಿಣಗೋಳಾರ್ಧದಲ್ಲಿ ಆಗ್ನೇಯದಿಂದ ವಾಯವ್ಯ ದಿಕ್ಕಿನ ಕಡೆಗೆ ಬೀಸುತ್ತವೆ. ಇವುಗಳನ್ನು ಕ್ರಮವಾಗಿ ಈಶಾನ್ಯ ವಾಣಿಜ್ಯ ಮಾರುತಗಳು ಹಾಗೂ ಆಗ್ನೇಯ ವಾಣಿಜ್ಯ ಮಾರುತಗಳೆಂದು ಕರೆಯುವರು.




ನಿರಂತರ ಮಾರುತಗಳು

- **ಪ್ರತಿ ವಾಣಿಜ್ಯ ಮಾರುತಗಳು (Anti trade Winds)**: ಇವುಗಳನ್ನು ಪಶ್ಚಿಮದ ಮಾರುತಗಳೆಂತಲೂ ಕರೆಯುವರು. ಇವು ಉಪ ಉಷ್ಣವಲಯದ ಅಧಿಕ ಒತ್ತಡ ಪ್ರದೇಶದಿಂದ ಉಪಧ್ರುವೀಯ ಕಡಿಮೆ ಒತ್ತಡ

ಪ್ರದೇಶದ ಕಡೆಗೆ ಬೀಸುತ್ತವೆ. ಇವುಗಳ ದಿಕ್ಕು ಉತ್ತರಗೋಳಾರ್ಧದಲ್ಲಿ ನೈರುತ್ಯದಿಂದ ಈಶಾನ್ಯದ ಕಡೆಗಿದ್ದು, ದಕ್ಷಿಣಗೋಳಾರ್ಧದಲ್ಲಿ ವಾಯುವ್ಯದಿಂದ ಆಗ್ನೇಯದ ಕಡೆಗಿರುವುದು. ಈ ಮಾರುತಗಳು ದಕ್ಷಿಣಗೋಳಾರ್ಧ ಸಾಗರಗಳ ಮೇಲೆ ಅತ್ಯಂತ ಪ್ರಬಲವಾಗಿ ಬೀಸುತ್ತವೆ. ಅವುಗಳನ್ನು $40^0$ ದಕ್ಷಿಣ ಅಕ್ಷಾಂಶಗಳಲ್ಲಿ **'ನಾಲ್ವತ್ತರ ಅಬ್ಬರಗಾಳಿ',** $50^0$ ದಕ್ಷಿಣ ಅಕ್ಷಾಂಶಗಳಲ್ಲಿ **'ಐವತ್ತರ ಉಗ್ರಗಾಳಿ'** ಹಾಗೂ $60^0$ ದಕ್ಷಿಣ ಅಕ್ಷಾಂಶಗಳಲ್ಲಿ **'ಅರವತ್ತರ ಅರಚುವ ಗಾಳಿ'**ಗಳೆಂದು ಕರೆಯುವರು.

● **ಧ್ರುವೀಯ ಮಾರುತಗಳು (Polar Winds):** ಇವುಗಳನ್ನು ಪೂರ್ವದ ಮಾರುತಗಳು ಎಂದು ಕರೆಯುವರು. ಈ ಮಾರುತಗಳು ಧ್ರುವೀಯ ಅಧಿಕ ಒತ್ತಡ ವಲಯದಿಂದ ಉಪಧ್ರುವೀಯ ಕಡಿಮೆ ಒತ್ತಡ ವಲಯದ ಕಡೆಗೆ ಬೀಸುತ್ತವೆ. ಇವುಗಳು ಉತ್ತರಗೋಳಾರ್ಧದಲ್ಲಿ ಈಶಾನ್ಯ ದಿಕ್ಕಿನಿಂದ ನೈರುತ್ಯದ ಕಡೆಗೆ ಹಾಗೂ ದಕ್ಷಿಣಗೋಳಾರ್ಧದಲ್ಲಿ ಆಗ್ನೇಯದಿಕ್ಕಿನಿಂದ ವಾಯುವ್ಯದ ಕಡೆಗೆ ಬೀಸುವವು. ಇವುಗಳು ಶೀತವಾದ ಶುಷ್ಕ ಮಾರುತಗಳಾಗಿದ್ದು, ಧ್ರುವೀಯ ವಲಯದ ಹಿಮಚ್ಛಾದಿತ ಭಾಗಗಳಿಂದ ಬೀಸುತ್ತವೆ.

**2. ಋತುಮಾನ ಮಾರುತಗಳು (Seasonal Winds) :** ಇವುಗಳನ್ನು ನಿಯತಕಾಲಿಕ ಮಾರುತಗಳು, ಕ್ಲುಪ್ತ ಮಾರುತಗಳು ಎಂದೂ ಕರೆಯುವರು. ಇವುಗಳು ವರ್ಷದ ಬೇರೆ ಬೇರೆ ಋತುಗಳಲ್ಲಿ ತದ್ವಿರುದ್ಧ ದಿಕ್ಕಿನಿಂದ ಬೀಸುತ್ತವೆ. ಭಾರತದಲ್ಲಿ ಬೀಸುವ ಮಾನ್ಸೂನ್ ಮಾರುತಗಳು ನಿಯತಕಾಲಿಕ ಮಾರುತಗಳಿಗೆ ಉತ್ತಮ ಉದಾಹರಣೆಯಾಗಿವೆ. ಭಾರತದಲ್ಲಿ ಬೇಸಿಗೆಯಲ್ಲಿ ನೈರುತ್ಯ ಮಾನ್ಸೂನ್ ಮಾರುತಗಳು ನೈರುತ್ಯದಿಕ್ಕಿನಿಂದ ಈಶಾನ್ಯದ ಕಡೆಗೆ ಬೀಸುತ್ತವೆ. ಇವುಗಳು ಜೂನ್ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ ಬೀಸುತ್ತವೆ. ನಂತರ ಈಶಾನ್ಯದ ಮಾನ್ಸೂನ್ ಮಾರುತಗಳು ಸೆಪ್ಟೆಂಬರ್ ಅಂತ್ಯದಿಂದ ಡಿಸೆಂಬರ್ ಮಧ್ಯದವರೆಗೆ ಈಶಾನ್ಯದಿಂದ ನೈರುತ್ಯದ ಕಡೆಗೆ ಬೀಸುವುವು.

**3. ಸ್ಥಳಿಯ ಮಾರುತಗಳು (Local Winds) :** ನಿರಂತರ ನಿಯತಕಾಲಿಕ ಮಾರುತಗಳು ಸ್ಥಳೀಯ ಉಷ್ಣಾಂಶ ಒತ್ತಡ, ತೇವಾಂಶದಲ್ಲಿ ವ್ಯತ್ಯಾಸಗಳ ಪರಿಣಾಮವಾಗಿ ಸ್ಥಳೀಯ ಮಾರುತಗಳುಂಟಾಗುತ್ತವೆ. ಇವುಗಳು ಪರ್ವತಶ್ರೇಣಿಗಳು, ಕಣಿವೆಗಳು ಮತ್ತು ಇತರೆ ಎತ್ತರದ ಸ್ಥಳಗಳನ್ನು ಹಾದುಹೋಗುವುದರಿಂದ ಬದಲಾವಣೆಗೊಂಡು ವಾಯುಪ್ರವಾಹಗಳುಂಟಾಗುತ್ತವೆ. ಪ್ರಮುಖ ಸ್ಥಳೀಯ ಮಾರುತಗಳಾವುವೆಂದರೆ, ಭೂಗಾಳಿ, ಸಮುದ್ರಗಾಳಿ, ಪರ್ವತಗಾಳಿ, ಕಣಿವೆಗಾಳಿ ಮತ್ತು ಇತರೆ ಕೆಲವು ಮಾರುತಗಳನ್ನು ಭಾರತದಲ್ಲಿ 'ಲೂ' ಎಂದು, ಯು.ಎಸ್.ಎ.ಯಲ್ಲಿ ಚಿನೂಕ್ ಅಥವಾ ಹಿಮಭಕ್ಷಕ ಎಂದು, ಆಲ್ಪ್ಸ್‌ಪರ್ವತಗಳಲ್ಲಿ ಫೋಹ್ನ್ ಎಂದು, ಫ್ರಾನ್ಸ್‌ನಲ್ಲಿ ಮಿಸ್ಟ್ರಲ್ ಎಂದು, ಸಹರಾ ಮರುಭೂಮಿಯಲ್ಲಿ ಸಿರಾಕ್ಕೊ ಎಂದು, ಆಸ್ಟ್ರೇಲಿಯದಲ್ಲಿ ಬ್ರಿಕ್ ಫೀಲ್ಡರ್ ಎಂದು, ಅಂಟಾರ್ಕ್ಟಿಕಾದಲ್ಲಿ ಬ್ಲಿಜರ್ಡ್ ಎಂದು ಕರೆಯುತ್ತಾರೆ.

**4. ಆವರ್ತ ಮತ್ತು ಪ್ರತ್ಯಾವರ್ತ ಮಾರುತಗಳು (Cyclones and Anti Cyclones):** ಇವುಗಳು ಅನಿಶ್ಚಿತವಾಗಿ ಬೀಸುತ್ತವೆ. ಸಾಮಾನ್ಯವಾಗಿ ಒತ್ತಡದ ಹಂಚಿಕೆಯಲ್ಲಿನ ಅತಿಹೆಚ್ಚು ವ್ಯತ್ಯಾಸದ ಕಾರಣದಿಂದ ಇವು ಬೀಸಲಾರಂಬಿಸುತ್ತವೆ. ಇವುಗಳು ಬೀಸುವ ಅವಧಿ ಅಲ್ಪಕಾಲಿಕವಾದರೂ ಕೆಲವೊಮ್ಮೆ ಇವು ಅತ್ಯಂತ ಅಪಾಯಕಾರಿ ಮತ್ತು ವಿನಾಶಕಾರಿಯಾದವು.

**ಎ) ಆವರ್ತ ಮಾರುತಗಳು:** ಇವುಗಳನ್ನು ಸಾಮಾನ್ಯವಾಗಿ 'ಚಂಡಮಾರುತ' ಗಳೆಂದೂ ಸಹ ಕರೆಯುವರು. ಕೆಲವು ಸನ್ನಿವೇಶಗಳಲ್ಲಿ ಅತ್ಯಂತ ಕಡಿಮೆ ಒತ್ತಡ ಕೇಂದ್ರದ ಸುತ್ತಲೂ ಹೆಚ್ಚು ಒತ್ತಡ

©KTBS NOT TO BE REPUBLISHED

ಪರಿಸ್ಥಿತಿಯಿರುವುದು. ಇದರಿಂದ ಮಾರುತಗಳು ಹೆಚ್ಚು ಒತ್ತಡ ವಲಯದಿಂದ ಕಡಿಮೆ ಒತ್ತಡ ಕೇಂದ್ರದ ಕಡೆಗೆ ವೃತ್ತಾಕಾರವಾಗಿ ಬೀಸುತ್ತವೆ. ಇವುಗಳೇ ಆವರ್ತ ಮಾರುತಗಳು. ಉತ್ತರಗೋಳಾರ್ಧದಲ್ಲಿ ಆವರ್ತಮಾರುತಗಳು ಕಡಿಮೆ ಒತ್ತಡ ಕೇಂದ್ರದ ಸುತ್ತಲೂ ಗಡಿಯಾರದ ಮುಳ್ಳಿನ ಚಲನೆಯ ದಿಕ್ಕಿಗೆ ವಿರುದ್ದವಾಗಿ ಅಂದರೆ ಬಲದಿಂದ ಎಡಕ್ಕೆ ಬೀಸುತ್ತವೆ. ಇದಕ್ಕೆ ತದ್ವಿರುದ್ಧವಾಗಿ ದಕ್ಷಿಣಗೋಳಾರ್ಧದಲ್ಲಿ ಇವು ಗಡಿಯಾರದ ಮುಳ್ಳಿನ ಚಲನೆಗೆ ಅನುಗುಣವಾಗಿ ಅಂದರೆ ಎಡದಿಂದ ಬಲಕ್ಕೆ ಬೀಸುತ್ತದೆ. ಆವರ್ತ ಮಾರುತಗಳಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ:


● **ಉಷ್ಣವಲಯದ ಆವರ್ತ ಮಾರುತಗಳು:** ಇವುಗಳು ಉಷ್ಣವಲಯದಲ್ಲಿ ಮಾತ್ರ ಕಂಡುಬರುತ್ತವೆ. ಇವುಗಳು ಅತ್ಯಂತ ಪ್ರಬಲವಾಗಿದ್ದು ವಿಧ್ವಂಸಕಾರಿಯಾದವು.

● **ಸಮಶೀತೋಷ್ಣವಲಯದ ಆವರ್ತ ಮಾರುತಗಳು:** ಇವುಗಳು ಸಮಶೀತೋಷ್ಣವಲಯದಲ್ಲಿ ಕಂಡುಬರುತ್ತವೆ. ಉಷ್ಣವಲಯ ಆವರ್ತ ಮಾರುತಗಳಿಗೆ ಹೋಲಿಸಿದರೆ ಇವುಗಳು ಹೆಚ್ಚು ಪ್ರಬಲವಾದವುಗಳಲ್ಲ. ಇವುಗಳಿಂದ ಆಗುವ ಹಾನಿಯೂ ಸಹ ಕಡಿಮೆ.

ಆವರ್ತ ಮಾರುತಗಳನ್ನು ವಿವಿಧ ಪ್ರದೇಶಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುವರು. ಉದಾ: ಚೀನಾ ಮತ್ತು ಜಪಾನಿನಲ್ಲಿ– ಟೈಫೂನ್, ಅಮೆರಿಕ ಮತ್ತು ಮೆಕ್ಸಿಕೊ –ಹರಿಕೇನ್ ಅಸ್ಟ್ರೇಲಿಯಾ–ವಿಲ್ಲಿ ವಿಲ್ಲೀಸ್, ಭಾರತ–ಸೈಕ್ಲೋನ್, ರಷ್ಯಾ –ವಿರ್ಲ್‌ಪೂಲ್ ಇತ್ತೀಚಿನ ಕೆಲವು ವರ್ಷಗಳಲ್ಲಿ ಭಾರತವು ಕೆಲವು ಪ್ರಭಲವಾದ ಅವರ್ತ ಮಾರುತಗಳನ್ನು ದಾಖಲಿಸಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಬೋಲಾ, ನರ್ಗೀಸ್, ನಿಶಾ, ಐಲಾ, ಲೈಲಾ, ಬಿಜಲಿ, ಜಲ್ ಥೇಸ್ ಇತ್ಯಾದಿ.

**ಬಿ)ಪ್ರತ್ಯಾವರ್ತ ಮಾರುತಗಳು:** ಇವುಗಳಲ್ಲಿನ ಪರಿಸ್ಥಿತಿ ಆವರ್ತ ಮಾರುತಗಳಿಗೆ ತದ್ವಿರುದ್ಧ. ಪ್ರತ್ಯಾವರ್ತ ಮಾರುತಗಳು ತಮ್ಮ ಹೆಚ್ಚು ಒತ್ತಡ ಕೇಂದ್ರದಿಂದ ಕಡಿಮೆ ಒತ್ತಡದ ಸುತ್ತಲಿನ ಪ್ರದೇಶದ ಕಡೆಗೆ ಬೀಸುತ್ತವೆ. ಇದರಿಂದ ಸುತ್ತಮುತ್ತಲಿನ ಕಡೆಗೆ ಮಾರುತಗಳು ನಿಧಾನವಾಗಿ ಬೀಸುತ್ತವೆ. ಉತ್ತರಗೋಳಾರ್ಧದಲ್ಲಿ ಪ್ರತ್ಯಾವರ್ತ ಮಾರುತಗಳ ದಿಕ್ಕು ಗಡಿಯಾರದ ಮುಳ್ಳಿನ ದಿಕ್ಕಿಗೆ ಅನುಗುಣವಾಗಿರುವುದು. ಇದಕ್ಕೆ ಪ್ರತಿಯಾಗಿ ದಕ್ಷಿಣಗೋಳಾರ್ಧದಲ್ಲಿ ಇವುಗಳು ಗಡಿಯಾರದ ಮುಳ್ಳಿನ ದಿಕ್ಕಿಗೆ ವಿರುದ್ಧವಾಗಿ ಬಲದಿಂದ ಎಡಕ್ಕೆ ಬೀಸುತ್ತವೆ.

NOT TO BE REPUBLISHED ©KTBS





**ಆವರ್ತ ಮತ್ತು ಪ್ರತ್ಯಾವರ್ತ ಮಾರುತಗಳು**

**ಆರ್ದ್ರತೆ:** ವಾಯುವಿನಲ್ಲಿರುವ 'ನೀರಾವಿ' ಅಥವಾ ತೇವಾಂಶದ ಪ್ರಮಾಣವನ್ನು 'ಆರ್ದ್ರತೆ' ಎನ್ನುವರು. ಆರ್ದ್ರತೆಯನ್ನು ಅಳೆಯಲು ಆರ್ದ್ರತಾಮಾಪಕವನ್ನು ಉಪಯೋಗಿಸುವರು. (Hygrometer or Psychrometer)

**ವಿಧಗಳು:** ವಾಯುಮಂಡಲದಲ್ಲಿರುವ ಆರ್ದ್ರತೆಯ ಪ್ರಮಾಣವನ್ನು ವಿವಿಧ ರೀತಿಯಲ್ಲಿ ತಿಳಿಸಲಾಗುವುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಸಮಗ್ರ ಆರ್ದ್ರತೆ, ಸಾಪೇಕ್ಷ ಆರ್ದ್ರತೆ ಮತ್ತು ನಿರ್ದಿಷ್ಟ ಆರ್ದ್ರತೆ.

- **ಸಮಗ್ರ ಆರ್ದ್ರತೆ (Absolute humidity):** ಒಂದು ನಿರ್ದಿಷ್ಟ ಪ್ರಮಾಣದ ಗಾಳಿಯಲ್ಲಿರುವ ಒಟ್ಟು ತೇವಾಂಶವನ್ನು ಸಮಗ್ರ ಆರ್ದ್ರತೆಯೆಂದು ಕರೆಯುವರು. ಈ ರೀತಿಯ ತೇವಾಂಶದ ಅಳತೆ ಹೆಚ್ಚು ಉಪಯುಕ್ತವಲ್ಲ. ಏಕೆಂದರೆ ಇದರಲ್ಲಿ ಉಷ್ಣಾಂಶವನ್ನು ಪರಿಗಣಿಸುವುದಿಲ್ಲ.



ಮೋಡಗಳ ವಿಧಗಳು

- **ಸಾಪೇಕ್ಷ ಆರ್ದ್ರತೆ (Relative Humidity):** ಇದು ವಾಯು ಹೊಂದಿರುವ ತೇವಾಂಶ ಮತ್ತು ಆ ನಿರ್ದಿಷ್ಟ ಉಷ್ಣಾಂಶದ ಮಟ್ಟದಲ್ಲಿ ವಾಯುವು ಹಿಡಿದಿರಿಸಿಕೊಳ್ಳಬಹುದಾದ ಗರಿಷ್ಠ ಪ್ರಮಾಣದ ತೇವಾಂಶ ಇವುಗಳ ಅನುಪಾತವೇ ಸಾಪೇಕ್ಷ ಆರ್ದ್ರತೆಯಾಗಿದೆ. ಇದನ್ನು ಶೇಕಡಾವಾರು ರೀತಿಯಲ್ಲಿ ತಿಳಿಸಲಾಗುವುದು.

$$\text{ಸಾಪೇಕ್ಷ ಆರ್ದ್ರತೆ} = \frac{\text{ವಾಯುವಿನಲ್ಲಿರುವ ವಾಸ್ತವ ತೇವಾಂಶ}}{\text{ನಿರ್ದಿಷ್ಟ ಉಷ್ಣಾಂಶದಲ್ಲಿ ವಾಯು ಹೊಂದಬಹುದಾದ ಗರಿಷ್ಠ ತೇವಾಂಶ}} \times 100$$

- **ನಿರ್ದಿಷ್ಟ ಆರ್ದ್ರತೆ (Specific Humidity):** ನಿರ್ದಿಷ್ಠ ಪ್ರಮಾಣದ ವಾಯುವಿನಲ್ಲಿ ಕಂಡುಬರುವ ವಾಸ್ತವವಾದ ನೀರಾವಿಯ ಮೊತ್ತವಾಗಿದೆ.

## ಮೋಡಗಳು (Clouds)

ವಾಯುಮಂಡಲದ ಉಷ್ಣಾಂಶವು ಕಡಿಮೆಯಾದಾಗ, ಅದರಲ್ಲಿನ ಜಲಾಂಶವು ಘನೀಕರಣಗೊಂಡು ನಿರ್ಮಾಣವಾಗುವ ಸಣ್ಣ ಸಣ್ಣ ನೀರಿನಹನಿಗಳು ಅಥವಾ ಹಿಮಕಣಗಳ ರಾಶಿಯನ್ನು 'ಮೋಡ' ಗಳೆನ್ನುವರು. ಇವು ಭೂಮಿಯ ಮೇಲ್ಮೈನಿಂದ ಎತ್ತರದಲ್ಲಿರುತ್ತವೆ.

**ಮೋಡಗಳ ವಿಧಗಳು :** ಮೋಡಗಳನ್ನು ಅವುಗಳ ಆಕಾರ, ಎತ್ತರ ಮತ್ತು ಇತರ ಲಕ್ಷಣಗಳ ಆಧಾರದಿಂದ ಮೂರು ವಿಧಗಳಾಗಿ ವಿಂಗಡಿಸಬಹುದು. ಇವುಗಳೆಂದರೆ :

- **ಪದರು ಮೋಡಗಳು (Stratus Clouds):** ಇವುಗಳು ವಾಯುಮಂಡಲದಲ್ಲಿ ಅತ್ಯಂತ ಕೆಳಮಟ್ಟದಲ್ಲಿರುತ್ತವೆ. ಭೂಮಿಯ ಮೇಲ್ಮೈನಿಂದ 2.ಕಿ.ಮೀ. ಗಳಷ್ಟು ಎತ್ತರದವರೆಗೆ ಇವುಗಳು ಕಂಡು ಬರುತ್ತವೆ. ಇವು ತೆಳುವಾದ ಹಾಳೆ ಅಥವಾ ವಿಸ್ತಾರವಾದ ಪದರುಗಳಂತೆ ಕಾಣುತ್ತವೆ. ಪದರು ಮೋಡಗಳು ಉತ್ತಮ ಹವಾಮಾನಕ್ಕೆ ಸಹಕಾರಿಯಾಗಿದ್ದು ಅಲ್ಪ ಮಳೆಯನ್ನು ಸುರಿಸುತ್ತದೆ.

@KTBS NOT TO BE REPUBLISHED

● **ರಾಶಿ ಮೋಡಗಳು (Cumulus Clouds):** ರಾಶಿ ಮೋಡಗಳು ಊರ್ಧ್ವಮುಖವಾಗಿ ಬೆಳೆದಿದ್ದು ಇದರ ಮೇಲ್ಮೈ ಗೋಪುರಾ, ಬಾಗಿರುವುದರಿಂದ ಹೂಕೋಸಿನ ರಚನೆಯನ್ನು ಹೋಲುತ್ತದೆ. ಇವುಗಳು ಮಳೆತರುವ ಮೋಡಗಳಾಗಿವೆ. ಈ ಮೋಡಗಳು ಉಣ್ಣೆಯ ಗುಡ್ಡೆಯಂತೆ ಕಂಡು ಬರುವುದರಿಂದ ಇವುಗಳನ್ನು 'ಉಣ್ಣೆಯ ಗುಡ್ಡೆ' ಎಂತಲೂ ಕರೆಯುವರು. ಇವುಗಳು ಬಿಳಿಯ ಬಣ್ಣದಿಂದ ಕಪ್ಪು ಬಣ್ಣದವರೆಗೂ ಕಂಡು ಬರುತ್ತವೆ. ಇವುಗಳು ಸಂಪೂರಿತಗೊಂಡಾಗ ಮಳೆಯನ್ನು ನೀಡುತ್ತವೆ.

● **ಹಿಮಕಣ ಮೋಡಗಳು (Cirrus Clouds):** ಇವುಗಳು ವಾಯುಮಂಡಲದಲ್ಲಿ ಅತಿ ಹೆಚ್ಚು ಎತ್ತರದಲ್ಲಿ ಅಂದರೆ 6 ಕಿ.ಮೀ.ಗಳಿಗಿಂತ ಎತ್ತರದಲ್ಲಿರುತ್ತವೆ. ಈ ಮೋಡಗಳು 'ಗುಂಗುರುಕೂದಲ'ನ್ನು ಹೋಲುತ್ತಿದ್ದು ರೆಕ್ಕೆ ಅಥವಾ ನಾರನ್ನು ಹೊಂದಿರುವಂತೆ ಕಾಣುತ್ತವೆ. ಇದು ಹಿತಕರವಾದ ಹವಾಮಾನ ಸ್ಥಿತಿಯನ್ನು ಸೂಚಿಸುತ್ತದೆ ಹಾಗೂ ಈ ಮೋಡಗಳಲ್ಲಿ ಪ್ರಕಾಶಮಾನವಾಗಿ ಸೂರ್ಯ ಬೆಳಗುತ್ತಾನೆ. ಗಾಳಿಯಲ್ಲಿ ಈ ಮೋಡಗಳು ಹಿಂಜಿದ ಅರಳೆಯಂತೆ ತೇಲುತ್ತವೆ. ಇವುಗಳ ಜನಪ್ರಿಯ ಹೆಸರು 'ಕುದುರೆಬಾಲ'.


● **ರಾಶಿವೃಷ್ಟಿ ಮೋಡಗಳು (Nimbus) :** ಈ ಮೋಡಗಳು ಮಳೆತರುವ ಮೋಡಗಳಾಗಿದ್ದು ಕೆಳಮಟ್ಟದಲ್ಲಿರುತ್ತವೆ. ಈ ಮೋಡಗಳು ಪದರು ಅಥವಾ ರಾಶಿಮೋಡಗಳ ಆಕಾರದಲ್ಲಿರುತ್ತವೆ. ಇವು ಹೆಚ್ಚು ಮಳೆ ಮತ್ತು ಹಿಮಮಳೆಯನ್ನು ಸುರಿಸುತ್ತವೆ. ವೃಷ್ಟಿಪದರು ಮೋಡಗಳು ದಪ್ಪವಾಗಿದ್ದು ಅಧಿಕ ಮಳೆತರುವ ಮೋಡಗಳಾಗಿವೆ.

## ಮಳೆ (Rainfall)

ವಾಯುಮಂಡಲದಲ್ಲಿ ಜಲಾಂಶವು ಘನೀಕರಣಹೊಂದಿ ಭೂಮಿಯನ್ನು ತಲುಪುವ ನೀರಿನ ಹನಿಗಳನ್ನು 'ಮಳೆ' ಎಂದು ಕರೆಯುವರು. ಮಳೆಯ ಪ್ರಮಾಣವನ್ನು ಮಳೆಯ ಮಾಪಕದಿಂದ (Rain-guage) ಅಳೆಯುವರು. ಮಳೆಯ ಪ್ರಮಾಣವನ್ನು ಮೀ.ಮೀ. ಅಥವಾ ಅಂಗುಲಗಳಲ್ಲಿ ತಿಳಿಸುವರು.


**ಮಳೆಯ ವಿಧಗಳು:** ಮಳೆಯು ಮೂರು ರೀತಿಯಲ್ಲಿ ಉಂಟಾಗುವುದು, ಅವುಗಳೆಂದರೆ ಪರಿಸರಣ ಮಳೆ, ಪರ್ವತ ಮಳೆ ಮತ್ತು ಆವರ್ತ ಮಳೆ.

**ಪರಿಸರಣ ಮಳೆ: (Convectional Rainfall)** ವಾಯು ಮೇಲ್ಮುಖವಾಗಿ ಪ್ರಚಲನ ಪ್ರವಾಹಗಳ ರೂಪದಲ್ಲಿ ಮೇಲೆರುವುದರಿಂದ ಉಂಟಾಗುವ ಮಳೆಯನ್ನು 'ಪರಿಸರಣಮಳೆ' ಎಂದು ಕರೆಯುವರು. ಉಷ್ಣಾಂಶವು ಹೆಚ್ಚಾಗಿರುವ ಸನ್ನೀವೇಶಗಳಲ್ಲಿ ವಾಯು ಬಿಸಿಯಾಗಿ ಮೇಲ್ಮುಖವಾಗಿ ಚಲಿಸುವುದು. ಅನಂತರ ಸಾಕಷ್ಟು ಎತ್ತರವನ್ನು ತಲುಪಿ ತಂಪಾಗಿ ಅದರಲ್ಲಿರುವ ಜಲಾಂಶವು ಹನಿಗಳಾಗಿ ವಿಸರ್ಜನೆಗೊಳ್ಳುವ ಮೂಲಕ ಮಳೆ ಬೀಳುವುದು. ಇದೇ ಪರಿಸರಣ ಮಳೆ. ಈ ರೀತಿ ಮಳೆಯು ಸಮಭಾಜಕ ವೃತ್ತ ವಲಯದಲ್ಲಿ ಹಾಗೂ ಉಷ್ಣವಲಯದ ಭೂ ಭಾಗಗಳಲ್ಲಿ ಬೇಸಿಗೆಯಲ್ಲಿ ಸಾಮಾನ್ಯ. ಸಮಭಾಜಕ ವೃತ್ತ ಪ್ರದೇಶಗಳಲ್ಲಿ ಇದನ್ನು 'ಅಪರಾಹ್ನ ಮಳೆ', ಎನ್ನುವರು. ಇದು ಹೆಚ್ಚಾಗಿ ಗುಡುಗು ಮಿಂಚುಗಳಿಂದ ಕೂಡಿದ್ದು ಮಧ್ಯಾಹ್ನದ ನಂತರ ಉಂಟಾಗುತ್ತದೆ.



**ಪರಿಸರಣ ಮಳೆ**

©KTBS NOT TO BE REPUBLISHED




**ಪರ್ವತ ಮಳೆ**

**ಪರ್ವತ ಮಳೆ (Orographic Rainfall):** ಇದನ್ನು ಆರೋಹ ಮಳೆ ಹಾಗೂ ಭೂಸ್ವರೂಪ ಮಳೆ ಎಂದು ಸಹ ಕರೆಯುವರು. ತೇವಾಂಶವನ್ನು ಹೊಂದಿರುವ ವಾಯುವು ಅಡ್ಡಲಾಗಿರುವ ಪರ್ವತಗಳಿಂದ ತಡೆಯಲ್ಪಟ್ಟಾಗ ಅದು ಮೇಲೆರುವುದು. ಎತ್ತರಕ್ಕೆ ಏರಿದಂತೆ ಗಾಳಿಯು ತಂಪಾಗಿ ಅದರಲ್ಲಿರುವ ಜಲಾಂಶವು ಘನಿಕರೀಸಿ ಮಳೆ ಬೀಳುವುದು. ಹೀಗೆ ಪರ್ವತಗಳಿಂದ ಉಂಟಾಗುವ ಮಳೆಯೇ ಪರ್ವತ ಮಳೆ ಅಥವಾ ಆರೋಹ ಮಳೆ. ಮಳೆ ಮಾರುತಗಳಿಗೆ ಎದುರಾಗಿರುವ ಪರ್ವತ ಭಾಗವು ಹೆಚ್ಚು ಮಳೆಪಡೆಯುವುದು, ನಂತರ ಗಾಳಿಗೆ ಮರೆಯಾಗಿರುವ ಪರ್ವತದ ಮತ್ತೊಂದು ಭಾಗದಲ್ಲಿ ಗಾಳಿಯು ಕೆಳಗಿಳಿಯುವುದು. ಇದರಿಂದ ಪರ್ವತದ ಈ ಭಾಗದಲ್ಲಿ ಮಳೆ ಕಡಿಮೆ. ಇದನ್ನೇ ಮಳೆ ನೆರಳಿನ ಪ್ರದೇಶ (Rainshadow Region) ಎಂದು ಕರೆಯುವರು. ಉದಾ: ಮಂಗಳೂರು–ಗಾಳಿ ಎದುರಾಗಿರುವ ಭಾಗ, ಹಾಸನ– ಗಾಳಿಗೆ ಮರೆಯಾಗಿರುವ ಮಳೆನೆರಳಿನ ಪ್ರದೇಶ.

**ಆವರ್ತಮಳೆ (Cyclonic Rainfall):** ಉಷ್ಣವಲಯದ ಆವರ್ತ ಮಾರುತಗಳಲ್ಲಿ ಗಾಳಿಯು ವೃತ್ತಕಾರವಾಗಿ ಮೇಲೆರುವುದು. ಇದರಿಂದ ಗಾಳಿಯಲ್ಲಿರುವ ತೇವಾಂಶವು ಘನೀಭವಿಸಿ ಧಾರಾಕಾರವಾಗಿ ಮಳೆ ಸುರಿಯುವುದು. ಇದಕ್ಕೆ ಬದಲಾಗಿ ಸಮಶೀತೋಷ್ಣ ವಲಯದ ಆವರ್ತ ಮಾರುತಗಳಲ್ಲಿ ಹಗುರವಾದ ಉಷ್ಣ ವಾಯುರಾಶಿಯು ಭಾರವಾದ ಶೀತವಾಯು ರಾಶಿಯ ಮೇಲೆರುವುದು. ಉಷ್ಣವಾಯುರಾಶಿ ಸಾಕಷ್ಟು ಮೇಲೇರಿ ಜಲಾಂಶವು ಘನೀಭವಿಸಿ ಮಳೆ ಸುರಿಯುವುದು. ಉಷ್ಣ ಮತ್ತು ಶೀತವಾಯು ರಾಶಿಗಳ ನಡುವಿನ ವಲಯವನ್ನು 'ವಾಯುಮುಖ' (Front) ಎನ್ನುವರು. ಇದರಿಂದ ಸಮಶೀತೋಷ್ಣ ವಲಯದ ಆವರ್ತ ಮಾರುತಗಳ ಮಳೆಯನ್ನು 'ವಾಯು ಮುಖ ಮಳೆಯೆಂದು ಸಹ ಕರೆಯುವರು.

**ಮಳೆಯ ಹಂಚಿಕೆ :** ಭೂಮಿಯ ಮೇಲಿನ ಮಳೆಯ ಹಂಚಿಕೆಯು ಒಂದು ಪ್ರದೇಶದ ಸ್ಥಾನ ಮತ್ತು ವಾಯುಗುಣ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಪ್ರಪಂಚದಲ್ಲಿ ಅಧಿಕಮಳೆ ಪಡೆಯುವ ಬಹುಮುಖ್ಯವಾದ ಪ್ರದೇಶಗಳೆಂದರೆ ಸಮಭಾಜಕವೃತ್ತ ಪ್ರದೇಶ, ಉಪ ಉಷ್ಣವಲಯದ ಪೂರ್ವದ ಅಂಚಿನಭಾಗ, ಪಶ್ಚಿಮದ ಅಂಚಿನ $40^0$ ಮತ್ತು $60^0$ ಉತ್ತರ ಮತ್ತು ದಕ್ಷಿಣ ಅಕ್ಷಾಂಶಗಳ ಮಧ್ಯದ ಪ್ರದೇಶಗಳು ಹಾಗೂ ವಿರಳವಾಗಿ ಮಳೆ ಪಡೆಯುವ ಪ್ರದೇಶಗಳೆಂದರೆ, ಧ್ರುವ ಪ್ರದೇಶಗಳು, ಉಪ ಉಷ್ಣವಲಯದ ಪಶ್ಚಿಮಭಾಗ ಹಾಗೂ ಉಷ್ಣವಲಯ ಮತ್ತು ಸಮಶೀತೋಷ್ಣವಲಯದ ಮರುಭೂಮಿಗಳು.

**ನಿಮಗಿದು ಗೊತ್ತಿದೆಯೇ?**

1. ಭಾರತದ ಮೇಘಾಲಯ ರಾಜ್ಯದ ಮೌಸಿನ್ ರಾಂ ಒಂದು ವರ್ಷದಲ್ಲಿ 1140 ಸೆಂ.ಮೀ. ಗಳಷ್ಟು ಮಳೆಯನ್ನು ದಾಖಲಿಸಿದೆ. ಇದು ಭೂಮಿಯ ಅತ್ಯಂತ ತೇವಯುತ ಸ್ಥಳ.
2. ಕರ್ನಾಟಕದ ಆಗುಂಬೆಯನ್ನು 'ದಕ್ಷಿಣ ಭಾರತದ ಮೌಸಿನ್‌ರಾಂ' ಎನ್ನುವರು.
3. ಭಾರತದ ರಾಜಸ್ಥಾನದ ರೂಯ್ಲಿ ವರ್ಷದಲ್ಲಿ ಕೇವಲ 8 ಸೆಂ.ಮೀ ಮಾತ್ರ ಮಳೆ ಪಡೆಯುವುದು.
4. ಚಿತ್ರದುರ್ಗ ಜಿಲ್ಲೆಯ 'ನಾಯಕನಹಟ್ಟಿ' ಯು ಕರ್ನಾಟಕದ ಅತ್ಯಂತ ಒಣಪ್ರದೇಶವಾಗಿದೆ.
5. ಭೂಮಿಯ ಮೇಲೆ ಕಳೆದ 200 ವರ್ಷಗಳಿಂದ ಮಳೆ ಬಾರದಿರುವ ಪ್ರದೇಶವೆಂದರೆ ಚಿಲಿ ದೇಶದ ಅಟಕಾಮ ಮರುಭೂಮಿ.

©KTBS NOT TO BE REPUBLISHED

**ಹವಾಮಾನ ಮತ್ತು ವಾಯುಗುಣ (Weather and Climate):**

ಒಂದು ಸ್ಥಳದ ಅಲ್ಪಾವಧಿಯ ವಾಯುಮಂಡಲದ ಪರಿಸ್ಥಿತಿಯನ್ನು ಹವಾವಾನ ಎನ್ನುವರು. ಉದಾ: ಮೋಡಯುಕ್ತ ಪ್ರಖರ ಬಿಸಿಲು, ಶುಭ್ರ ಹವಾಮಾನ. ಹವಾಮಾನದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು 'ಪವನ ವಿಜ್ಞಾನ ಶಾಸ್ತ್ರ' (**Meteorology**) ಎನ್ನುವರು.

ಒಂದು ಪ್ರದೇಶದ ದೀರ್ಘಾವಧಿಯ ಹವಾಮಾನದ ಸರಾಸರಿಯನ್ನು ವಾಯುಗುಣವೆನ್ನುವರು. ಉದಾ: ಸಮಭಾಜಕ ವೃತ್ತದ ವಾಯುಗುಣ, ಟಂಡ್ರಾ ವಾಯುಗುಣ, ಮರುಭೂಮಿ ವಾಯುಗುಣ, ಮೆಡಿಟರೇನಿಯನ್ ವಾಯುಗುಣ ಮೊದಲಾದವು. ವಾಯುಗುಣದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು 'ವಾಯುಗುಣಶಾಸ್ತ್ರ' ಎನ್ನುವರು.

ಒಂದು ಪ್ರದೇಶದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳೆಂದರೆ ಅಕ್ಷಾಂಶ, ಸಮುದ್ರ ಮಟ್ಟದಿಂದ ಇರುವ ಎತ್ತರ, ಮಾರುತಗಳು, ಸಮುದ್ರದಿಂದ ಇರುವ ದೂರ, ಭೂಮಿ ಮತ್ತು ಜಲರಾಶಿಗಳ ಹಂಚಿಕೆ, ಸಾಗರ ಪ್ರವಾಹಗಳು ಇತ್ಯಾದಿ.

## ಅಭ್ಯಾಸಗಳು

**I ಬಿಟ್ಟಿರುವ ಸ್ಥಳವನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1 ವಾಯುಮಂಡಲದ ಎರಡು ಪ್ರಮುಖ ಅನಿಲಗಳೆಂದರೆ ________ ಮತ್ತು ___________ .

2 ವಾಯುಮಂಡಲದ ಅತ್ಯಂತ ಕೆಳಸ್ತರ __________ ಆಗಿದೆ.

3 ಸಮುದ್ರ ಮಟ್ಟದಲ್ಲಿ ವಾಯುಮಂಡಲದ ಸರಾಸರಿ ಒತ್ತಡವು ___________ ಆಗಿದೆ.

4 ಪಶ್ಚಿಮ ಮಾರುತಗಳನ್ನು ___________ ಎಂದೂ ಕರೆಯುತ್ತಾರೆ.

5 ಹವಾಮಾನದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಶಾಸ್ತ್ರ _______ ಆಗಿದೆ.

**II ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

6 ವಾಯುಗೋಳ ಎಂದರೇನು ?

7 ವಾಯುಗೋಳದ ಪ್ರಮುಖ ಪದರುಗಳನ್ನು ಹೆಸರಿಸಿ.

8 ಓಜೋನ್ ಪದರದ ಪ್ರಾಮುಖ್ಯತೆಯೇನು?

9 ಶಾಂತವಲಯ ಎಂದರೇನು? ಅದು ಎಲ್ಲಿ ಕಂಡುಬರುತ್ತದೆ.

10 ನಿರಂತರ ಮಾರುತಗಳ ವಿಧಗಳನ್ನು ಹೆಸರಿಸಿ.

11 ಸ್ಥಳೀಯ ಮಾರುತಗಳೆಂದರೇನು ? ಯಾವುದಾದರೂ ಎರಡು ಉದಾಹರಣೆ ಕೊಡಿ?

12 ಮೋಡಗಳ ವಿಧಗಳನ್ನು ತಿಳಿಸಿ

13 ಹವಾಗುಣ ಮತ್ತು ವಾಯುಗುಣಕ್ಕಿರುವ ವ್ಯತ್ಯಾಸಗಳೇನು?

© KTBS NOT TO BE REPUBLISHED

**III ಈ ಕೆಳಗಿನವುಗಳನ್ನು ಅರ್ಥೈಸಿ.**

14 ಆಯಾನವಲಯ

15 ಸಾಮಾನ್ಯ ಇಳಿಕೆಯದರ

16 ಶೀತವಲಯ

17 ಅಶ್ವಅಕ್ಷಾಂಶ

18 ಆರೋಹಮಳೆ (ಪರ್ವತಮಳೆ)

19 ವಾಯುಗುಣ ಶಾಸ್ತ್ರ

**IV ನೆನಪಿನಲ್ಲಿಡಬೇಕಾದ ಅಂಶಗಳು.**

20 ಸೂರ್ಯಜನ್ಯಶಾಖ

21 ಉಷ್ಣಾಂಶದ ವಿಪರ್ಯಯ

22 ಪವನವೇಗಮಾಪಕ

23 ನಾಲ್ವತ್ತರ ಅಬ್ಬರಗಾಳಿ

24 ವೃಷ್ಟಿಮೋಡಗಳು

25 ಪವನವಿಜ್ಞಾನ

**V ಚಟುವಟಿಕೆಗಳು.**

26 ಅಕ್ಷಾಂಶಗಳ ಆಧಾರದ ಮೇಲೆ ವಿವಿಧ ಉಷ್ಣಾಂಶವಲಯಗಳ ಚಿತ್ರ ಬರೆಯಿರಿ.

27 ಪ್ರಪಂಚದ ನಿರಂತರ ಮಾರುತಗಳ ಚಿತ್ರ ಬರೆದು ಗುರುತಿಸಿರಿ.

***

@KTBS NOT TO BE REPUBLISHED

# ಅರ್ಥಶಾಸ್ತ್ರ

## ಅಧ್ಯಾಯ-14

## ಅರ್ಥಶಾಸ್ತ್ರದ ಅರ್ಥ ಮತ್ತು ಮಹತ್ವ

T8R7I9

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಅರ್ಥಶಾಸ್ತ್ರದ ವ್ಯಾಪ್ತಿಯಲ್ಲಿ ಅನುಬೋಗಿಗಳು, ಮಾರಾಟಗಾರರು, ಸೇವಾ ಪೂರೈಕೆದಾರರು, ಉತ್ಪಾದಕರು, ಶ್ರಮಿಕರು, ಇವರುಗಳ ಪಾತ್ರವನ್ನು ಅರ್ಥೈಸಿಕೊಳ್ಳುವುದು.
- ಅರ್ಥಶಾಸ್ತ್ರದ ಅಧ್ಯಯನದ ಮಹತ್ವವನ್ನು ಅರಿಯುವುದು.
- ಆರ್ಥಿಕ ಚಟುವಟಿಕೆಗಳು, ಉತ್ಪಾದನೆ ಮತ್ತು ಉತ್ಪಾದನಾಂಗಗಳನ್ನು ಪರಿಚಯಿಸಿಕೊಳ್ಳುವುದು.

**ಅರ್ಥಶಾಸ್ತ್ರದ ಅರ್ಥ :**

ನಾವು ಪ್ರತಿದಿನ ಹಲವಾರು ರೀತಿಯ ಸರಕುಗಳನ್ನು ಮತ್ತು ಸೇವೆಗಳನ್ನು ಬಳಸುತ್ತೇವೆ. ಆ ಮೂಲಕ ನಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುತ್ತೇವೆ. ಊಟ ಮಾಡುತ್ತೇವೆ, ಬಟ್ಟೆ ತೊಡುತ್ತೇವೆ, ಪೆನ್ನು, ಪುಸ್ತಕ, ಬೈಸಿಕಲ್ಲು, ಟಿ.ವಿ, ಮೊಬೈಲು ಮುಂತಾದ ನಾನಾ ಬಗೆಯ ಸರಕುಗಳನ್ನು ಬಳಸುತ್ತೇವೆ. ಓದು-ಬರಹ ಕಲಿಯಲು ಶಿಕ್ಷಕರ ಸೇವೆಯನ್ನು, ಅನಾರೋಗ್ಯಕ್ಕೆ ತುತ್ತಾದಾಗ ವೈದ್ಯರ ಸೇವೆಯನ್ನು ಬಳಸಿಕೊಳ್ಳುತ್ತೇವೆ. ಇದೇ ರೀತಿಯಲ್ಲಿ ನಮ್ಮ ಸುತ್ತಮುತ್ತಲಿನ ಎಲ್ಲ ಜನರೂ ಈ ಬಗೆಯ ಸರಕುಗಳನ್ನು, ಸೇವೆಗಳನ್ನು ಬಳಸುತ್ತಾರೆ. ಇವರೆಲ್ಲರನ್ನು ಅನುಭೋಗಿಗಳು ಎಂದು ಕರೆಯಲಾಗುತ್ತದೆ.

ನಾವು ಬಳಸುವ ಬಹುತೇಕ ಸರಕುಗಳು ನಮಗೆ ಪುಕ್ಕಟೆ ದೊರೆಯುವುದಿಲ್ಲ. ಇವುಗಳನ್ನು ಹಣಕೊಟ್ಟು ಕೊಂಡು ತರಬೇಕಾಗುತ್ತದೆ. ಅನುಭೋಗಿಗಳಿಗೆ ಬೇಕಾದ ಸರಕುಗಳನ್ನು ಉತ್ಪಾದಕರಿಂದ ಪಡೆದು ಮಾರಾಟ ಮಾಡುವವರನ್ನು ಮಾರಾಟಗಾರರು ಎನ್ನುತ್ತಾರೆ.

ಕೃಷಿಕರು ಆಹಾರ ಧಾನ್ಯಗಳನ್ನು, ಹಣ್ಣು-ತರಕಾರಿಗಳನ್ನು ಬೆಳೆಯುತ್ತಾರೆ. ಚಮ್ಮಾರ ನಮಗೆ ಬೇಕಾದ ಚಪ್ಪಲಿಗಳನ್ನು ತಯಾರಿಸಿ ಕೊಡುತ್ತಾನೆ. ಚಿನಿವಾರ ಚಿನ್ನಾಭರಣಗಳನ್ನು ತಯಾರಿಸುತ್ತಾನೆ. ಟೈಲರ್ ನಮಗೆ ಬಟ್ಟೆ ಹೊಲಿದುಕೊಡುತ್ತಾನೆ. ಕಾರ್ಖಾನೆಗಳ ಮಾಲಿಕರು ನಾನಾ ಬಗೆಯ ಸರಕುಗಳನ್ನು ತಯಾರಿಸುತ್ತಾರೆ. ಇವರೆಲ್ಲರನ್ನೂ ಉತ್ಪಾದಕರು ಎನ್ನುತ್ತೇವೆ.

ಹೊಲಗದ್ದೆಗಳಲ್ಲಿ ಕೃಷಿ ಕಾರ್ಮಿಕರು, ಕಾರ್ಖಾನೆಗಳಲ್ಲಿ ಕಾರ್ಮಿಕರು, ಹೋಟೆಲ್, ವ್ಯಾಪಾರ-ವ್ಯವಹಾರ, ಮಾಹಿತಿತಂತ್ರಜ್ಞಾನದ ಕಂಪನಿಗಳು ಮುಂತಾದ ಕಡೆಗಳಲ್ಲಿ ನಾನಾ ಬಗೆಯ ಉದ್ಯೋಗಗಳಲ್ಲಿ ಜನರು ಕೂಲಿಗಾಗಿ ದುಡಿಯುತ್ತಾರೆ. ಇವರೆಲ್ಲರನ್ನು ಶ್ರಮಿಕರು ಎಂದು ಕರೆಯಲಾಗುತ್ತದೆ.

ಬಸ್ಸು, ಲಾರಿ, ರೈಲು, ದೋಣಿ, ಹಡಗು, ವಿಮಾನ ಮುಂತಾದ ಸಾರಿಗೆ ವಾಹನಗಳನ್ನು ಜನರು ಹಾಗೂ ಸರಕುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಲು ಬಳಸುತ್ತೇವೆ. ವಿದ್ಯುತ್ ಕಂಪನಿಯವರು ಜನರಿಗೆ ವಿದ್ಯುತ್ ಒದಗಿಸುತ್ತಾರೆ. ದೂರವಾಣಿ ಕಂಪನಿಯವರು ದೂರವಾಣಿ, ಮೊಬೈಲ್ ಮತ್ತು ಅಂತರ್ಜಾಲ ಸೇವೆಗಳನ್ನು ಒದಗಿಸುತ್ತಾರೆ. ಇದಕ್ಕಾಗಿ ಇವರಿಗೆ ಹಣ ಕೊಡಬೇಕಾಗುತ್ತದೆ. ಈ ರೀತಿಯ ಸೇವೆಗಳನ್ನು ಒದಗಿಸುವವರನ್ನು ಸೇವಾ ಪೂರೈಕೆದಾರರು ಎನ್ನುತ್ತೇವೆ.

© KTBS NOT TO BE REPUBLISHED

ಮೇಲಿನ ಎಲ್ಲ ಸಂದರ್ಭಗಳನ್ನು ಗಮನಿಸಿ. ಅನುಭೋಗಿಗಳು ತಮಗೆ ಬೇಕಾದ ಸರಕುಗಳು ಮತ್ತು ಸೇವೆಗಳನ್ನು ಹಣಕೊಟ್ಟು ಪಡೆದುಕೊಳ್ಳುತ್ತಾರೆ. ಮಾರಾಟಗಾರರು, ಉತ್ಪಾದಕರು, ಶ್ರಮಿಕರು ಮತ್ತು ಸೇವಾ ಪೂರೈಕೆದಾರರು ಲಾಭದಾಯಕ ವ್ಯವಹಾರಗಳನ್ನು ಮಾಡುತ್ತಾರೆ. ಹೀಗೆ ಮಾನವನು ಹಣ ಗಳಿಸಲು ಮತ್ತು ಹಣ ಬಳಸಲು ಮಾಡುವ ಎಲ್ಲ ಚಟುವಟಿಕೆಗಳು ಆರ್ಥಿಕ ಚಟುವಟಿಕೆಗಳೆನಿಸಿವೆ. ಮಾನವನ ದಿನ ನಿತ್ಯದ ಆರ್ಥಿಕ ಚಟುವಟಿಕೆಗಳನ್ನು ಕುರಿತು ಅಧ್ಯಯನ ಮಾಡುವ ಶಾಸ್ತ್ರವೇ ಅರ್ಥಶಾಸ್ತ್ರ.

ಭಾರತೀಯರು ಪ್ರಾಚೀನ ಕಾಲದಿಂದಲೂ ಮಾನವನ ಆರ್ಥಿಕ ಚಟುವಟಿಕೆಗಳ ಅಧ್ಯಯನಕ್ಕೆ ಸಾಕಷ್ಟು ಮಹತ್ವ ನೀಡಿದ್ದರು. ಮನುಸ್ಮೃತಿಯಲ್ಲಿ ಕೃಷಿ, ಕೈಗಾರಿಕೆ, ತೆರಿಗೆ, ಕಂದಾಯ ಮುಂತಾದ ಆರ್ಥಿಕ ಅಂಶಗಳ ಬಗ್ಗೆ ವಿವರವಾದ ಮಾಹಿತಿಗಳು ಸಿಗುತ್ತವೆ. ಮೌರ್ಯರ ಕಾಲದಲ್ಲಿದ್ದ ಕೌಟಿಲ್ಯನು ಅರ್ಥಶಾಸ್ತ್ರ ಎಂಬ ಪುಸ್ತಕವನ್ನು ರಚಿಸಿದ್ದಾನೆ. ಇದು ರಾಜ್ಯಾಡಳಿತದ ವಿವರಗಳ ಜೊತೆಗೆ ಹಣಕಾಸು ನಿರ್ವಹಣೆ ಹಾಗೂ ಸಾರ್ವಜನಿಕ ಅರ್ಥವ್ಯವಸ್ಥೆಯ ಬಗ್ಗೆ ವಿವರವಾದ ಮಾಹಿತಿ ಒದಗಿಸುತ್ತದೆ.

ಅರ್ಥಶಾಸ್ತ್ರ ಎಂಬ ಪದವನ್ನು ಇಂಗ್ಲಿಷ್ ಭಾಷೆಯ ಎಕನಾಮಿಕ್ಸ್ ಎಂಬ ಪದಕ್ಕೆ ಸಮಾನಾರ್ಥಕ ಶಬ್ಧವಾಗಿ ಬಳಸಲಾಗುತ್ತಿದೆ. ಎಕನಾಮಿಕ್ಸ್ ಪದವು ಗ್ರೀಕ್ ಭಾಷೆಯ ಓಕೊಸ್ ಮತ್ತು ನೊಮೊಸ್ ಎಂಬ ಎರಡು ಪದಗಳಿಂದಾಗಿದೆ. ಗ್ರೀಕ್ ಭಾಷೆಯಲ್ಲಿ ಓಕೊಸ್ ಎಂದರೆ ಗೃಹ ಎಂತಲೂ, ನೊಮೊಸ್ ಎಂದರೆ ನಿರ್ವಹಣೆ ಎಂತಲೂ ಅರ್ಥವಿದೆ. ಆದುದರಿಂದ ಸಂಪನ್ಮೂಲಗಳನ್ನು ಅತ್ಯುತ್ತಮವಾಗಿ ಬಳಸಿಕೊಂಡು, ಕುಟುಂಬದ ಎಲ್ಲ ಸದಸ್ಯರು ಸುಖ-ನೆಮ್ಮದಿಯಿಂದ ಬದುಕುವಂತೆ ನಿರ್ವಹಿಸುವುದು ಎಂದು ಅರ್ಥ. ಕಾಲಕ್ರಮೇಣ ಅರ್ಥಶಾಸ್ತ್ರದ ವ್ಯಾಪ್ತಿ ವಿಸ್ತರಣೆಗೊಂಡು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದವರೆಗೆ ವ್ಯಾಪಿಸಿದೆ.

ಅರ್ಥಶಾಸ್ತ್ರದ ಅಧ್ಯಯನದ ವಿಷಯವು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ. 18 ನೇ ಶತಮಾನದಲ್ಲಿದ್ದ ಅರ್ಥಶಾಸ್ತ್ರದ ಪಿತಾಮಹರೆನಿಸಿರುವ ಆಡಂಸ್ಮಿತ್‌ರವರು 'ಅರ್ಥಶಾಸ್ತ್ರವು ಸಂಪತ್ತನ್ನು ಕುರಿತು ಅಧ್ಯಯನ ಮಾಡುತ್ತದೆ' ಎಂದು ಹೇಳಿದ್ದಾರೆ.

**ಅರ್ಥಶಾಸ್ತ್ರದ ಅಧ್ಯಯನದ ಮಹತ್ವ**

ಮಾನವನ ಬಹುತೇಕ ಚಟುವಟಿಕೆಗಳ ಹಿಂದೆ ಆರ್ಥಿಕ ಅಂಶ ಅಡಗಿರುತ್ತದೆ. ಅರ್ಥಶಾಸ್ತ್ರ ನಮ್ಮ ಬದುಕಿಗೆ ಹಲವು ರೀತಿಯಲ್ಲಿ ಸಹಕಾರಿಯಾಗಿದೆ. ಪ್ರತಿಯೊಬ್ಬ ನಾಗರಿಕನಿಗೆ ಅರ್ಥಶಾಸ್ತ್ರದ ಜ್ಞಾನ ಇರಬೇಕಾಗುತ್ತದೆ. ಅರ್ಥಶಾಸ್ತ್ರದ ಅಧ್ಯಯನದ ಮಹತ್ವವನ್ನು ಈ ಕೆಳಕಂಡ ಅಂಶಗಳು ತಿಳಿಸಿಕೊಡುತ್ತವೆ.

- ಅರ್ಥಶಾಸ್ತ್ರವು ನಮ್ಮ ಸುತ್ತಮುತ್ತ ಕಂಡುಬರುವ ಬಡತನ, ನಿರುದ್ಯೋಗ, ಆರ್ಥಿಕ ಅಸಮಾನತೆ ಮುಂತಾದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳಿಗೆ ಪರಿಹಾರೋಪಾಯಗಳನ್ನು ಕಂಡುಹಿಡಿಯಲು ಸಹಾಯಮಾಡುತ್ತದೆ.
- ನಮ್ಮಲ್ಲಿರುವ ಮಿತವಾದ ಸಂಪನ್ಮೂಲಗಳಿಂದ ಅಮಿತವಾದ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಮುಂದಾದಾಗ ಆಯ್ಕೆಯ ಸಮಸ್ಯೆಗಳು ಎದುರಾಗುತ್ತವೆ. ಇಂತಹ ಸನ್ನಿವೇಶಗಳಲ್ಲಿ ಅರ್ಥಶಾಸ್ತ್ರ ಪರಿಹಾರಗಳನ್ನು ಒದಗಿಸುತ್ತದೆ.
- ಉತ್ಪಾದಕರು ಸರಕುಗಳು ಮತ್ತು ಸೇವೆಗಳನ್ನು ಉತ್ಪಾದಿಸಲು ಮುಂದಾದಾಗ, ಏನನ್ನು ಉತ್ಪಾದಿಸಬೇಕು ? ಹೇಗೆ ಉತ್ಪಾದಿಸಬೇಕು ? ಯಾರಿಗಾಗಿ ಉತ್ಪಾದಿಸಬೇಕು ? ಯಾವ ಬೆಲೆಯಲ್ಲಿ ಉತ್ಪಾದಿಸಬೇಕು ? ಎಂಬ ಮೂಲಭೂತ ಸಮಸ್ಯೆಗಳು ಎದುರಾಗುತ್ತವೆ. ಇಂತಹ ಸಂದರ್ಭಗಳಲ್ಲಿ ಅರ್ಥಶಾಸ್ತ್ರವು ಅವರಿಗೆ ಮಾರ್ಗದರ್ಶನ ಮಾಡುತ್ತದೆ.

NOT TO BE REPUBLISHED ©KTBS

- ಅರ್ಥಶಾಸ್ತ್ರವು ಬೆಲೆಗಳ ಏರಿಳಿತದ ಕಾರಣಗಳು ಮತ್ತು ಪರಿಣಾಮಗಳನ್ನು ಗುರುತಿಸಿ, ಬೆಲೆಗಳಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳಲು ಉಪಾಯಗಳನ್ನು ಸೂಚಿಸುತ್ತದೆ.
- ಭೂಮಿ, ನೀರು, ಅರಣ್ಯ, ಖನಿಜಗಳು ಮುಂತಾದ ನೈಸರ್ಗಿಕ ಸಂಪತ್ತುಗಳು ಮಿತವಾಗಿದ್ದು, ಅವುಗಳನ್ನು ಮಿತವಾಗಿ ಮತ್ತು ದಕ್ಷವಾಗಿ ಬಳಸಿಕೊಳ್ಳುವುದರ ಜೊತೆಗೆ ಈ ಸಂಪನ್ಮೂಲಗಳು ಮುಂದಿನ ಜನಾಂಗಗಳಿಗೂ ದೊರಕುವಂತೆ ಮಾಡಲು ಮಾರ್ಗಗಳನ್ನು ಸೂಚಿಸುತ್ತದೆ.

ಹೀಗೆ ಅರ್ಥಶಾಸ್ತ್ರವು ನಮ್ಮ ದಿನನಿತ್ಯದ ಬದುಕಿಗೆ ಸಹಾಯಕವಾಗಿದೆ. ಆದುದರಿಂದ ಅರ್ಥಶಾಸ್ತ್ರದ ಅಧ್ಯಯನವು ನಮಗೆ ಜ್ಞಾನದಾಯಕವಾಗಿದೆ ಅಲ್ಲದೆ ಲಾಭದಾಯಕವೂ ಆಗಿದೆ.

> ಅರ್ಥಶಾಸ್ತ್ರದ ಅಧ್ಯಯನವು ಕೇವಲ ಜ್ಞಾನದಾಯಕವಾಗಿರದೆ ಫಲದಾಯಕವೂ ಆಗಿದೆ.
>
> –ಎ.ಸಿ.ಪಿ ಗೂ

**ಆರ್ಥಿಕ ಚಟುವಟಿಕೆಗಳು**

> ಬಯಕೆಗಳೇ ಎಲ್ಲಾ ಆರ್ಥಿಕ ಚಟುವಟಿಕೆಗಳ ಮೂಲ

ಮಾನವನಲ್ಲಿ ಅಪರಿಮಿತವಾದ ಬಯಕೆಗಳಿವೆ ಎಂದು ಈಗಾಗಲೇ ತಿಳಿದಿದ್ದೇವೆ. ಈ ಬಯಕೆಗಳನ್ನು ತೃಪ್ತಿಪಡಿಸುವ ಶಕ್ತಿ ಸರಕು ಮತ್ತು ಸೇವೆಗಳಲ್ಲಿದೆ. ಇದನ್ನು ತುಷ್ಟೀಗುಣ ಎನ್ನುತ್ತೇವೆ. ಉದಾ: ನಮಗೆ ಹಸಿವಾದಾಗ ಊಟಮಾಡುತ್ತೇವೆ. ಊಟಕ್ಕೆ ನಮ್ಮ ಈ ಬಯಕೆಯನ್ನು ತೃಪ್ತಿಪಡಿಸುವ ಶಕ್ತಿಯಿದೆ. ಬಾಯಾರಿಕೆಯಾದಾಗ ನೀರು ಕುಡಿಯುವ ಬಯಕೆಯಾಗುತ್ತದೆ. ನೀರಿಗೆ ಬಾಯಾರಿಕೆಯನ್ನು ತೃಪ್ತಿಪಡಿಸುವ ಶಕ್ತಿಯಿದೆ.

©KTBS NOT TO BE REPUBLISHED

ನಾವು ದಿನನಿತ್ಯ ಬಳಸುವ ಬಹಳಷ್ಟು ಸರಕುಗಳು ಮತ್ತು ಸೇವೆಗಳು ಕೊರತೆಯಲ್ಲಿದ್ದು, ಅವು ನಮಗೆ ಪುಕ್ಕಟೆಯಾಗಿ ದೊರೆಯುವುದಿಲ್ಲ. ಅವುಗಳನ್ನು ಹಣಕೊಟ್ಟು ಕೊಳ್ಳಬೇಕಾಗುತ್ತದೆ. ಇಂತಹ ಸರಕು–ಸೇವೆಗಳನ್ನು ಆರ್ಥಿಕ ಸರಕು–ಸೇವೆಗಳು ಎನ್ನುತ್ತಾರೆ. ಹಾಗಾದರೆ ನಮಗೆ ಹಣ ಹೇಗೆ ದೊರೆಯುತ್ತದೆ? ನಾವು ಹಣ ಗಳಿಸಲು ಯಾವುದಾದರೊಂದು ಉದ್ಯೋಗವನ್ನು ಮಾಡಬೇಕಾಗುತ್ತದೆ. ಹೀಗೆ ಮಾನವನು ತನ್ನ ಶ್ರಮ ಮತ್ತು ಕೌಶಲ್ಯವನ್ನು ಬಳಸಿ ಹಣವನ್ನು ಗಳಿಸುತ್ತಾನೆ. ಆ ಹಣದಿಂದ ತನ್ನ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳುತ್ತಾನೆ. ಮಾನವನು ಹಣವನ್ನು ಹಾಗೂ ಸಂಪತ್ತನ್ನು ಗಳಿಸಲು ಆ ಮೂಲಕ ತನ್ನ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಅನೇಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾನೆ. ಇಂತಹ ಚಟುವಟಿಕೆಗಳನ್ನೇ ಆರ್ಥಿಕ ಚಟುವಟಿಕೆಗಳು ಎನ್ನುತ್ತೇವೆ.

ಆರ್ಥಿಕ ಚಟುವಟಿಕೆಗಳ ಬಹುಮುಖ್ಯ ಉದ್ದೇಶ ಮಾನವನ ಬಯಕೆಗಳನ್ನು ತೃಪ್ತಿಪಡಿಸುವುದಾಗಿದೆ. ಯಾವುದೇ ಸಮಾಜದಲ್ಲಿ ಆರ್ಥಿಕ ಚಟುವಟಿಕೆಗಳು ಕೆಲವು ನಿಯಮ ಮತ್ತು ಸಂಪ್ರದಾಯಗಳ ಚೌಕಟ್ಟಿನಲ್ಲಿ ನಡೆಯುತ್ತವೆ. ಮಾನವನ ಆರ್ಥಿಕ ಚಟುವಟಿಕೆಗಳನ್ನು ಮುಖ್ಯವಾಗಿ ನಾಲ್ಕು ಗುಂಪುಗಳನ್ನಾಗಿ ವರ್ಗೀಕರಿಸಬಹುದಾಗಿದೆ. ಅವುಗಳೆಂದರೆ:

**1. ಉತ್ಪಾದಕ ಚಟುವಟಿಕೆಗಳು :** ಸರಕು–ಸೇವೆಗಳನ್ನು ಉತ್ಪಾದಿಸಲು ಕೈಗೊಳ್ಳಲಾಗುವ ಚಟುವಟಿಕೆಗಳೇ ಉತ್ಪಾದಕ ಚಟುವಟಿಕೆಗಳು. ಉದಾ: ವ್ಯವಸಾಯ, ಪಶುಪಾಲನೆ, ಮೀನುಗಾರಿಕೆ, ಗಣಿಗಾರಿಕೆ, ಅರಣ್ಯ ಬೆಳೆಸುವುದು, ವಿವಿಧ ರೀತಿಯ ಕೈಗಾರಿಕೆಗಳು, ಸಾರಿಗೆ, ಸಂಪರ್ಕ ಇತ್ಯಾದಿ.

**2. ಅನುಭೋಗಿ ಚಟುವಟಿಕೆಗಳು :** ಸರಕುಗಳು ಮತ್ತು ಸೇವೆಗಳನ್ನು ಉತ್ಪಾದಿಸುವುದೇ ಅನುಭೋಗಕ್ಕಾಗಿ. ಮಾನವನು ಸರಕು–ಸೇವೆಗಳನ್ನು ಬಳಸಿಕೊಳ್ಳುವ ಮೂಲಕ ತನ್ನ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳುತ್ತಾನೆ. ಈ ಎಲ್ಲ ಚಟುವಟಿಕೆಗಳನ್ನು ಅನುಭೋಗಿ ಚಟುವಟಿಕೆಗಳು ಒಳಗೊಂಡಿವೆ.

**3. ವಿನಿಮಯ ಚಟುವಟಿಕೆಗಳು :** ಉತ್ಪಾದಕರು ಅನುಭೋಗಿಗಳಿಗಾಗಿ ಸರಕುಗಳನ್ನು ಉತ್ಪಾದಿಸುತ್ತಾರೆ. ಉತ್ಪಾದಕರು ಉತ್ಪಾದಿಸಿದ ಸರಕುಗಳನ್ನು ಅನುಭೋಗಿಗಳಿಗೆ ತಲುಪಿಸಲು ಮಾರಾಟದ ವ್ಯವಸ್ಥೆಯಿದೆ. ಇಲ್ಲಿ ಸರಕುಗಳ ಸಂಗ್ರಹಣೆ, ಸಾಗಾಟ ಹಾಗೂ ಮಾರುವ ಮತ್ತು ಕೊಳ್ಳುವ ಚಟುವಟಿಕೆಗಳು ನಡೆಯುತ್ತವೆ.

**4. ವಿತರಣೆ ಚಟುವಟಿಕೆಗಳು :** ಉತ್ಪಾದನೆಯಿಂದ ಬರುವ ಆದಾಯವನ್ನು ಉತ್ಪಾದನೆಗೆ ಸಹಾಯ ಮಾಡಿದ ಉತ್ಪಾದನಾಂಗಗಳಿಗೆ ಹಂಚಬೇಕಾಗುತ್ತದೆ. ಉತ್ಪಾದನಾಂಗಗಳ ಬೆಲೆಯನ್ನು ನಿರ್ಧರಿಸಲು ಕೈಗೊಳ್ಳುವ ಚಟುವಟಿಕೆಗಳನ್ನು ಇದು ಒಳಗೊಂಡಿದೆ. ಆದಾಯವು ಎಲ್ಲ ಜನರಲ್ಲಿ ನ್ಯಾಯೋಚಿತವಾಗಿ ಹಂಚಿಕೆಯಾಗುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ಮಾನವನು ದೈನಂದಿನ ಬದುಕಿನಲ್ಲಿ ಕೇವಲ ಆರ್ಥಿಕ ಚಟುವಟಿಕೆಗಳಲ್ಲಿ ಮಾತ್ರ ನಿರತನಾಗಿರುವುದಿಲ್ಲ. ಅವನು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ ಮುಂತಾದ ಹಲವಾರು ಆರ್ಥಿಕೇತರ ಚಟುವಟಿಕೆಗಳಲ್ಲೂ ತೊಡಗಿರುತ್ತಾನೆ. ಅನೇಕ ಆರ್ಥಿಕೇತರ ಚಟುವಟಿಕೆಗಳು ಕೆಲವು ವೇಳೆ ಆರ್ಥಿಕ ಚಟುವಟಿಕೆಗಳಾಗುತ್ತವೆ. ಉದಾಹರಣೆಗೆ ಶಿಕ್ಷಕನು ಮನೆಪಾಠವನ್ನು ಉಚಿತವಾಗಿ ಮಾಡಿದರೆ, ಅದು ಆರ್ಥಿಕೇತರ ಚಟುವಟಿಕೆಯಾಗುತ್ತದೆ. ಅದೇ ಶಿಕ್ಷಕ ಮನೆಪಾಠವನ್ನು ಹಣಕ್ಕಾಗಿ ಮಾಡಿದರೆ ಅದು ಆರ್ಥಿಕ ಚಟುವಟಿಕೆಯಾಗುತ್ತದೆ.

©KTBS NOT TO BE REPUBLISHED

## ಅಭ್ಯಾಸಗಳು

**I ಖಾಲಿ ಜಾಗಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1 ಅರ್ಥಶಾಸ್ತ್ರದ ಮೂಲ ಪದವು ಗ್ರೀಕ್ ಭಾಷೆಯ ________ ಮತ್ತು __________ ಎಂಬ ಎರಡು ಪದಗಳಿಂದಾಗಿದೆ.

2 ಮೌರ್ಯರ ಆಸ್ಥಾನದಲ್ಲಿದ್ದ ಕೌಟಿಲ್ಯನು ರಚಿಸಿದ ಗ್ರಂಥ ______________ .

3 ಸರಕು–ಸೇವೆಗಳಲ್ಲಿರುವ ಮಾನವನ ಬಯಕೆಗಳನ್ನು ತೃಪ್ತಿಪಡಿಸುವ ಗುಣಕ್ಕೆ ____________ ಎನ್ನುವರು.

4 ಹಣದ ಪ್ರತಿಫಲಕ್ಕಾಗಿ ಮಾಡುವ ದೈಹಿಕ ಮತ್ತು ಬೌದ್ಧಿಕ ಕೆಲಸಕ್ಕೆ __________ ಎಂದು ಕರೆಯುತ್ತಾರೆ.

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

5 ಅರ್ಥಶಾಸ್ತ್ರ ಎಂದರೇನು ?

6 ಅರ್ಥಶಾಸ್ತ್ರದ ಪಿತಾಮಹ ಎಂದು ಯಾರನ್ನು ಗುರುತಿಸಲಾಗಿದೆ ?

7 ಆರ್ಥಿಕ ಚಟುವಟಿಕೆಗಳು ಎಂದರೇನು ?

8 ವಿದ್ಯಾರ್ಥಿಯೊಬ್ಬ ಪೆನ್ನು ಕೊಂಡು ಬಳಸುತ್ತಾನೆ. ಇದು ಯಾವ ಬಗೆಯ ಆರ್ಥಿಕ ಚಟುವಟಿಕೆ ?

## III ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ.

9 ಮಾನವನ ಆರ್ಥಿಕ ಚಟುವಟಿಕೆಗಳಾವುವು ?

10 ಅರ್ಥಶಾಸ್ತ್ರವನ್ನು ನಾವೇಕೆ ಅಧ್ಯಯನ ಮಾಡಬೇಕು ?

11 ಕಾಲದಿಂದ ಕಾಲಕ್ಕೆ ಅರ್ಥಶಾಸ್ತ್ರದ ಅರ್ಥ ಹೇಗೆ ಬದಲಾಗಿದೆ ?

## IV ಚಟುವಟಿಕೆಗಳು :

12 ನಿಮ್ಮ ಕುಟುಂಬದ ಸದಸ್ಯರು ಕೈಗೊಂಡಿರುವ ಆರ್ಥಿಕ ಚಟುವಟಿಕೆಗಳನ್ನು ಪಟ್ಟಿಮಾಡಿರಿ.

13 ನಿಮ್ಮ ಸುತ್ತಮುತ್ತಲಿನ ಅಥವಾ ನಿಮ್ಮ ಗ್ರಾಮದಲ್ಲಿನ ಜನರು ಮಾಡುತ್ತಿರುವ ವಿವಿಧ ಆರ್ಥಿಕ ಚಟುವಟಿಕೆಗಳನ್ನು ಗುರುತಿಸಿ.

14 ಪ್ರತಿದಿನ ನೀವು ಅನುಭೋಗಿಸುವ ವಸ್ತುಗಳನ್ನು ಪಟ್ಟಿಮಾಡಿರಿ.

15 ರೈತರು ತಮ್ಮ ಜಮೀನಿನಲ್ಲಿ ಯಾವ ಬೆಳೆ ಬೆಳೆಯಬೇಕೆಂಬುದನ್ನು ಹೇಗೆ ನಿರ್ಧರಿಸುತ್ತಾರೆಂಬುದನ್ನು ಗಮನಿಸಿ.

✲ ✲ ✲

@KTBS
NOT TO BE REPUBLISHED

# ವ್ಯವಹಾರ ಅಧ್ಯಯನ

## ಅಧ್ಯಾಯ–15

## ವ್ಯವಹಾರ –ಅರ್ಥ ಮತ್ತು ಪ್ರಾಮುಖ್ಯತೆ

A8V5J5

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ವ್ಯವಹಾರದ ಉದ್ದೇಶಗಳನ್ನು ಅರ್ಥೈಸಿಕೊಳ್ಳುವುದು.
- ವ್ಯಾಪಾರದ ವಿಭಾಗಗಳಾದ, ದೇಶೀಯ ವ್ಯಾಪಾರ, ವಿದೇಶೀ ವ್ಯಾಪಾರ ಮತ್ತು ಪುನರ್‌ರಪ್ತು ವ್ಯಾಪಾರಗಳ ಅರ್ಥ ವಿಧಗಳು, ಹಾಗೂ ಮಹತ್ವ ತಿಳಿಯುವುದು.
- ಗೃಹ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳ ಉತ್ಪಾದನಾ ಕಾರ್ಯ ಇವುಗಳ ಸಮಸ್ಯೆಗಳನ್ನು ತಿಳಿಯುವುದು.
- ವ್ಯವಹಾರದ ನೀತಿ ತತ್ವಗಳನ್ನು ಗುರುತಿಸುವುದು.

©KTBS NOT TO BE REPUBLISHED

ವ್ಯವಹಾರವು ಒಂದು ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಇದು ಮುಖ್ಯವಾಗಿ ವಸ್ತುಗಳ ಉತ್ಪಾದನೆ ಮತ್ತು ಸೇವೆಗಳನ್ನು ಗ್ರಾಹಕರಿಗೆ ಪೂರೈಸುವುದೇ ಆಗಿದೆ.

ವ್ಯವಹಾರವು ಮುಖ್ಯವಾಗಿ ಎರಡು ಉದ್ದೇಶಗಳಿಂದ ಕೂಡಿದೆ. ಯಾವುವೆಂದರೆ :

(1) ಆರ್ಥಿಕ ಉದ್ದೇಶಗಳು (2) ಸಾಮಾಜಿಕ ಉದ್ದೇಶಗಳು

**1. ಆರ್ಥಿಕ ಉದ್ದೇಶಗಳು:** ನಾವು ಸಾಮಾನ್ಯವಾಗಿ ವ್ಯವಹಾರದ ಮುಖ್ಯ ಉದ್ದೇಶ ಲಾಭಗಳಿಸುವುದೇ ಆಗಿದೆ ಎಂದುಕೊಂಡಿದ್ದೇವೆ. ಆದರೆ ವ್ಯವಹಾರದ ಉದ್ದೇಶ ಒಂದು ನ್ಯಾಯಯುಕ್ತ ಲಾಭಗಳಿಕೆಯಾಗಿದ್ದು ಇದು ವ್ಯವಹಾರವು ಸಮರ್ಪಕವಾಗಿ ನಡೆಯಲು ಸಾಕಾಗುವ ವೆಚ್ಚವನ್ನು ಭರಿಸಿ ವ್ಯವಹಾರಸ್ಥನು ಸುಖಮಯ ಜೀವನ ಸಾಗಿಸುವಷ್ಟಿರಬೇಕು. ವ್ಯವಹಾರವು ವಸ್ತುಗಳನ್ನು ಮತ್ತು ಸೇವೆಗಳನ್ನು ಗ್ರಾಹಕರಿಗೆ ಪೂರೈಸುತ್ತದೆ ಮತ್ತು ಗ್ರಾಹಕರನ್ನು ಸೃಷ್ಟಿಸುತ್ತದೆ. ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸುತ್ತದೆ. ಗ್ರಾಹಕರಿಗೆ ಕಾಲಕಾಲಕ್ಕೆ ಬೇಕಾದ ಹೊಸ ಹೊಸ ಬದಲಾವಣೆಗಳಿಗನುಸಾರವಾಗಿ ವಸ್ತುಗಳನ್ನು ಉತ್ಪಾದಿಸಿ ಪೂರೈಸುತ್ತದೆ. ಹೊಸ ಹೊಸ ಸಂಶೋಧನೆಗಳ ಮೂಲಕ ಉತ್ಪಾದನೆಯಲ್ಲಿ ಬದಲಾವಣೆಗಳನ್ನು ತರುತ್ತದೆ. ಹೊಸ ಉತ್ಪಾದನೆಗಳ ಬಗ್ಗೆ ಗ್ರಾಹಕರಿಗೆ ಜಾಹಿರಾತಿನ ಮೂಲಕ ತಿಳಿಸುತ್ತದೆ.

**2. ಸಾಮಾಜಿಕ ಉದ್ದೇಶಗಳು:** ವ್ಯವಹಾರವು ದೇಶದ ಪ್ರಗತಿಗೆ ಬೇಕಾದ ವಸ್ತುಗಳನ್ನು ಉತ್ಪಾದಿಸುತ್ತದೆ ಮತ್ತು ಒದಗಿಸುತ್ತದೆ. ಅನೇಕ ಜನರಿಗೆ ಉದ್ಯೋಗಗಳನ್ನು ಕಲ್ಪಿಸಿ ಅವರಿಗೆ ಸಂಬಳ ಅಥವಾ ಮಜೂರಿಗಳ ಮೂಲಕ ವರಮಾನ ಕೊಟ್ಟು ಅವರ ಜೀವನ ಮಟ್ಟ ಸುಧಾರಿಸಲು ಸಹಾಯ ಮಾಡುತ್ತದೆ. ಕರ ಮತ್ತು ತೆರಿಗೆಗಳನ್ನು ಪಾವತಿ ಮಾಡುವುದರ ಮೂಲಕ ಸರ್ಕಾರದ ಆದಾಯ ಹೆಚ್ಚಿಸಿ ರಾಷ್ಟ್ರದ ಅಭಿವೃದ್ಧಿಗೆ ಸಹಾಯ ಮಾಡುತ್ತದೆ. ಶಾಲಾ ಕಾಲೇಜುಗಳನ್ನು, ಆಸ್ಪತ್ರೆಗಳನ್ನು, ಸಮುದಾಯ ಭವನಗಳನ್ನು ಪ್ರಾರಂಭಿಸಿ ಅವುಗಳನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತದೆ. ಉದ್ಯಾನವನ, ಕ್ರೀಡಾಂಗಣಗಳ ನಿರ್ವಹಣೆ ಮುಂತಾದವುಗಳ ಮೂಲಕ ಸಮಾಜ ಕಲ್ಯಾಣಕ್ಕಾಗಿ ಶ್ರಮಿಸುತ್ತದೆ.

**ವ್ಯಾಪಾರ, ಕೈಗಾರಿಕೆ ಮತ್ತು ಸೇವೆಗಳು:** ವ್ಯಾಪಾರವು ವಾಣಿಜ್ಯದ ಒಂದು ಭಾಗವಾಗಿದೆ. ಸರಕುಗಳನ್ನು ಕೊಳ್ಳುವುದು ಮತ್ತು ಗ್ರಾಹಕರಿಗೆ ಮಾರುವುದನ್ನು ವ್ಯಾಪಾರವೆನ್ನುತ್ತೇವೆ.

ಈ ವ್ಯಾಪಾರವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು.

ಅವು ಯಾವುವೆಂದರೆ: (1) ಆಂತರಿಕ ಅಥವಾ ದೇಶೀಯ ವ್ಯಾಪಾರ

(2) ವಿದೇಶ ಅಥವಾ ಅಂತಾರಾಷ್ಟ್ರೀಯ ವ್ಯಾಪಾರ

(3) ಪುನರ್ ರಫ್ತು ವ್ಯಾಪಾರ (Entrepot Trade)

**1. ಆಂತರಿಕ ಅಥವಾ ದೇಶೀಯ ವ್ಯಾಪಾರ:** ಒಂದು ದೇಶದ ಎಲ್ಲೆಗಳ ಒಳಗಡೆ ನಡೆಯುವ ವ್ಯಾಪಾರವನ್ನು ಆಂತರಿಕ ವ್ಯಾಪಾರವೆನ್ನುತ್ತೇವೆ. ಈ ವ್ಯಾಪಾರವು ಚಿಲ್ಲರೆ ಮಾರಾಟಗಾರರು ಮತ್ತು ಸಗಟು ವ್ಯಾಪಾರಿಗಳಿಂದ ನಡೆಯುತ್ತದೆ.

**ಚಿಲ್ಲರೆ ಮಾರಾಟಗಾರರು:** ಇವರು ಸಾಮಾನ್ಯವಾಗಿ ಗ್ರಾಹಕರು ನೆಲೆಸಿರುವ ಜಾಗಗಳಲ್ಲಿ ತಮ್ಮ ವ್ಯಾಪಾರ ನಡೆಸುತ್ತಾರೆ. ಇವರು ಸಗಟು ವ್ಯಾಪಾರಿಗಳಿಂದ ದೊಡ್ಡ ಪ್ರಮಾಣದಲ್ಲಿ ಸರಕುಗಳನ್ನು ಕೊಂಡು ಸಣ್ಣ ಪ್ರಮಾಣದಲ್ಲಿ ಗ್ರಾಹಕರಿಗೆ ಮಾರುತ್ತಾರೆ. ಇವರಿಂದ ನಮಗೆ ಅನೇಕ ಉಪಯೋಗಗಳಿವೆ. ಅವುಗಳು ಯಾವುವೆಂದರೆ, ಚಿಲ್ಲರೆ ವ್ಯಾಪಾರಿಗಳು ವಸ್ತುಗಳ ವಿತರಣೆಯ ಕೊನೆಯ ಕೊಂಡಿಯಾಗಿದ್ದಾರೆ, ಬೇರೆ ಬೇರೆ ಉತ್ಪಾದಕರಿಂದ ಉತ್ಪಾದನೆಯಾಗುವ ವಸ್ತುಗಳನ್ನು ಸಗಟು ವ್ಯಾಪಾರಿಗಳಿಂದ ಕೊಂಡು ಗ್ರಾಹಕರಿಗೆ ಒದಗಿಸುತ್ತಾರೆ. ಅನೇಕ ಸಾರಿ ಉಂಟಾಗುವ ವ್ಯಾಪಾರ ನಷ್ಟಗಳನ್ನು ತಾವೇ ಭರಿಸುತ್ತಾರೆ, ವಸ್ತುಗಳನ್ನು ಅವುಗಳ ಪ್ರಮಾಣಕ್ಕನುಗುಣವಾಗಿ ವಿಂಗಡಿಸಿ ಗ್ರಾಹಕರ ಇಷ್ಟದಂತೆ ಅವರಿಗೆ ಒದಗಿಸುತ್ತಾರೆ, ಗ್ರಾಹಕರಿಗೆ ಸಾಲ ಸೌಲಭ್ಯಗಳನ್ನು ಕೊಡುತ್ತಾರೆ. ಮಾರುಕಟ್ಟೆಗೆ ಹೊಸದಾಗಿ ಬಂದ ವಸ್ತುಗಳ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡುತ್ತಾರೆ ಮತ್ತು ಯಾವುದೇ ಒಂದು ನಿರ್ದಿಷ್ಟ ವಸ್ತು ದೊರೆಯದಿದ್ದಲ್ಲಿ ಪರ್ಯಾಯ ವಸ್ತುಗಳ ಬಗ್ಗೆ ತಿಳಿಸುತ್ತಾರೆ. ಈ ಚಿಲ್ಲರೆ ವ್ಯಾಪಾರವು ಬೇರೆ ಬೇರೆ ರೀತಿಗಳಲ್ಲಿ ನಡೆಯುತ್ತದೆ. ಅವುಗಳಲ್ಲಿ ಮುಖ್ಯವಾದವು ಯಾವುವೆಂದರೆ, ಖಾಯಂ ಅಂಗಡಿಗಳು ಮತ್ತು ಸಂಚಾರಿ ವ್ಯಾಪಾರಿಗಳು.

**ಖಾಯಂ ಅಂಗಡಿಗಳು:** ಇವರು ಒಂದು ನಿರ್ದಿಷ್ಟ ಜಾಗದಲ್ಲಿ ಅಂಗಡಿಗಳನ್ನು ತೆರೆದು ವಸ್ತುಗಳನ್ನು ಮಾರುತ್ತಾರೆ. (ವ್ಯಾಪಾರಿಗಳನ್ನು ವರ್ತಕರೆಂದೂ ಕರೆಯುವ ರೂಢಿ ಇದೆ)

© KTBS NOT TO BE REPUBLISHED



**ಖಾಯಂ ಅಂಗಡಿಗಳು**


**ಸಂಚಾರಿ ವ್ಯಾಪಾರಿಗಳು:** ಇವರು ಒಂದು ನಿರ್ದಿಷ್ಟ ಜಾಗದಲ್ಲಿ ವ್ಯಾಪಾರ ಮಾಡುವುದಿಲ್ಲ. ಇವರಲ್ಲಿ ಮುಖ್ಯವಾದವೆಂದರೆ. ತಲೆಹೊರೆ ವ್ಯಾಪಾರಿಗಳು, ತಳ್ಳುಗಾಡಿ ವ್ಯಾಪಾರಿಗಳು, ರಸ್ತೆ ಬದಿ ವ್ಯಾಪಾರಿಗಳು (ಮಾರುಕಟ್ಟೆ ವ್ಯಾಪಾರಿಗಳು) ಮತ್ತು ಸಂತೆ ವ್ಯಾಪಾರಿಗಳು.

**ತಲೆಹೊರೆ ವ್ಯಾಪಾರಿಗಳು:** ಇವರು ಸರಕುಗಳನ್ನು ತಲೆಯ ಮೇಲೆ ಹೊತ್ತು ಬೀದಿ ಬೀದಿಗಳಲ್ಲಿ ಸುತ್ತಿ ಮನೆ ಬಾಗಿಲುಗಳಿಗೆ ಬಂದು ಸರಕುಗಳನ್ನು ಮಾರುತ್ತಾರೆ. ಇವರು ಸಾಮಾನ್ಯವಾಗಿ ಒಂದೇ ರೀತಿಯ ಸರಕುಗಳನ್ನು ಮಾರುತ್ತಾರೆ. ಉದಾ: ತರಕಾರಿ ಮಾರುವವರು, ಹೂ ಮಾರುವವರು.



**ತಲೆಹೊರೆ ವ್ಯಾಪಾರಿ**


© KTBS
NOT TO BE REPUBLISHED



**ತಳ್ಳುಗಾಡಿ ವ್ಯಾಪಾರಿ**


**ತಳ್ಳುಗಾಡಿ ವ್ಯಾಪಾರಿಗಳು:** ಇವರು ಅನೇಕ ಸರಕುಗಳನ್ನು ತಳ್ಳು ಗಾಡಿಗಳಲ್ಲಿ ತುಂಬಿ ಬೀದಿ ಬೀದಿಗಳಲ್ಲಿ ಸುತ್ತಿ ಮನೆ ಬಾಗಿಲುಗಳಿಗೆ ಬಂದು ಸರಕುಗಳನ್ನು ಮಾರುತ್ತಾರೆ.

**ರಸ್ತೆ ಬದಿ ವ್ಯಾಪಾರಿಗಳು:** ಇವರು ಹೆಚ್ಚು ಜನಜಂಗುಳಿ ಇರುವ ಬೀದಿಗಳ ಮೂಲೆಗಳಲ್ಲಿ ಅಥವಾ ರಸ್ತೆ ಬದಿಗಳಲ್ಲಿ ತಮ್ಮ ಸರಕುಗಳನ್ನು ಹರಡಿಕೊಂಡು ವ್ಯಾಪಾರ ಮಾಡುತ್ತಾರೆ.



**ರಸ್ತೆ ಬದಿ ವ್ಯಾಪಾರಿ**

**ಸಂತೆ ವ್ಯಾಪಾರಿಗಳು:** ಕೆಲವು ಊರುಗಳಲ್ಲಿ ವಾರಕ್ಕೊಮ್ಮೆ ಸಂತೆ ನಡೆಯುತ್ತದೆ. ವಿವಿಧ ವಸ್ತುಗಳ ವ್ಯಾಪಾರಿಗಳು ತಮ್ಮ ವಸ್ತುಗಳನ್ನು ಸಂತೆಗಳಿಗೆ ಕೊಂಡೊಯ್ದು ಅಲ್ಲಿಗೆ ಬರುವ ಸುತ್ತ ಮುತ್ತಲಿನ ಗ್ರಾಮಗಳ ಜನರಿಗೆ ವಸ್ತುಗಳನ್ನು ಮಾರುತ್ತಾರೆ. ಇಲ್ಲಿನ ಮತ್ತೊಂದು ವೈಶಿಷ್ಟ್ಯವೇನೆಂದರೆ ಗ್ರಾಮಗಳ ಜನರು ತಾವು ಬೆಳೆದ ಅಥವಾ ಉತ್ಪಾದಿಸಿದ ವಸ್ತುಗಳನ್ನು ಸಂತೆಗಳಿಗೆ ಕೊಂಡೊಯ್ದು ಮಾರುತ್ತಾರೆ. ಉದಾ:– ತರಕಾರಿ, ಮೊಟ್ಟೆ, ಬೆಣ್ಣೆ, ತುಪ್ಪ, ಕಬ್ಬಿಣದ ಉಪಕರಣಗಳು, ಬುಟ್ಟಿಗಳು, ಕಂಬಳಿ ಮುಂತಾದವು. ಇವುಗಳಿಂದ ಬಂದ ಹಣದಿಂದ ತಮಗೆ ಬೇಕಾದ ವಸ್ತುಗಳನ್ನು ಕೊಳ್ಳುತ್ತಾರೆ. ಇದಲ್ಲದೆ ಕೆಲವು ಊರುಗಳಲ್ಲಿ ವರ್ಷಕ್ಕೊಮ್ಮೆ ಜಾತ್ರೆಗಳು ನಡೆಯುತ್ತವೆ. ಅಲ್ಲಿಯೂ ಕೂಡ ವಸ್ತುಗಳ ಮಾರಾಟಗಾರರು ಬಂದು ತಮ್ಮ ವಸ್ತುಗಳನ್ನು ಗ್ರಾಹಕರಿಗೆ ಮಾರುತ್ತಾರೆ.



**ಸಂತೆ ವ್ಯಾಪಾರಿಗಳು**

@KTBS NOT TO BE REPUBLISHED

**ಸಗಟು ವ್ಯಾಪಾರ: (Whole Sale Trade)** ಈ ವ್ಯಾಪಾರದಲ್ಲಿ ವ್ಯಾಪಾರಿಗಳು ಸರಕುಗಳನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಕರಿಂದ ಕೊಂಡು, ಸಣ್ಣ ಪ್ರಮಾಣದಲ್ಲಿ ಚಿಲ್ಲರೆ ವ್ಯಾಪಾರಿಗಳಿಗೆ ಮಾರುತ್ತಾರೆ. ಸಗಟು ವ್ಯಾಪಾರಿಗಳು ಯಾವುದಾದರು ಒಂದು ಅಥವಾ ಎರಡು ಬಗೆಯ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ಇವರು ಚಿಲ್ಲರೆ ವ್ಯಾಪಾರಿಗಳಿಗೆ ಅನೇಕ ರೀತಿಗಳಲ್ಲಿ ಸಹಾಯ ಮಾಡುತ್ತಾರೆ. ಸಣ್ಣ ಪ್ರಮಾಣದಲ್ಲಿ ಕಾಲಕಾಲಕ್ಕೆ ತಕ್ಕಂತೆ ಸರಕುಗಳನ್ನು ಒದಗಿಸುವುದೇ ಅಲ್ಲದೆ ಅವರಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತಾರೆ. ಅವರ ಪರವಾಗಿ ಜಾಹಿರಾತು ಮಾಡುತ್ತಾರೆ. ಮಾರುಕಟ್ಟೆಯ ವಿವರಗಳನ್ನು ಕೊಡುತ್ತಾರೆ. ಹೆಚ್ಚು ಲಾಭದ ಪ್ರಮಾಣ ಇಟ್ಟಿರುವುದಿಲ್ಲ. ಉತ್ಪಾದಕರಿಗೂ ಕೂಡ ಮಾರುಕಟ್ಟೆಯ ವಿವರಗಳನ್ನು, ಬೆಲೆಯ ಏರಿಳಿತಗಳನ್ನು, ಗ್ರಾಹಕರ ಇಷ್ಟಗಳನ್ನು ತಿಳಿಸುತ್ತಾರೆ. ಉತ್ಪಾದಕರ ಪರವಾಗಿಯೂ ಕೂಡ ಜಾಹಿರಾತು ಮಾಡುತ್ತಾರೆ ಮತ್ತು ಉತ್ಪಾದನಾ ವಸ್ತುಗಳನ್ನು ಶೇಖರಿಸಿಟ್ಟುಕೊಳ್ಳಲು ಸಹಾಯ ಮಾಡುತ್ತಾರೆ.

**ವಿದೇಶ ವ್ಯಾಪಾರ:** ಎರಡು ದೇಶಗಳ ನಡುವೆ ನಡೆಯುವ ವ್ಯಾಪಾರವನ್ನು ವಿದೇಶ ವ್ಯಾಪಾರವೆನ್ನುತ್ತೇವೆ. ವಿದೇಶಿ ವ್ಯಾಪಾರವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಯಾವುವೆಂದರೆ, ಆಮದು ರಫ್ತು ಮತ್ತು ಪುನರ್ ರಫ್ತು.

- **ಆಮದು:** ಒಂದು ದೇಶವು ತನ್ನ ಬಳಕೆಗಾಗಿ ಬೇರೆ ದೇಶಗಳಿಂದ ಸರಕುಗಳನ್ನು ಕೊಂಡರೆ ಅದನ್ನು ಆಮದು ಎನ್ನುತ್ತೇವೆ.
- **ರಫ್ತು:** ಒಂದು ದೇಶವು ಬೇರೆ ದೇಶಗಳಿಗೆ ಆ ದೇಶಗಳ ಬಳಕೆಗಾಗಿ ವಸ್ತುಗಳನ್ನು ಮಾರಿದರೆ ಅದನ್ನು ರಫ್ತು ಎನ್ನುತ್ತೇವೆ.
- **ಪುನರ್ ರಫ್ತು:** ಕೆಲವು ದೇಶಗಳು ಬೇರೆ ದೇಶಗಳಿಂದ ವಸ್ತುಗಳನ್ನು ಕೊಂಡು ಅವನ್ನು ಮತ್ತೊಂದು ದೇಶಕ್ಕೆ ಮಾರುತ್ತಾರೆ ಅದನ್ನು ಪುನರ್‌ರಫ್ತು ಎನ್ನುತ್ತೇವೆ. ಉದಾಃ– ಸಿಂಗಾಪುರ, ಮಧ್ಯ ಏಷ್ಯದ ಕೆಲವು ದೇಶಗಳು. ಇತ್ತೀಚೆಗೆ ಪ್ರಪಂಚದ ಅನೇಕ ದೇಶಗಳು ಈ ರೀತಿಯ ವ್ಯಾಪಾರ ಮಾಡುತ್ತಿವೆ.

**ವಿದೇಶಿ ವ್ಯಾಪಾರದ ಅವಶ್ಯಕತೆ**

ಪ್ರಪಂಚದ ಯಾವುದೇ ದೇಶವಾಗಲಿ ಎಲ್ಲ ಸಂಪನ್ಮೂಲಗಳಲ್ಲೂ ಸ್ವಯಂಪೂರ್ಣತೆ ಹೊಂದಿಲ್ಲ. ಕೆಲವು ದೇಶಗಳಲ್ಲಿ ಕೆಲವು ಸಂಪನ್ಮೂಲಗಳು ಹೇರಳವಾಗಿ ದೊರೆಯುತ್ತವೆ. ಆ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಕೆಲವೇ ವಸ್ತುಗಳನ್ನು ಅಧಿಕವಾಗಿ ಉತ್ಪಾದನೆ ಮಾಡುತ್ತಾರೆ. ದೇಶದ ಬೇಡಿಕೆಯು ಮುಗಿದ ಬಳಿಕ ಉಳಿದ ವಸ್ತುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡುತ್ತಾರೆ. ಹಾಗೆಯೇ ಯಾವ ದೇಶಗಳಲ್ಲಿ ಸಂಪನ್ಮೂಲಗಳ ಅಭಾವವಿದೆಯೋ ಆ ದೇಶಗಳು ತಮಗೆ ಅಭಾವವಿರುವ ವಸ್ತುಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಾರೆ. ಇದರಿಂದಾಗಿ ಪ್ರತಿದೇಶಕ್ಕೂ ವಿದೇಶ ವ್ಯಾಪಾರದ ಅವಶ್ಯಕತೆ ಇದೆ ಹಾಗೂ ಇದು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಅವಶ್ಯಕತೆ ಪಡೆದಿದೆ. ವಿದೇಶಿ ವ್ಯಾಪಾರವು ದೇಶಗಳ ಪರಸ್ಪರ ಸೌಹಾರ್ದಯುತ ಸಂಬಂಧ ಸಹಾಯ ಮಾಡುತ್ತದೆ.

**ಕೈಗಾರಿಕೆ: (ಉದ್ಯಮಗಳು)** ಕೈಗಾರಿಕೆಯು ಒಂದು ಆರ್ಥಿಕ ಚಟುವಟಿಕೆಯಾಗಿದೆ. ಕೈಗಾರಿಕೆ ವಸ್ತುಗಳ ಉತ್ಪಾದನೆ, ಖನಿಜಗಳನ್ನು ತೆಗೆಯುವುದು ಮತ್ತು ಕೆಲವು ಸೇವೆಗಳನ್ನು ಒದಗಿಸುವ ಚಟುವಟಿಕೆಗಳನ್ನು ಹೊಂದಿದೆ. ಕೈಗಾರಿಕೆಗಳನ್ನು ಪ್ರಾಥಮಿಕ ಉದ್ಯಮಗಳು ಮತ್ತು ದ್ವಿತೀಯಕ ಉದ್ಯಮಗಳೆಂದು ಎರಡು ಭಾಗಗಳಾಗಿ ವಿಂಗಡಿಸಬಹುದು. (ಕೈಗಾರಿಕೆಗಳನ್ನು ಉದ್ಯಮಗಳೆಂದೂ ಕರೆಯುತ್ತಾರೆ.)

**ಕೈಗಾರಿಕೆ**

- ಪ್ರಾಥಮಿಕ ಉದ್ಯಮಗಳು
  - ತಳಿ ವೈಜ್ಞಾನಿಕ ಉದ್ಯಮಗಳು (Genetic)
  - ಗಣಿ ಉದ್ಯಮಗಳು (Extractive)
- ದ್ವಿತೀಯಕ ಉದ್ಯಮಗಳು
  - ಉತ್ಪಾದಕ ಉದ್ಯಮಗಳು (Manufacturing)
  - ನಿರ್ಮಾಣ ಉದ್ಯಮಗಳು Constructive)

**ಪ್ರಾಥಮಿಕ ಉದ್ಯಮಗಳು:** ಈ ಉದ್ಯಮಗಳು ನಿಸರ್ಗದ ನೆರವಿನಿಂದ ವಸ್ತುಗಳನ್ನು ಉತ್ಪಾದಿಸುತ್ತವೆ. ಉದಾ: ಕೃಷಿ, ಮೀನುಗಾರಿಕೆ, ಹೈನುಗಾರಿಕೆ, ಗಣಿಗಾರಿಕೆ ಮುಂತಾದವು. ಈ ಉದ್ಯಮಗಳನ್ನು ತಳಿವೈಜ್ಞಾನಿಕ (Genetic) ಮತ್ತು ಕಚ್ಚಾವಸ್ತುಗಳನ್ನು ಹೊರತೆಗೆಯುವ ಗಣಿ ಉದ್ಯಮಗಳೆಂದು ವಿಭಾಗಿಸಬಹುದು.

@KTBS NOT TO BE REPUBLISHED

**(ಅ) ತಳಿ ವೈಜ್ಞಾನಿಕ ಉದ್ಯಮಗಳು:** ಈ ಉದ್ಯಮ ಕೆಲವು ವಿಧದ ಧಾನ್ಯಗಳು, ಸಸ್ಯಗಳು ಹಾಗೂ ಪ್ರಾಣಿಗಳ ಪುನರ್‌ಉತ್ಪಾದನೆಯಲ್ಲಿ ತೊಡಗಿರುತ್ತವೆ. ಇವುಗಳ ಮಾರಾಟದಿಂದ ಲಾಭಗಳಿಸುವ ಮೂಲಕ ಸಂಪತ್ತನ್ನು ವೃದ್ಧಿಗೊಳಿಸುತ್ತದೆ. ಉದಾಃ ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ ಮುಂತಾದವು.

**(ಆ) ಗಣಿ ಉದ್ಯಮಗಳು:** ಈ ಉದ್ಯಮವು ಭೂಮಿಯ ಮೇಲ್ಮೆಯ ತಳದಿಂದ ವಿವಿಧ ರೂಪದ ಕಚ್ಚಾವಸ್ತುಗಳನ್ನು ಹೊರತೆಗೆಯುವುದರಲ್ಲಿ ನಿರತವಾಗಿರುತ್ತದೆ. (ಇದನ್ನು ಮುಗಿದುಹೋಗುವ ಉದ್ಯಮವೆಂದು ಕರೆಯುತ್ತಾರೆ.) ಉದಾ: ವಿವಿಧ ಅದಿರುಗಳನ್ನು ಹೊರತೆಗೆಯುವುದು, ತೈಲ ಭಾವಿಗಳು ಮುಂತಾದವು.

**ದ್ವಿತೀಯ ಉದ್ಯಮಗಳು:** ಈ ಉದ್ಯಮಗಳು ಶ್ರಮ ಪ್ರಧಾನವಾಗಿದ್ದು ಮಾನವನ ಪಾತ್ರ ಮುಖ್ಯವಾಗಿರುತ್ತದೆ. ಈ ಉದ್ಯಮಗಳನ್ನು ಉತ್ಪಾದನಾ ಉದ್ಯಮಗಳು ಮತ್ತು ನಿರ್ವಹಣ ಉದ್ಯಮಗಳೆಂದು ವಿಭಾಗಿಸಬಹುದು.

**(ಅ) ಉತ್ಪಾದನ ಉದ್ಯಮಗಳು:** ಈ ಉದ್ಯಮಗಳು ಕಚ್ಚಾ ಪದಾರ್ಥಗಳನ್ನು ಅಥವಾ ತಯಾರಿಸಿದ ವಸ್ತುಗಳನ್ನು ಅಂತಿಮ ಉತ್ಪನ್ನವಾಗಿ ಪರಿವರ್ತಿಸುತ್ತವೆ. ಈ ಉದ್ಯಮಗಳು ಹೆಚ್ಚಾಗಿ ಮಾನವ ಶ್ರಮವನ್ನು ಬಳಸಿಕೊಳ್ಳುತ್ತವೆ ಹಾಗೂ ಗ್ರಾಹಕರ ಬಹುಪಾಲು ಅಗತ್ಯಗಳನ್ನು ಪೂರೈಸುತ್ತವೆ. ಉದಾ: ಕಬ್ಬಿಣದ ಅದಿರನ್ನು ಉಕ್ಕಾಗಿ ಪರಿವರ್ತಿಸುವುದು, ಕಬ್ಬನ್ನು ಸಕ್ಕರೆಯಾಗಿ ಪರಿವರ್ತಿಸುವುದು ಇತ್ಯಾದಿ.


**(ಆ) ನಿರ್ಮಾಣ ಉದ್ಯಮಗಳು:** ಈ ಉದ್ಯಮಗಳು ರಸ್ತೆ, ಕಾಲುವೆ, ಸೇತುವೆ ಮುಂತಾದ ಮೂಲ ಸೌಕರ್ಯಗಳನ್ನು ನಿರ್ಮಿಸಲು ಶ್ರಮಿಸುತ್ತವೆ. ಇದರಿಂದ ಪ್ರಧಾನ ಆರ್ಥಿಕ ಚಟುವಟಿಕೆಗಳಾದ ಸಾರಿಗೆ ಸಂಪರ್ಕ ಇತ್ಯಾದಿಗಳು ತೀವ್ರ ಗತಿಯಲ್ಲಿ ಬೆಳವಣಿಗೆಯಾಗುತ್ತವೆ.

NOT TO BE REPUBLISHED @KTBS

**ಗೃಹಕೈಗಾರಿಕೆಗಳು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು:**

ಗೃಹಕೈಗಾರಿಕೆಗಳನ್ನು ಗುಡಿಕೈಗಾರಿಕೆಗಳೆಂದೂ ಕರೆಯುತ್ತಾರೆ. ಇವುಗಳನ್ನು ಕುಶಲ ಕರ್ಮಿಗಳು ತಮ್ಮ ಮನೆಗಳಲ್ಲೇ ನಡೆಸುತ್ತಾರೆ. ಇವರಿಗೆ ತಮ್ಮ ಕುಟುಂಬದ ಇತರ ಸದಸ್ಯರು ಮತ್ತು ಕೆಲಸ ಕಲಿಯುವವರು (Apprentice) ಸಹಾಯ ಮಾಡುತ್ತಾರೆ. ಇವು ಪ್ರಧಾನವಾಗಿ ಹಳ್ಳಿಗಳಲ್ಲಿ ಕೇಂದ್ರೀಕೃತವಾಗಿರುತ್ತವೆ. ಈ ಕೈಗಾರಿಕೆಗಳು ಸಾಮಾನ್ಯವಾಗಿ ಸ್ಥಳೀಯ ಮಾರುಕಟ್ಟೆಗೆ ವಸ್ತುಗಳನ್ನು ಉತ್ಪಾದಿಸುತ್ತವೆ. ಈಕೈಗಾರಿಕೆಗಳಲ್ಲಿ ಉತ್ಪಾದನೆಯಾಗುವ ಕೆಲವು ವಸ್ತುಗಳೆಂದರೆ ಬಿದಿರಿನ ಬುಟ್ಟಿಗಳು, ಮರಮುಟ್ಟುಗಳು, ಚಾಪೆಗಳು, ಕಲ್ಲಿನ ಕೆತ್ತನೆಗಳು, ಕಮ್ಮಾರಿಕೆ, ಮಡಿಕೆಗಳನ್ನು ಮಾಡುವುದು ಮುಂತಾದವು.

**ಸಣ್ಣ ಪ್ರಮಾಣದ ಕೈಗಾರಿಕೆಗಳು:** ಒಂದು ನಿರ್ದಿಷ್ಟ ಕಟ್ಟಡಗಳಲ್ಲಿ ಸ್ಥಾಪಿತವಾಗಿರುತ್ತವೆ. ಕೂಲಿ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತವೆ. ಕಚ್ಚಾ ವಸ್ತುಗಳನ್ನು ಸಂಗ್ರಹಿಸಿ ಸಣ್ಣ ಪ್ರಮಾಣದಲ್ಲಿ ವಸ್ತುಗಳನ್ನು ಉತ್ಪಾದಿಸುತ್ತವೆ. ಸಣ್ಣ ಯಂತ್ರಗಳನ್ನು ಮತ್ತು ವಿದ್ಯುಚ್ಛಕ್ತಿಯನ್ನು ಬಳಸುತ್ತವೆ. ಇಲ್ಲಿ ಉತ್ಪಾದನೆಯಾಗುವ ವಸ್ತುಗಳು ಸ್ಥಳೀಯ ಮಾರುಕಟ್ಟೆಗೆ ಅಲ್ಲದೆ ವಿದೇಶ ಮಾರುಕಟ್ಟೆಗಳಿಗೂ ಸರಬರಾಜಾಗುತ್ತವೆ. ಇಲ್ಲಿ ಉತ್ಪಾದನೆಯಾಗುವ ಕೆಲವು ವಸ್ತುಗಳಿಗೆ ಉದಾಹರಣೆಗಳೆಂದರೆ ರಾಸಾಯನಿಕ ವಸ್ತುಗಳು, ಇಂಜಿನಿಯರಿಂಗ್ ವಸ್ತುಗಳು, ಪಾದರಕ್ಷೆಗಳು, ಬೈಸಿಕಲ್ಲುಗಳು, ರೇಡಿಯೋ, ಹೊಲಿಗೆಯಂತ್ರಗಳು ಮುಂತಾದವು.



ಗೃಹಕೈಗಾರಿಕೆಗಳು

NOT TO BE REPUBLISHED ©KTBS

**ವ್ಯವಹಾರದ ಸುಗಮ ನಿರ್ವಹಣೆಗೆ ಸೇವೆಗಳು:** ವ್ಯವಹಾರವು ಸುಗಮವಾಗಿ ನಡೆಯಲು ವ್ಯಾಪಾರ ಪೂರಕ ಸೇವೆಗಳು ರೂಢಿಗೆ ಬಂದವು. ಇವುಗಳನ್ನು ವಾಣಿಜ್ಯ ಸಾಧನಗಳೆಂದು ಅಥವಾ ವಾಣಿಜ್ಯದ ಸೇವೆಗಳೆಂದೂ ಕರೆಯುತ್ತಾರೆ. ಸರಕುಗಳನ್ನು ಉತ್ಪಾದಕ ಸ್ಥಳಗಳಿಂದ ಗ್ರಾಹಕರಿಗೆ ದೊರೆಯುವಂತಾಗಲು ಕೆಲವು ಅಡಚಣೆಗಳಿವೆ. ಅವುಗಳಲ್ಲಿ ಮುಖ್ಯವಾದುವೆಂದರೆ ಸ್ಥಳದ ಅಡಚಣೆ, ನಷ್ಟಭಯದ ಅಡಚಣೆ, ಸಮಯದ ಅಭಾವ, ಹಣಕಾಸಿನ ಕೊರತೆ, ತಿಳಿವಳಿಕೆಯ ಅಭಾವ ಮುಂತಾದವು. ಈ ಅಡಚಣೆಗಳ ನಿವಾರಣೆಗೆ ಕೆಲವು ಸೇವೆಗಳು ಸೌಕರ್ಯ ಕಲ್ಪಿಸುತ್ತವೆ. ಇವುಗಳನ್ನು ವ್ಯಾಪಾರದ ಪೂರಕಗಳೆಂದು ಕರೆಯುತ್ತಾರೆ.

**ಸ್ಥಳದ ಅಡಚಣೆ – ಸಾರಿಗೆ:** ಸ್ಥಳದ ಅಡಚಣೆಯನ್ನು ನಿವಾರಿಸಲು ಸಾಗಾಟದ ವ್ಯವಸ್ಥೆಯ ಸಾರಿಗೆ ಸೇವೆಗಳನ್ನು ಬಳಸಲಾಗುತ್ತದೆ. ರಸ್ತೆಸಾರಿಗೆ, ರೈಲುಸಾರಿಗೆ, ಜಲಸಾರಿಗೆ ಮತ್ತು ವಾಯುಸಾರಿಗೆ ಸಾಗಾಟದ ಬೇರೆ ಬೇರೆ ಮಾಧ್ಯಮಗಳಾಗಿವೆ. ಈ ಮಾಧ್ಯಮಗಳು ಉತ್ಪಾದಕರಿಂದ ವ್ಯಾಪಾರಿಗಳಿಗೆ ಹಾಗೂ ವ್ಯಾಪಾರಿಗಳಿಂದ ಗ್ರಾಹಕರಿಗೆ ಉತ್ಪಾದಿಸಿದ ವಸ್ತುಗಳನ್ನು ವಿತರಣೆ ಮಾಡಲು ಸಹಾಯ ಮಾಡುತ್ತದೆ.

**ಹಣಕಾಸಿನ ಸೇವೆ ಬ್ಯಾಂಕುಗಳು:** ಉತ್ಪಾದಕರಿಂದ ಅನುಭೋಗಿಗಳಿಗೆ ಸರಕುಗಳನ್ನು ವಿತರಣೆ ಮಾಡುವ ಕಾರ್ಯದಲ್ಲಿ ಹಣಕಾಸಿನ ಸಮಸ್ಯೆ ಉಂಟಾಗುತ್ತದೆ. ಹಣಕಾಸಿನ ಪೂರೈಕೆ ಎಲ್ಲ ಹಂತಗಳಿಗೂ ಅತ್ಯಾವಶ್ಯಕವಾಗಿದೆ. ಸರಕುಗಳನ್ನು ಹಣಕ್ಕೆ ವಿನಿಮಯ ಮಾಡಿಕೊಳ್ಳಲು ಸಹ ಹಣದ ಮಾಧ್ಯಮ ಅವಶ್ಯಕವಾಗಿದೆ. ಈ ಸಮಸ್ಯೆಗಳು ಬ್ಯಾಂಕುಗಳು ಮತ್ತು ಮತ್ತಿತರ ಹಣಕಾಸು ಸಂಸ್ಥೆಗಳಿಂದ ನಿವಾರಣೆಯಾಗುತ್ತವೆ. ಬ್ಯಾಂಕುಗಳು ವ್ಯಾಪಾರಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಹಣಕಾಸಿನ ಸೌಲಭ್ಯ ಒದಗಿಸುತ್ತಾರೆ ಮತ್ತು ವ್ಯವಹಾರ ಸುಗಮವಾಗಿ ನಡೆಯುವಂತೆ ಸೇವೆ ಸಲ್ಲಿಸುತ್ತವೆ.

**ನಷ್ಟದ ಭಯ – ವಿಮಾ ಕಂಪನಿಗಳು:** ಸರಕುಗಳನ್ನು ಉತ್ಪಾದಕರಿಂದ ಅನುಭೋಗಿಗಳಿಗೆ ಸಾಗಿಸುವಾಗ ಅಥವಾ ಅವುಗಳನ್ನು ಉಗ್ರಾಣಗಳಲ್ಲಿ ಶೇಖರಿಸಿಟ್ಟಾಗ ಅವು ನಾಶ ಹೊಂದುವುದು, ಹಾನಿಗೊಳಗಾಗುವುದು ಅಥವಾ ಗುಣಮಟ್ಟದಲ್ಲಿ ಕ್ಷೀಣತೆ ಮುಂತಾದ ಅನೇಕ ಅಪಾಯಗಳಿಗೊಳಗಾಗುತ್ತವೆ. ಈ ನಷ್ಟದ ತೊಡಕುಗಳನ್ನು ನಿವಾರಿಸಲು ವಿಮಾ ಸೌಲಭ್ಯಗಳಿವೆ. ಇವುಗಳಲ್ಲಿ ಮುಖ್ಯವಾದುವು. ಅಗ್ನಿವಿಮೆ ಮತ್ತು ಜಲವಿಮೆ. ಈ ರೀತಿಯಲ್ಲಿ ವಿಮಾ ಕಂಪನಿಗಳು ವ್ಯಾಪಾರ ಸುಗಮ ರೀತಿಯಲ್ಲಿ ನಡೆಯಲು ಸೇವೆಗಳನ್ನು ಸಲ್ಲಿಸುತ್ತವೆ.

**ಸಮಯದ ಅಡಚಣೆ – ಶೇಖರಣೆ:** ಸರಕುಗಳ ಉತ್ಪಾದನೆ ಮತ್ತು ಅನುಭೋಗ ಬೇರೆ ಬೇರೆ ಸಮಯಗಳಲ್ಲಾಗುತ್ತವೆ. ಆದರೆ ಇವುಗಳನ್ನು ಕಾಲ ಕಾಲಕ್ಕೆ ಅನುಭೋಗಿಗಳಿಗೆ ಒದಗಿಸಲು ಶೇಖರಿಸಿಡಬೇಕಾಗುತ್ತದೆ. ಇದಕ್ಕಾಗಿ ಉಗ್ರಾಣ ವ್ಯವಸ್ಥೆ ಸೇವೆ ಒದಗಿಸುತ್ತವೆ. ಈ ಉಗ್ರಾಣಗಳು ವೈಜ್ಞಾನಿಕ ರೀತಿಯಲ್ಲಿ ನಿರ್ಮಾಣವಾಗಿರುತ್ತವೆ. ಕೆಲವು ಉಗ್ರಾಣಗಳಲ್ಲಿ ಶೈತ್ಯಾಗಾರದ ವ್ಯವಸ್ಥೆಯು ಇರುತ್ತದೆ.

**ಜ್ಞಾನದ ಕೊರತೆ – ಜಾಹಿರಾತು:** ಉತ್ಪಾದಕರಿಂದ ಅನುಭೋಗಿಗಳಿಗೆ ಸರಕುಗಳನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಅನೇಕ ವೇಳೆ ಸರಕುಗಳ ಬಗ್ಗೆ ಜ್ಞಾನ ಅಥವಾ ತಿಳಿವಳಿಕೆ ಕೊಡಬೇಕಾಗುತ್ತದೆ. ಹೊಸ ಹೊಸ ಸರಕುಗಳ ಉತ್ಪಾದನೆಯಲ್ಲಿ ಅಥವಾ ಪರ್ಯಾಯ ವಸ್ತುಗಳನ್ನು ಉಪಯೋಗಿಸಬಹುದಾದ ಸಂದರ್ಭಗಳಲ್ಲೂ ಜಾಹಿರಾತು ಸೇವಾ ಜ್ಞಾನ ಅಥವಾ ತಿಳಿವಳಿಕೆ ಕೊಟ್ಟು ವ್ಯಾಪಾರಕ್ಕೆ ಸೇವೆ ಮಾಡುವ ಒಂದು ಅಂಗವಾಗಿದೆ.

## ವ್ಯವಹಾರದ ನೀತಿತತ್ವಗಳು (Business Ethics)

ಸಾಮಾನ್ಯವಾಗಿ ವ್ಯಾಪಾರ ಮತ್ತು ವಾಣಿಜ್ಯದ ಮುಖ್ಯ ಉದ್ದೇಶ ಲಾಭಗಳಿಕೆಯಾಗಿದೆ ಎಂದು ತಿಳಿದಿದ್ದೇವೆ. ಆದರೆ ಈ ಗ್ರಹಿಕೆ ಸರಿಯಲ್ಲ. ವ್ಯವಹಾರದ ಮುಖ್ಯ ಉದ್ದೇಶ ವ್ಯವಹಾರ ನಡೆಸಲು ಸಮಂಜಸವಾದ ಮತ್ತು ನ್ಯಾಯಯುಕ್ತ ಲಾಭಗಳಿಕೆ ಆಗಿರಬೇಕು. ಇವುಗಳು ಬಹಳ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿರುವ ವೃತ್ತಿಗಳಾಗಿವೆ. ಇವು ಗ್ರಾಹಕರಿಗೆ ವಸ್ತುಗಳನ್ನು ಮತ್ತು ಸೇವೆಗಳನ್ನು ಒದಗಿಸುತ್ತವೆ. ವ್ಯಾಪಾರಗಾರರು ತಮ್ಮ ವ್ಯವಹಾರ ನಡೆಸಲು ಸಾಕಾಗುವಷ್ಟು ಲಾಭ ಮಾತ್ರ ಇಟ್ಟುಕೊಳ್ಳಬೇಕು. ಹೀಗೆ ಮಾಡುವುದರಿಂದ ವ್ಯವಹಾರ 'ವೃತ್ತಿಧರ್ಮ' ಪಾಲಿಸಿದಂತಾಗುತ್ತದೆ. ಸಮಾಜಕ್ಕೆ ತಮ್ಮ ಸೇವೆ ಮಾಡಿದಂತಾಗುತ್ತದೆ. ಆದರೆ ಇಂದು ಹಣಗಳಿಕೆಗಾಗಿ ಲಾಭಕೋರತನ ವ್ಯವಹಾರದೊಳಕ್ಕೆ ಹೊಕ್ಕಿದೆ. ಕೆಲವು ವ್ಯಾಪಾರಗಾರರು ಅಹಿತಕರ ವ್ಯವಹಾರ ಪದ್ಧತಿಗಳನ್ನು ಅನುಸರಿಸುತ್ತಾರೆ. ಈ ಅಹಿತಕರ ಪದ್ಧತಿಗಳಲ್ಲಿ ಮುಖ್ಯವಾದುವು ವಸ್ತುಗಳ ಕಲಬೆರಕೆ, ಹೆಚ್ಚು ಲಾಭ, ತೂಕ ಮತ್ತು ಅಳತೆಗಳಲ್ಲಿ ಮೋಸ, ಅಕ್ರಮ ದಾಸ್ತಾನು ಮಾಡಿ ಕೃತಕ ಅಭಾವ ಪರಿಸ್ಥಿತಿ ಏರ್ಪಡಿಸುವುದು, ಕಾಳ ಸಂತೆ (Black Market) ಯಲ್ಲಿ ವಸ್ತುಗಳನ್ನು ಮಾರುವುದು ಮುಂತಾದುವು. ಈ ವಿಧಾನಗಳಿಂದ ಗ್ರಾಹಕರಿಗೆ ಅನೇಕ ತೊಂದರೆಗಳುಂಟಾಗುತ್ತವೆ. ವ್ಯಾಪಾರದಲ್ಲಿ ಈ ರೀತಿಯ ಮೋಸ ವಿಧಾನಗಳನ್ನು ಅನುಸರಿಸದೆ ವ್ಯಾಪಾರ ನೀತಿ ತತ್ವಗಳನ್ನು ಅನುಸರಿಸಬೇಕು. ಸಮಾಜದ ಹಿತವೇ ತಮ್ಮ ಹಿತವೆಂದು ಭಾವಿಸಬೇಕು.

©KTBS NOT TO BE REPUBLISHED

ನಮ್ಮ ದೇಶದಲ್ಲಿ ಈ ಅನಿಷ್ಟ ಪದ್ಧತಿಗಳನ್ನು ದೂರ ಮಾಡಲು ಸರ್ಕಾರ ಸಾರ್ವಜನಿಕ ವಿತರಣಾ ಪದ್ಧತಿಯನ್ನು ರೂಢಿಗೆ ತಂದಿದೆ. ಅಗತ್ಯ ವಸ್ತುಗಳ ಸರಬರಾಜಿನ ಬಗ್ಗೆ ಕಾನೂನನ್ನು ರಚಿಸಿದೆ. ಕೈಗಾರಿಕಾ ವಸ್ತುಗಳ ಮೇಲಿನ ಕಾನೂನಿನ ಪ್ರಕಾರ ಪ್ರತಿ ಉತ್ಪಾದನಾ ವಸ್ತುಗಳ ಪೊಟ್ಟಣಗಳ ಮೇಲೆ ಉತ್ಪಾದನ ತಾರೀಖು ಬಳಕೆಯ ದಿನ ಮಿತಿ (Date of Expiry) ತೂಕ ಅಥವಾ ಅಳತೆ ಮತ್ತು ಗರಿಷ್ಠ ಬೆಲೆಯನ್ನು ಮುದ್ರಿಸಬೇಕು. ಪದಾರ್ಥಗಳ ಗುಣಮಟ್ಟ ಕಾಪಾಡಲು ಭಾರತೀಯ ಮಾನಕ ಸಂಸ್ಥೆ (Bureau of Indian Standarads) ಯನ್ನು ಸ್ಥಾಪಿಸಿದೆ. ಈ ಸಂಸ್ಥೆ ಪದಾರ್ಥಗಳ ಗುಣಮಟ್ಟ ಪರೀಕ್ಷಿಸಿ ಗುಣಮಟ್ಟ ಸರಿಯಾಗಿರುವ ವಸ್ತುಗಳ ಮೇಲೆ (ISI) ಚಿನ್ಹೆ ಮುದ್ರಿಸುತ್ತವೆ. ವ್ಯವಸಾಯ ಉತ್ಪನ್ನ ವಸ್ತುಗಳ ಮೇಲೆ ಗುಣಮಟ್ಟ ತಿಳಿಯಲು ಅಗ್‌ಮಾರ್ಕ್ ಚಿನ್ಹೆ ಮುದ್ರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಸರ್ಕಾರ ಅಗತ್ಯ ವಸ್ತುಗಳನ್ನು ಒದಗಿಸಲು ಗ್ರಾಹಕರ ಸಹಕಾರಿ ಸಂಘಗಳನ್ನು, ಜನತಾ ಬಜಾರುಗಳನ್ನು ಸ್ಥಾಪಿಸಿದೆ. ಏನೆಲ್ಲ ಕ್ರಮಗಳನ್ನು ಕೈಗೊಂಡರೂ ವ್ಯಾಪಾರಿಗಳಲ್ಲಿ ಸಮಾಜದ ಹಿತದೃಷ್ಟಿಯಿಂದ "ವೃತ್ತಿಧರ್ಮ"ದ ಆಚರಣೆ ಇಲ್ಲವಾದಲ್ಲಿ ವ್ಯಾಪಾರವು ದ್ರೋಹ ಅಥವಾ ಮೋಸದ ಚಿಂತನೆಯಾಗುತ್ತದೆ. ಇದು ಒತ್ತಾಯದಿಂದ ಬರುವಂತಹದಲ್ಲ, ಆತ್ಮವಿಶ್ವಾಸದಿಂದ ಬರಬೇಕಾಗುತ್ತದೆ. ವ್ಯಾಪಾರವು ದ್ರೋಹದ ಚಿಂತನೆ ಆಗಬಾರದು. ವ್ಯಾಪಾರವು ಸಾರ್ವಜನಿಕ ಹಿತದೃಷ್ಟಿಯಿಂದ ನಡೆಯಬೇಕು.

@KTBS NOT TO BE REPUBLISHED

## ಅಭ್ಯಾಸಗಳು

**I ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಜಾಗಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

1 ಪುನರ್ ರಫ್ತು ವ್ಯಾಪಾರಕ್ಕೆ ———————— ಪಟ್ಟಣವು ಒಂದು ಮುಖ್ಯ ನಿದರ್ಶನವಾಗಿದೆ.

2 ಗೃಹ ಕೈಗಾರಿಕೆಗಳು ಸಾಮಾನ್ಯವಾಗಿ ———————— ಗಳಲ್ಲಿ ಕೇಂದ್ರಿಕೃತವಾಗಿರುತ್ತವೆ.

3 ರಾಸಾಯನಿಕ ವಸ್ತುಗಳ ತಯಾರಿಕೆ ಸಾಮಾನ್ಯವಾಗಿ ———————— ಕೈಗಾರಿಕೆಗಳಲ್ಲಿ ಆಗುತ್ತದೆ.

4 ವ್ಯಾಪಾರದ ಮುಖ್ಯ ಉದ್ದೇಶ ———————— ಲಾಭಗಳಿಸುವುದಾಗಿರಬೇಕು.

5 ಪದಾರ್ಥಗಳ ಗುಣಮಟ್ಟ ಕಾಪಾಡಲು ———————— ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

**II ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

6 ಸಂಚಾರಿ ಅಂಗಡಿಗಳ ವಿವಿಧ ವಿಧಗಳಾವುವು?

7 ಸಗಟು ವ್ಯಾಪಾರಿಗಳೆಂದರೆ ಯಾರು?

8 ವಿದೇಶ ವ್ಯಾಪಾರದ ಮೂರು ವಿಧಗಳನ್ನು ತಿಳಿಸಿ.

9 ಗೃಹ ಕೈಗಾರಿಕೆಗಳು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳನ್ನು ತಿಳಿಸಿ.

10 ಸ್ಥಳದ ಅಭಾವ ಮತ್ತು ನಷ್ಟ ಭಯ ನಿವಾರಿಸಲು ಸ್ಥಾಪಿತವಾಗಿರುವ ಸೇವೆಗಳಾವುವು?

11 ಲಾಭದ ಆಸೆಯಿಂದ ಕೆಲವು ವ್ಯಾಪಾರಗಾರರು ಕೆಲವು ಅಹಿತಕರ ಪದ್ದತಿಗಳನ್ನು ಅನುಸರಿಸುತ್ತಾರೆ. ಇವು ಯಾವುವು?

12 ಲಾಭದ ಆಸೆಯಿಂದ ಕೆಲವು ವ್ಯಾಪಾರಗಾರರು ಅಹಿತಕರ ಪದ್ಧತಿಗಳನ್ನು ಅನುಸರಿಸುತ್ತಾರೆ. ಇವುಗಳನ್ನು ತಪ್ಪಿಸಲು ಕೈಗೊಂಡಿರುವ ಕ್ರಮಗಳಾವುವು.

## III ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

13 ವ್ಯವಹಾರದ ಆರ್ಥಿಕ ಉದ್ದೇಶಗಳೇನು?

14 ವ್ಯವಹಾರದ ಸಾಮಾಜಿಕ ಉದ್ದೇಶಗಳೇನು?

15 ಚಿಲ್ಲರೆ ವ್ಯಾಪಾರಿಗಳಿಂದಾಗುವ ಸೇವೆಗಳನ್ನು ತಿಳಿಸಿ.

16 ವಿವಿಧ ರೀತಿಯ ಚಿಲ್ಲರೆ ವ್ಯಾಪಾರಿಗಳನ್ನು ಪಟ್ಟಿ ಮಾಡಿ ಪ್ರತಿಯೊಂದಕ್ಕೂ ಒಂದೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

17 ಉದ್ಯಮಗಳು ಅಥವಾ ಕೈಗಾರಿಕೆಗಳ ಎರಡು ವಿಧಗಳನ್ನು ಸ್ಥೂಲವಾಗಿ ಪರಿಚಯಿಸಿ.

18 ಒಂದು ದೇಶಕ್ಕೆ ವಿದೇಶಿ ವ್ಯಾಪಾರದ ಅವಶ್ಯಕತೆಯನ್ನು ಕುರಿತು ವಿವರಿಸಿ.

## IV ಚಟುವಟಿಕೆ.

19 ನಿಮ್ಮ ಸ್ಥಳದ ಹತ್ತಿರದ ಯಾವುದಾದರೂ ಸಂತೆ ಅಥವಾ ಜಾತ್ರೆಗೆ ಭೇಟಿಕೊಡಿ. ಅಲ್ಲಿ ನಡೆಯುವ ವ್ಯವಹಾರಗಳ ಬಗ್ಗೆ ಅರ್ಥೈಸಿಕೊಂಡು ಒಂದು ಪ್ರಬಂಧವನ್ನು ಬರೆಯಿರಿ.

@KTBS
NOT TO BE REPUBLISHED

***